
TIGHT BINDING BOOK

ಶ್ರೀ

ಸಾ ವಿದ್ಯಾ ಯಾ ವಿಮುಕ್ತಯೇ ।

ಪ್ರಬಂಧ-ಪ್ರಕಾಶ



ಬರೆದವರು

ದೇಶಪಾಂಡೆ ಮನೋಹರರಾಯರು

ಎಮ್. ಎ. ಎಸ್. ಟಿ. ಸಿ.

ಅಧ್ಯಾಪಕರು ಹೈಸ್ಕೂಲು

ಅಥಣಿ

ಬೆಲೆ: ೧೯೪೦ ಒಂದು ರೂಪಾಯಿ

ಮುದ್ರಕರು :
ಭೀಮರಾವ ಅಣ್ಣಾರಾವ ಚೌಗುಲೆ
ಶ್ರೀಮಹಾವೀರ ಪ್ರೆಸ್,
ಬೆಳಗಾವಿ.

ಮೊದಲನೆಯ ಮುದ್ರಣ ೧೯೩೯.
ಎರಡನೆಯ ಮುದ್ರಣ ೧೯೪೦.

ಪ್ರಕಾಶಕರು :
ದೇಶಪಾಂಡೆ ಮನೋಹರರಾಯರು
ಎಮ್. ಎ. ಎಸ್. ಟಿ. ಸಿ.
ವಿಕ್ರಮಪೂರ, ಅಥಣಿ.

ಪರಿವಿಡಿ



ಮೊದಲನೆಯ ಮುದ್ರಣ

ಅರಿಕೆ.

ನಮ್ಮ ನಾಡು ಒಂದು ಕಾಲಕ್ಕೆ ರಸಿಕರ ನೆಲೆವೀಡಾಗಿತ್ತು. ಓದದೆಯೂ ನಮ್ಮವರನೇಕರು ಕಾವ್ಯ ಪ್ರಯೋಗದಲ್ಲಿ ಪರಿಣತಮತಿಗಳಾಗಿದ್ದರು. ಬರಹದ ಬಲ್ಮೆಯು-ಲೇಖನ ಕೌಶಲ್ಯವು-ಅವರಲ್ಲಿ ಪೂರ್ತಿಯಾಗಿ ನೆಲೆಗೊಂಡಿತ್ತು. ಆದರೆ ಇಂವದು ಹಿಂದಿನ ಮಾತಾಗಿದೆ.

ಈ ಸ್ಥಿತಿಯನ್ನು ಹೋಗಲಾಡಿಸಲು ನಾವು ಮೊದಲಿಂದಲೇ ಯತ್ನಿಸಬೇಕಲ್ಲವೇ? ಶಾಲೆ-ಕಾಲೇಜುಗಳಲ್ಲಿಯ ನಮ್ಮ ವಿದ್ಯಾರ್ಥಿಗಳಿಗೆ ಈ ವಿಷಯದ ಪಾಠಗಳು ಸರಿಯಾಗಿ ದೊರೆತರೆ, ಮುಂದೆ ಅವರಲ್ಲಿಯ ಕೆಲವರಾದರೂ ಬಲ್ಲಿದರಾದ ಸಾಹಿತಿಗಳಾಗಲಿಕ್ಕಿಲ್ಲವೇ? ನಮ್ಮ ನಾಡಿಗೆ ಕೀರ್ತಿಯನ್ನು ತರಲಿಕ್ಕಿಲ್ಲವೇ?

ಅಂಥ ಎಳೆಯರ ನೆರವಿಗಾಗಿಯೇ ನಮ್ಮ ಈ ಪ್ರಯತ್ನ. ಕನ್ನಡದಲ್ಲಿ ಲೇಖನ ಕಲೆಯನ್ನು ಕುರಿತು ಬರೆಯಲಾದ ಗ್ರಂಥಗಳು ತೀರ ವಿರಲ. ಅವಿನ್ನೂ ಸಿದ್ಧವಾಗಬೇಕು. ಪ್ರಬಂಧ ವಿಷಯದ ಪರಿಚಯವು ಪ್ರೌಢ ಬರಹಗಳ ಪೂರ್ವಸಿದ್ಧತೆಯು. **ಪ್ರಬಂಧದ** (Composition) ರಹಸ್ಯವನ್ನರಿತ ಬಾಲಕನು ಮುಂದೆ ಬೇರೆ ಬೇರೆ ಬಗೆಯ ಬರಹಗಳನ್ನು ಪಳಗಿದ ಕೈಯಿಂದ ಬರೆಯಬಹುದು.

ಪ್ರತಿಯೊಂದು ಭಾಷೆಯಲ್ಲಿ **ಪ್ರಬಂಧಶಿಕ್ಷಣಕ್ಕೆ** ಅಗ್ರಸ್ಥಾನವು ದೊರೆತಿರುವದು. ಆದರೆ ನಮ್ಮಲ್ಲಿ ಅದಕ್ಕೆ ಸಾಕಷ್ಟು ಗಮನವು ಕೊಡಲಾಗಿಲ್ಲ. ಅದರ ವಿವಿಧಾಂಗಗಳ ಪರಿಚಯವನ್ನು ಬಾಲಕರಿಗೆ ಚೆನ್ನಾಗಿ ಮಾಡಿಕೊಡುವ ಏರ್ಪಾಡಾಗಿಲ್ಲ. ಪ್ರಬಂಧದ ಸಾಂಗೋಪಾಂಗ ವಿವೇಚನೆಯನ್ನು ಮಾಡಿದ ಪುಸ್ತಕಗಳು ನಮ್ಮಲ್ಲಿ ವಿಶೇಷವಾಗಿ ಇಲ್ಲದ ಮೂಲಕ ಬಾಲಕರು ಬಹಳ ತೊಂದರೆಗೆ ಗುರಿಯಾಗಬೇಕಾಗುತ್ತದೆ. ಇವನ್ನೆಲ್ಲ ಕಡಿಮೆ ಮಾಡಲು ನಾನಿಲ್ಲಿ ಯತ್ನಿಸಿದ್ದೇನೆ.

ಈ ಗ್ರಂಥದ **ಪರಿವಿಡಿಯನ್ನು** ಕಂಡೊಡನೆ **ರಚನೆಯ ಅಚ್ಚುಕಟ್ಟೂ** **ವಿಷಯದ ವೈವಿಧ್ಯವೂ** ಓದುಗರನ್ನು ಬರಮಾಡಿಕೊಳ್ಳುವವು. ಕೊಂಚ ಮುಂದಕ್ಕೆ ಸಾಗಿದಲ್ಲಿ **ವಿವೇಚನೆಯ ಸುಭೋದತೆಯೂ-ಶೈಲಿಯ ಸರಳತೆಯೂ-ಉದಾಹರಣೆಗಳ ಉದ್ಬೋಧಕತೆಯೂ-ಅಭ್ಯಾಸಗಳ ಹೇರಳವೂ** ಅವರ ದೃಷ್ಟಿಗೆ ಬೀಳುವವು. ಇವು ಓದುಗರಿಗೆ **ಬೆಳಕನ್ನು** ನೀಡುವ

ವಲ್ಲದೆ, ಅವರಲ್ಲಿ **ನವಚೈತನ್ಯವನ್ನು** ಬೀರದಿರವು. ಈ ಮೇರೆಗೆ **ಪ್ರಬಂಧ-ಪ್ರಕಾಶವು** ಇಂಗ್ಲೀಷ ಹಾಗೂ ಕನ್ನಡ ಶಾಲೆಯಲ್ಲಿಯ ೬ನೆಯ-೭ನೆಯ ತರಗತಿಯ ವಿದ್ಯಾರ್ಥಿಗಳಿಗೆ ತೀರ ಉಪಯುಕ್ತವಿರುವದು. ಅವರಿಗಿದು ಪರೀಕ್ಷೆಯಲ್ಲಿ ನೆರವಾಗುವದಲ್ಲದೆ, ವ್ಯವಹಾರದಲ್ಲಿಯೂ, ಲೇಖನಕಲೆಯಲ್ಲಿಯೂ, ಸಹಾಯವನ್ನು ನೀಡುವದರಲ್ಲಿ ಸಂದೇಹವಿಲ್ಲ.

ಪ್ರಬಂಧ-ಪ್ರಕಾಶದಲ್ಲಿ ನಮ್ಮ ನಾಡಿನ ಹಿರಿ-ಬರಹಗಾರರನೇಕರ ಗ್ರಂಥಗಳಲ್ಲಿಯ ಅತ್ಯುತ್ತಮವಾದ ಅವತರಣಗಳನ್ನೂ, ನಿಬಂಧಗಳನ್ನೂ ಉಪಯೋಗಿಸಿರುವೆನು. ಇದರ ಸೊಬಗೂ, ಉಪಯುಕ್ತತೆಯೂ ಅವುಗಳಿಂದಲೇ ಬೆಳೆದಿದೆ ಅನ್ನಬಹುದು. ಈ ಬಗೆಯ ಅನುಕೂಲತೆಯನ್ನು ಒದಗಿಸಿ ಕೊಟ್ಟಿದ್ದಕ್ಕಾಗಿ ಅವರೆಲ್ಲರಿಗೆ ನನ್ನ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸದಿರಲಾರೆ.

ಕೊನೆಗೆ, ಕೈಬರಹವನ್ನು ಮೊದಲಿನಿಂದ ಕೊನೆಯವರೆಗೆ ಸೂಕ್ಷ್ಮರೀತಿಯಿಂದ ಓದಿ, ಸೂಕ್ತ ಸಲಹೆಗಳನ್ನಿತ್ತ ನನ್ನ ಗೆಳೆಯರಾದ ಪ್ರೊ. **ಮುಗಳಿ ರಂಗರಾಯರಿಗೂ,** ಮುದ್ದಾದ ಮುನ್ನುಡಿಯನ್ನು ಬರೆದು ಪ್ರೋತ್ಸಾಹಿಸಿದ ಪ್ರೊ. **ಗೋಕಾಕ ವಿನಾಯಕರಾಯರಿಗೂ** ತಮ್ಮ ಗ್ರಂಥದಲ್ಲಿಯ ಮೇಳ-ದೇಸಿ-ಪಡೆನುಡಿಗಳಲ್ಲಿಯ ಕೆಲವನ್ನು ಆಯ್ದುಕೊಳ್ಳಲು ಅನುಮತಿಯನ್ನಿತ್ತ ಶ್ರೀ. **ಜೋಶಿ ಶಂಕರರಾಯರಿಗೂ** ನನ್ನ ಅನಂತ ವಂದನೆಗಳು.

ಈ ಗ್ರಂಥವನ್ನು ಮುದ್ದಾಗಿ ಮುದ್ರಿಸಿಕೊಟ್ಟಿದ್ದಕ್ಕಾಗಿ **ಧಾರವಾಡ ಸಾಧನ ಮುದ್ರಣಾಲಯದ** ಒಡೆಯರಾದ ಶ್ರೀಮಾನ್ **ಕುಲಕರ್ಣಿ ಶೇಷಗಿರಿರಾಯರಿಗೆ** ನನ್ನ ಧನ್ಯವಾದಗಳನ್ನು ಸಲ್ಲಿಸದಿರಲಾರೆ.

ಇದರಲ್ಲಿ ಕಾರಣಾಂತರಗಳ ಮೂಲಕ ಸೇರಿರಬಹುದಾದ ಲೋಪ-ದೋಷಗಳನ್ನೂ, ಇದರ ಉಪಯುಕ್ತತೆಯನ್ನು ಹೆಚ್ಚಿಸಲು ಮಾಡಬೇಕಾದ ಸುಧಾರಣೆಗಳನ್ನೂ ಬಲ್ಲವರು ನನಗೆ ತಿಳಿಸಿದಲ್ಲಿ ನಾನವರಿಗೆ ತುಂಬಾ ಉಪಕೃತನಾಗುವೆ.

ತಾ|| ೧-೬-೩೯
ಶಾಂತಿಕುಂಜ
ವಿಕ್ರಮಪುರ
ಅಥಣಿ.

ನಿಮ್ಮ
ಮ. ಶ್ರೀ. ದೇಶಪಾಂಡೆ.

ಎರಡನೆಯ ಮುದ್ರಣ.

ಅರಿಕೆ.

ಈ ಗ್ರಂಥಕ್ಕೆ ಇಷ್ಟು ಬೇಗ ಎರಡನೆಯ ಮುದ್ರಣದ ಸೌಭಾಗ್ಯ ದೊರೆತುದು ಕನ್ನಡ ನಾಡಿನ ನನ್ನ ಹಿರಿ-ಕಿರಿಯ ಬಂಧುಗಳ ಪ್ರೋತ್ಸಾಹದ ಫಲವೇ ಸರಿ ಇದರಲ್ಲಿಯ ಗುಣಗಳನ್ನು ಸರಿಯಾಗಿ ಗೌರವಿಸಿದ್ದಕ್ಕಾಗಿ ನಾನವರೆಲ್ಲರನ್ನು ಅಭಿವಂದಿಸದಿರಲಾರೆ. ಈ ಬಗೆಯ ಪ್ರೋತ್ಸಾಹವು ಹೆಚ್ಚಾಗುತ್ತ ಹೋದ ಹಾಗೆ ಇದರಲ್ಲಿ ಹೊಸ ಹೊಸ ಸುಧಾರಣೆಗಳನ್ನು ಮಾಡಲು ಅನುಕೂಲನಾಗುವುದು. ಓದುಗರ ಬೇಡಿಕೆಯು ತೀರ ಪ್ರಬಲ ವಾದುದರಿಂದ ಈ ಆವೃತ್ತಿಯನ್ನು ಅವಸರದಿಂದ ಹೊರಡಿಸಬೇಕಾಯಿತು. ಆದುದರಿಂದ ಮೊದಲನೆಯ ಆವೃತ್ತಿಯಲ್ಲಿಯ ಮುದ್ರಣದೋಷಗಳನ್ನು ಮತ್ತು ಇನ್ನಿತರ ದೋಷಗಳನ್ನು ಸರಿಪಡಿಸುವುದೂ, ಕೆಲ ಬಿಗಿಯೆನಿಸಿದ ಶಬ್ದಸಮೂಹಗಳೆದುರು ಸುಲಭ ಪ್ರತಿಶಬ್ದಗಳನ್ನಿಡುವುದೂ, ಅಷ್ಟೇ ಸಾಧ್ಯವಾಯಿತು. ಇನ್ನಾವ ಸುಧಾರಣೆಗಳನ್ನು ಮಾಡುವದಾಗಲಿಲ್ಲ. ಇದನ್ನು ಕಲಿಸುವ ಕಾಲಕ್ಕೆ ಇದರಲ್ಲಿ ಕಂಡುಬಂದ ಲೋಪಗಳನ್ನೂ, ಮತ್ತು ಇದರಲ್ಲಿ ಮಾಡಬೇಕಾದ ಸುಧಾರಣೆಗಳನ್ನೂ, ನುರಿತ ಅಧ್ಯಾಪಕರು ನನಗೆ ತಿಳಿಸಿದಲ್ಲಿ ನಾನವರಿಗೆ ತುಂಬಾ ಉಪಕೃತನಾಗುವೆನು.

ಕೊನೆಗೆ ಈ ಗ್ರಂಥವನ್ನೋದಿ ತಮ್ಮ ಬೆಲೆಯುಳ್ಳ ಅಭಿಪ್ರಾಯ ಗಳನ್ನು ಕಳುಹಿಸಿಕೊಟ್ಟ ಮಹನೀಯರನ್ನು ಇದನ್ನು ಇಷ್ಟು ಬೇಗ ಅಂದ ವಾಗಿ ಮುದ್ರಿಸಿಕೊಟ್ಟದ್ದಕ್ಕಾಗಿ ನಾನು ಶ್ರೀಮಹಾವೀರ ಮುದ್ರಣಾಲಯದ ಒಡೆಯರಾದ ಶ್ರೀ. ಚೌಗುಲೆ ಭೀಮರಾಯರನ್ನೂ ವಂದಿಸಿ ವಿರಮಿಸುವೆ.

ತಾ ೨೫|೭|೪೦
ಶಾಂತಿಕುಂಜ
ವಿಕ್ರಮಪೂರ
ಅಥಣಿ.

ನಿಮ್ಮ,
ಮ. ಶ್ರೀ ದೇಶಪಾಂಡೆ.

ಮುನ್ನುಡಿ.



'**ಪ್ರಬಂಧ-ಪ್ರಕಾಶ**' ವೆಂಬ ಈ ಗ್ರಂಥವನ್ನು ಬರೆದು ಕನ್ನಡ ನಾಡಿನಲ್ಲಿಯ ವಿದ್ಯಾರ್ಥಿ ವರ್ಗಕ್ಕೆ ಬಹಳ ದೊಡ್ಡ ಸಹಾಯ ಮಾಡಿದ ಶ್ರೀ. **ದೇಶಪಾಂಡೆ ಮನೋಹರರಾಯರನ್ನು** ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಇಷ್ಟೆಲ್ಲ ಬೇರೆ ಬೇರೆ ವಿಷಯಗಳ ಮೇಲಿನ ಮಾಹಿತಿಯನ್ನು ಒತ್ತಟ್ಟಿಗೆ ಕಲೆಹಾಕಿ ಸುಲಭಗ್ರಾಹ್ಯವಾದ ರೀತಿಯಲ್ಲಿ ಅದನ್ನು ನಿರೂಪಿಸುವ ಗ್ರಂಥವೆಂದರೆ ಕನ್ನಡದಲ್ಲಿ ಇದೇ **ಮೊದಲನೆಯದೆಂದು** ಹೇಳಬಹುದು. ಅನೇಕ ವರ್ಷಗಳಿಂದ ಇಂಥದೊಂದು ಗ್ರಂಥವು ಬೇಕಾಗಿತ್ತು. ಶ್ರೀ. **ಮನೊಹರರಾಯರು** ಈಗ ಕೊರತೆಯನ್ನು ಹೋಗಲಾಡಿಸಿದ್ದಾರೆ.

ವಾಕ್ಯರಚನೆ, ಸಾರಸಂಗ್ರಹ ಗುಣಗ್ರಹಣ, ನಿಬಂಧಲೇಖನ ಮೊದಲಾದ ಬೇರೆ ಬೇರೆ ವಿಷಯಗಳನ್ನು **ನಿರೂಪಿಸುವದರಲ್ಲಿ ಲೇಖಕರು ಪ್ರಶಂಸನಾರ್ಹವಾದ ಕೌಶಲ್ಯವನ್ನು** ತೋರಿಸಿದ್ದಾರೆ. ಉದಾಹರಣೆಗಳೆಂದು ಅವರು ಎತ್ತಿಟ್ಟ ಅನೇಕ ಗದ್ಯಪದ್ಯ ವಿಭಾಗಗಳು ಬಹಳ ಗಂಭೀರವಾಗಿವೆ. ಅವುಗಳಿಂದ ವಿಷಯಜ್ಞಾನವಿಷ್ಟೇ ಆಗುವದಿಲ್ಲ; **ನೀರವೃತ್ತಿಯನ್ನೂ ಉದಾತ್ತ ರೀತಿಯನ್ನೂ ಕಲಿಸುವ ಒಂದು ಸಾಹಿತ್ಯಮಾಲೆಯನ್ನು ಓದಿದ ಅನುಭವವನ್ನು 'ಪ್ರಬಂಧ-ಪ್ರಕಾಶ' ದಲ್ಲಿಯ ಅವತರಣಿಕೆಗಳು ತಂದುಕೊಡುತ್ತವೆ.** ಅದಕಾರಣ ಈ ಪುಸ್ತಕದ ಪ್ರಯೋಜನವು ಇಮ್ಮಡಿಯಾಗಿ ಹೆಚ್ಚಿದೆ.

ವಿದ್ಯಾಧಿಕಾರಿಗಳಿಗೆ ಕೊಡಲು ಶಕ್ಯವಿದ್ದ ಎಲ್ಲ ಉತ್ತೇಜನವನ್ನು ಪಡೆಯಲು '**ಪ್ರಬಂಧ ಪ್ರಕಾಶ**'ವು ಅರ್ಹವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಶ್ರೀ. **ಮನೋಹರರಾಯರು** ಆಧುನಿಕ ಕನ್ನಡ ಸಾಹಿತ್ಯದ ಪುರಸ್ಕರ್ತರಲ್ಲಿ ಒಬ್ಬರಾಗಿದ್ದಾರೆ. **ಸರ್ವಜ್ಞನ** ಕಾವ್ಯವನ್ನು ಬಹು ಸೂಕ್ಷ್ಮ

ವಾಗಿ ವಿಮರ್ಶಿಸಿ ಇಂದಿನ ನೀತಿವಿದ ವಿಮರ್ಶಕರಲ್ಲಿ ಮೇಲ್ತರಗತಿಯವರೆಂದು ಕರ್ನಾಟಕದಲ್ಲಿ ಹೆಸರಾಗಿದ್ದಾರೆ. ಒಂದು ವಿಶಿಷ್ಟ ರೀತಿಯ ಶೈಕ್ಷಣಿಕ, ನೈತಿಕ ಹಾಗು ಆತ್ಮಿಕ ಸಾಹಿತ್ಯವು ಇವರಿಂದ ಬರುವದೆಂದು ನಾವು ದಾರಿ ಕಾಯುತ್ತಲಿದ್ದೇವೆ. ಇಂಥ ಬಲ್ಲಿದರು ಬರೆದ '**ಪ್ರಬಂಧ ಪ್ರಕಾಶ**'ದ ಬೆಳಕಿನಲ್ಲಿ ಕಿರಿಯರು ದಾರಿಯನ್ನು ಸಮನಾಗಿ ತುಳಿಯುವರೆಂದೂ ಹಿರಿಯರು ಸಂತೋಷಗೊಳ್ಳುವರೆಂದೂ ನಾನು ನಂಬಿದ್ದೇನೆ. ಈ ಗ್ರಂಥದ ಕೊರತೆಗಳೇನಾದರೂ ಇದ್ದರೆ,-ಉಪಯೋಗಾಂತ್ಯದಲ್ಲಿ ಅವು ಗೊತ್ತಾಗಬೇಕಾಗಿವೆ. ಇಂಥವೇನಾದರೂ ಕಣ್ಣಿಗೆ ಬಿದ್ದರೆ ವಾಚಕವೃಂದವು ಲೇಖಕರಿಗೆ ಅಗತ್ಯವಾಗಿ ತಿಳಿಸಬೇಕು. ಅವನ್ನು ತುಂಬಿಕೊಳ್ಳುವದರಿಂದ ಪುಸ್ತಕದ ಉಪಯುಕ್ತತೆಯು ನಿಶ್ಚಯವಾಗಿಯೂ ಹೆಚ್ಚುವದು.

ಸಾಂಗಲಿ
೧-೪-೧೯೩೯

ವಿ. ಕೃ. ಗೋಕಾಕ
M. A. (Bom) B. A (Oxon)
Principal, Willingdon College, Sangli

— ——

ಪ್ರಬಂಧ-ಪ್ರಕಾಶ



ಮೊದಲನೆಯ ಭಾಗ-ವಾಕ್ಯಗಳು.

ಪೀಠಿಕೆ.

ವಾಕ್ಯವೆಂದರೇನು ?

ಇದೊಂದು ಪೂರ್ಣವಾದ ಅರ್ಥವನ್ನು ಹೇಳುವ ಶಬ್ದಗಳ ಗುಂಪು. ಇದರಲ್ಲಿ ಒಂದೇ ಶಬ್ದವಿರಬಹುದು; ಅನೇಕ ಶಬ್ದಗಳೂ ಇರಬಹುದು.

ಉ: - i) ಬಾ, ಹೋಗು, ನೋಡು.

ii) ನಾನು ಇಲ್ಲಿ ಬಂದೆನು. ನಾನು ಅಲ್ಲಿ ಹೋದೆನು. ನಾನು ಅದನ್ನು ನೋಡಿದೆನು.

ಸೂಚನೆ:—(ಅ) **೧ನೆಯವು** ಒಂದೇ ಶಬ್ದದ ವಾಕ್ಯಗಳು. ಅವುಗಳಲ್ಲಿ 'ನೀನು' ಎಂಬ ಕರ್ತೃಪದವು ಗುಪ್ತವಿರುವದು. ಇಂಥ ವಾಕ್ಯಗಳು ಮಾತಿನ ಭಾಷೆಯಲ್ಲಿ ಹೆಚ್ಚು.

೨ನೆಯವು ಅನೇಕ ಶಬ್ದಗಳಿಂದ ಕೂಡಿದವುಗಳು.

(ಆ) ಈ ಎರಡೂ ವಿಧದ ವಾಕ್ಯಗಳಲ್ಲಿ ಕ್ರಿಯೆಯನ್ನು ಸೂಚಿಸುವ ಶಬ್ದವು ಇದ್ದೇ ತೀರುವುದು. ಅದಿಲ್ಲದೇ ವಾಕ್ಯವೇ ಸಂಭವಿಸುವದಿಲ್ಲ. ಕರ್ತೃಸೂಚಕ ಶಬ್ದವೂ ಪ್ರತಿವಾಕ್ಯಕ್ಕೆ ಅವಶ್ಯವಾದುದು. ಒಮ್ಮೊಮ್ಮೆ ಅದನ್ನು ಅಧ್ಯಾಹೃತ (ಗುಪ್ತ) ವಾಗಿ ಇಡಬಹುದು.

ವಾಕ್ಯದ ಮಹತ್ವ:—

ವಾಕ್ಯರಚನೆಯ ಜ್ಞಾನವು ಪ್ರಬಂಧರಚನೆಗೆ ತಳಹದಿಯು. ಅದರ ಮೇಲೆಯೆ ಪ್ರಬಂಧದ ಕಟ್ಟಡವು ನಿಲ್ಲುವುದು. ಅದೊಂದು ಪ್ರಬಂಧ-ವೃಕ್ಷದ ಬೀಜವೆಂದರೂ ಸಲ್ಲುವುದು. ಯಾಕಂದರೆ ಅದರೊಳಗಿಂದಲೆ ವಿವಿಧ ಪ್ರಬಂಧಗಳು ಹುಟ್ಟುವವು. ಇನ್ನೊಂದು ದೃಷ್ಟಿಯಿಂದ

ವಾಕ್ಯಗಳನ್ನು ಪ್ರಬಂಧಮಾಲೆಯಲ್ಲಿಯು ಹೂಗಳೊಡನೆಯೂ ಸರಿಹೋಲಿಸ ಬಹುದು. ಇಷ್ಟು ನಿಕಟಸಂಬಂಧವಿದೆ ವಾಕ್ಯ-ಪ್ರಬಂಧಗಳಲ್ಲಿ. ಆದುದರಿಂದ ಪ್ರಬಂಧವನ್ನು ಬರೆಯಲು ಪ್ರವೀಣರಾಗಬಯಸುವವರು ಮೊದಲು ವಾಕ್ಯವನ್ನು ರಚಿಸುವಲ್ಲಿ ಪ್ರಾವೀಣ್ಯವನ್ನು ಪಡೆಯಲೇಬೇಕು.

ವಿವೇಚನೆಯ ಕ್ರಮ:—

ಈ ವಿಭಾಗದಲ್ಲಿ ವಾಕ್ಯಗಳ ರಚನೆಗೆ ಅವಶ್ಯವಾದ ಕೆಲವು ವಿಷಯಗಳನ್ನು ಕುರಿತು ಬರೆಯಲಾಗುವುದು. (೧) ಮೊದಲು ವಾಕ್ಯಾಂಗಗಳಾದ ಶಬ್ದಗಳ ಆಯ್ಕೆ (ಆರಿಸುವಿಕೆ), ವಾಕ್ಯದಲ್ಲಿಯ ಅವುಗಳ ಸಂಖ್ಯೆ-ಕ್ರಮ, ಈ ವಿಷಯಗಳನ್ನು ವಿವರಿಸಲಾಗುವುದು. (೨) ತರುವಾಯ ವಾಕ್ಯದ ರಚನೆಯ ವಿಚಾರ. ಅದು ಶುದ್ಧವೂ, ಸುಲಭವೂ, ಸುಂದರವೂ ಹಾಗು ಪರಿಣಾಮಕರವೂ ಆಗಲು ಏನು ಮಾಡಬೇಕೆಂಬುದನ್ನು ಸೂಚಿಸಲಾಗುವುದು. (೩) ಇಷ್ಟಾದ ಮೇಲೆ ವಾಕ್ಯರೂಪದಲ್ಲಿಯ ಪರಿವರ್ತನೆಯನ್ನೂ (೪) ವಾಕ್ಯಸಂಯೋಜನ ರೀತಿಯನ್ನೂ ವಿವರಿಸುವೆವು. ಇವೆಲ್ಲವುಗಳ ಸೂಕ್ಷ್ಮವಾದ ಅಭ್ಯಾಸದಿಂದ **ವಿದ್ಯಾರ್ಥಿಗಳು** ವಾಕ್ಯವನ್ನು ಚೆನ್ನಾಗಿ ಬರೆಯಲು ಸಮರ್ಥರಾಗುವರು.

---

೨ ವಾಕ್ಯಾಂಗಗಳು.

೧ ವಾಕ್ಯಾಂಗಗಳು ಯಾವು ?

ಶಬ್ದಗಳು ಮತ್ತು **ಶಬ್ದಸಮುಚ್ಚಯಗಳು** (Phrases) ವಾಕ್ಯದ ಅಂಗಗಳು. ಇವುಗಳ ಹೆಣಿಕೆಯಿಂದಲೇ ವಾಕ್ಯಗಳು ಸಿದ್ಧವಾಗುವವು. ಆದುದರಿಂದ ಇವನ್ನು ಅಭ್ಯಸಿಸುವದು ಅತ್ಯವಶ್ಯಕವಾದುದು.

೨ ಶಬ್ದಗಳ ಆಯ್ಕೆ:—

ವಾಕ್ಯಗಳು **ಸುಂದರ** ಹಾಗೂ **ಪರಿಣಾಮಕರ**ವಾದವುಗಳು ಆಗಬೇಕಾದರೆ ಅವುಗಳಲ್ಲಿ ಉಪಯೋಗಿಸುವ ಶಬ್ದಗಳ ಆಯ್ಕೆಯ ವಿಷಯ

ವಾಗಿ ನಾವು ಬಹಳ ಜಾಗರೂಕರಾಗಿರಬೇಕು. ಶಬ್ದಗಳನ್ನು ಚೆನ್ನಾಗಿ ಆರಿಸಬೇಕು. ಅಲ್ಲದ ಶಬ್ದವನ್ನು ಸಲ್ಲದ ಸ್ಥಲದಲ್ಲಿ ಉಪಯೋಗಿಸಬಾರದು. ಶಬ್ದಗಳ ಆಯ್ಕೆಯಲ್ಲಿ ಕೆಳಗಿನ ಮಾತುಗಳನ್ನು ಲಕ್ಷಿಸಬೇಕು.

೧) **ಶುದ್ಧತೆ:**—ಸಾಧ್ಯವಿದ್ದ ಮಟ್ಟಿಗೆ ಅಚ್ಚಗನ್ನಡ ಶಬ್ದಗಳನ್ನೇ ಉಪಯೋಗಿಸಬೇಕು. ಮೊದಲು ಹೊಸಗನ್ನಡ ಶಬ್ದಗಳು, ತರುವಾಯ ರೂಢಿಯಲ್ಲಿದ್ದ ಸಂಸ್ಕೃತ ಶಬ್ದಗಳು ಮತ್ತು ತದ್ಭವ ಶಬ್ದಗಳು, ಅವು ದೊರೆಯದಿದ್ದರೆ ಹಳಗನ್ನಡ ಶಬ್ದಗಳು, ಅವಿಲ್ಲದಿದ್ದರೆ ರೂಢವಿಲ್ಲದ ಸಂಸ್ಕೃತ ಶಬ್ದಗಳು, ಕೊನೆಗೆ ಪರಭಾಷೆಯ ಶಬ್ದಗಳು–ಈ ಕ್ರಮದಿಂದ ಆಯ್ಕೆಯಾಗಬೇಕು.

ಉ:—**ಸಂಸ್ಕೃತ:**—೧ ಕರ್ನಾಟಕಸ್ಥರಲ್ಲಿ ಸ್ವತ್ವದ ಜ್ಞಾನವು ಉತ್ಪನ್ನವಾಗದಿದ್ದರೆ, ಕನ್ನಡವು ಅದ್ಯಾಪಿ ಜೀವಿಸುವ ಸಂಭವವಿಲ್ಲ.

ಕನ್ನಡ:— ೨ ಕನ್ನಡಿಗರಲ್ಲಿ ತಮ್ಮತನದ ಅರಿವು ಉಂಟಾಗದಿದ್ದರ, ಕನ್ನಡವು ಈಗಲೂ ಬಾಳುವ ಆಶೆಯಿಲ್ಲ.

ಸೂಚನೆ:—ಈ ಎರಡು ವಾಕ್ಯಗಳನ್ನು ಪರೀಕ್ಷಿಸಿದರೆ, ಅವುಗಳಲ್ಲಿಯ ಭೇದವು ಒಡೆದು ಕಾಣುವದು. ಒಂದರಲ್ಲಿ ಸಂಸ್ಕೃತ ಶಬ್ದಗಳು ಹೇರಳವಾಗಿದ್ದರೆ ಇನ್ನೊಂದರಲ್ಲಿ ಅಚ್ಚಗನ್ನಡ ಶಬ್ದಗಳೇ ವಿಪುಲವಾಗಿವೆ. ೨ರಲ್ಲಿ ‘ಆಶೆ’ ಇದು ಮೂಲತಃ ಸಂಸ್ಕೃತವಾದರೂ ತದ್ಭವವಾಗಿ ಕನ್ನಡದಲ್ಲಿ ರೂಢವಾಗಿದೆ. ನಾವು ಎರಡನೆಯ ರೀತಿಯನ್ನೇ ಅನುಸರಿಸುವುದು ಉಚಿತ. ಎಂದ ಮೇಲೆ ಸಾಧ್ಯವಿದ್ದಲ್ಲಿ ಕನ್ನಡ, ಹಾಗೂ ಕನ್ನಡದಲ್ಲಿ ಬೆರೆತುಹೋದ ಸಂಸ್ಕೃತ ಮತ್ತು ತದ್ಭವ ಶಬ್ದಗಳು, ಅವಶ್ಯವಿದ್ದಲ್ಲಿ ಬೇರೆ ಭಾಷೆಯ ಶಬ್ದಗಳು; ಇದು ನಮ್ಮ ತತ್ವವಿರಬೇಕು. ಪರಭಾಷೆಯ ಶಬ್ದಗಳನ್ನು ಸ್ವೀಕರಿಸುವಾಗ ಕನ್ನಡ ಸೊಲ್ಲಿಗೆ-ಉಚ್ಚರಿಸುವ ರೀತಿಗೆ-ಸರಿಹೋಗುವಂತೆ ಅವನ್ನು ಮಾರ್ಪಡಿಸಬೇಕು.

ಉ:—**ಆಂಗ್ಲ ಸೊಲ್ಲು:** ಬ್ಯಾಂಗಲೋರಿನಲ್ಲಿ ಇಂಗ್ಲಿಶ್ ಸ್ಕೂಲುಗಳೂ ಹಾಸ್ಪಿಟಲ್‌ಗಳೂ ಉಂಟು.

ಕನ್ನಡಸೊಲ್ಲು:—ಬೆಂಗಳೂರಿನಲ್ಲಿ ಆಂಗ್ಲ ಶಾಲೆಗಳೂ ಆಸ್ಪತ್ರೆಗಳೂ ಉಂಟು.

ಸೂಚನೆ:—ಆಸ್ಪತ್ರಿಯು ಸ್ಥಲದಲ್ಲಿ ಚಿಕಿತ್ಸಾಲಯು ಇಲ್ಲವೆ ಋಗ್ಣಾಲಯುವೆಂಬ ಸಂಸ್ಕೃತ ಶಬ್ದವನ್ನುಪಯೋಗಿಸುವುದು ಉತ್ತಮ. ಬೆಂಗಳೂರು ಎಂಬ ಮೂಲ ಕನ್ನಡ ಶಬ್ದದಿಂದ ಬ್ಯಾಂಗಲೋರ ಎಂಬ ಇಂಗ್ಲಿಷ್ ಶಬ್ದ ವಾಗಿದೆ ಎಂಬುದನ್ನು ನೆನೆಯುಬೇಕು.

ಶುದ್ಧತೆಯಲ್ಲಿ ಅಡಕವಾದ ಇನ್ನೊಂದು ಮಾತೆಂದರೆ ಸರಿಯಾದ **ಅಕ್ಷರಸಂಯೋಜನೆ** (Spelling). ನಾವು ಒಂದೇ ಶಬ್ದವನ್ನು ಅನೇಕ ಬಗೆಯಾಗಿ ಬರೆಯುವೆವು.

ಉ:—ಬೆಳೆಸು—ಬೆಳೆಯಿಸು—ಬೆಳಸು—ಬೆಳಿಸು.
ಕಳಿಹಿಸು—ಕುಳುಹಿಸು—ಕಳಿಸು—ಕಳುಹು—ಕಳಸು.
ತಿಳಿಹಿಸು—ತಿಳಸು—ತಿಳಿಸು—ತಿಳುಹು.
ಪೊಂದು—ವಂದು—ಒಂದು—ವೂರು—ಊರು.
ಯುಲ್ಲ—ಎಲ್ಲ—ಎಲ್ಲಾ. ಎಜಮಾನ—ಯಜಮಾನ.

ಸೂಚನೆ:—೧ ಇವುಗಳಲ್ಲಿ ಸರಿಯಾದ **ಅಕ್ಷರಸಂಯೋಜನೆಯನ್ನು** ಸ್ವೀಕರಿಸಿ ಬರೆಯು ಬೇಕು. ಶಬ್ದಗಳ ಮೂಲರೂಪಗಳನ್ನು ಕಂಡುಹಿಡಿದು ಅದಕ್ಕೆ ಹೊಂದಿಕೆಯಾಗುವ ಒಂದು ಅಥವಾ ಹೆಚ್ಚು ರೂಪಗಳನ್ನು **ಉ**ಪಯೋಗಿಸಬಹುದು.

ಉ:—ಬೆಳೆ + ಇಸು = ಬೆಳೆಯಿಸು, ಬೆಳಸು.
ಕಳು + ಇಸು = ಕಳಿಸು. ಕಳು + ಹು = ಕಳುಹು.
ತಿಳಿ + ಇಸು = ತಿಳಿಸು. ತಿಳಿ + ಹು = ತಿಳುಹು.
ಒಂದು; ಊರು; ಎಲ್ಲಿ.

೨ ಮಾತಿನ ಭಾಷೆಯಲ್ಲಿಯ ಅಶುದ್ಧ ರೂಪಗಳನ್ನು ಶುದ್ಧಗೊಳಿಸಿ ಬರೆಹದಲ್ಲಿ ಬಳಸುವ ಹೊಸ ರೂಢಿಯನ್ನು ಹಾಕಿಕೊಳ್ಳಬೇಕು. ನಡಿ = ನಡೆ, ಬರಿ = ಬರೆ, ಮನಿ = ಮನೆ, ಊರಾಗ = ಊರೊಳಗೆ.

೨) **ಸುಲಭತೆ:**—ಸುಲಭತೆಯು ನಾವು ಉಪಯೋಗಿಸುವ ಶಬ್ದಗಳಲ್ಲಿ ಇರಬೇಕಾದ ಇನ್ನೊಂದು ಗುಣ. ಇದು ಓದುವವರ ಬುದ್ಧಿ ಸಂಸ್ಕಾರವನ್ನು ಅವಲಂಬಿಸಿದೆ ನಿಜ. ಒಬ್ಬನಿಗೆ ಸುಲಭವಾದುದು ಇನ್ನೊಬ್ಬನಿಗೆ ಬಿಗಿಯಾಗಬಹುದು. ಆದರೂ ಈ ಕೆಳಗಿನ ಕೆಲವು ಸಂಗತಿಗಳನ್ನು ಲಕ್ಷಿಸುವುದು ಒಳಿತು.

(ಅ) ಆದಷ್ಟು **ಪ್ರಚಾರದಲ್ಲಿದ್ದ ಶಬ್ದಗಳನ್ನೇ** ಉಪಯೋಗಿಸಬೇಕು. ಕ್ಲಿಷ್ಟ ಮತ್ತು ಅಪರಿಚಿತ ಶಬ್ದಗಳನ್ನು ಬಿಡಬೇಕು.

ಉ:—(೧) **ಸುಲಭ:** ಅಂಜಿಕೆಯಿಂದ ನಾನು ತುಂಬಾ ನಡುಗಿದೆ.
ಕ್ಲಿಷ್ಟ: ಭಯಕ್ರಾಂತನಾಗಿ ನಾನು ನಿರತಿಶಯವಾಗಿ ಕಂಪಾಯಮಾನನಾದೆ.
(೨) (ಸು) ನಾನು ಬಂದೆ. (ಕ್ಲಿ) ಅಸ್ಮಾದಿಕರ ಆಗಮನವಾಯಿತು.

(ಆ) **ವಸ್ತುವಾಚಕ** ಶಬ್ದಗಳು **ಭಾವವಾಚಕಗಳಿಗಿಂತ** ಸುಲಭವಾದವುಗಳು. ಆದುದರಿಂದ ಸಾಧ್ಯವಿದ್ದಲ್ಲಿ ವಸ್ತುವಾಚಿಗಳನ್ನು ಉಪಯೋಗಿಸಬೇಕು.

ಉ:—(೧) ಬಲವು ಜ್ಞಾನವನ್ನು ಆಳನ್ನಾಗಿ ಮಾಡಬೇಕೆನ್ನುತ್ತಿದೆ. (ಭಾವವಾಚಕಗಳು)
ಬಲವಂತರು ಬುದ್ಧಿವಂತರನ್ನು ತಮ್ಮ ಆಳುಗಳನ್ನಾಗಿ ಮಾಡಬೇಕೆನ್ನುತ್ತಾರೆ. (ವಸ್ತುವಾಚಕಗಳು)
ವ್ಯಕ್ತಿಯು ಸಮಾಜವಂಚನೆಯೂ, ಸಮಾಜದ ವ್ಯಕ್ತಿದೌರ್ಲಕ್ಷ್ಯವೂ ಪರಸ್ಪರರನ್ನು ಹಾಳುಮಾಡಿವೆ.
ಸಮಾಜವನ್ನು ವಂಚಿಸುವದರಿಂದ ವ್ಯಕ್ತಿಯೂ, ವ್ಯಕ್ತಿಯನ್ನು ದುರ್ಲಕ್ಷಿಸುವದರಿಂದ ಸಮಾಜವೂ ಹಾಳಾಗಿವೆ.

ಸೂಚನೆ:—ಆದರೆ ಈ ಉತ್ಸಾಹವನ್ನು ಮೇರೆ ಮೀರಗೊಡಬಾರದು, ಅವಶ್ಯವಿದ್ದಲ್ಲಿ ಭಾವಬೋಧಕಗಳನ್ನು ಉಪಯೋಗಿಸಲೇಬೇಕು.

(ಇ) **ಪರಿಚಿತ** ಶಬ್ದಗಳನ್ನು **ಅಪರಿಚಿತ** ಅರ್ಥದಲ್ಲಿ ಪ್ರಯೋಗಿಸಬಾರದು.

ಉ:—ಪ್ರತಿಯೊಬ್ಬ ಅಜ್ಞನು ಒಳ್ಳೆಯ ಸುಸಂಸ್ಕೃತನು.
ಪ್ರತಿಯೊಬ್ಬ ಆರ್ಯನು ಒಳ್ಳೆಯ ಸುಸಂಸ್ಕೃತನು.

೩) **ಸೌಂದರ್ಯ:**—ಅ) ಶಬ್ದಗಳ ಸೌಂದರ್ಯವು ಹೆಚ್ಚಾಗಿ, ಅವುಗಳ ಧ್ವನಿಯ ಮಾಧುರ್ಯವನ್ನೂ ಗಾಂಭೀರ್ಯವನ್ನೂ ಅವಲಂಬಿಸಿದೆ. ಅದಕ್ಕಾಗಿ ಶಬ್ದಗಳು ಇಂಪುಳ್ಳವಿರಲಿ, ಪೆಂಪುಳ್ಳವಿರಲಿ-ಮಧುರವಾದವುಗಳಿರಲಿ, ಗಂಭೀರವಾದವುಗಳಿರಲಿ !

ಉ:—೧ ಲಲಿತವಹ ಕನ್ನಡದ ನುಡಿಯುಲಿ ತಿಳಿದು ತನ್ನೊಳು ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ ?

೨ ಚಂದಿರನ ಮೂಡಿಸಲು ಮನದಲ್ಲಿ ನೆನೆಯುತಿರೆ, ಮೊಳೆತ
ಚಂದದ ನನೆಯು ಮುಂಗುರುಹ ಪಡೆದ. (ಬೊಮ್ಮ)

೩ ಚಂಡ ಪ್ರಚಂಡ ತಾಂಡವವು ನಡೆದಿಹುದು.
ಅಂಬಜನ ಸೃಷ್ಟಿಯೋ ತಡವರಿಸುತಿಹುದು

೪ ಜಗವನ್ನೆಲ್ಲಾ ತುತ್ತುವೆನೆಂದು ಗದರುತ್ತಿಹುದು ಗರ್ಜಿಸುತಿಹುದು, ಬಡ
ವರಬಗ್ಗರ ತುತ್ತಿನ ಚೀಲದ ಒಳಗಿನ ಒಳಗಿನ ಒಳದನಿಯೊಂದು.

ಸೂಚನೆ:—ಮೊದಲಿನ ಎರಡು ಉದಾಹರಣೆಗಳಲ್ಲಿ ಲಾಲಿತ್ಯವೂ ಕೊನೆಯ ಎರಡರಲ್ಲಿ ಗಾಂಭೀರ್ಯವೂ ಒಡಮೂಡಿರುವವು.

ಆ) ಪ್ರಬಂಧದಲ್ಲಿ **ಗ್ರಾಮ್ಯ** ಶಬ್ದಗಳನ್ನು ಉಪಯೋಗಿಸದಿರಬೇಕು; ಅದರಲ್ಲಿ ಸುಸಂಸ್ಕೃತರು ಆಡುವ ಭಾಷೆಯಿರತಕ್ಕದ್ದು.

ಉ:—ಯಾನ್ರೆಪ್ಪಾ ! ಉಳ್ಳಾಕ ಬರಾಣಿಲ್ಲ್ಯಾನ ?
ಏನಪ್ಪಾ ! ಉಣ್ಣಲು ಬರುವದಿಲ್ಲೇನು ?

ಸೂಚನೆ:—ಸ್ವರೂಪಾನುವಾದದಲ್ಲಿ—ಪ್ರತ್ಯಕ್ಷ ಆಡಿದ ಮಾತನ್ನು ಬರೆಯುವಾಗ, (Direct Speech) ಗ್ರಾಮ್ಯ ಮಾತುಗಳನ್ನು ಇಡಬಹುದು. ಅದರಿಂದ ಸಂಭಾಷಣೆಗೆ **ವಾಸ್ತವತೆ** (Realism) ಬರುವುದು ಅದು ನಿಜವಾದ ಸಂಭಾಷಣೆಯಂತೆ ತೋರುವುದು ಸರಿ ಆದರೆ ಬೇರೆಡೆಗೆ ಅಂಥ ಶಬ್ದಗಳನ್ನು ಸೇರಿಸಕೂಡದು.

ಸಾಮರ್ಥ್ಯ:—

ಅ) ಓದುಗರ ಮನಸ್ಸಿನ ಮೇಲೆ ಸರಿಯಾದ **ಪರಿಣಾಮವಾಗ ಬೇಕಾದರೆ** ಶಬ್ದಗಳು ಅರ್ಥಪೂರ್ಣವಿರಬೇಕು. ಅರ್ಥವಿಹೀನವಾದ ಶಬ್ದಗಳ ಜಾಲವು ಪರಿಣಾಮಕಾರಿಯಾಗಲರಿಯದು. ಶಬ್ದಗಳ ಕಸುವನ್ನು ಅರಿತು ಅವನ್ನು ಉಪಯೋಗಿಸಬೇಕು. ಅದು ಅವುಗಳ ಅರ್ಥದಲ್ಲಿರುವುದು.

೧) ಅದಕ್ಕಾಗಿ ಅಸ್ಪಷ್ಟ ಅರ್ಥವುಳ್ಳ ಸಾಮಾನ್ಯಾರ್ಥಕ ಶಬ್ದಗಳನ್ನು (General words) ತೊರೆದು, ವಿಶೇಷಾರ್ಥಕ ಶಬ್ದಗಳನ್ನು (Specific words) ಉಪಯೋಗಿಸಬೇಕು.

ಉ:--ಅವನು ಒಳ್ಳೇ ಮನುಷ್ಯ; ಅವನ ನಡೆ **ಒಳ್ಳೆಯದು, ನುಡಿ ಒಳ್ಳೆಯದು.**
ಅವನು ಪ್ರಾಮಾಣಿಕ ಮನುಷ್ಯ; **ಅವನ ನಡೆ ಸರಲವಾದುದು, ನುಡಿ ದಿಟವಾದುದು.**

ಸೂಚನೆ:--ಇಲ್ಲಿ 'ಒಳ್ಳೆ' ಇದು ಸಾಮಾನ್ಯ ಅರ್ಥಸೂಚಕ. ಆದರಿಂದ ಸ್ಪಷ್ಟವಾದ ಬೋಧವಾಗುವದಿಲ್ಲ. ಆದುದರಿಂದ 'ಪ್ರಾಮಾಣಿಕ' 'ಸರಲ' 'ದಿಟ' ಇತ್ಯಾದಿ ವಿಶೇಷಾರ್ಥ ಸೂಚಕಗಳ ಉಪಯೋಗ ಮಾಡಬೇಕಾದುದು.

೨) ಎರಡು ಸಮಾನ ಅರ್ಥವುಳ್ಳ ಶಬ್ದಗಳಲ್ಲಿ ಸ್ವಲ್ಪ ಅರ್ಥಭೇದ ವಿರುವುದು ಸಹಜ. ಅದಕ್ಕೆ **ಅರ್ಥಚ್ಛಾಯೆ** (Shade of meaning) ಯೆನ್ನುವರು. ಅದನ್ನು ಸರಿಯಾಗಿ ಕಂಡುಹಿಡಿದು ಶಬ್ದಗಳನ್ನು ಉಪಯೋಗಿಸಿದರೆ ವಾಕ್ಯವು ಕಸುವುಳ್ಳದ್ದಾಗುವುದು. ಕನ್ನಡದಲ್ಲಿ ಈ ವಿಷಯದ ಸೂಕ್ಷ್ಮ ಅಭ್ಯಾಸವು ಆಗುವುದು ಅವಶ್ಯ.

ಉ:--ಆ '**ಕಳ್ಳನು**' ನನ್ನ ಜೇಬಿನೊಳಗಿಂದ ನಾಲ್ಕಾಣೆಗಳನ್ನು ಕದ್ದನು.

ಆ '**ತುಡುಗನು**' ನನ್ನ ಮನೆಯನ್ನೊಡೆದು ಎಲ್ಲವನ್ನು ಅಪಹರಿಸಿದನು.

ಸೂಚನೆ:--ತಿಳಿಯಗೊಡದೆ ಕಳವು ಮಾಡುವವನು **ಕಳ್ಳ**. ತುಡುಕಿ, ವರೋಡೆ ಹಾಕಿ, ಎಲ್ಲವನ್ನು ಅಪಹರಿಸುವವನು **ತುಡುಗ**. ಈ ಮೇರೆಗೆ ಅರ್ಥವ್ಯತ್ಯಾಸವನ್ನು ಗಮನಿಸಿ ಶಬ್ದಗಳನ್ನು ಉಪಯೋಗಿಸಬೇಕು.

೨ ಶಬ್ದಗಳ ಸಂಖ್ಯೆ:--

ವಾಕ್ಯಗಳಲ್ಲಿ ಎಷ್ಟು ಶಬ್ದಗಳಿರಬೇಕೆಂಬುದನ್ನು ನಿಶ್ಚಯಿಸಲು ಬರುವಂತಿಲ್ಲ. ಆದರೂ **ಕಿರಿದರಲ್ಲಿ ಹಿರಿದಾದ ಅರ್ಥವನ್ನು**-ಸ್ವಲ್ಪ ಶಬ್ದಗಳಲ್ಲಿ ವಿಪುಲವಾದ ಅರ್ಥವನ್ನು ಹೇಳುವುದು ಒಳಿತು. ಅತಿ ದೀರ್ಘ ವಾಕ್ಯಗಳು ಓದುಗರಿಗೆ ತಿಳಿದುಕೊಳ್ಳಲು ಬಿಗಿಯಾಗುವವು. ಅವುಗಳಿಂದ ಬೇಸರ ಹುಟ್ಟುವುದು. ಆದುದರಿಂದ ಅವುಗಳನ್ನು ತೊರೆಯುವುದು ಒಳಿತು. ವೈವಿಧ್ಯಕ್ಕಾಗಿ ಒಂದರ್ಥ ದೀರ್ಘ ವಾಕ್ಯವನ್ನು ಅಲ್ಲಲ್ಲಿ ಉಪಯೋಗಿಸಬಹುದು. ಆದರೂ ಚಿಕ್ಕ ಚಿಕ್ಕ ವಾಕ್ಯಗಳನ್ನು ಬರೆಯುವುದು ಮೇಲು.

ಉ:--ಕಾಮವು ರಾಮನನ್ನು ಮರಿಸಿ, ಪ್ರೇಮವನ್ನು ಅಳಿಸಿ, ಐಷಆರಾಮುಗಳ ಸಂಗ್ರಾಮವನ್ನೆಯೆ ಬೆಳಿಸಿ, ನರನನ್ನು ಆಗಲೆ ನರಕಕ್ಕೆ ಸೆಳೆದೊಯ್ಯುವ ಶ್ರೀಷ ಸುಳಿಯಿಂದೂ ಮತ್ತು ಇಂಥ ಭಯಾನಕ ಬವಣೆಯಿಂದ ಪಾರಾಗಿರೆಂದೂ ಸಾಧುಸಂತರು ಕೈಯೆತ್ತಿ ಪದೇ ಪದೇ ಸಾರಿ ಹೇಳಿರುವರು.

ಸೂಚನೆ:--ಇಂಥಲ್ಲಿ ಕೃದಂತ ಅವ್ಯಯಗಳನ್ನು ತೆಗೆದೊಗೆದು, ಅವುಗಳ ಸ್ಥಲದಲ್ಲಿ ಪೂರ್ಣ ಕ್ರಿಯಾಪದಗಳನ್ನು ಇಡಬೇಕು. ಅಂದರೆ ವಾಕ್ಯಗಳು ಚಿಕ್ಕವಾಗಿ ತಿಳಿಯಾದವುಗಳಾಗುವವು. ಅತಿ ದೀರ್ಘ ವಾಕ್ಯ ರಚನೆಯು ಕೃತ್ರಿಮ ಶೈಲಿಯ ಕುರುಹು.

ಕಿರಿವೆಯ ಸಾಧನಗಳು:—

೧) ಪುನರುಕ್ತಿಯನ್ನು ತೊರೆಯಬೇಕು. ಒಂದೇ ಅರ್ಥವನ್ನು ಹೇಳಲು ಸಮಾನ ಅರ್ಥವುಳ್ಳ ಅನೇಕ ಶಬ್ದಗಳನ್ನು ಉಪಯೋಗಿಸಬಾರದು.

ಉ:— ೧ ನಾಲ್ಕು ಜನರಲ್ಲಿ ಒದರಿ ಗದ್ದರಿಸುವುದು, ಸರಿಯಾದುದೂ ಅಲ್ಲ, ಯೋಗ್ಯವಾದುದೂ ಅಲ್ಲ.
ನಾಲ್ಕು ಜನರಲ್ಲಿ ಗದ್ದರಿಸುವುದು ಸರಿಯಲ್ಲ.

೨ ಮುಂಜಾವಿನ ಬೆಳಗನ್ನು ಬೀರುತ್ತ, ಪ್ರಭಾತದ ಪ್ರಭೆಯನ್ನು ಪಸರಿಸುತ್ತ ದಿನಮಣಿಯು ಮೂಡಣದಲ್ಲಿ ಮೊಗದೋರಿದನು.
ತನ್ನ ಪ್ರಭೆಯನ್ನು ಪಸರಿಸುತ್ತ ದಿನಮಣಿಯು ಮೂಡಣದಲ್ಲಿ ಮೊಗದೋರಿದನು.

೩ ಅವರು ಆಕಳ ಗೋಮೂತ್ರವನ್ನು ಸೇವಿಸಿ, ಹಸಿಯೊದ್ದೆಯನ್ನುಟ್ಟು, ನದಿಯ ಕೂಡಲಸಂಗಮದಲ್ಲಿ ಮಿಂದು ಸ್ನಾನ ಮಾಡಿದರು.
ಗೋಮೂತ್ರವನ್ನು ಸೇವಿಸಿ, ಒದ್ದೆಯನ್ನುಟ್ಟು, ಆ ಸಂಗಮದಲ್ಲಿ ಅವರು ಮಿಂದರು.

ಆದರೆ:—

ಕೆಳಗಣ ಸಂದರ್ಭಗಳಲ್ಲಿ ಸಮಾನ ಅರ್ಥದ ಶಬ್ದಗಳನ್ನು (ಜೋಳ್ನುಡಿಗಳನ್ನು) ಉಪಯೋಗಿಸಬಹುದು.

ಅ) ವಿಷಯವನ್ನು ಒತ್ತಿ ಹೇಳುವದಿದ್ದಾಗ:—

ಉ:— ಅವನು ಬರುವನು—ಅದೇಕೆ? ಬಂದೇ ಬರುವನು.

ಆ) ಪ್ರಬಲ ಭಾವನೆಯ ಅಧೀನವಾದಾಗ:—

ಉ:— ೧ ಇಂಥ ವಿಚಿತ್ರ ತತ್ವಗಳನ್ನು ಕಂಡು ನಾನು ಬೆರಗಾದೆ! ಚಕಿತನಾದೆ! ಅಚ್ಚರಿಯ ಕೊನೆಯಿಲ್ಲದ ಕಡಲಲ್ಲಿ ಮುಳುಗಿದೆ!

೨ ನಾವು ತೀರ ಕೀಳರು, ಕ್ಷುದ್ರರು, ನೀಚರೆಂದು ಪ್ರಪಂಚದಲ್ಲಿ ಸಾರುವ ನಮ್ಮ ಹಿತಶತ್ರುಗಳನ್ನು ಅದಾರು ಕ್ಷಮಿಸಬಲ್ಲರು?

೨) ಸಂಮಿಶ್ರ-ಸಂಯುಕ್ತ ವಾಕ್ಯಗಳ ಬದಲಾಗಿ ಸಾಮಾನ್ಯ ವಾಕ್ಯಗಳನ್ನು ಬರೆಯುವುದು.

ಉ:—ಅ) ಯಾವನ ಮೈಯಲ್ಲಿ ಬಲವಿದೆಯೋ ಆವನೇ ಇಲ್ಲಿ ಬಾಳುವನು—
ಬಲವಂತನೇ ಇಲ್ಲಿ ಬಾಳುವನು.

ಆ) ವಿದ್ಯೆಯೆ ನಮ್ಮ ತಂದೆ ಮತ್ತು ವಿದ್ಯೆಯೆ ನಮ್ಮ ತಾಯಿ—ವಿದ್ಯೆಯೆ ನಮ್ಮ ತಾಯ್ತಂದೆ.

ಸೂಚನೆ:—ಹೆಚ್ಚಿನ ವಿವರಕ್ಕಾಗಿ **'ವಾಕ್ಯಪಲ್ಲಟ'** ವಿಭಾಗವನ್ನು ಓದಿಕೊಳ್ಳಬೇಕು.

೩) ಸಾಮಾನ್ಯವಾಕ್ಯದ ಬದಲಾಗಿ ಒಂದು ಶಬ್ದಸಮೂಹವನ್ನಾಗಲಿ, ಸಮಸ್ತ ಶಬ್ದವನ್ನಾಗಲಿ ಇಡುವುದು.

ಉ:—ಅ) ಇದು ಸಾರ, ಇದು ಅಸಾರ ಎಂಬುದನ್ನು ಅರಿಯದವನು ಮನುಜನೆ?
ಸಾರಾಸಾರ ವಿಚಾರವಿಲ್ಲದವನು ಮನುಜನೆ?

ಆ) ತಮ್ಮ ಹಣೆಯಲ್ಲಿ ಏನು ಬರೆದಿದೆ ಎಂಬುದನ್ನು ಬಲ್ಲವರಾರು?
ತಮ್ಮ ಹಣೆಬರಹವನ್ನು ಬಲ್ಲವರಾರು?

೪) ಶಬ್ದಸಮೂಹಗಳ ಸ್ಥಲದಲ್ಲಿ ಒಂದೇ ಶಬ್ದವನ್ನಿಡುವುದು.

ಉ:—ಅ) ಮಾಡಿದ ಉಪಕಾರವನ್ನು ಸ್ಮರಿಸದ ನೀಚರ ಸಂತೆ ನೆರೆಯಬೇಕೇ ಇಲ್ಲಿ?
ಕೃತಘ್ನರಾದ ನೀಚರ ಸಂತೆ ನೆರೆಯಬೇಕೇ ಇಲ್ಲಿ?

ಆ) ತಮ್ಮ ಪರಿವಾರದಿಂದ ಕೂಡಿದಂಥವರಾಗಿ ಅವರು ನಮ್ಮ ಆತಿಥ್ಯವನ್ನು ಸ್ವೀಕರಿಸಿದರು.
ಸಪರಿವಾರವಾಗಿ ಬಂದು ಅವರು ನಮ್ಮ ಆತಿಥ್ಯವನ್ನು ಸ್ವೀಕರಿಸಿದರು.

೫) ಸಂದರ್ಭಕ್ಕೆ ಸರಿಯಾಗಿ ಅಲಂಕಾರಗಳನ್ನು ಉಪಯೋಗಿಸಬೇಕು. ವಿಶೇಷವಾಗಿ **ಉಪಮೆ ರೂಪಕಗಳನ್ನು** ಉಪಯೋಗಿಸಬೇಕು.

ಉ:—ಚಂದಿರನು ಹೇಗೆ ಚೆಲುವನೋ ಹಾಗೆಯೆ ಅವನು ಚೆಲುವನು.
ಅವನು ಚಂದಿರನಂತೆ ಚೆಲುವನು.
ಅವನು ಚಲುವ ಚಂದಿರನು.

ಸೂಚನೆ:—ಆದರೆ ಕಿರಿಮೆಯನ್ನು ಸಾಧಿಸುವಾಗ ಸುಲಭತೆಯನ್ನೂ ಅರ್ಥವ್ಯಕ್ತಿಯನ್ನೂ ಭಾಷೆಯ ಸಂಕೇತಗಳನ್ನೂ ಉಪೇಕ್ಷಿಸಕೂಡದು. ಹಲವು ಸಲ ಹಿರಿಮೆಯೂ ಕೂಡ ಇಷ್ಟ ಪರಿಣಾಮವನ್ನು ಉಂಟು ಮಾಡುವುದು.

೩ ಶಬ್ದಗಳ ಕ್ರಮ:—

೧) ಸಾಮಾನ್ಯಕ್ರಮ:—ಪ್ರತಿವಾಕ್ಯದಲ್ಲಿ ಮೊದಲು ಕರ್ತೃ, ಆಮೇಲೆ ಕರ್ಮ, ತದನಂತರದಲ್ಲಿ ಕ್ರಿಯಾಪದ. ಇದು ಸಾಮಾನ್ಯಕ್ರಮವು; ವಿಶೇಷಣಗಳು ವಿಶೇಷ್ಯಗಳ ಪೂರ್ವದಲ್ಲಿಯೂ, ಅವ್ಯಯಗಳು ಕ್ರಿಯಾಪದಗಳ ಪೂರ್ವದಲ್ಲಿಯೂ ಬರುವುದುಂಟು.

ಉ:– ೧) ಕರುಣಸಾಗರನಾದ ಪರಮಾತ್ಮನು ನಿಮ್ಮ ವ್ಯಸನವನ್ನು ಚನ್ನಾಗಿ ಅರಿತಿರುವನು.

೨) ಆ ಹೊಳಪುಳ್ಳ ಚಿಕ್ಕೆಯು ಒಮ್ಮೆಲೆ ಕೆಳಗೆ ಬಿತ್ತು.

೨) ಅಸಾಮಾನ್ಯಕ್ರಮ:—ಆದರೆ ಪರಿಣಾಮಕ್ಕಾಗಿ ಮಹತ್ವದ ಶಬ್ದಗಳನ್ನು ವಾಕ್ಯದ ಆದಿಯಲ್ಲಿ ಇಡುವದುಂಟು. ಅದಕ್ಕಾಗಿ ಅವಶ್ಯವಾದ ಶಬ್ದಗಳನ್ನು ಪ್ರಾರಂಭಕ್ಕೆ ಇಡಬಹುದು.

ಉ:—ಅ) ಕ್ರಿಯಾಪದವು ಮೊದಲು ಬಂದದ್ದು:—
ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು,
ಶರಣು, ಶರಣು, ಸಿರಿ ಕನ್ನಡ ಜನನಿ! (ಶರಣು ಎಂಬ ಪದದಲ್ಲಿ 'ಶರಣಾಗುವೆನು' ಎಂಬ ಕ್ರಿಯಾಪದವು ಅಡಗಿದೆ.)

ಆ) ಕರ್ಮವು ಮೊದಲಿಗೆ ಬಂದದ್ದು:—
ಅನ್ನವನು ಈಯುವುದು, ನನ್ನಿಯನು ನುಡಿಯುವುದು.

ಇ) ಅವ್ಯಯಗಳು ಮೊದಲಿಗೆ ಬಂದದ್ದು:—
ಕಾಲ: ಸದಾ ಎನ್ನನ್ನು ನೋಡಿ ಮುದದಿ ಸಲುಹುವದು!
ಸ್ಥಲ: ಸುತ್ತುಮುತ್ತಲು ಗೊಂದಲವೇ ಗೊಂದಲ!

ಈ) ಕ್ರಿಯಾಪದವು ಗುಪ್ತ ಇದ್ದದ್ದು:—
ಧನವಂತನೇ ಗುಣವಂತನು.
ನಿನ್ನ ಅಭಿಪ್ರಾಯವೇನು?

ಸೂಚನೆ:—ಆದರೆ ಒಂದೆ ವಾಕ್ಯದಲ್ಲಿ, ಆರಂಭಿಸಿದ ಕ್ರಮವನ್ನು ಮಧ್ಯದಲ್ಲಿ ಬದಲಿಸಬಾರದು. ಅದರಿಂದ ಕ್ರಮಭಂಗದ ದೋಷವುಂಟಾಗುವುದು.

ಉ:—೧) ಅವನಲ್ಲಿ ಮಾತಿನ ಮೇಲ್ಮೆ, ಕೃತಿಯು ಕೀಳು ಕಾಣುವದು.

೨) ಅವನಲ್ಲಿ ಮಾತಿನ ಮೇಲ್ಮೆಯೂ ಕೃತಿಯ ಕೀಳ್ಮೆಯೂ ಕಾಣುವವು.

೩ ವಾಕ್ಯರಚನೆ.

ವಾಕ್ಯಗಳು:—

ಶಬ್ದಗಳಂತೆ ವಾಕ್ಯಗಳು ಕೂಡ ೧) **ಶುದ್ಧ**, ೨) **ಸುಲಭ**, ೩) **ಸುಂದರ**, ೪) **ಪರಿಣಾಮಕರ**ವಾದವುಗಳಿರಬೇಕು. ಈ ನಾಲ್ಕು ಗುಣಗಳು ಪ್ರತಿ ವಾಕ್ಯದಲ್ಲಿ ಇರುವುದು ಉತ್ತಮ. ಕನಿಷ್ಟಪಕ್ಷಕ್ಕೆ ಮೊದಲಿನ ಎರಡು ಗುಣಗಳಂತೂ ಇರಲೇ ಬೇಕು. **ಶುದ್ಧತೆ-ಸೌಲಭ್ಯಗಳು ಎಲ್ಲ ವಾಕ್ಯಗಳಿಗೆ ಅತ್ಯವಶ್ಯಕ. ಸೌಂದರ್ಯ-ಸಾಮರ್ಥ್ಯಗಳು ಐಚ್ಛಿಕ.** ಶೈಲಿಯ ರಹಸ್ಯವನ್ನರಿತವರು ಅವನ್ನು ತಮ್ಮ ವಾಕ್ಯಗಳಲ್ಲಿ ತರಬಹುದು. ಈ ಎಲ್ಲ ಗುಣಗಳನ್ನು ತರಬಯಸುವವರು ಕೆಳಗಿನ ಮಾತುಗಳನ್ನು ಚೆನ್ನಾಗಿ ಪರಿಶೀಲಿಸಬೇಕು.

೧ ಶುದ್ಧತೆ:—

ವಾಕ್ಯಗಳು ಶುದ್ಧವಾದವುಗಳಿರಬೇಕಾದರೆ ಅವುಗಳಲ್ಲಿ ವ್ಯಾಕರಣ ದೋಷಗಳಿರಕೂಡದು. ಸಾಮಾನ್ಯವಾಗಿ ಈ ದೋಷಗಳು,

೧) ವಿಭಕ್ತಿಗಳ ಉಪಯೋಗದಲ್ಲಿ,

೨) ವಿಶೇಷಣ ವಿಶೇಷ್ಯಗಳ ಸಂಬಂಧದಲ್ಲಿ, ಹಾಗೂ

೩) ಕರ್ತೃ-ಕ್ರಿಯಾಪದಗಳ ಸಂಬಂಧದಲ್ಲಿ

ಸೇರುವದುಂಟು. ಅದರ ಸಲುವಾಗಿ ವ್ಯಾಕರಣ ಗ್ರಂಥದಲ್ಲಿ ಆಯಾ ವಿಷಯಗಳನ್ನು ಚನ್ನಾಗಿ ಓದಿಕೊಳ್ಳಬೇಕು. ಜೊತೆಯಲ್ಲಿ ಮುಂದೆ ಕಾಣಿಸಿದ ಮಾತುಗಳನ್ನು ಗಮನಿಸಬೇಕು.

೧) ವಿಭಕ್ತಿಗಳು:—

ಅ) ಸಾಮಾನ್ಯವಾಗಿ ೧) ಪ್ರಥಮೆಯು ಕರ್ತೃವನ್ನೂ ೨) ದ್ವಿತೀಯೆಯು ಕರ್ಮವನ್ನೂ ೩) ತೃತೀಯೆಯು ಕರಣವನ್ನೂ ೪) ಚತುರ್ಥಿಯು ಸಂಪ್ರದಾನವನ್ನೂ ೫) ಪಂಚಮಿಯು ಅಪಾದಾನವನ್ನೂ ೬) ಷಷ್ಠಿಯು ಸಂಬಂಧವನ್ನೂ ೭) ಸಪ್ತಮಿಯು ಅಧಿಕರಣವನ್ನೂ ಸೂಚಿಸುವದುಂಟು. ಈ ಕರ್ತೃ ಆದಿ ಕಾರಕಗಳ ಅರ್ಥಗಳನ್ನು ವ್ಯಾಕರಣ ಗ್ರಂಥದಿಂದ ಅರಿತುಕೊಳ್ಳಬೇಕು.

ಆ) ಆದರೆ ಕೆಲವು ವಿಭಕ್ತಿಗಳು ಬೇರೆ ವಿಭಕ್ತಿಗಳ ಕೆಲಸವನ್ನು ಮಾಡುತ್ತವೆ. ಇದಕ್ಕೆ '**ವಿಭಕ್ತಿ-ಪಲ್ಲಟ**' ಎಂದೆನ್ನುವರು. ಇದರ ಪರಿಚಯವನ್ನು ಕೆಳಗೆ ಮಾಡಿಕೊಡಲಾಗಿದೆ.

೧) **ಪ್ರಥಮೆಯು**, ದ್ವಿತೀಯೆ ಮತ್ತು ಸಪ್ತಮಿಯ ಅರ್ಥದಲ್ಲಿ ಬರುವುದು.

ಉ:—ಒಂದು ವರ್ಷಮುಂ ಇರ್ದಂ—ಒಂದು ವರ್ಷ ಇದ್ದನು. ಒಂದು ದಿವಸದಲ್ಲಿ ಬಂದನು—ಒಂದು ದಿವಸ ಬಂದನು.

೨) **ದ್ವಿತೀಯೆಯು**, ಪ್ರಥಮೆ, ತೃತೀಯೆ, ಚತುರ್ಥೀ, ಪಂಚಮ್ಯರ್ಥದಲ್ಲಿ.

ಉ:—ಸುಣ್ಣವು ಉಳ್ಳದ್ದು—ಸುಣ್ಣವನ್ನು ಉಳ್ಳದ್ದು. ಹೂವಿನಿಂದ ಅರ್ಚಿಸಿದನು—ಹೂವನ್ನು ಅರ್ಚಿಸಿದನು. ಬಡ್ಡಿಗೆ ಕೊಟ್ಟನು—ಬಡ್ಡಿಯನ್ನು ಕೊಟ್ಟನು. ಅವನಿಂದ ಬೇಡಿಕೊಂಡನು—ಅವನನ್ನು ಬೇಡಿಕೊಂಡನು.

೩) **ತೃತೀಯೆಯು**, ಪಂಚಮಿಯ ಅರ್ಥದಲ್ಲಿ.

ಉ:—ಕೆರೆಯಿಂದ ಬಂದನು—ಕೆರೆಯುತ್ತಣಿಂದ ಬಂದನು.

೪) **ಚತುರ್ಥಿಯು**, ದ್ವಿತೀಯೆ, ಷಷ್ಠೀ, ಸಪ್ತಮ್ಯರ್ಥದಲ್ಲಿ.

ಉ:—ಆಕೆಯನ್ನು ತಿಳಿಸಿದನು—ಆಕೆಗೆ ತಿಳಿಸಿದನು. ನಾಡ ಒಡೆಯನು—ನಾಡಿಗೆ ಒಡೆಯನು. ತಾವರೆಯಲ್ಲಿ ಹುಟ್ಟಿದನು-ತಾವರೆಗೆ ಹುಟ್ಟಿದನು.

೫) **ಷಷ್ಠಿಯು**, ಪ್ರಥಮೆ, ದ್ವಿತೀಯೆ, ಸಪ್ತಮ್ಯರ್ಥದಲ್ಲಿ.

ಉ:—ನೃಪನು ಹೇಳಲು-ನೃಪನ ಹೇಳಲು. ನನ್ನನ್ನು ಕೊಂದೆ-ನನ್ನ ಕೊಂದೆ. ಈವರಲ್ಲಿ ದೇವನು—ಈವರ ದೇವನು.

೬) **ಸಪ್ತಮಿಯು**, ತೃತೀಯೆಯ ಅರ್ಥದಲ್ಲಿ

ಉ:—ಕೊಡಲಿಯಿಂದ ಕಡಿದನು—ಕೊಡಲಿಯೊಳು ಕಡಿದನು, ಕಣ್ಣಿನಿಂದ ಕಂಡನು—ಕಣ್ಣಿನಲ್ಲಿ ಕಂಡನು.

ಸೂಚನೆ:—೧) ಇವರಲ್ಲಿಯ ಕೆಲವು ಪಲ್ಲಟಗಳು ಪ್ರಚಾರದಲ್ಲಿಲ್ಲ ಆದರೂ ಅವನ್ನರಿತು ಅವುಗಳನ್ನು ಪ್ರಸಂಗಬಿದ್ದಲ್ಲಿ ಚನ್ನಾಗಿ ಉಪಯೋಗಿಸಲು ಕಲಿಯಬೇಕು.

೨) ಮೇಲಿನ ಪಲ್ಲಟಗಳನ್ನುಳಿದ ಅನ್ಯ ಪಲ್ಲಟಗಳಿಂದ ವಾಕ್ಯದ ಶುದ್ಧತೆಯು ಕೆಡುವುದು. ಆದುದರಿಂದ ಅವನ್ನು ತೊರೆಯಬೇಕು.

೩) ಈ ಪಲ್ಲಟಗಳನ್ನು ನೆನಪಿನಲ್ಲಿಡಲು ಕೆಳಗಿನ ಕಾರಿಕೆಯು ನೆರವಾಗುವುದು. ಅದನ್ನು ಬೇಕಾದರೆ ಉಪಯೋಗಿಸಕೊಳ್ಳಬಹುದು.

ವಿಭಕ್ತಿ ಪಲ್ಲಟದ ಕಾರಿಕೆ.

ಪ್ರಥಮಾ ದ್ವಿ–ಸ–ಯೋರ್ಥೇಚ |
ದ್ವಿತೀಯಾ ಪ್ರ–ತೃ–ಚ(ಂ)–ಪ–ಕೆ ||
ತೃತೀಯಾ ಪಂಚಮ್ಯಾವೇವ |
ಚತುರ್ಥೀ ದ್ವಿ–ಷ–ಸಪ್ತಸು || ೧ ||
ಷಷ್ಠೀಚ ಪ್ರ–ದ್ವಿ–ಸಪ್ತಮ್ಯಾಂ |
ಸಪ್ತಮಿ ತೃತೀಯಾಸು ಚ ||
ಏಷ ಪಲ್ಲಟ ಇತ್ಯುಕ್ತಃ
ಕರ್ಣಾಟ–ಸುವಿಭಕ್ತಿಷು || ೨ ||

೨) ವಿಶೇಷಣ ವಿಶೇಷ್ಯ ಸಂಬಂಧವು.

ಸಾಮಾನ್ಯವಾಗಿ ವಿಶೇಷಣವು ವಿಶೇಷ್ಯದ ಲಿಂಗವಚನ ವಿಭಕ್ತಿಯನ್ನು ಪಡೆಯುವುದು.

ಉಃ—ಸುಂದರನಾದ ಮಗ–ಸುಂದರಿಯಾದ ಮಗಳು–ಸುಂದರವಾದ ಮಗು.
ಆದರೆ,

೧) ಉತ್ತರವಿಶೇಷಣವು ಇದಕ್ಕೆ ಅಪವಾದವು.

ಉಃ—ಅವು ಕುಲಕ್ಕೆ ಭೂಷಣವು. (ವಚನಭಿನ್ನತೆ)
ಆವನು ಬಡವರ ಆಧಾರವು. (ಲಿಂಗಭಿನ್ನತೆ)

೨) ವಿಶೇಷ್ಯವು ಯಾವ ವಿಭಕ್ತಿಯಲ್ಲಿದ್ದರೂ, ವಿಶೇಷಣವು ಪ್ರಥಮೆಯಲ್ಲಿರುವುದು.

ಉಃ—ಸಮನಾದ ಮನುಷ್ಯನಲ್ಲಿ (ಸಮನು + ಆದ)
ಬಡಕಾದ ಮೈಯಿಂದ (ಬಡುಕು + ಆದ)

೩) ಬಹುವಚನ ಸಂಖ್ಯಾವಾಚಕ ವಿಶೇಷಣದ ವಿಶೇಷ್ಯವು ಏಕವಚನದಲ್ಲಿಯೂ ಬರಬಹುದು.

ಉಃ–ಸಾವಿರ **ಬಗೆಯ** ಮತಗಳು ನಮ್ಮ ಮತಿಯನ್ನು ಕೆಡಿಸುತ್ತಲಿವೆ.
(ಬಗೆಗಳ)

೩) ಕರ್ತೃ—ಕ್ರಿಯಾಪದಗಳ ಸಂಬಂಧವು.

ಸಾಮಾನ್ಯವಾಗಿ ಕ್ರಿಯಾಪದವು ಕರ್ತೃವಿನ ಪುರುಷ-ಲಿಂಗ-ವಚನಗಳನ್ನು ಪಡೆಯುವದು.

ಉ: – ರಾಮನು ಗ್ರಂಥವನ್ನು ಓದಿದನು.
ಹಕ್ಕಿಗಳು ಮರಗಳಲ್ಲಿ ಕುಳಿತವು.
ಅವಳು ನದಿಯಲ್ಲಿ ಮುಳುಗಿದಳು.

ಆದರೆ,

ಪುರುಷ:—ಉತ್ತಮ ಪುರುಷದ ಕರ್ತೃವಿನೊಡನೆ, ಬೇರೆ ಪುರುಷಗಳ ಕರ್ತೃಗಳು ಒಂದೇ ವಾಕ್ಯದಲ್ಲಿದ್ದರೆ, ಕ್ರಿಯಾಪದವು **ಉತ್ತಮ ಪುರುಷ**ವಿರಬೇಕು. **ಮಧ್ಯಮ-ಪ್ರಥಮ** ಪುರುಷಗಳ ಕರ್ತೃಪದಗಳು ಒಂದೇ ವಾಕ್ಯದಲ್ಲಿದ್ದರೆ ಕ್ರಿಯಾಪದವು **ಮಧ್ಯಮ**ಪುರುಷವಿರಬೇಕು.

ಉ: —ನಾನೂ-ನೀನೂ--ಅವಳೂ ತೋಟಕ್ಕೆ ಹೋದೆವು. ನಾನೂ-ನೀನೂ ಹೋದೆವು. ನಾನೂ ಅವಳೂ ಹೋದೆವು. ನೀನೂ ಅವಳೂ ಹೋದಿರಿ

ಲಿಂಗ:—ಒಂದೇ ವಾಕ್ಯದಲ್ಲಿ ಬೇರೆ ಬೇರೆ ಲಿಂಗಗಳ ಕರ್ತೃಪದಗಳಿದ್ದರೆ ಕ್ರಿಯಾಪದವು ಕೊನೆಯ ಕರ್ತೃಪದದ ಲಿಂಗವನ್ನು ಪಡೆಯುವದು.

ಉ --ಅವನೂ-ಅವಳೂ-ಅದೂ ಬಂದವು.
ಅವನೂ ಅದೂ ಅವಳೂ ಬಂದರು.
ಅವಳೂ ಅದೂ ಅವನೂ ಬಂದರು.

ವಚನ:—

ಅ) ಒಂದು ಕ್ರಿಯಾಪದಕ್ಕೆ ಹಲವು ಕರ್ತೃಗಳಿದ್ದರೆ ಕ್ರಿಯಾಪದಕ್ಕೆ ಬಹುವಚನವು ಬರುವದು.

ಉ:—ಮೃಗವೂ-ಸಿಂಹವೂ-ಹುಲಿಯೂ ಕಾಡಿನಲ್ಲಿರುವವು.

ಆ) ಒಂದು ಕ್ರಿಯಾಪದಕ್ಕೆ ಸಂಬಂಧಿಸಿದ ಹಲವು ಕರ್ತೃಗಳು ಬೇರೆ ಬೇರೆ ಕಾರಕ-ವಿಶೇಷಣ-ಕೃದಂತಾವ್ಯಯಗಳಿಗೆ ಸಂಬಂಧಿಸಿರಲು, ಕ್ರಿಯಾಪದಕ್ಕೆ ವಿಕಲ್ಪವಾಗಿ ಏಕವಚನವು ಬರುವದು.

ಉ:--ರಾಮನಿಂದ ರಾವಣನೂ—ಕೃಷ್ಣನಿಂದ ಕಂಸನೂ ಕೊಲ್ಲಲ್ಪಟ್ಟನು—ಕೊಲ್ಲಲ್ಪಟ್ಟರು
ಹರ್ಷನನ್ನು ಸೋಲಿಸಿದ ಪುಲಿಕೇಶಿಯೂ—ಹೊಸ ಶಕವನ್ನು ಪ್ರಾರಂಭಿಸಿದ ವಿಕ್ರಮನೂ – ಕನ್ನಡಿಗನು— ಕನ್ನಡಿಗರು.

೩)ಹೊಗಳಿಕೆ ತೆಗಳಿಕೆಯನ್ನು ಸೂಚಿಸುವಾಗ ಏಕವಚನದ ಸ್ಥಲದಲ್ಲಿ ಬಹುವಚನವು ಬರುವುದು.

ಉ:—ಆ ಮಹಾಪುರುಷರು ನಮ್ಮ ನಾಡಿಗೆ ಭೂಷಣರು! ಯಾಕೆ, ರಾಯರಿಂದ ಬಲುಬೇಗ ಬರುವುದಾಯಿತು!

೪) ಕರ್ತೃಪದವು ಜಾತಿವಾಚಕ ಏಕವಚನವಿದ್ದಾಗ ಕ್ರಿಯಾಪದವನ್ನು ಬಹುವಚನದಲ್ಲಿಯೇ ಇಡುವುದುಂಟು.

ಉ:—ಕುದುರೆ ಜಿಗಿದವು; ಮುಳ್ಳು ಮುರಿದವು--ಹಲ್ಲು ಹರಿದವು.

ಸೂಚನೆ:--ಈ ಬಗೆಯ ಹೊಂದಿಕೆ ಇಲ್ಲದಿದ್ದರೆ ವಾಕ್ಯವು ಅಶುದ್ಧವಾಗುವದುಂಟು.

೨ ಸುಲಭತೆ:—

ಸುಲಭತೆಯು ಪ್ರತಿವಾಕ್ಯದಲ್ಲಿರಬೇಕಾದ ಪ್ರಧಾನ ಗುಣ. ವಾಕ್ಯದ ಅರ್ಥವು ಸಹಜವಾಗಿ ತಿಳಿಯುವಂತಿರುವದು ಅವಶ್ಯ. **ತಿಳಿವು** ಬರಹದ ಮೂಲ ಉದ್ದೇಶವಿದ್ದುದರಿಂದ ನಾವು ಈ ವಿಷಯವನ್ನು ಚನ್ನಾಗಿ ಗಮನಿಸಬೇಕು. ವಾಕ್ಯವು ತಿಳಿಯಾದುದಾಗಲು, ಅದರಲ್ಲಿಯ ಶಬ್ದಗಳ ಸುಲಭತೆಯ ಜೊತೆಯಲ್ಲಿ, ಕೆಳಗಿನ ಸಂಗತಿಗಳೂ ಅವಶ್ಯವಾದವುಗಳು.

೧) ಐಕ್ಯ:—೧) ಪ್ರತಿಯೊಂದು ವಾಕ್ಯದಲ್ಲಿ ಅನೇಕ ವಿಷಯಗಳ ಗೊಂದಲವಿರಕೂಡದು. ಅದರಲ್ಲಿ ಒಂದೇ ಪ್ರಧಾನ ಅರ್ಥವು ಇರಬೇಕು. ಉಳಿದವುಗಳು ಬರಲೇಬೇಕಾಗಿದ್ದರೆ ಅವು ಅದಕ್ಕೆ ಅಧೀನವಾದವುಗಳಿರಬೇಕು.

ಉ:—(ಐಕ್ಯಕ್ಕೆ) ಸುಸಾಧನಗಳ ಸೌಲಭ್ಯವಿದ್ದರೂ ನಗರವಾಸಿಗಳು ನೆಳಲಿನಲ್ಲಿ ಕುಳಿತುಕೊಂಡು ಬಿಸಿಲಿನ ತಾಪಕ್ಕೆ ಹಾಹಾಕಾರ ಮಾಡುತ್ತಿರಲು, ಪಥಿಕರು ಉರಿಯುವ ಬಿಸಿಲಿನಲ್ಲಿ ಹಾದಿಯು ನಡೆದು ಕಂಗೆಟ್ಟು ಬಳಲುತ್ತಿರುವ ಸ್ಥಿತಿಯು ಕಲ್ಪನೆಯು ಕೂಡ ನಮಗೆ ಸಹಿಸುವುದೆ?

(ಐಕ್ಯಭಂಗಕ್ಕೆ) ಸುಸಾಧನಗಳ ಸೌಲಭ್ಯವುಳ್ಳ ನಗರವಾಸಿಗಳು ನೆಳಲಿನಲ್ಲಿ ಕುಳಿತುಕೊಂಡು ಬಿಸಿಲಿನ ತಾಪಕ್ಕೆ ಹಾಹಾಕಾರ ಮಾಡುತ್ತಿದ್ದರೆ ಪಥಿಕರು ಉರಿಯುವ ಬಿಸಿಲಿನಲ್ಲಿ ಹಾದಿಯು ನಡೆದು ಕಂಗೆಟ್ಟು ಬಳಲುತ್ತಿದ್ದರು ಮತ್ತು ಇದರ ಕಲ್ಪನೆಯು ನಮಗೆ ಸಹಿಸುವುದೇ!

೨) ಒಂದೇ ವಾಕ್ಯದಲ್ಲಿ ಕರ್ತೃಪದವನ್ನು ಬದಲಿಸದಿರಬೇಕು.

ಉ:—ಅ) ಧರ್ಮವು ಅಂತರಂಗವನ್ನು ವಿಮಲಗೊಳಿಸುವುದು ಮತ್ತು ಅದರಿಂದ ಮುಕ್ತಿಸುಖವು ಲಭಿಸುವುದು.

ಆ) ಧರ್ಮವು ಅಂತರಂಗವನ್ನು ವಿಮಲಗೊಳಿಸಿ ಮುಕ್ತಿಸುಖವನ್ನು ದಯ ಪಾಲಿಸುವುದು.

೩) ಹಾಳು ಕೀಳು ವಿವರಗಳನ್ನು ತೊರೆಯಬೇಕು.

ಉ:— ೧) ನನ್ನ ಲೆಕ್ಕಣಿಕೆಯನ್ನು ಕೈಯಲ್ಲಿ ತೆಗೆದುಕೊಂಡು ನಾನೊಂದು ಸುಂದರವಾದ ಓಲೆಯನ್ನು ಬರೆದೆ.

೨) ಮುಂದಿನ ಕರ್ನಾಟಕದ ರಾಜಧಾನಿಯಾಗಲು ಧಾರವಾಡವೇ ಯೋಗ್ಯ ಮತ್ತು ಅದು ಒಂದು ಸ್ಟೇಶನ್ನೂ ಇದೆ.

ಸೂಚನೆ:—೧ನೆಯ ವಾಕ್ಯದ ಪೂರ್ವಾರ್ಧವೂ ೨ನೆಯ ವಾಕ್ಯದ ಉತ್ತರಾರ್ಧವೂ ಅನವಶ್ಯಕ.

೨) ಅನ್ವಯ:—ವಾಕ್ಯವು ತಿಳಿಯಾದದ್ದಾಗಬೇಕಾದರೆ ಅದರಲ್ಲಿಯ ಶಬ್ದಗಳಲ್ಲಿ ಸರಿಯಾದ ಅನ್ವಯ—ನಿಕಟ ಸಂಬಂಧ—ವಿರಲು ಬೇಕು. ದೂರಾನ್ವಯವು ವಾಕ್ಯದ ಸಂದಿಗ್ಧತೆಯನ್ನು ಹೆಚ್ಚಿಸುವುದುಂಟು. ಎಷ್ಟೋ ಸಲ ಅದರಿಂದ ವಿಪರೀತ ಅರ್ಥವೂ ಸೂಚಿತವಾಗುವುದುಂಟು.

ಉ:— ಯಜಮಾನನು ತನ್ನ ಸೇವಕನನ್ನು ಉದ್ಧಟತನದಿಂದ ಹೋಗಲು ಹೇಳಿದನು. ಆತನು ಬರೀ ಸಾಲೆಗೆ ಆಡಲು ಹೋದನು.

ಸೂಚನೆ:-ಮೇಲಿನ ಎರಡು ವಾಕ್ಯಗಳಲ್ಲಿ ದೂರಾನ್ವಯದ ದೋಷಗಳು ಒಡೆದು ಕಾಣು ವವು. ಒಂದರಲ್ಲಿ 'ಉದ್ಧಟತನದಿಂದ' ಇದು 'ಹೇಳುವದಕ್ಕೆ' ಸಂಬಂಧಿಸಿರ ಬೇಕಾದದ್ದು—'ಹೋಗುವದಕ್ಕೆ' ಸಂಬಂಧಿಸಿದೆ. ಆದುದರಿಂದ ಹೋಗು ವದು 'ಉದ್ಧಟತನದಿಂದ' ಆದದ್ದೋ ಹೇಳುವದು 'ಉದ್ಧಟತನದಿಂದ'

ಆದದ್ದೋ ತಿಳಿಯಲು ಬಿಗಿಯಾಗಿದೆ. ಇದೇ ತಪ್ಪು ಎರಡನೆಯ ವಾಕ್ಯದಲ್ಲಿ ಕಂಡು ಬರುವುದು ಅಲ್ಲಿ 'ಬರೀ' ಇದು 'ಆದಲು' ಇದಕ್ಕೆ ಸಂಬಂಧಿಸಿರಲು ಬೇಕು.

೩) **ಅಲಂಕಾರಗಳ ಅಮಿಶ್ರಣ:**—ಭಿನ್ನ ಅಲಂಕಾರಗಳ ಬೆರಕೆಯಿಂದಲೂ ಸಂದಿಗ್ಧತೆಯುಂಟಾಗುವುದು. ಆದುದರಿಂದ ಅವುಗಳ ಮಿಶ್ರಣವಾಗದಂತೆ ಅವನ್ನು ಎಚ್ಚರದಿಂದ ಉಪಯೋಗಿಸಿರಿ. ಅವು ಸರಿಯಾದ ಚಿತ್ರವನ್ನು ಸಲ್ಲಿಸಬೇಕು.

ಉ:- ೧) ಜೀವನದ ಮುಂಜಾವು ಹಿಗ್ಗಿನ ಸುಗ್ಗಿಯು.

(ಮಿಶ್ರ)

ಜೀವನದ ವಸಂತವು ಹಿಗ್ಗಿನ ಸುಗ್ಗಿಯು.

(ಸರಿಯಾದದ್ದು)

ಸೂಚನೆ:--ಇಲ್ಲಿ ಯೌವನವನ್ನು ಒಂದೇ ಕಾಲಕ್ಕೆ ಮುಂಜಾವಿಗೂ ಸುಗ್ಗಿಗೂ ಹೋಲಿಸಲಾಗಿದೆ. ನಿಜವಾಗಿ ಸುಗ್ಗಿಯಿರುವುದು ಒಂದು ಋತುವಿನಲ್ಲಿ-ವರ್ಷದ ಒಂದು ವಿಭಾಗದಲ್ಲಿ, ದಿನದ ವಿಭಾಗದಲ್ಲಲ್ಲ. ಆದುದರಿಂದ ಈ ಎರಡು ಹೋಲಿಕೆಗಳಲ್ಲಿ ಹೊಂದಿಕೆಯಿಲ್ಲ. ಆದರೆ 'ಮುಂಜಾವಿನ' ಸ್ಥಳದಲ್ಲಿ 'ವಸಂತ'ವನ್ನಿಟ್ಟರೆ ಅದೊಂದು ಸುಗ್ಗಿಯ ಕಾಲವಾಗಬಹುದು. ಮತ್ತು ಅಲಂಕಾರಗಳ ಮಿಶ್ರಣದಿಂದುಂಟಾದ ಗೊಂದಲವು ಇಲ್ಲದಂತಾಗುವುದು.

೪ **ಸೌಂದರ್ಯ:**—

ಸೌಂದರ್ಯವು ವಾಕ್ಯದ ಇನ್ನೊಂದು ಗುಣ. **ತಿಳಿವಿನಂತೆ**-ತಿಳುವಳಿಕೆಯಂತೆ, **ನಲಿವೂ**-ಆನಂದವೂ ವಾಕ್ಯವನ್ನು ಬರೆಯುವಾಗ ನಮ್ಮೆದುರಿರಬೇಕಾದ ಇನ್ನೊಂದು ಗುರಿ. **ಅಂದವಾದ ವಾಕ್ಯದಲ್ಲಿಯ ತಿಳಿಯಾದ ಅರ್ಥವನ್ನು** ಓದುಗರು ಆನಂದದಿಂದ ಗ್ರಹಿಸುವರು. ವಾಕ್ಯದ ಸೌಂದರ್ಯವು ವಿಶೇಷವಾಗಿ ಕೆಳಗಿನ ಮಾತುಗಳನ್ನವಲಂಬಿಸಿರುವುದು.

i) **ಭಾವಕ್ಕೆ ತಕ್ಕ ದೇಹ:**—ವಾಕ್ಯದಲ್ಲಿ ಶಬ್ದಗಳು ಭಾವವನ್ನು ಚನ್ನಾಗಿ ಮೂಡಿಸುವಂತಹವಿರಬೇಕು. ೧) ಲಲಿತ ಭಾವಕ್ಕೆ ಲಲಿತ ಶಬ್ದಗಳು. ೨) ಗಂಭೀರ ಭಾವಕ್ಕೆ ಗಂಭೀರ ಶಬ್ದಗಳು. ಇವುಗಳ ಕೆಲವು ಉದಾಹರಣೆಗಳನ್ನು ಶಬ್ದವಿಚಾರದಲ್ಲಿ ಕೊಡಲಾಗಿದೆ. ಅವನ್ನೊ ನೋಡಿಕೊಳ್ಳಬಹುದು.

ಉ:—೧) ಮೂಡುವನು, ರವಿ ಮೂಡುವನು!
ಕತ್ತಲೊಡನೆ ಜಗಳಾಡುವನು.

೨) ಹಾಯ! ಕರ್ನಾಟಕದಿತಿಹಾಸ ಸಿನ್ನಭಿಮಾನ
ಹೆಚ್ಚಿಸುವವಕ್ಕೆ ಬೇಕೆ?
ತಾಯಿ, ತಾಯೆಂದು ಸಲೆ ಸಿದ್ಧಮಾದಲು ಬಣಗು ಒಣತರ್ಕಶಾಸ್ತ್ರ
ವೇಕೆ?

ii) ಪದಲಾಲಿತ್ಯ:—ಇದು ಅನುಪ್ರಾಸಾದಿ ಕೆಲವು ಶಬ್ದಾಲಂಕಾರಗಳಿಂದ ಬರತಕ್ಕಂತಹದು. ಆದರೆ ಅವುಗಳ ಅತಿರೇಕವು ಸೌಂದರ್ಯವನ್ನು ಹಿಗ್ಗಿಸದೆ-ಹೆಚ್ಚಿಸದೆ-ಕುಗ್ಗಿಸುವದುಂಟು, ಕಡಿಮೆ ಮಾಡುವುದುಂಟು. ಆದುದರಿಂದ ಅವನ್ನು ಎಚ್ಚರದಿಂದ ಉಪಯೋಗಿಸಬೇಕು.

ಉ:—೧) ಕೂಲಿಕೆಲಸದಲ್ಲಿಯೂ ಕುಲೀನತೆಯಿಲ್ಲವೇ?

೨) ಎಳೆತನದಲ್ಲಿಯೆ ಹಳೆತನದ ಕುರುಹುಗಳು ಕಾಣಬೇಕೇ? ಬೆಳೆಯು
ಸಿರಿ ಎಳೆಯಲ್ಲಿ.

೩) ಮೈಚೆಲುವಿನ ಮದವಿದ್ದರೆ, ಮುದಿತನವು ಅದೆಲ್ಲವನ್ನು ಮುದುರಿ
ಮೂಲಿಗೊತ್ತುತ್ತಿದೆ.

೪) ರೂಢಿಯ ಬೀಡಿನಲಿ ಬಾಡಿಬಿದ್ದ ಹೇಡಿಗೆ ಗೂಢವು ಗಾಢಾಂಧವಾದ
ಗೂಡೇ ಸರಿ.

ಸೂಚನೆ—ಮೊದಲಿನ ಎರಡು ಉದಾಹರಣೆಗಳಲ್ಲಿಯ ಮಧುರವಾದ ಮಿತಿಯು
ಮುಂದೆ ಅತಿಯಾಗಿ, ಕೃತ್ರಿಮತೆಯನ್ನು ತಾಳಿರುವುದು.

iii) ಅಲಂಕಾರಗಳು:—ಮಿತವಾಗಿ ಉಪಯೋಗಿಸಿದ ಅಲಂಕಾರಗಳು ವಾಕ್ಯದ ಚೆಲುವನ್ನು ಹೆಚ್ಚಿಸುವವು. ಕನ್ನಡದಲ್ಲಿ ಅಲಂಕಾರಗಳು ನೂರಕ್ಕೆ ಮಿಕ್ಕಿರುವವು ಅವನ್ನೆಲ್ಲ ಜಿಜ್ಞಾಸುಗಳು ಅಲಂಕಾರ ಗ್ರಂಥಗಳಿಂದ ಅರಿತುಕೊಳ್ಳಬಹುದು. ಕೆಳಗೆ ಕಾಣಿಸಿದ ನಾಲ್ಕು ಅಲಂಕಾರಗಳನ್ನು ಪ್ರಸಂಗವರಿತು ಉಪಯೋಗಿಸಿದರೆ ಶೈಲಿಯ ಸೌಂದರ್ಯವು ಬೆಳೆಯದಿರದು.

ಅ) ಉಪಮೆ:—ಎರಡು ವಸ್ತುಗಳಲ್ಲಿಯ **ಅಂದವಾದ ಹೋಲಿಕೆಯೆ** ಉಪಮೆ. ಸಾಮಾನ್ಯ ಹೋಲಿಕೆಯು ಉಪಮೆಯಾಗಲರಿಯದು. '**ಅವನು ನನ್ನಂತಿರುವ**' ಇದು ಉಪಮೆಯಲ್ಲ.

ಉ:—ಅವನ ಕೀರ್ತಿಯು **ಪರಿಮಲದಂತೆ** ಪಸರಿಸಿತು. ಆವಳ ಮುಖವು **ತಾವರೆಯಂತೆ** ಪ್ರಸನ್ನವಾದುದು. ಇಲಿಯು **ಹುಲಿಯಂತೆ** ಹೋರಬಹುದೆ ? ಹರಿಹರನು ಕಾಳಗದಲ್ಲಿ **ಸಿಂಹನಂತೆ** ಪರಾಕ್ರಮಿಯು.

ಸೂಚನೆ:—ಇಲ್ಲಿ 'ಕೀರ್ತಿಯು' '**ಉಪಮೇಯು**'; 'ಪರಿಮಲವು' '**ಉಪಮಾನ**'; ಇವು ಪಾರಿಭಾಷಿಕ ಶಬ್ದಗಳು. ಒಂದರ ಅರ್ಥವು '**ಹೋಲಿಸಲ್ಪಟ್ಟ ಶಬ್ದ**'; ಇನ್ನೊಂದರ ಅರ್ಥವು '**ಹೋಲಿಸುವ ಶಬ್ದ**'.

ಆ) **ರೂಪಕ:-ಉಪಮಾನ ಉಪಮೇಯು** ವಸ್ತುಗಳನ್ನು '**ಒಂದರಂತೆ ಮತ್ತೊಂದು ಇದೆ**' ಎಂದುಸುರದೆ, '**ಒಂದು ಮತ್ತೊಂದೆಯೆ ಇದೆ**' ಎಂದು ಬಣ್ಣಿಸಿದರೆ **ರೂಪಕ** ಅಲಂಕಾರವಾಗುವದು.

ಉ:—ಅವಳ ಮುಖ-ಕಮಲವು ಅರಳಿತು.
ಆ ನರಸಿಂಹನು ಅಂದು ಗದ್ದರಿಸಿದನು.
ನರಕವೇ ಪಾಪದ ಪಾರಿತೋಷಕ.
ಮೂಡಣದಲ್ಲಿ ಬೆಳಕಿನ ಕಾರಂಜಿಯು ಪುಟಿಯಿತು.

ಸೂಚನೆ:— ಮುಖವು ಕಮಲದಂತೆ' ಇದೆ ಎಂದರೆ ಆದು '**ಉಪಮೆ**'; '**ಮುಖವೇ ಕಮಲ**' ಎಂದರೆ ಅದು, **ರೂಪಕ ರೂಪಕವು ಉಪಮೆಗಿಂತ ಪ್ರಬಲವಾದ ಅಲಂಕಾರವು.**

ಇ) **ಉತ್ಪ್ರೇಕ್ಷೆ:**—ಒಂದು ವಸ್ತುವನ್ನು ಮತ್ತೊಂದು ವಸ್ತುವನ್ನಾಗಿ ಭಾವಿಸುವುದು **ಉತ್ಪ್ರೇಕ್ಷೆ.** ಈ ಭಾವನೆಯು ಸಂದೇಹಕ್ಕಿಂತ ಮೇಲಾದುದೂ, ನಿಶ್ಚಯಕ್ಕಿಂತ ಕೀಳಾದುದೂ ಇರುವುದು.

ಉಪಮೆಯಲ್ಲಿಯು ಉಪಮಾನವು ಹೆಚ್ಚಾಗಿ **ಲೋಕಪ್ರಸಿದ್ಧವಾದ**ದ್ದಿರುವುದು. **ಉತ್ಪ್ರೇಕ್ಷೆ**ಯಲ್ಲಿ ಎಷ್ಟೋ ಸಲ **ಕವಿಕಲ್ಪಿತ**ವಾದದ್ದಿರುವುದು.

ಉ:—೧) ಆಕಾಶವು ಕಾಡಿಗೆಯನ್ನು ಸುರಿಸುವದೇನೋ ಅನ್ನುವಂತೆ ಕಗ್ಗತ್ತಲು ಕವಿಯಿತು.
೨) ಸೇನಾರಜದಿಂದ ಹೊಲಸಾದ ಮೈಯನ್ನು ತೊಳೆಯಲಿಕ್ಕಾಗಿಯೋ ಏನೊ ಸೂರ್ಯನು ಪಶ್ಚಿಮ ಸಮುದ್ರವನ್ನು ಸೇರಿದನು.

ಈ) **ಅತ್ಯುಕ್ತಿ:**— ಅದ್ಭುತವಾಗಿಯೂ ಅಸಂಭಾವಿತವಾಗಿಯೂ ಇರುವಂತೆ ಹೇಳಿದ **ಶೌರ್ಯ-ಔದಾರ್ಯ-ಸೌಂದರ್ಯ** ಇತ್ಯಾದಿಗಳ ವರ್ಣನೆಗೆ ಈ ಹೆಸರು.

ಉ:—ಅವನ ಕೀರ್ತಿಕಾಂತೆಯು ಸುರನದಿಯಲ್ಲಿ ತನ್ನ ಮುಖದರ್ಪಣವನು ನೋಡುತ್ತಿದ್ದಳು.

೬) ಸಾಮರ್ಥ್ಯ:—

ಚನ್ನಾಗಿ **ತಿಳಿಸಲು 'ಸುಲಭತೆಯೂ'; ನಲಿಸಲು 'ಸೌಂದರ್ಯವೂ'** ಅವಶ್ಯವಿದ್ದಂತೆ, ಓದುಗರ ಮನಸ್ಸನ್ನು **ಒಲಿಸಲು,** ನಮ್ಮ ವಾಕ್ಯದಲ್ಲಿ ಸರಿಯಾದ '**ಕಸುವು**' ಬೇಕು. ಇದರಿಂದಲೇ ಇಷ್ಟವಾದ ಪರಿಣಾಮ ವನ್ನುಂಟು ಮಾಡಲು ಬರುವದು. ಈ ಸಾಮರ್ಥ್ಯವನ್ನು ಕೆಲ ಮಟ್ಟಿಗೆ **ಕೆಳಗಿನ** ಸಾಧನಗಳಿಂದ ಉಂಟುಮಾಡಲು ಬರುವುದು.

೧) ಸೂಚಕ ವಿಶೇಷಣಗಳಿಂದ:—ವಾಕ್ಯದ 'ಕಸುವು' ಅನೇಕ ಸಲ ಅರ್ಥಪೂರ್ಣವಾದ ಸೂಚಕ ವಿಶೇಷಗಳನ್ನು ಅವಲಂಬಿಸಿರುವುದು.

ಉ:—ಯೌವನದ **ಕಮನೀಯ ಕನಸುಗಳು** ಆದಾರನ್ನು ಮೋಹಿಸುವದಿಲ್ಲ? ಮುಂಜಾವಿನ **ಸೊಂಪಿನ ಸಿರಿಯು** ನಮ್ಮನ್ನು ಸಂತಸದ ಸಾಗರದಲ್ಲಿ ತೇಲಿಸಿತು.
ನಿಷ್ಠುರವಾದ ಚಳಿಯು ಚರಾಚರವನ್ನು ಅತಿಯಾಗಿ ನಡುಗಿಸಿತು.

ಸೂಚನೆ:—'**ಕಮನೀಯ ಕನಸುಗಳು**' '**ಸೊಂಪಿನ ಸಿರಿಯು**' '**ನಿಷ್ಠುರ ಚಳಿ**' ಇವುಗಳಲ್ಲಿ ಒಂದು ಬಗೆಯ ಅರ್ಥಪೂರ್ಣತೆಯು ಕಂಡುಬರುವುದು.

೨) ಸರಿಯಾದ ಶಬ್ದ ಜೋಡಣೆಯಿಂದ: ವಾಕ್ಯದಲ್ಲಿ ಶಬ್ದ ಗಳನ್ನು ಸರಿಯಾದ ಸ್ಥಲದಲ್ಲಿಡುವುದರಿಂದ ಯೋಗ್ಯ ಪರಿಣಾಮವಾಗುವು ದುಂಟು. ಪ್ರಧಾನ ಶಬ್ದಗಳನ್ನು ಪ್ರಮುಖ ಸ್ಥಲಗಳಲ್ಲಿಡುವುದು. ವಾಕ್ಯ ದಲ್ಲಿಯ **ಆದಿ-ಅಂತ್ಯ** ಸ್ಥಲಗಳು **ಪ್ರಮುಖ ಸ್ಥಲಗಳು**. ಜೊತೆಯಲ್ಲಿ ಅವು ಗಳಲ್ಲಿ ಸರಿಯಾದ ಹೊಂದಿಕೆಯೂ ಅತ್ಯವಶ್ಯ.

ಉ:—೧) ಮಡಿದನಾ ಮಾರಾಯ.
೨) ಎನಿತು ಮೋಹಕವಯ್ಯ ಅಧಿಕಾರದಾ ಮದವು!
೩) ಎಂಥ ನಾಡಿದು, ಎಂಥ ಕಾಡಾಯಿತು!
೪) ಶರಣರಾಜೀವನವ ಪಾವನವ ಮಾಡುವರು.

೩) ಶಬ್ದಗಳ ಪುನರುಕ್ತಿಯಿಂದ:—ಪರಿಣಾಮಕ್ಕಾಗಿ ಎಷ್ಟೋ ಸಲ **ಪುನರುಕ್ತಿ**ಯನ್ನು ಕವಿಗಳು ಉಪಯೋಗಿಸುವದುಂಟು.

ಉ:—೧) ಏಳಿರೇಳಿರಿ! ಬಂಟರೆಲ್ಲರು.

೨) ಮಣಿಮಣಿದು, ಕುಣಿಕುಣಿದು, ಕೆಲೆಕೆಲೆದು ನಲಿದಾಡಿದನು.

೪) ಕ್ರಮೋನ್ನತಿಯಿಂದ (climax):—ಒಂದು ಭಾವವನ್ನು ಚೆನ್ನಾಗಿ ಮನಸ್ಸಿನಲ್ಲಿ ಮೂಡಿಸಲು-ಹೆಚ್ಚು ಹೆಚ್ಚು ಪ್ರಬಲವಾದ ಶಬ್ದ ಸಮೂಹಗಳನ್ನು ಕ್ರಮದಿಂದ ಒಂದರಮುಂದೊಂದು ಇಡುವ ಪರಿಪಾಠವುಂಟು, ಇದೇ **ಕ್ರಮೋನ್ನತಿಯು**.

ಉ:—ಬಸವಳಿದು, ಬಿಸುಸುಯ್ದು, ಬಾಡಿ ಬಡವಾದೆನಯ್ಯ !
ಬೇಡಯ್ಯ! ಬೇಡೆನ್ನರಸ! ಬೇಡೆನ್ನ ಭಕ್ತಸಿಧಿಯೆ! ಕುಲವೆ,-ಬಲವೆ;
ಗತಿಯೆ ಮತಿಯೆ! ಪುಣ್ಯವೆ-ಪ್ರಾಣವೇ-ಕಾವುದು-ಕಾವುದು.

೫) ಸಮತೂಕ ವಾಕ್ಯಗಳಿಂದ:—ಸರಿ ತೂಕವುಳ್ಳ ವಾಕ್ಯಗಳ ಯುಗಲವು ಬಲು ಪರಿಣಾಮಕಾರಿಯಿರುವುದು. ಅದರಲ್ಲಿ ಅರ್ಥದ ‘ವಿರೋಧ’ ವಿದ್ದರಂತೂ ಅವುಗಳ ಕಸುವು ಇನ್ನೂ ಹೆಚ್ಚುವುದು.

ಉ:—೧) ಅವರು ಆಡಿದುದೇ ಆದೇಶ, ಮಾಡಿದುದೇ ಮಹಾಕಾರ್ಯ.

೨) ಅಗ್ನಿಯು ಕಾವಿನಿಂದ ಹುಟ್ಟಿಸಿದ್ದುಂಟು, ಬೆಳಕಿನಿಂದ ಕಾಯ್ದುದ್ದುಂಟು; ಬೆಂಕಿಯಿಂದ ಸುಟ್ಟಿದ್ದುಂಟು.

೩) ನೀನು ನಕ್ಕರೆ ಬೆಳಕಿನ ಬೆಳೆ; ನೀನು ಅತ್ತರೆ ಮುತ್ತಿನ ಮಳೆ; ನೀನು ನಕ್ಕರೊಂದು ರುಚಿ; ನೀನು ಅತ್ತರೊಂದು ರುಚಿ.

೪) ಉಲ್ಲಾಸದ ಅಭಾವವೆ ಆಯಾಸ; ಆಸಕ್ತಿಯ ಅಭಾವವೇ ಆಲಸ್ಯ.

ಸಮತೋಲ ರಚನೆಯಿಂದ ಎರಡು ಬಗೆಯ ಲಾಭಗಳಾಗುವವು ಅದರಿಂದ ೧) **ನೆನಪಿಗೆ ನೆರವಾಗಿ** ೨) **ಅಂದವಾದ ಅಚ್ಚರಿ**-ಆಶ್ಚರ್ಯ ಉಂಟಾಗುವದು. ಪುನರುಕ್ತಿಯು ಮನಸ್ಸನ್ನು ಸಹಜವಾಗಿ ಸೆಳೆದು ವಿಷಯ-ವೈವಿಧ್ಯದಲ್ಲಿಯ ರಚನಾ ಸಾಮರ್ಥ್ಯವು ಒಂದು ಬಗೆಯ ಅಂದವನ್ನು ಹುಟ್ಟಿಸುವುದು. ತೀರ ಹೊಸ ಅರ್ಥವನ್ನು ಸುಮಾರಾಗಿ ಅದೇ ಶಬ್ದದಿಂದ ಉಸುರುವುದು ಅಚ್ಚರಿಯನ್ನು ಹುಟ್ಟಿಸದಿರದು.

ಉ:—ಇದು ದಿಟವಿದ್ದರೂ ಕಟುವಲ್ಲ,
ಆಡಿದ್ದನ್ನು ಮಾಡದಿರುವದಕ್ಕಿಂತ ಮಾಡಿದ್ದನ್ನು ಆಡದಿರುವುದು ಲೇಸು.

೬) ಪ್ರಶ್ನೆಗಳ ಮಾಲೆ:—ನುರಿತ ಬರಹಗಾರರು ಪರಿಣಾಮಕ್ಕಾಗಿ ಪ್ರಶ್ನೆಗಳ ಸುರಿಮಳೆಯನ್ನೇ ಕರೆಯುವದುಂಟು.

ಉ:—ಪ್ರಾಣವೆ! ಬೆಳುದಿಂಗಳೇಕೆ, ಬಿಸುಪೇಕೆ? ಅಮೃತವೇಕೆ ವಿಷವೇಕೆ?
ಬೆಳಗೇಕೆ ತಮವೇಕೆ? ನೀನೇಕೆ ಈ ನುಡಿಯೇಕೆ?—ನಂಬಿದರ ಗೋಣಂ
ಕೊಯ್ವರೆ? ಶಿಶುವನಿರಿವರೆ? ಪಶುವಂ ಕೊಲುವರೆ? ಎನ್ನಂ ಬಿಡುವರೇ?

೪ ವಾಕ್ಯಪಲ್ಲಟ.

೧ ವಾಕ್ಯಭೇದಗಳು:—

ವಾಕ್ಯಗಳನ್ನು ಸಾಮಾನ್ಯವಾಗಿ ಎರಡು ವಿಧದಿಂದ ವರ್ಗೀಕರಿಸಬಹುದು. ೧) ಒಂದು ರಚನೆಯ ದೃಷ್ಟಿಯಿಂದ, ೨) ಇನ್ನೊಂದು ಅಭಿಪ್ರಾಯದ ದೃಷ್ಟಿಯಿಂದ.

೧) **ರಚನೆಯ ದೃಷ್ಟಿಯಿಂದ** ವಾಕ್ಯಗಳಲ್ಲಿ ಮೂರು ಪ್ರಭೇದಗಳನ್ನು ಮಾಡಿರುವರು. ಅ) **ಸಾಮಾನ್ಯವಾಕ್ಯ** (Simple) ಆ) **ಸಮ್ಮಿಶ್ರವಾಕ್ಯ** (Complex) ಇ) **ಸಂಯುಕ್ತವಾಕ್ಯ** (Compound) ಇವೇ ಆ ಮೂರು ಭೇದಗಳು.

ಅ) **ಸಾಮಾನ್ಯವಾಕ್ಯ:**— ಒಂದೇ ಕ್ರಿಯಾಪದವುಳ್ಳ ವಾಕ್ಯವು ಸಾಮಾನ್ಯವಾಕ್ಯವು.

ಉ:—ರಾಮನು ಪ್ರತಿಜ್ಞೆಯನ್ನು ಪರಿಪಾಲಿಸಿದನು.
ನಾಳೆ ನೀನಲ್ಲಿಗೆ ಹೋಗಲೇಬೇಕು.

ಆ) **ಸಮ್ಮಿಶ್ರವಾಕ್ಯ:**—ಒಂದು **ಪ್ರಧಾನ** ಮತ್ತು ಒಂದು ಇಲ್ಲವೆ ಹೆಚ್ಚು **ಅಧೀನ** ವಾಕ್ಯಗಳಿಂದ ಕೂಡಿದ ವಾಕ್ಯವು **ಸಮ್ಮಿಶ್ರವಾಕ್ಯವು.** ಈ ಅಧೀನವಾಕ್ಯವು ಪ್ರಧಾನ ವಾಕ್ಯದಲ್ಲಿ೧) **ಕಾರಕದ** (ಕರ್ತೃ-ಕರ್ಮ) ಕೆಲಸವನ್ನು ಮಾಡಬಹುದು. ೨) '**ನಾಮವಿಶೇಷಣ**' ದ ಕೆಲಸವನ್ನು ಮಾಡಬಹುದು. ಇಲ್ಲವೆ ೩) '**ಕ್ರಿಯಾವಿಶೇಷಣ**' ದ ಕಾರ್ಯವನ್ನು ನೆರವೇರಿಸಬಹುದು.

ಉ:—೧) ನನಗೇನೂ ತಿಳಿದಿಲ್ಲವೆಂಬುದು ನಿಜವು.
ಅವನು ನನ್ನನ್ನು ಹೇಗೆ ಕಾಪಾಡಿದನೆಂಬುವನ್ನು ಬಲ್ಲೆಯಾ?
೨) ನಾನು ಪಂಡಿತನಾಗಬಹುದೆಂಬ ಆಶೆಯಿಂದ ತಂದೆಯವರು ನನ್ನನ್ನು ಕಾಲೇಜಕ್ಕೆ ಕಳುಹಿದರು.

ನಾವು ಎಷ್ಟು ದುಡಿಯುವೆವೋ ಅಷ್ಟು ಸುಖವು ನಮಗೆ ದೊರೆಯುವುದು.

೩) ಕಳ್ಳನು ಯಾವಾಗ ಒಳನುಗ್ಗಿದನೋ ಅವಾಗ ನಾಯಿಯು ಬೊಗಳದಿರಲಿಲ್ಲ.

ನನ್ನನ್ನು ಅವರು ಕರೆದಾರೆಂದು ನಾನಲ್ಲಿ ಸಾಯಂಕಾಲದ ವರೆಗೆ ಕಾದು ಕೊಂಡೆನು.

ಸೂಚನೆ:—೧) ಮೊದಲಿನ ಗುಂಪಿನಲ್ಲಿಯ ಅಧೀನವಾಕ್ಯಗಳು ಕರ್ತೃ-ಕರ್ಮಗಳು. ಆದುದರಿಂದ ಅವು **'ನಾಮವಾಕ್ಯ'** ಗಳು; ೨) ಎರಡನೆಯ ಗುಂಪಿನಲ್ಲಿಯ ಅಧೀನವಾಕ್ಯಗಳು ನಾಮಗಳ ವಿಶೇಷಣಗಳು; ಆದುದರಿಂದ ಅವಕ್ಕೆ **'ನಾಮವಿಶೇಷಣವಾಕ್ಯ'** ಎಂಬ ಹೆಸರು. ೩) ಮೂರನೆಯ ಗುಂಪಿನಲ್ಲಿಯ ಅಧೀನವಾಕ್ಯಗಳು ಕ್ರಿಯಾಪದಗಳ ವಿಶೇಷಣಗಳಾದುದರಿಂದ ಅವುಗಳಿಗೆ **'ಕ್ರಿಯಾವಿಶೇಷಣವಾಕ್ಯ'** ಗಳೆಂಬ ಅಭಿಧಾನವು.

೨) ಅ) **ಏನು? ಏನನ್ನು? ಏತರಿಂದ?** ಎಂಬ ಪ್ರಶ್ನೆಗೆ ಉತ್ತರವಾಗಿ ಬರುವವು **ನಾಮವಾಕ್ಯಗಳು.**

ಆ) **ಎಂಥ? ಎಷ್ಟು? ಯಾವ?** ಎಂಬವುಗಳಿಗೆ ಉತ್ತರವಾಗಿ ಬರುವವು **ವಿಶೇಷಣವಾಕ್ಯಗಳು.**

ಇ) **ಎಲ್ಲಿ?** ಯಾವಾಗ? ಏಕೆ? **ಹೇಗೆ?** ಎಂಬವುಗಳಿಗೆ ಉತ್ತರವಾಗಿ ಬಂದವುಗಳು **ಕ್ರಿಯಾವಿಶೇಷಣವಾಕ್ಯಗಳು.**

ಇ) ಸಂಯುಕ್ತವಾಕ್ಯ:—ಎರಡು ಇಲ್ಲವೆ ಹೆಚ್ಚು ಸಾಮಾನ್ಯ ವಾಕ್ಯಗಳಿಂದ ಕೂಡಿದ ವಾಕ್ಯವು **ಸಂಯುಕ್ತ**ವಾಕ್ಯವು. ಇಲ್ಲಿ ಎಲ್ಲ ವಾಕ್ಯಗಳು ಪ್ರಧಾನವಾದವುಗಳು. **ಮತ್ತು-ಆದರೆ-ಇಲ್ಲವೆ** - ಮುಂತಾದ ಸಮುಚ್ಚಯಾವ್ಯಯಗಳು ಅವನ್ನು ಹೊಂದಿಸುವದುಂಟು.

ಉ:—ಹಿರಿಯರು ಹೇಳಬೇಕು **ಮತ್ತು** ನಾವು ಕೇಳಬೇಕು. ನಾವು ಆಡುವದು ಬಹಳ; **ಆದರೆ** ಮಾಡುವುದು ವಿರಲ. ನೀವು ತೆರಳಿರಿ **ಇಲ್ಲವೆ** ನಾನು ಹೋಗುವೆ. ನಮ್ಮ ಸಮಾಜದಲ್ಲೀಗ ಎಲ್ಲೆಲ್ಲೂ ಅನಾಯಕತೆ ಬೆಳೆದಿದೆ **ಆದುದರಿಂದ** ಒಬ್ಬರ ಕಾಲ್ಮರೆಯು ಇನ್ನೊಬ್ಬರ ಕಾಲಲ್ಲಿ.

ಸೂಚನೆ:— ಇಲ್ಲಿ ಸಮುಚ್ಚಯ-ತಾರತಮ್ಯ-ಕಾರಣ ಇತ್ಯಾದಿ ಸಂಬಂಧವು ಮೇಲಿನ ಸಂಯುಕ್ತ ವಾಕ್ಯದ ಉಪವಾಕ್ಯಗಳಲ್ಲಿ ಕಾಣಬರುವುದು.

೨) **ಅಭಿಪ್ರಾಯದ ದೃಷ್ಟಿಯಿಂದ** ವಾಕ್ಯಗಳಲ್ಲಿ ಕೆಳಗಣ ಐದು ಪ್ರಭೇದಗಳನ್ನು ಮಾಡಬಹುದು.

೧) ಅಂಗೀಕಾರಾರ್ಥಕ ವಾಕ್ಯ (Affirmative Sentence)
೨) ನಿಷೇಧಾರ್ಥಕ ವಾಕ್ಯ (Negative Sentence)
೩) ಪ್ರಶ್ನಾರ್ಥಕ ವಾಕ್ಯ (Interogative Sentence)
೪) ವಿಧ್ಯರ್ಥಕ ವಾಕ್ಯ (Imperative Sentence)
೫) ಭಾವಬೋಧಕ ವಾಕ್ಯ (Exclamatory Sentence)

i) ಅಂಗೀಕಾರಾರ್ಥಕ ವಾಕ್ಯಗಳು:—

ಆದ - ಆಗುವ - ಆಗಬಹುವಾದುದನ್ನು ತಿಳಿಸುವ ವಾಕ್ಯಗಳಿಗೆ ಮೇಲಿನ ಹೆಸರು.

ಉ:—ಅವನು ನಿನಗೆ ಬೇಕಾದದ್ದನ್ನು ಕೊಟ್ಟನು.
ಅವನು ನಿನಗೆ ಬೇಕಾದದ್ದನ್ನು ಕೊಡುತ್ತಾನೆ.
ಅವನು ನಿನಗೆ ಬೇಕಾದದ್ದನ್ನು ಕೊಡಬಹುದು.
ಆ ಕೆಲಸವು ನಿನ್ನಲ್ಲಿಯೆ ನಡೆಯಬೇಕು.
ನೀನಲ್ಲಿಗೆ ಹೋಗಿದ್ದರೆ ನಿನಗೆಲ್ಲ ತಿಳಿಯಬಹುದಾಗಿತ್ತು.

ii) ನಿಷೇಧಸೂಚಕ ವಾಕ್ಯಗಳು:—

ಇವು '**ಇಲ್ಲ**' ವೆಂದೂ '**ಅಲ್ಲ**' ವೆಂದೂ ತಿಳಿಸುವವು.

ಉ:—ಅವನು ಏನನ್ನೂ ಅರಿಯನು.
ಸುಜನರು ಆಡಿದ್ದನ್ನು ಮಾಡದೆ ಬಿಡರು.
ನಾನಲ್ಲಿ ಸಾಯುವ ವರೆಗೆ ಹೋಗಲಾರೆ.
ದೇವರ ಉಪಕಾರವನ್ನೆಂದಿಗೂ ತೀರಿಸಲು ಬಾರದು.

iii) ಪ್ರಶ್ನಾರ್ಥಕ ವಾಕ್ಯಗಳು:—

ಇವು ಪ್ರಶ್ನೆಯನ್ನು ತಿಳಿಸುತ್ತವೆ. ಇವು ಅಭಿಪ್ರಾಯವನ್ನು ಕೇಳುವ ವಾಕ್ಯಗಳು.

ಉ:—ಇದು ನಿನ್ನ ಆಸ್ತಿಯಲ್ಲವೇ ?
ನಮ್ಮ ನಾಯಿ ನಿಮ್ಮಲ್ಲಿ ಬರಲಿಲ್ಲವಷ್ಟೆ ?
ಇಂಥ ವಿಪರೀತ ಸಂಗತಿಯನ್ನು ಯಾರು ಹೇಳಿಯಾರು ?
ಆ ಹಾಳು ಹರಟೆಯನ್ನು ಎಷ್ಟು ಕೊಚ್ಚುವಿರಿ ?

೪ ವಿಧ್ಯರ್ಥಕ ವಾಕ್ಯಗಳು:—

ಇವು **ಆಜ್ಞೆ, ಅಪ್ಪಣೆ, ಔತಣ, ಆಶೀರ್ವಾದ, ಪ್ರಾರ್ಥನೆ** ಮೊದಲಾದ ಎಷ್ಟೋ ಅರ್ಥಗಳಲ್ಲಿ ಉಪಯೋಗಿಸಲ್ಪಡುವವು. ಸಂದರ್ಭವನ್ನು ಕಂಡು ಅರ್ಥವನ್ನು ಗ್ರಹಿಸಬೇಕು.

ಉಃ—ಕೂಡಲೆ ಹೊರಡಿಲ್ಲಿಂದ ! (ಆಜ್ಞೆ)
ಒಮ್ಮೆ ನಮ್ಮಲ್ಲಿಗೆ ಬಾರಯ್ಯ ! (ಔತಣ)
ಎಲ್ಲರೂ ಮನೆಗೆ ಹೋಗಬಹುದು ! (ಅಪ್ಪಣೆ)
ಸಿರಿ ಕನ್ನಡವು ಗೆಲ್ಲಲಿ ! (ಹಾರೈಕೆ)
ನಿನ್ನ ನಾಲಿಗೆಯು ಕಡಿದು ಬೀಳಲಿ ! (ಶಾಪ)
ಕಾಯಯ್ಯ ನಿನ್ನ ಕಂದಮ್ಮನನ್ನು ! (ಪ್ರಾರ್ಥನೆ)

೫ ಭಾವಬೋಧಕ ವಾಕ್ಯಗಳು:—

ಇವು ಮನಸ್ಸಿನ ಭಾವಗಳನ್ನು ಎದ್ದು ಕಾಣುವಂತೆ ತಿಳಿಸುವವು. ತೋರಿಕೆಗೆ ಇವು ಪ್ರಶ್ನಾರ್ಥಕ ಇಲ್ಲವೆ ನಿಷೇಧಕ ವಾಕ್ಯಗಳಂತೆ ಕಾಣುವವು. ಆದರೆ ಅರ್ಥದಿಂದ ಇವುಗಳ ನೈಜ ಸ್ವರೂಪವನ್ನರಿಯಬೇಕು.

ಉಃ—ಅಯ್ಯೋ! ನಮಗಿನ್ನೇನು ಗತಿ !
ಪಾಪ ! ಅವನು ಕೆಟ್ಟು ಹೋದನಲ್ಲ !
ಅಂದಿನ ವೈಭವವನ್ನು ಎನಿತು ಬಣ್ಣಿಸಲಿ !
ನಡೆ ! ಅದನ್ನಾರು ಕೇಳುವವರು !
ಅಬ್ಬ ! ಎಂಥ ದೊಡ್ಡ ಹಾವಪ್ಪ ಅದು !

ಸೂಚನೆ:—ಅಂಗೀಕಾರ-ನಿಷೇಧಾರ್ಥಕಗಳಿಗೆ ಕೂಡಿ **ನಿಶ್ಚಯಾರ್ಥಕ**ವೆಂಬ ಹೆಸರು.

೨ ವಾಕ್ಯರೂಪ-ಪಲ್ಲಟ:—

ವಾಕ್ಯದ ಅಭಿಪ್ರಾಯವನ್ನು ಹಾಗೆಯೆ ಇಟ್ಟು ಆದರ ರೂಪವನ್ನು ಪರಿವರ್ತಿಸುವದಕ್ಕೆ **ವಾಕ್ಯ-ಪಲ್ಲಟ**ವೆನ್ನುವರು. ಈ ಪರಿವರ್ತನಕೌಶಲದಿಂದ ನಮಗೆ ವಾಕ್ಯರಚನೆಯನ್ನು ಇಷ್ಟವಾದ ರೀತಿಯಲ್ಲಿ ಮಣಿಸಲು ಬರುವುದು. ಮತ್ತು ವಾಕ್ಯಗಳ ಮೇಲಿನ ನಮ್ಮ ಪ್ರಭುತ್ವವು ಬೆಳೆಯುವುದು.

ಮೇಲ್ಕಾಣಿಸಿದ ವಾಕ್ಯಗಳ **ಒಂದನೆಯ ವರ್ಗದ** ಆಂತರಿಕ ಭೇದಗಳಲ್ಲಿಯೂ-**ಎರಡನೆಯ ವರ್ಗದ** ಆಂತರಿಕ ಭೇದಗಳಲ್ಲಿಯೂ ಈ ಪರಿವರ್ತನವು-ಪಲ್ಲಟವು ಸಾಧ್ಯ. ಅದರ ರೀತಿಯನ್ನು ಕೆಳಗೆ ಕಾಣಬಹುದು.

ಅ) ೧ನೆಯ ವರ್ಗ: –

ಸಾಮಾನ್ಯ ವಾಕ್ಯವನ್ನು ಸಮ್ಮಿಶ್ರ ವಾಕ್ಯಕ್ಕೆ ಪಲ್ಲಟಿಸುವುದು ಮೂರು ವಿಧದಿಂದ.

i) ಸಾಮಾನ್ಯ ವಾಕ್ಯದಲ್ಲಿಯ ಒಂದು **ನಾಮವನ್ನು ನಾಮವಾಕ್ಯವನ್ನಾಗಿ** ಮಾಡುವುದು.

ಉ:—೧) ನಿನಗೆ ನನ್ನ ಗೆಲುವಿನ ಕಾರಣವು ಗೊತ್ತಿಲ್ಲ
ನಿನಗೆ ನಾನು ಗೆದ್ದೆನು ಹೇಗೆಂಬುದು ಗೊತ್ತಿಲ್ಲ.

೨) ನಮ್ಮ ಹಾನಿಯ ಪ್ರಮಾಣವನ್ನು ಬಲ್ಲವರಾರು?
ನಮಗೆ ಹಾನಿಯೆಷ್ಟಾಯಿತೆಂಬುದನ್ನು ಬಲ್ಲವರಾರು?

೩) ನೀನಿಲ್ಲಿ ಬರುವ ದಿನವನ್ನು ತಿಳಿಸು.
ನೀನಿಲ್ಲಿ ಎಂದು ಬರುವಿಯೆಂಬುದನ್ನು ತಿಳಿಸು.

೪) ಮಳೆ ಬೀಳುವ ಬಗೆಯನ್ನವರು ಅರಿಯರು.
ಮಳೆಯು ಹೇಗೆ ಬೀಳುವುದೆಂಬುದನ್ನವರು ಅರಿಯರು.

ii) ಸಾಮಾನ್ಯವಾಕ್ಯದಲ್ಲಿಯ **ವಿಶೇಷಣವನ್ನು ನಾಮವಿಶೇಷಣ ವಾಕ್ಯಕ್ಕೆ** ಪರಿವರ್ತಿಸುವುದು.

ಉ:—೧) ಓದು ಬರಹ ಬಾರದಿದ್ದವರನ್ನು ಕೇಳುವವರಾರು?
ಯಾರಿಗೆ ಓದು ಬರಹ ಬರುವದಿಲ್ಲವೋ ಅಂಥ ಜನರನ್ನು ಕೇಳುವವರಾರು?

೨) ಆಡಿದಂತೆ ಮಾಡುವವನು ಉತ್ತಮನು.
ಯಾವನು ಆಡಿದಂತೆ ಮಾಡುವನೋ ಅವನು ಉತ್ತಮನು.

iii) ಸಾಮಾನ್ಯ ವಾಕ್ಯದಲ್ಲಿಯ ಕ್ರಿಯಾವಿಶೇಷಣಾವ್ಯಯವನ್ನು (Adverb) ಕ್ರಿಯಾವಿಶೇಷಣವಾಕ್ಯವನ್ನಾಗಿ ಬದಲಿಸುವುದು.

ಉ:—೧) ವಿದ್ಯೆಯು ನಿನ್ನನ್ನು ಎಲ್ಲೆಲ್ಲಿಯೂ ಸಲಹುವುದು.
ವಿದ್ಯೆಯು ನೀನು ಎಲ್ಲಿ ಹೋಗುವಿ ಅಲ್ಲಿ ನಿನ್ನನ್ನು ಸಲಹುವುದು.

೨) ಅಭ್ಯಾಸವನ್ನು ಸರಿಯಾಗಿ ಮಾಡಿರುವಿಯಲ್ಲವೆ?
ಅಭ್ಯಾಸವನ್ನು ಹೇಗೆ ಮಾಡಬೇಕೋ ಹಾಗೆ ಮಾಡಿರುವಿಯಲ್ಲವೇ?

೩) [illegible] ಗಾಳಿ ಬಂದಾಗ ತೂರಿಕೊಳ್ಳಬೇಕು.
ಯಾವಾಗ ಗಾಳಿ ಬರುವುದೋ ಆವಾಗ ತೂರಿಕೊಳ್ಳಬೇಕು.

೨) **ಸಮ್ಮಿಶ್ರ ವಾಕ್ಯವನ್ನು ಸಾಮಾನ್ಯ ವಾಕ್ಯಕ್ಕೆ** ಪಲ್ಲಟಿಸುವುದು.

ಮೇಲೆ ಹೇಳಿದ ವಿರುದ್ಧವಾಗಿ ಬೇರೆ ಬೇರೆ ತರಹದ ಅಧೀನ ವಾಕ್ಯಗಳ ಸ್ಥಲದಲ್ಲಿ ನಾಮ-ಕೃದಂತ-ಕ್ರಿಯಾವಿಶೇಷಣಗಳನ್ನಿಟ್ಟು ಸಾಮಾನ್ಯ ವಾಕ್ಯಗಳನ್ನು ಮಾಡಬಹುದು.

ಅ) **ನಾಮ-ಸಮುಚ್ಚಯವನ್ನು ಪಯೋಗಿಸಿ.**

ಉ:—೧) ಧನವನ್ನು ಹೇಗೆ ಗಳಿಸಬೇಕೆಂಬುದನ್ನು ಬಲ್ಲೆಯಾ?
ಧನವನ್ನು ಗಳಿಸುವ ರೀತಿಯನ್ನು ಬಲ್ಲೆಯಾ?

೨) ಅವನು ಏಕೆ ಸೋತನೆಂಬದು ತಿಳಿಯಿತೇ?
ಅವನು ಸೋತ ಕಾರಣವು ತಿಳಿಯಿತೇ?

ಆ) **ವಿಶೇಷಣ ಸಮುಚ್ಚಯವನ್ನು ಪಯೋಗಿಸಿ.**

೧) ಬಲ್ಲಿದನಾಗಬೇಕೆಂಬ ಬಯಕೆಯು ಆರಾರಿಗಿಲ್ಲ?
ಬಲ್ಲಿದನಾಗುವ ಬಯಕೆಯು ಆವಾರಿಗಿಲ್ಲ?

೨) ನಾವು ಯಾವುದನ್ನು ಮಾಡಬೇಕೋ ಆ ಕೆಲಸವನ್ನು ನಮಗೆ ಹೇಳುವವರಾರು? ನಾವು ಮಾಡಬೇಕಾದ ಕೆಲಸವನ್ನು ನಮಗೆ ಹೇಳುವವರಾರು?

ಇ) **ಕ್ರಿಯಾವಿಶೇಷಣಸಮುಚ್ಚಯುವನ್ನು ಪಯೋಗಿಸಿ.**

೧) ನಿನಗೆ ಮನ್ನಣೆ ಸಿಕ್ಕಿತೆಂದು ಸೊಕ್ಕಿಗೆ ಬರಬೇಡ.
ನಿನಗೆ ಮನ್ನಣೆಸಿಕ್ಕದ್ದಕ್ಕಾಗಿ ಸೊಕ್ಕಿಗೆ ಬರಬೇಡ.

೨) ಆ ವಾರ್ತೆಯನ್ನು ಕೇಳಿದನೋ ಇಲ್ಲವೋ ಅವನಿಗೆ ತುಂಬಾ ಗಾಬರಿಯಾಯಿತು.

ಆ ವಾರ್ತೆಯನ್ನು ಕೇಳಿದಕೂಡಲೆ ಅವನಿಗೆ ತುಂಬಾ ಗಾಬರಿಯಾಯಿತು.

೩) **ಸಾಮಾನ್ಯ ವಾಕ್ಯವನ್ನು ಸಂಯುಕ್ತ ವಾಕ್ಯಕ್ಕೆ** ಪಲ್ಲಟಿಸುವುದು.

ಸಾಮಾನ್ಯ ವಾಕ್ಯಗಳಲ್ಲಿಯ ಒಂದು ಶಬ್ದ ಇಲ್ಲವೆ ಶಬ್ದಸಮುಚ್ಚಯವನ್ನು ಸ್ವತಂತ್ರ ವಾಕ್ಯವಾಗಿ ಮಾಡಿ, ಅದನ್ನು ಸರಿಯಾದ ಸಂಬಂಧ ಸೂಚಕ ಶಬ್ದಗಳಿಂದ ಮೂಲವಾಕ್ಯಕ್ಕೆ ಕೂಡಿಸುವುದು.

ಉ:—೧) ಆ ಬಡಪಾಯಿಗಳು ತಮ್ಮ ದುಗುಡವನ್ನು ತೋಡಿಕೊಳ್ಳುತ್ತಿರಲು ಅಧಿಕಾರಿಗಳು ತಮ್ಮ ತಮ್ಮಲ್ಲಿ ಕೆಲೆಯುತ್ತಿದ್ದರು.
ಆ ಬಡಪಾಯಿಗಳು ತಮ್ಮ ದುಗುಡವನ್ನು ತೋಡಿಕೊಳ್ಳುತ್ತಿದ್ದರು; ಆಗ ಅಧಿಕಾರಿಗಳು ತಮ್ಮ ತಮ್ಮಲ್ಲಿ ಕೆಲೆಯುತ್ತಿದ್ದರು.

೨) ನಮ್ಮ ತಪ್ಪಿಗಾಗಿ ನಮಗೆ ಶಿಕ್ಷೆ ಬೇಡವೇ ?
ನಾವು ತಪ್ಪು ಮಾಡಿರುವೆವು. ಅದಕ್ಕಾಗಿ ನಮಗೆ ಶಿಕ್ಷೆ ಬೇಡವೇ ?

೩) ಆಗವನು ಏನು ಕಾರಣದಿಂದಲೋ ರೇಗಿಗೆದ್ದನು.
ಆಗವನು ರೇಗಿಗೆದ್ದನು; ಆದರೆ ಅದರ ಕಾರಣವು ತಿಳಿಯದು.

೪) **ಸಂಯುಕ್ತ** ವಾಕ್ಯವನ್ನು **ಸಾಮಾನ್ಯ** ವಾಕ್ಯಕ್ಕೆ ಪಲ್ಲಟಿಸುವುದು.

ಒಂದು ಸ್ವತಂತ್ರ ವಾಕ್ಯವನ್ನು ಕಾಯ್ದು ಬೇರೆ ಎಲ್ಲ ವಾಕ್ಯಗಳನ್ನು ಶಬ್ದಗಳನ್ನಾಗಿಯಾಗಲಿ ಶಬ್ದಸಮುಚ್ಚಯಗಳನ್ನಾಗಿಯಾಗಲಿ ಮಾಡಬೇಕು.

ಉ:—ಚಂದ್ರೋದಯವಾಯಿತು, ಮತ್ತು ನಾವು ಆ ನದಿಯ ದಂಡೆಯ ಮೇಲೆ ಅಲೆದಾಡಲು ಹೋದೆವು.
ಚಂದ್ರೋದಯವಾದ ಕೂಡಲೆ ನಾವು ನದಿಯ ದಂಡೆಯ ಮೇಲೆ ಅಲೆದಾಡಲು ಹೋದೆವು.

೨) ನಾನು ಹೇಳಿದ್ದನ್ನು ಕೇಳು; ಇಲ್ಲವಾದರೆ ಹಾಳಾಗುವಿ.
ನಾನು ಹೇಳಿದ್ದನ್ನು ಕೇಳದಿದ್ದರೆ ಹಾಳಾಗುವಿ.

೫) **ಸಂಮಿಶ್ರ** ವಾಕ್ಯವನ್ನು **ಸಂಯುಕ್ತ** ವಾಕ್ಯಕ್ಕೆ ಪಲ್ಲಟಿಸುವುದು.

ಸಂಮಿಶ್ರವಾಕ್ಯದಲ್ಲಿಯ ಅಧೀನವಾಕ್ಯವನ್ನು ಸ್ವತಂತ್ರ ವಾಕ್ಯವನ್ನಾಗಿ ಮಾಡಬೇಕು. ಮುಂದೆ ಸರಿಯಾದ ಸಂಬಂಧಸೂಚಕಗಳನ್ನಿಡಬೇಕು.

ಉ:—೧) ನಮ್ಮ ನಾಡವರು ಇನ್ನೂ ಕರ್ತವ್ಯದಕ್ಷರಾಗಿಲ್ಲವೆಂಬುದನ್ನು ನೀವು ಬಲ್ಲಿರಿ.
ನಮ್ಮ ನಾಡವರು ಇನ್ನೂ ಕರ್ತವ್ಯದಕ್ಷರಾಗಿಲ್ಲ; ಇದನ್ನು ನೀವು ಬಲ್ಲಿರಿ.

೨) ನೀನದನ್ನು ಓದಬೇಡೆಂದು ಹೇಳಿದರೂ ಯಾಕೆ ಓದಿದೆ ?
ನೀನದನ್ನು ಓದಬೇಡೆಂದು ಹೇಳಿದ್ದೆ; ಆದರೆ ಯಾಕೆ ಓದಿದೆ ?

೬) **ಸಂಯುಕ್ತ** ವಾಕ್ಯವನ್ನು **ಸಂಮಿಶ್ರ** ವಾಕ್ಯಕ್ಕೆ ಪಲ್ಲಟಿಸುವುದು.

ಒಂದು ಸ್ವತಂತ್ರ ವಾಕ್ಯಕ್ಕೆ ಉಳಿದ ವಾಕ್ಯಗಳನ್ನು ಅಧೀನಗೊಳಿಸಿ ಯೋಗ್ಯ ಸಂಬಂಧ ಸೂಚಕಗಳನ್ನು ಸೇರಿಸಬೇಕು.

ಉ:—೧) ನಾನು ಧನವನ್ನು ವಿಪುಲವಾಗಿ ಗಳಿಸಿದೆ, ಆದರೆ ಸಂತಸವು ಅಷ್ಟೇನೂ ದೊರೆಯಲಿಲ್ಲ.
ನಾನು ಧನವನ್ನು ವಿಪುಲವಾಗಿ ಗಳಿಸಿದರೂ ನನಗೆ ಸಂತಸವು ಅಷ್ಟೇನೂ ದೊರೆಯಲಿಲ್ಲ.

೨) ದೇವರು ನಮ್ಮೆಲ್ಲರ ಒಡೆಯ; ಆದುದರಿಂದ ನಾವವನನ್ನು ಸದೈವ ಆರಾಧಿಸಬೇಕು.
ದೇವರು ನಮ್ಮೆಲ್ಲರ ಒಡೆಯನಾದುದರಿಂದ ನಾವವನನ್ನು ಸದೈವ ಆರಾಧಿಸಬೇಕು.

ಆ) ೨ನೆಯ ವರ್ಗ:—

೧) **ಅಂಗೀಕಾರಾರ್ಥಕ-ನಿಷೇಧಾರ್ಥಕ** ವಾಕ್ಯಗಳ ಪಲ್ಲಟ.

ಉ:—೧) ಅಂ:—ನಾನು ನನ್ನ ಮನಬಂದಂತೆ ಅಲೆಯಲು ಸಮರ್ಥನು.
ನಿ:—ನಾನು ನನ್ನ ಮನಬಂದಂತೆ ಅಲೆಯಲು ಸಮರ್ಥನಿಲ್ಲವೆಂದಲ್ಲ.

೨) ನಿ:—ದುಃಖವಿಲ್ಲದೆ ಸುಖವಿಲ್ಲ.
ಅಂ:—ದುಃಖ ಸಹಿಸಿದರೆ ಸುಖವುಂಟು.

೨) **ನಿಶ್ಚಯಾರ್ಥಕ-ಪ್ರಶ್ನಾರ್ಥಕ** ವಾಕ್ಯಗಳ ಪಲ್ಲಟ.

ಉ:—೧) ನಿಶ್ಚ:—ದುಃಖದಲ್ಲಿ ಎಲ್ಲರೂ ಅಳುವರು.
ಪ್ರಶ್ನ:—ದುಃಖದಲ್ಲಿ ಅದಾರು ಅಳುವುದಿಲ್ಲ ?

೨) ಪ್ರಶ್ನ:—ಈ ಮಾತು ನಿನ್ನ ಕೈಯಲ್ಲಿಲ್ಲವೇ ?
ನಿಶ್ಚ:—ಈ ಮಾತು ನಿನ್ನ ಕೈಯಲ್ಲುಂಟು.

೩) ನಿಶ್ಚ:—ಜಾತಿವೀರರು ಸಾವಿಗಂಜುವದಿಲ್ಲ.
ಪ್ರಶ್ನ:—ಜಾತಿವೀರರು ಸಾವಿಗಂಜುವರೆ ?

೪) ಪ್ರಶ್ನ:—ಮುಕ್ತಿಗೆ ಭಕ್ತಿಯೇ ಸಾಧನವಲ್ಲವೇ ?
ನಿಶ್ಚ:—ಮುಕ್ತಿಗೆ ಭಕ್ತಿಯೇ ಸಾಧನವು.

೩) ನಿಶ್ಚಯಾರ್ಥಕ-ವಿಧ್ಯರ್ಥಕ ವಾಕ್ಯಗಳ ಪಲ್ಲಟ.

ಉ:—೧) ನಿ:—ನೀನು ಅಭ್ಯಾಸವನ್ನು ಮಾಡಿದರೆ ಪಾಸಾಗುವಿ.
ವಿ:—ಅಭ್ಯಾಸವನ್ನು ಮಾಡು; ಅಂದರೆ ನೀನು ಪಾಸಾಗುವಿ.

೨) ವಿ:—ಸರಿಯಾಗಿ ಮಾತನಾಡು; ಇಲ್ಲವಾದರೆ ಹೊರಗೆ ಹೋಗಬೇಕಾದೀತು.
ನಿ:—ನೀನು ಸರಿಯಾಗಿ ಮಾತನಾಡದಿದ್ದರೆ, ಹೊರಗೆ ಹೋಗಬೇಕಾದೀತು.

೩) ನಿ:—ಅವನ ಕಲ್ಯಾಣವಾಗಲೆಂಬುದು ನನ್ನ ಹಾರೈಕೆ.
ವಿ:—ಅವನ ಕಲ್ಯಾಣವಾಗಲಿ.

೪) ವಿ: ನಮ್ಮ ಪಾತಕಗಳೆಲ್ಲ ಹಾಳಾಗಲಿ.
ನಿ:—ನಮ್ಮ ಪಾತಕಗಳೆಲ್ಲ ಅಳಿಯಲೆಂದು ನನ್ನ ಪ್ರಾರ್ಥನೆ

೪) ನಿಶ್ಚಯಾರ್ಥಕ-ಭಾವಬೋಧಕ ವಾಕ್ಯಗಳ ಪಲ್ಲಟ.

ಉ:—೧) ನಿ:—ಅವನು ಬಲು ಮರುಳನು.
ಭಾ:—ಎಂಥ ಮರುಳನವನು !

೨) ಭಾ:—ಎಲಾ ಇಂಥ ಜಾಣನು ಎಲ್ಲಿಯಾದರೂ ಉಂಟೇ ?
ನಿ:—ಇಂಥ ಜಾಣನು ಎಲ್ಲಿಯೂ ಇಲ್ಲ.

೩) ನಿ:—ಇವನಿಗೆ ಅಪಾರವಾದ ಹಾನಿಯಾಯಿತು.
ಭಾ:—ಎಂಥ ಹಾನಿಯಾಯಿತು ಇವನಿಗೆ !

೪) ಭಾ:—ಛಿ! ಇಂಥ ಹೇಡಿಗಳು ಕನ್ನಡ ಕುಲದಲ್ಲಿ ಹುಟ್ಟಬಹುದೆ ?
ನಿ:—ಇಂಥ ಹೇಡಿಗಳು ಕನ್ನಡ ಕುಲದಲ್ಲಿ ಹುಟ್ಟುವುದು ಆಶ್ಚರಿಯ ಸಂಗತಿ-ಅಸಾಧ್ಯವಾದ ಮಾತು.

೫) ಪ್ರಶ್ನಾರ್ಥಕ-ಭಾವಬೋಧಕ ವಾಕ್ಯಗಳ ಪಲ್ಲಟ.

ಉ:—೧) ಪ್ರ:—ಇವನು ಬಲು ಚಿಕ್ಕ ಬಾಲಕನಲ್ಲವೇ ?
ಭಾ:—ಎಂಥ ಚಿಕ್ಕ ಬಾಲಕನಿವನು !

೨) ಭಾ:—ಮಹಾತ್ಮರು ಎಂಥ ಹಿರಿಯ ಸತ್ಪುರುಷರು !
ಪ್ರ:—ಮಹಾತ್ಮರು ಬಲು ಹಿರಿಯ ಸತ್ಪುರುಷರಲ್ಲವೇ ?

ಅಭ್ಯಾಸ ೧

ಅ) ಕೆಳಗಣ **ಸಾಮಾನ್ಯ** ವಾಕ್ಯಗಳನ್ನು **ಸಂಮಿಶ್ರ** ವಾಕ್ಯಗಳನ್ನಾಗಿ ಪರಿವರ್ತಿಸಿರಿ.

೧ ಶ್ರೀರಾಮನು ಸೇರಿದ ಕಾಡಾವುದು ? ೨ ಬೆಳದಿಂಗಳಲ್ಲಿಯ ಇರುಳಿನ ಶೋಭೆಯನ್ನು ಬಣ್ಣಿಸಬಹುದೇ ? ೩ ಮುಂದೆ ಆಗುವದನ್ನು ಇಂದು ತಿಳಿದವನೇ ಜಾಣ. ೪ ಧನವನ್ನು ಮಿತಿಯಾಗಿ ವಿನಿಯೋಗಿಸುವ ರೀತಿಯನ್ನು ಅರಿತುಕೊಳ್ಳಬೇಕು. ೫ ಅವನು ಮನಸ್ಸಿನಲ್ಲಿ ಮಾಡಿದ್ದನ್ನೆಂದು ಬಾಯಿಂದ ಆಡಿಬಿಟ್ಟನು.

ಆ) ಕೆಳಗಣ **ಸಮ್ಮಿಶ್ರ** ವಾಕ್ಯಗಳನ್ನು **ಸಾಮಾನ್ಯ** ವಾಕ್ಯಗಳಿಗೆ ಪಲ್ಲಟಿಸಿರಿ.

೧ ಇನ್ನಾವ ಕೆಲಸವನ್ನು ಮಾಡಬೇಕೆಂಬುದನ್ನು ನಮ್ಮ ನಿರ್ಗತಿಕ ತರುಣರು ತಿಳಿಯದವರಾಗಿರುವರು. ೨ ತನ್ನ ನಾಡನ್ನು ತೊರೆಯಬೇಕೆಂಬ ಕಲ್ಪನೆಯು ಅದಾವ ಸುಪುತ್ರನಲ್ಲಿ ಮೂಡಬಹುದು? ೩ ಅನ್ನದಾನಕ್ಕಿಂತ ಮಿಗಿಲಾದ ದಾನವಿಲ್ಲವೆಂಬುದನ್ನು ನಮ್ಮವರು ಪೂರ್ತಿಯಾಗಿ ಅರಿತಿದ್ದರು. ೪ ನಮ್ಮ ತಾಯ್ನಾಡು ಯಾವ ಹೀನಸ್ಥಿತಿಯಲ್ಲಿರುವುದೋ ಅದನ್ನು ಕಂಡು ಮರುಗದವರಾರು ? ೫ ನಾಡಿಗೆ ಕೇಡು ಬಯಸಿ ಧನಿಕರಾಗುವ ಆಶೆ ನಮ್ಮ ತರುಣರಲ್ಲೆಂದೂ ಇರಲರಿಯದು.

ಇ) ಕೆಳಗಣ **ಸಾಮಾನ್ಯ** ವಾಕ್ಯಗಳನ್ನು **ಸಂಯುಕ್ತ** ವಾಕ್ಯಗಳನ್ನಾಗಿ ಪರಿವರ್ತಿಸಿರಿ.

೧ ನಾನು ಊಟವನ್ನು ತೀರಿಸಿಕೊಂಡು ಮಲಗಿದೆನು. ೨ ಚಂದ್ರನು ಉದಯಿಸಲು, ಎಲ್ಲೆಲ್ಲಿಯೂ ಬೆಳದಿಂಗಳು ಬಿದ್ದಿತು. ೩ ಆ ಎತ್ತು ಕೆಸರಿನಲ್ಲಿ ಒದ್ದಾಡುತ್ತಿರುವಾಗ, ನನ್ನ ಕರುಳು ಕರಗಿ ನೀರಾಯಿತು. ೪ ನಿಮ್ಮ ಸೂಚನೆಯ ಮೇರೆಗೆ ನಾನು ನಡೆಯಲು ಸಿದ್ಧನಿರುವೆ. ೫ ನಮ್ಮ ಪೂರ್ವ ವೈಭವವನ್ನು ನೆನೆದು, ನಾವು ನವಚೈತನ್ಯವನ್ನು ಪಡೆಯಬೇಕು.

ಈ) ಕೆಳಗಣ **ಸಂಯುಕ್ತ** ವಾಕ್ಯಗಳನ್ನು **ಸಾಮಾನ್ಯ** ವಾಕ್ಯಗಳನ್ನಾಗಿ ಪರಿವರ್ತಿಸಿರಿ.

೧ ಆ ಹುಲಿಯು ಒಮ್ಮೆಲೆ ಜಿಗಿಯಿತು; ಆದುದರಿಂದ ಅದಕ್ಕೆ ಆ ಗುಂಡು ಬಡಿಯಲಿಲ್ಲ. ೨ ಎದೆಗುಂದಬೇಡ; ಅಂದರೆ ಎಲ್ಲವೂ ಸರಿಹೋಗುವುದು. ೩ ದುರುಳರನ್ನು ಆಶ್ರಯಿಸದಿರಲು ಎಷ್ಟೋ ಹೇಳಿದೆನು; ಆದರೆ ಅವರದನ್ನು ಕೇಳಲೇ ಇಲ್ಲ.

೪ ನೀನು ಮಿತಿಯಿಂದ ವೆಚ್ಚ ಮಾಡು; ಇಲ್ಲದಿದ್ದರೆ ನಿನಗೆ ಮುಂದೆ ಬಳಲಬೇಕಾದೀತು. ೫ ಅವನ ವೈಭವವೆಲ್ಲ ಹಾಳಾಯಿತು; ಆದರೂ ಅವನ ಸತ್ವವು ಅಳಿಯಲಿಲ್ಲ.

ಉ) ಕೆಳಗಣ **ಸಂಮಿಶ್ರ** ವಾಕ್ಯಗಳನ್ನು **ಸಂಯುಕ್ತ** ವಾಕ್ಯಗಳಿಗೆ ಪರಿವರ್ತಿಸಿರಿ.

೧ ಕನ್ನಡಿಗರು ಒಳ್ಳೆ ಕರ್ತೃತ್ವಶಾಲಿಗಳಿದ್ದರೆಂಬುವನ್ನು ಆರು ಅರಿಯರು? ೨ ಯಾರಿಗೂ ಓದಲು ಬರಬಾರದಷ್ಟು ಚೆನ್ನಾಗಿ ಅವನು ಬರೆಯಲು ಕಲಿತಿರುವ. ೩ ನೀನು ಕಾಲಿದಾಸನಿಗೆ ಸಮಾನನೆಂದು ಯಾರು ತಿಳಿಯುವರು? ೪ ನಾವು ಯಾವಾಗ ಜಾರುವೆವೊ ಆಗ ನಮ್ಮನ್ನು ಎತ್ತುವವರಾರು? ೫ ನಿನಗೆ ಯಾವ ಮಾತು ಸಹ್ಯವೋ ಅದು ನನಗೆ ಅಸಹ್ಯವು.

ಊ) ಕೆಳಗಣ **ಸಂಯುಕ್ತ** ವಾಕ್ಯಗಳನ್ನು **ಸಂಮಿಶ್ರ** ವಾಕ್ಯಗಳನ್ನಾಗಿ ಮಾರ್ಪಡಿಸಿರಿ.

೧ ಆವನೇನೂ ಬಹಳ ಬುದ್ಧಿವಂತನಲ್ಲ; ಆದರೆ ಅವನು ಶೀಲವಂತನು. ೨ ಪರಮಾತ್ಮನು ದಯಾಸಾಗರನು; ಇದನ್ನು ಮನಗಂಡವರು ವಿರಲ. ೩ ನಾನು ಮನಸ್ಸಿನಲ್ಲಿ ಮಂಡಿಗೆಯನ್ನು ಮಾಡಿದ್ದೆ; ಆದರಲ್ಲೊಂದೂ ಕೈಗೂಡಲಿಲ್ಲ. ೪ ನಮ್ಮ ತಾಯಿಯು ಪ್ರಿಯಳು; ಹಾಗೆಯೆ ತಾಯ್ನುಡಿಯೂ ಪ್ರಿಯವು. ೫ ನಮಗೆ ಸ್ವಾತಂತ್ರ್ಯವು ದೊರೆಯಿತು; ಆದುದರಿಂದ ನಮ್ಮ ಬಯಕೆಗಳೆಲ್ಲ ಫಲಿಸಿದವು.

ಅಭ್ಯಾಸ ೨.

ಅ) ಕೆಳಗಿನ **ಅಂಗೀಕಾರಾರ್ಥಕ-ನಿಷೇಧಾರ್ಥಕ** ವಾಕ್ಯಗಳನ್ನು ಅರ್ಥಕೆಡದಂತೆ ಪರಸ್ಪರ ಪರಿವರ್ತಿಸಿರಿ.

೧ **ಬಸವಣ್ಣ**ನವರು ಭಕ್ತಿಯ ಭಾಂಡಾರಿ**ಗಳು**. ೨ ಅವರು ಸರಿಯಾಗಿ ಸಂಸಾರ ಮಾಡಲಿಲ್ಲವೆಂದಲ್ಲ. ೩ ಆವರ ಅಂತರಂಗದ ಕೋಮಲತೆಯೂ ಆಶ್ಚರ್ಯಕರವಾಗಿದೆ. ೪ ಆವರಲ್ಲಿ ದಾತೃತ್ವಬುದ್ಧಿಯೂ ಕಡಿಮೆಯಿತ್ತೆಂದಲ್ಲ ೫ ತನ್ನ ಉದ್ಧಾರವನ್ನು ಮಾಡಿಕೊಳ್ಳದೆ ಅನ್ಯರನ್ನುದ್ಧರಿಸಲು ಯಾರಿಗೂ ಬರುವಂತಿಲ್ಲ.

ಆ) ಕೆಳಗಣ **ನಿಶ್ಚಯಾರ್ಥಕ-ಪ್ರಶ್ನಾರ್ಥಕ** ವಾಕ್ಯಗಳನ್ನು ಅರ್ಥಕ್ಕೆ ಬಾಧೆ ಬರದಂತೆ ಪರಸ್ಪರ ಪಲ್ಲಟಿಸಿರಿ.

೧ ಬೇವು ಬೆಲ್ಲದೊಳಿದ್ದರೆ ಫಲವಿಲ್ಲ ೨ ಹಾವಿಗೆ ಹಾಲೆರೆದರೇನು ಪ್ರಯೋಜನ? ೩ ನಾವು ಇಂಥ ಕಾರ್ಯವನ್ನು ಮಾಡಲು ಅಯೋಗ್ಯರಲ್ಲ. ೪ ಜಾತಿಹೀನರ ಮನೆಯ ಜ್ಯೋತಿತಾ ಹೀನವೇ? ೫ ಕಳ್ಳನ ದಾರಿ ಕಳ್ಳನಿಗಲ್ಲದೆ ಇನ್ನಾರಿಗೂ ತಿಳಿಯದು.

ಇ) ಕೆಳಗಣ **ನಿಶ್ಚಯಾತ್ಮಕ-ಭಾವಬೋಧಕ** ವಾಕ್ಯಗಳನ್ನು ಪರಸ್ಪರ ಪರಿವರ್ತಿಸಿರಿ.

೧ ನರತನುವು ತೀರ ಅಪರೂಪವಾದುದು. ೨ ಎಲಾ! ಎಂಥ **ಹುಚ್ಚು** ಹಿಡಿಯಿತಿವನಿಗೆ! ೩ ಅವನ ಯಶಸ್ಸನ್ನು ಕಂಡು ನನಗೆ ತುಂಬ ಸಂತೋಷ. ೪ ಗಾಳಿಯು ಎಷ್ಟು ಭರದಿಂದ ಬೀಸುವದು! ೫ ಎಷ್ಟು ರುಚಿಕರವಾದ ಹಣ್ಣು ದು!

ಈ) ಮುಂದಿನ **ನಿಶ್ಚಯಾರ್ಥಕ-ವಿಧ್ಯರ್ಥಕ** ವಾಕ್ಯಗಳನ್ನು ಪರಸ್ಪರ ಪರಿವರ್ತಿಸಿರಿ.

೧ ವಿವೇಕದ ಒಳದನಿಯನ್ನು ಕೇಳಿದರೆ ನಮ್ಮ ಕಲ್ಯಾಣವಾಗುವದು. ೨ ಪರಮಾತ್ಮನು ನಮ್ಮ ಬಯಕೆಯನ್ನು ಪೂರೈಸಲಿ! ೩ **ಕಾಡಿನಲ್ಲಿ** ಬರ**ಗಾ**ಲಿನಿಂದ ನಡೆದರೆ ನಿಮಗೆ ಮುಳ್ಳು ಮುರಿಯದಿರವೇ! ೪ ಮನಸ್ಸನ್ನು ಬಿಗಿಹಿಡಿಯಲು ಕಲಿ, ನೀನು ಬಲವಂತನಾಗುವಿ. ೫ ನನ್ನ ಗೆಳೆಯನ ಏಳ್ಗೆಯಾಗಲೆಂದು ನಾನು ಹಾರೈಸುವೆ.

ಉ) ಮುಂದಿನ **ಪ್ರಶ್ನಾರ್ಥಕ-ಭಾವಭೋಧಕ** ವಾಕ್ಯಗಳನ್ನು ಪರಸ್ಪರ ಪರಿವರ್ತಿಸಿರಿ.

೧ ತಾವರೆಯು ಬಲು ಸುಂದರವಾದುದಲ್ಲವೇ? ೨ ಎಂಥ ತಿಳಿಗೇಡಿ ನಾನು! ೩ ಇದು ನಿಮಗೆ ಬಹಳ ಪ್ರಿಯವಾದುದಲ್ಲವೇ? ೪ ಎಂಥ ಬಲಶಾಲಿ ನಮ್ಮ ಬಲಭೀಮನು! ೫ ವಿಕ್ರಮನು ಮಹಾ ಪರಾಕ್ರಮಿಯಲ್ಲವೇ?

೫ ವಾಕ್ಯ ಸಂಯೋಗ.

ಹಲವು ಬಿಡಿಬಿಡಿಯಾದ ವಾಕ್ಯಗಳನ್ನು ಮುರಿದು ಒಂದು ವಾಕ್ಯವನ್ನು ಮಾಡುವದಕ್ಕೆ **ವಾಕ್ಯಸಂಯೋಗ**ವೆನ್ನುವರು. ಇದರಿಂದ ಸಂಕ್ಷೇಪಕಥನಕ್ಕೆ-ಸ್ವಲ್ಪದರಲ್ಲಿ ಹೇಳುವದಕ್ಕೆ-ಎಷ್ಟೋ ಅನುಕೂಲವಾಗುವದು. ಶೈಲಿಯಲ್ಲಿ ವೈವಿಧ್ಯವುಂಟಾಗಿ ಅದರ ಸೊಬಗು ಹೆಚ್ಚಾಗುವುದು.

ಇದನ್ನು ಕೆಳಗಿನ ಮೂರು ವಿಧದಿಂದ ಮಾಡಬಹುದು.

೧) ಕೆಲವು **ಸಾಮಾನ್ಯ** ವಾಕ್ಯಗಳನ್ನು ಮುರಿದು ಒಂದು **ಸಾಮಾನ್ಯ ವಾಕ್ಯವನ್ನೆಯೆ**ಮಾಡುವುದು. ಇದನ್ನು ಕೆಳಗೆ ಕಾಣಿಸಿದ ನಾಲ್ಕು ಬಗೆಯಿಂದ ಮಾಡಬಹುದು.

(i) ಒಂದು ಮುಖ್ಯ ವಾಕ್ಯವನ್ನಿಟ್ಟು ಉಳಿದ ವಾಕ್ಯಗಳ ಸ್ಥಲದಲ್ಲಿ **ನಾಮಗಳನ್ನು** ಪಯೋಗಿಸಿ.

ಉ:—ಅ) ಅವನು ಅಲಸಿಗನಾದನು; ಅವನ ವೈಭವವು ಅಳಿಯಿತು.
ಅವನ ಆಲಸ್ಯದಿಂದ ಅವನ ವೈಭವವು ಅಳಿಯಿತು.

ಆ) ಆಂಗ್ಲರು ಹೆದರಿಸಿದರು; ಜರ್ಮನರು ಒಪ್ಪಿಕೊಂಡರು.
ಆಂಗ್ಲರ ಹೆದರಿಸುವಿಕೆಯು ಜರ್ಮನರನ್ನು ಒಪ್ಪಿಕೊಳ್ಳಲು ಹಚ್ಚಿತು.

(ii) ವಾಕ್ಯದ ಸ್ಥಲದಲ್ಲಿ **ವಿಶೇಷಣಗಳನ್ನು** ಪಯೋಗಿಸಿ.

ಉ:—ಅ) ರಾಮನು ಸತ್ಯಸಂಧನು; ಅವನನ್ನು ನಾನು ಭಜಿಸುವೆ.
ಸತ್ಯಸಂಧನಾದ ರಾಮನನ್ನು ನಾನು ಭಜಿಸುವೆ.

ಆ) ಆ ಮಗುವು ಮುದ್ದಾದದ್ದು; ಅದನ್ನೆಲ್ಲರೂ ಅಪ್ಪಿಕೊಳ್ಳುವರು.
ಆ ಮುದ್ದಾದ ಮಗುವನ್ನು ಎಲ್ಲರೂ ಅಪ್ಪಿಕೊಳ್ಳುವರು.

ಇ) ಆ ಕಾಡಿನಲ್ಲೊಂದು ಹುಲಿಯನ್ನು ಕಂಡೆ; ಅದು ನನ್ನೆಡೆಗೆ ಭರದಿಂದ ಬರುತ್ತಿತ್ತು.
ನನ್ನೆಡೆಗೆ ಭರದಿಂದ ಬರುತ್ತಿರುವ ಹುಲಿಯೊಂದನ್ನು ನಾನು ಆ ಕಾಡಿನಲ್ಲಿ ಕಂಡೆ.

(iii) ವಾಕ್ಯದ ಸ್ಥಲದಲ್ಲಿ **ಕೃದಂತ ಅವ್ಯಯಗಳನ್ನು** ಉಪಯೋಗಿಸಿ.

ಉ:—ಅ) ನಾನು ಬಂದೆನು; ಒಂದು ಗಂಟೆಯಾಯಿತು
ನಾನು ಬಂದು ಒಂದು ಗಂಟೆಯಾಯಿತು.

ಆ) ಅವನು ಹರಟುವನು; ವೇಳೆಯನ್ನು ಕಳೆಯುವನು.
ಅವನು ಹರಟುತ್ತ ವೇಳೆಯನ್ನು ಕಳೆಯುವನು.

ಇ) ತಾಯಿ ನಗಲಿಲ್ಲ; ಆಕೆ ಸುಮ್ಮನೆ ಕುಳಿತಳು.
ತಾಯಿಯು ನಗದೆ ಸುಮ್ಮನೆ ಕುಳಿತಳು.

ಈ) ಗಾಯಕನು ಹಾಡಿದನು; ಅರಸನು ಕೇಳಿದನು.
ಗಾಯಕನು ಹಾಡಲು ಅರಸನು ಕೇಳಿದನು.

ಉ) ನೀನು ನಗು; ನೀನು ಬಾಳುವಿ.
ನೀನು ನಕ್ಕರೆ ಬಾಳುವಿ !

(iv) ತುಲನೆಯಿಂದ.

ಉ:—ನಾನು ಕುಶಲನು; ಅವನು ಹೆಚ್ಚು ಕುಶಲನು.
ನನಗಿಂತ ಅವನು ಹೆಚ್ಚು ಕುಶಲನು.

೨) ಕೆಲವು **ಸಾಮಾನ್ಯ** ವಾಕ್ಯಗಳನ್ನು ಸೇರಿಸಿ ಒಂದು **ಸಮ್ಮಿಶ್ರ** ವಾಕ್ಯವನ್ನು ಮುಂದೆ ಕಾಣಿಸಿದ ರೀತಿಯಿಂದ ಮಾಡಬಹುದು. ಒಂದು ವಾಕ್ಯವನ್ನು ಪ್ರಧಾನವಾಗಿಟ್ಟು ಉಳಿದವುಗಳನ್ನು,

(i) **ನಾಮವಾಕ್ಯಗಳನ್ನಾಗಿ ಮಾಡಿ:—ಎಂಬುದು-ಎಂದು-ಎಂತ-ಆಗಿ-ಎಂದರೆ-ಏ-ಓ** ಇವುಗಳನ್ನು ಸೇರಿಸಿದರ **ನಾಮವಾಕ್ಯ**ಗಳಾಗುವವು.

ಉ:—ಅ) ಇನ್ನು ಯುದ್ಧವು ಆಗುವುದು; ಇದು ನಿಶ್ಚಿತ.
ಇನ್ನು ಯುದ್ಧವಾಗುವದೆಂಬುದು ನಿಶ್ಚಿತ.

ಆ) ತಿರಿವರಿಂ ಸಿರಿವಂತರಾರು? ಹೀಗೆ ಸರ್ವಜ್ಞನು ಉಸುರಿದನು.
ತಿರಿವರಿಂ ಸಿರಿವಂತರಾರೆಂದು ಸರ್ವಜ್ಞನು ಉಸುರಿದನು.

ಇ) ನನ್ನ ಹಣವನ್ನು ಮರಳಿ ಕೊಡು; ಇದು ನನ್ನ ಪ್ರಾರ್ಥನೆ.
ನನ್ನ ಹಣವನ್ನು ಮರಳಿ ಕೊಡಬೇಕಾಗಿ ಪ್ರಾರ್ಥನೆ.

ಈ) ಏನು ಮಾಡುತ್ತಾನೆ; ಅದನ್ನು ಮಾಡಲಿ.
ಏನು ಮಾಡುತ್ತಾನೋ ಮಾಡಲಿ.

(ii) **ನಾಮವಿಶೇಷಣ-ವಾಕ್ಯಗಳನ್ನಾಗಿ, ಮಾಡಿ:— 'ಎಂಬ-ಎಂಬುದನ್ನು-ಓ-ಎಂದರೆ'** ಇವುಗಳನ್ನು ಸೇರಿಸಿದರೆ ಇಂಥ ವಾಕ್ಯಗಳಾಗುವವು.

ಉ:—ಅ) ಮಹಾತ್ಮರು ನಮ್ಮಲ್ಲಿಗೆ ಬರುತ್ತಾರೆ; ಈ ಮಾತು ಎಲ್ಲರಿಗೆ ತಿಳಿಯಿತು.
ಮಹಾತ್ಮರು ನಮ್ಮಲ್ಲಿಗೆ ಬರುವರೆಂಬ ಮಾತು ಎಲ್ಲರಿಗೆ ತಿಳಿಯಿತು.

ಆ) ಪೃಥಿವಿಯು ಸೂರ್ಯನ ಸುತ್ತಲು ತಿರುಗುತ್ತದೆ; ಇದನ್ನು ಎಲ್ಲರು ಬಲ್ಲರು.
ಪೃಥಿವಿಯು ಸೂರ್ಯನ ಸುತಲು ತಿರುಗುತದೆಂಬ ಮಾತನು ಎಲ್ಲರು ಬಲ್ಲರು.

ಇ) ನಾನು ಅದನ್ನು ಯೋಚಿಸಿಕೊಂಡಿದ್ದೆನು; ಅದನ್ನೇ ನಾನು ಹೇಳಿ ಬಿಟ್ಟೆನು.
ನಾನು ಯಾವುದನ್ನು ಯೋಚಿಸಿದ್ದೆನೋ ಅದನ್ನೆಯೆ ಹೇಳಿಬಿಟ್ಟೆನು.

(iii) ಕ್ರಿಯಾವಿಶೇಷಣವಾಕ್ಯಗಳನ್ನಾಗಿ ಮಾಡಿ:—ಎಂದು-ಎಂಬಂತೆ–ಎಂಬ–ಹಾಗೆ-ಹೊರತು- ಅಲ್ಲದೆ-ಏ-ಆ–ಎಂದರೆ-ಆದರೂ– ಇತ್ಯಾದಿಗಳನ್ನು ಸೇರಿಸಿ ಇಂಥ ವಾಕ್ಯಗಳನ್ನು ಸಿದ್ಧಪಡಿಸುವುದು.

ಉ:—ಅ) ಅವರು ನೋಡಬೇಕು; ಅದಕ್ಕಾಗಿ ನಾನದನ್ನು ಕೊಟ್ಟೆ.
ಅವರು ನೋಡಲೆಂದು ನಾನದನ್ನು ಕೊಟ್ಟೆನು.

ಆ) ಅವನು ತೀರ ಕೋಣನು; ಅವನು ಜಾಣನಲ್ಲ.
ಅವನು ಕೋಣನೇ ಹೊರತು ಜಾಣನಲ್ಲ.

ಇ) ನಾನು ಹೇಳಿದೆನು; ಅವನು ಬರಲಿಲ್ಲ.
ನಾನು ಹೇಳಿದೆನಾದರೂ ಅವನು ಬರಲಿಲ್ಲ.

ಈ) ನಾನು ಬಿದ್ದೆ–ನಾನು ಸೋತೆ; ನೀನು ಬಿದ್ದೆ–ನೀನು ಸೋತೆ.
ನಾನು ಬಿದ್ದೆನೇ, ನಾನು ಸೋತೆ; ನೀನು ಬಿದ್ದಿಯಾ, ನೀನು ಸೋತೆ.

ಸೂಚನೆ:—೧) ಮೇಲೆ ಕೊಟ್ಟ ಸಂಬಂಧಸೂಚಕಗಳು ವಾಕ್ಯದ ಬಗೆಯನ್ನು ನಿಶ್ಚಿತಗೊಳಿಸುವ ಅನನ್ಯ ಲಕ್ಷಣಗಳಲ್ಲ. ಉಪವಾಕ್ಯದ ಬಗೆಯನ್ನೂ ಸಂಬಂಧವನ್ನೂ ಅರ್ಥವನ್ನರಿತುಕೊಂಡೆಯೆ ಗೊತ್ತುಮಾಡಬೇಕೇ ಹೊರತು ಈ ಸಂಬಂಧಸೂಚಕಗಳನ್ನು ಕಂಡಲ್ಲ.

ಉ:—ಅ) ಈ ಕೊಲೆಯನ್ನು ಮಾಡಿದವನು ಇವನೇ ಎಂದು ಹೇಳಲು ಬರುವಂತಿಲ್ಲ.

ಆ) ಇದು ನಿಮಗೆ ತಿಳಿಯಲೆಂದು ನಾನದನ್ನು ಉಸುರಿದ್ದು.

ಅ) ಇಲ್ಲಿ 'ಏನನ್ನು ಹೇಳಲಿ?' ಎಂಬ ಪ್ರಶ್ನೆಗೆ ಉತ್ತರವಿದ್ದುದರಿಂದ ಈ ಉಪವಾಕ್ಯವು ನಾಮವಾಕ್ಯವು.

ಆ) ಇಲ್ಲಿ 'ಯಾವ ಕಾರಣಕ್ಕಾಗಿ?' ಎಂಬುದಕ್ಕೆ ಉತ್ತರವಿದ್ದುದರಿಂದ ಈ ಉಪವಾಕ್ಯವು ಕ್ರಿಯಾವಿಶೇಷಣ ವಾಕ್ಯವು.

೨) ಇವನ್ನು ಗುರುತಿಸಲು-ಹಿಂದೆ ಕಾಣಿಸಿದ ಏನು? ಎಂಥ? ಎಲ್ಲಿ? ಇತ್ಯಾದಿ ಪ್ರಶ್ನೆಗಳನ್ನು ಕೇಳಬೇಕು.

೩) ಕೆಲವು **ಸಾಮಾನ್ಯ** ವಾಕ್ಯಗಳನ್ನು ಸೇರಿಸಿ ಒಂದು **ಸಂಯುಕ್ತ** ವಾಕ್ಯವನ್ನು ಸಿದ್ಧಪಡಿಸುವುದು. ಅದಕ್ಕೆ ಕೆಳಗಣ ಅವ್ಯಯಗಳನ್ನು ಉಪಯೋಗಿಸಬೇಕು.

೧ **ಸಮುಚ್ಚಯ:— ಊ–ಮುತ್ತು–ಹಾಗೂ–ಅಲ್ಲದೆ–ಇದಲ್ಲದೆ–ಇನ್ನು–ಬೇರೆ–ಬಳಿಕ–ತರುವಾಯ–ಆಮೇಲೆ–ಅನಂತರ,** ಇವುಗಳನ್ನು ಸೇರಿಸಿ.

ಉಃ—ಅ) ಬಡತನವು ನನ್ನ ಧೈರ್ಯವನ್ನು ಕುಂದಿಸಲಿಲ್ಲ; ಬಳಲಿಕೆಯು ನನ್ನ ಧೈರ್ಯವನ್ನು ಹೆಚ್ಚಿಸಿತು.
ಬಡತನವೂ ಬಳಲಿಕೆಯೂ ನನ್ನ ಧೈರ್ಯವನ್ನು ಕುಂದಿಸಲಿಲ್ಲ.

ಆ) ನಾನದನ್ನು ಓದಿದೆ; ಅದರಲ್ಲಿಯ ರಹಸ್ಯವನ್ನು ಅವರಿಗೆ ಅರುಹಿದೆ.
ನಾನದನ್ನು ಓದಿದ್ದೂ ಆಯಿತು, ಅದರ ರಹಸ್ಯವನ್ನವರಿಗೆ ಅರುಹಿದ್ದೂ ಆಯಿತು.

ಇ) ನಾವು ಹೊಗಳಿಕೆಯಿಂದ ಹಿಗ್ಗುವೆವು; ತೆಗಳಿಕೆಯಿಂದ ಕುಗ್ಗುವೆವು.
ನಾವು ಹೊಗಳಿಕೆಯಿಂದ ಹಿಗ್ಗುವೆವು ಮುತ್ತು ತೆಗಳಿಕೆಯಿಂದ ಕುಗ್ಗುವೆವು.

ಉ) ಮೊದಲು ಮೈಬಲವನ್ನು ಗಳಿಸು; ಬುದ್ಧಿಬಲವನ್ನು ಹಿಂದಿನಿಂದ ಸಂಪಾದಿಸು.

ಮೊದಲು ಮೈಬಲವನ್ನು ಗಳಿಸು ತರುವಾಯ-ಆಮೇಲೆ-ಅನಂತರ-ಬಳಿಕ ಬುದ್ಧಿಬಲವನ್ನು ಸಂಪಾದಿಸು.

೨ **ವಿಕಲ್ಪಃ**—(ಪಕ್ಷಾಂತರ) **ಇಲ್ಲವೆ–ಅಥವಾ–ಹಾಗಾದರೆ–ಆದರೂ–ಅಲ್ಲದಿದ್ದರೆ-**ಇಲ್ಲದಿದ್ದರೆ-**ಆ ಪಕ್ಷಕ್ಕೆ,** ಇವುಗಳನ್ನುಪಯೋಗಿಸಿ.

ಉ:—ಅ) ನಾವು ಗೆಲ್ಲುವೆವು; ನಾವು ಸಾಯುವೆವು.

ನಾವು ಗೆಲ್ಲುವೆವು ಇಲ್ಲವೆ ಸಾಯುವೆವು.

ಆ) ನೀನು ಹೋಗು; ನೀನು ಹೋಗದಿರು. ನಾನಂತೂ ಹೋಗಲೇಬೇಕು.

ನೀನು ಹೋಗು ಇಲ್ಲವೆ ಹೋಗದಿರು, ನಾನಂತೂ ಹೋಗಲೇಬೇಕು.

೩ ಪರಿಣಾಮ:—(ಕಾರಣ) ಅದರಿಂದ-ಆದುದರಿಂದ-ಆದ ಕಾರಣ-ಹೀಗಿರುವುದರಿಂದ ಇತ್ಯಾದಿಗಳನ್ನುಪಯೋಗಿಸಿ.

ಉ:—ಅ) ಅವನು ಪ್ರಧಾನರನ್ನು ಕಾಣಬಯಸಿದನು; ಅವನು ಮುಂಬಯಿಗೆ ತೆರಳಿದನು.

ಅವನು ಪ್ರಧಾನರನ್ನು ಕಾಣಬಯಸಿದನು, ಆದುದರಿಂದ ಮುಂಬಯಿಗೆ ತೆರಳಿದನು.

ಆ) ಅಲ್ಲಿಯ ಹವೆಯು ಚನ್ನಾಗಿರಲಿಲ್ಲ; ಅವನ ಆರೋಗ್ಯವು ಕೆಟ್ಟಿತು.
ಅಲ್ಲಿಯ ಹವೆಯು ಚನ್ನಾಗಿರಲಿಲ್ಲ, ಆದುದರಿಂದ ಅವನ ಆರೋಗ್ಯವು ಕೆಟ್ಟಿತು.

ಇ) ಮಳೆಯು ಚನ್ನಾಗಿ ಸುರಿಯಿತು; ಒಕ್ಕಲಿಗರು ಪ್ರಮುದಿತರಾದರು.
ಮಳೆಯು ಚನ್ನಾಗಿ ಸುರಿಯಿತು ಆದಕಾರಣ ಒಕ್ಕಲಿಗರು ಪ್ರಮುದಿತರಾದರು.

೪ ವಿರೋಧ:—(ತಾರತಮ್ಯ) ಆದರೆ-ಆದರೂ-ಆದಾಗ್ಯೂ-ಏನೋ ಅಂತೂ-ಓ ಇವನ್ನು ಸೇರಿಸಿ,

ಉ:—ಅ) ಅವನು ಮಾಡಹೋದುದು ಒಂದು; ಆದುದು ಇನ್ನೊಂದು.
ಅವನು ಮಾಡಹೋದುದು ಒಂದು, ಆದರೆ ಆದುದು ಇನ್ನೊಂದು.

ಆ) ನೀವು ಸಿರಿವಂತರು; ನಾವು ಬಡವರು.
ನೀವು ಸಿರಿವಂತರು ನಾವೋ ಬಡವರು.

ಇ) ಹರ್ಷನು ಬಲವಾಗಿ ಯತ್ನಿಸಿದನು; ಅವನಿಗೆ ಗೆಲವು ದೊರೆಯಲಿಲ್ಲ.
ಹರ್ಷನೇನೋ ಬಲವಾಗಿ ಯತ್ನಿಸಿದನು, ಅವನಿಗೆ ಗೆಲವು ದೊರೆಯಲಿಲ್ಲ.

ಈ) ಪಟ್ಟಣದಲ್ಲಿ ಪ್ಲೇಗಿನ ಹಾವಳಿಯು ಹೆಚ್ಚಿತು; ಅವನು ಊರನ್ನು ಬಿಡಲಿಲ್ಲ.

ಪಟ್ಟಣದಲ್ಲಿ ಪ್ಲೇಗಿನ ಹಾವಳಿಯು ಹೆಚ್ಚಿತಾದರೂ ಅವನು ಊರನ್ನು ಬಿಡಲಿಲ್ಲ.

ಅಭ್ಯಾಸ ೩

ಕೆಳಗಿನ ವಾಕ್ಯಗಳ ಗುಂಪನ್ನು ಕೂಡಿಸಿ ಒಂದು **ಸಾಮಾನ್ಯ** ವಾಕ್ಯವನ್ನು ಮಾಡಿರಿ

೧ ಅವನು ಒಳ್ಳೆ ಪ್ರಾಮಾಣಿಕನು; ಅವನಂಥ ಮೋಸವನ್ನೆಂದಿಗೂ ಮಾಡನು. ೨ ಕ್ಷಮೆಯು ಮಹಾನುಭಾವರಲ್ಲಿಯ ಒಂದು ಗುಣ. ಅವರ ಬಲದಿಂದವರು ಅಪರಾಧರಾಶಿಗಳನ್ನು ಮರೆಯಬಲ್ಲರು. ೩ ನಾನೊಂದು ಗ್ರಂಥವನ್ನು ಬರೆದೆ; ಅದರ ವಿಷಯವು ಗ್ರಾಮಸುಧಾರಣೆ. ೪ ಅವನ ಪರೀಕ್ಷೆಯು ನಪಾಸಾಯಿತು. ಇದು ಅವನಿಗೆ ಒದಗಿದ ಇನ್ನೊಂದು ಸಂಕಟ. ೫ ನನ್ನ ತಂದೆಯವರು ಬಲು ಉದಾರರು; ಅವರು ಬಹಳ ಸಾಲ ಮಾಡಿದರು; ಅದರಿಂದ ನನಗೆ ತುಂಬಾ ತೊಂದರೆಯಾಯಿತು.

ಅಭ್ಯಾಸ ೪

ಕೆಳಗಣ ವಾಕ್ಯಗಳ ಗುಂಪುಗಳನ್ನು ಕೂಡಿಸಿ **ಸಂಮಿಶ್ರ** ವಾಕ್ಯಗಳನ್ನು ತಯಾರಿಸಿರಿ.

೧ ಅಲ್ಲಿ ಒಂದು ಜಾತ್ರೆಯಿತ್ತು. ನಾವೆಲ್ಲ ನಮ್ಮ ಊರಿಂದ ಹೊರಟೆವು. ಎರಡು ದಿನ ನಡೆದೆವು. ೨ ನಾನು ಧನಿಕನಾಗಬಯಸುವೆ. ನಾನು ಹಗಲಿರುಳು ಎಡೆಬಿಡದೆ ದುಡಿಯುವೆ. ಕೊನೆಗೇನಾಗುವದೋ ಬಲ್ಲವರಾರು? ೩ ಮನುಷ್ಯ ಜಾತಿಯ ಬಯಕೆಗಳು ಅನೇಕ. ಅದರಲ್ಲಿ ದೀರ್ಘಾಯುಸ್ಸಿನ ಬಯಕೆಯು ಅತಿ ಪ್ರಬಲವಾದುದು. ಇದನ್ನು ಧಾರಾಳವಾಗಿ ಹೇಳಬಹುದು. ೪ ಮುದುಕರು ಪರಂಪರಾ ಪ್ರಿಯರು. ತರುಣರು ಕ್ರಾಂತಿಕಾರರು. ಅವರ ಜೀವನಕ್ಕೆ ಪರಂಪರಾ ಪ್ರೀತಿಯು ತಡೆಯನ್ನುಂಟು ಮಾಡುವುದು. ಸಮಾಜದ ಹೆಜ್ಜೆ ನಿಂತಲ್ಲಿಯೆ ನಿಲ್ಲುವದು ೫ ತಮಗಿಂತ ವಯಸ್ಸಾದವರು ಎಷ್ಟೋ ಮಂದಿ. ಅವರು ಎರಡನೆಯ ಮದುವೆ ಮಾಡಿಕೊಂಡಿರುವರು. ಅವರು ಸುಖ-ಸಂತೋಷದಿಂದಿರುವರು. ತಮಗೆ ಮಾತ್ರ ಆ ಸುಖಭೋಗವಿಲ್ಲ. ಇದು ಅವನ ಸಂಕಟ.

ಅಭ್ಯಾಸ ೫

ಕೆಳಗಿನ ವಾಕ್ಯಗಳ ಪ್ರತಿಯೊಂದು ಗುಂಪನ್ನು **ಸಂಯುಕ್ತ** ವಾಕ್ಯಕ್ಕೆ ಪರಿವರ್ತಿಸಿರಿ.

೧ ಹುಸಿಯ ನುಡಿಯಲು ಬೇಡ. ಇದೇ ಅಂತರಂಗದ ಶುದ್ಧಿ. ಇದೇ ಬಹಿರಂಗದ ಶುದ್ಧಿ. ೨ ನಾನು ಹಾಲು ಕುಡಿಯಲಿಲ್ಲ. ನಾನು ವ್ಯಾಯಾಮ ಮಾಡಲಿಲ್ಲ. ನನಗೆ ಕಸುವು ಬರಲಿಲ್ಲ ೩ ನಿನ್ನ ತೊಂದರೆಗಳನ್ನು ನನಗೆ ಅರುಹು. ನಾನು ನಿನಗೆ ಸಲಿಯಾದ ನೆರವನ್ನೀಯುವೆ ೪ ಸಿರಿಯ ಸಂಸಾರವನು ಸ್ಥಿರವೆಂದು ನಂಬದಿರು. ಅದು ಹಿರಿಹೊರೆಡು ನೆರತೆ. ನೆರೆಯೊಂದು ಜಾವಕ್ಕೆ ಹರಿದು ಹೋದಂತೆ. ೫ ನೀನಾದರೂ ಅವನನ್ನು ಕರೆ. ಅವನಾದರೂ ನಿನ್ನನ್ನು ಕರೆಯಲಿ. ಯಾರಾದರೂ ಇಲ್ಲಿ ನಿಲ್ಲಲೇ ಬೇಕು.

ಎರಡನೆಯ ಭಾಗ-ಪರಿಚ್ಛೇದಗಳು.

೧ ಪೀಠಿಕೆ.

ಪರಿಚ್ಛೇದವೆಂದರೇನು ?

ಇದೊಂದು ಸುಸಂಬದ್ಧ ವಾಕ್ಯಗಳ ಗುಂಪು. ಇದಕ್ಕೆ **ವಾಕ್ಯ ವೃಂದ** ವೆಂತಲೂ- **ಲೇಖನಖಂಡ**ವೆಂತಲೂ-**ಮಹಾವಾಕ್ಯ**ವೆಂತಲೂ ಬೇರೆ ಕೆಲವು ಹೆಸರುಗಳುಂಟು. ಅವೆಲ್ಲ ಅದರ ಒಂದೊಂದು ಲಕ್ಷಣವನ್ನು ಸೂಚಿಸುವವು. ನಾವಾಯ್ದ ಹೆಸರು ಹೆಚ್ಚು ಪ್ರಚಾರದಲ್ಲುಂಟು.

ಉ:—

ನುಡಿಯೆ ನಾಡಿನ ಗುಡಿಯು, ನಾಡಿನ ಸಂಸ್ಕೃತಿಯು ಹೆಚ್ಚಾಗಿ ಅದರ ನುಡಿಯಲ್ಲಿ-ಸಾಹಿತ್ಯದಲ್ಲಿ ಮೂಡಿರುವುದು. ಜನತೆಯ ಭಾವ-ಬುದ್ಧಿಗಳು, ರೀತಿ-ನೀತಿಗಳು ಅದರ ಮಾತಿನಲ್ಲಿ ಮೈದಾಳುತ್ತಿವೆ. ಕರಾಲನಾದ ಕಾಲನ ಒಡಲನ್ನು ಸೀಳಿ, ನಾಡಿನ ಗತ ವೈಭವವನ್ನಲ್ಲಿಂದ ಸೆಳೆದು, ಅದನ್ನು ಅಲ್ಲಿಯ ನವಯುವಕರೆದುರು ಒಡ್ಡಿ, ಅವರನ್ನು ಚೇತರಿಸುವ ಹಿರಿಗೆಲಸವನ್ನು ಮಾಡುವವರು ನುಡಿದೇವಿಯನ್ನುಳಿದು ಇನ್ನಾರು ? ಆದುದರಿಂದ ಇಂಥ ನುಡಿಯ ಸೇವೆಯು ನಾಡಿನ ಏಳ್ಗೆಯ ಅಡಿಗಲ್ಲೆನ್ನಲು ಅಡ್ಡಿಯಿಲ್ಲ.

ಸೂಚನೆ:—

> **ಮೇಲಿನ ಪರಿಚ್ಛೇದದಲ್ಲಿ**—ನುಡಿಯ ಮೇಲ್ಮೆಯನ್ನು ಬಣ್ಣಿಸಿದೆ. ಅದರಲ್ಲಿಯ ಎಲ್ಲವಾಕ್ಯಗಳಲ್ಲಿ ಒಂದು ವಿಧದ ನಿಕಟ ಸಂಬಂಧವಿದೆ, ಒಂದು ಸರಿಯಾದ ಕ್ರಮವಿದೆ. ಇಂಥ ಗುಂಪುಗಳೇ **ಪರಿಚ್ಛೇದಗಳು.** ಪರಸ್ಪರಸಂಬಂಧವಿಲ್ಲದ ವಾಕ್ಯಗಳ ಸಮೂಹವು ಪರಿಚ್ಛೇದವಾಗಲರಿಯದು.

ಇದರ ಮಹತ್ವ:—

ಪ್ರಬಂಧದಲ್ಲಿ ವಾಕ್ಯದಂತೆ **ಪರಿಚ್ಛೇದಕ್ಕೂ** ಒಂದು ಮಹತ್ವದ ಸ್ಥಾನವಿದೆ. ಪ್ರಬಂಧದಲ್ಲಿಯ ಒಂದೊಂದು ವಿಚಾರವು ಒಂದೊಂದು ಪರಿಚ್ಛೇದದಲ್ಲಿ ಅರಳುವುದು. ಪರಿಚ್ಛೇದವು **ಪ್ರಬಂಧ ಮಾಲೆ**ಯಲ್ಲಿಯ ಹೂವಿನ **ಗೊಂಚಲು-ಪ್ರಬಂಧಾಕೃತಿ**ಯಲ್ಲಿಯ **ರೇಷೆ.** ಚಿಕ್ಕ ದೊಡ್ಡ

ಪರಿಚ್ಛೇದಗಳನ್ನು ಒಂದರ ಮುಂದೊಂದಿಟ್ಟೇ ಪ್ರಬಂಧವನ್ನು ಪೂರ್ಣಗೊಳಿಸತಕ್ಕದ್ದು. ಪ್ರಬಂಧದ ಸೊಬಗು ಅದರಲ್ಲಿಯ ವಾಕ್ಯಗಳಂತೆ ಪರಿಚ್ಛೇದಗಳ ಸೊಬಗನ್ನೂ ಅವಲಂಬಿಸಿದೆ. ಆದಕ್ಕಾಗಿಯೇ ಇದರ ರಚನೆಯ ವಿಚಾರವನ್ನು ವಿವರವಾಗಿ ಮಾಡುವುದು ಅವಶ್ಯ.

ವಿವೇಚನೆಯ ಕ್ರಮ:—

ಈ ಭಾಗದಲ್ಲಿ ಪರಿಚ್ಛೇದದ ರಚನೆಯನ್ನು ಮೊದಲು ವಿವೇಚಿಸಿ ತರುವಾಯ ಒಂದು ಆಲೋಚನೆಯನ್ನು ಅರಳಿಸಿ ಪರಿಚ್ಛೇದವನ್ನು ಹೇಗೆ ಬರೆಯಬೇಕೆಂಬುದನ್ನು ಹೇಳಲಾಗುವುದು. ಮುಂದೆ ದೊಡ್ಡ ಪರಿಚ್ಛೇದಗಳನ್ನು ಸಂಗ್ರಹವಾಗಿ ಬರೆಯುವ ಕೌಶಲವನ್ನು ತಿಳಿಸಿ ತರುವಾಯ ಪರಿಚ್ಛೇದದ ಅರ್ಥಬೋಧೆಗೆ ತೀರ ಆವಶ್ಯಕವಾದ ವಿರಾಮಚಿಹ್ನೆಗಳ ಪರಿಚಯವನ್ನು ಮಾಡಿಕೊಡಲಾಗುವುದು. ಕೊನೆಗೆ **ಕಥಾರಚನೆಯ ವಿಷಯ**ವಾಗಿ ವಿವೇಚನೆಯನ್ನು ಮಾಡಿ ಕೆಲವು ಅಭ್ಯಾಸಗಳನ್ನು ಸೇರಿಸುವೆವು.

೨ ಪರಿಚ್ಛೇದ-ರಚನೆ.

೧ ಮುಖ್ಯ ಗುಣಗಳು—

ಪರಿಚ್ಛೇದವು **ಸುಂದರವೂ ಪರಿಣಾಮಕಾರಿಯೂ** ಆಗಬೇಕಾದರೆ ಅದರಲ್ಲಿ ಮುಂದಿನ ಮೂರು ಗುಣಗಳಂತೂ ಇರಲೇಬೇಕು. ಅವಿಲ್ಲದುದು ಪರಿಚ್ಛೇದವೇ ಆಗಲರಿಯದು.

ಅ) ಐಕ್ಯ:—೧) ಇದು ಪ್ರತಿಪರಿಚ್ಛೇದದಲ್ಲಿರಬೇಕಾದ ಮಹತ್ವದ ಗುಣ. ವಾಕ್ಯದಲ್ಲಿ ಒಂದೇ **ವಿಚಾರ**ವಿರಬೇಕಾದಂತೆ, ಪರಿಚ್ಛೇದದಲ್ಲಿ ಒಂದೇ **ವಿಷಯ**ವು ಇರತಕ್ಕದ್ದು. ಅದರಲ್ಲಿ ಒಂದಕ್ಕಿಂತ ಹೆಚ್ಚು ವಿಷಯಗಳು ಬರಕೂಡದು. ಪರಿಚ್ಛೇದದಲ್ಲಿಯ ಪ್ರತಿಯೊಂದು ಮಾತು ಆ ಪ್ರಧಾನ ವಿಷಯವನ್ನು ಪೋಷಿಸುವಂತಹದಿರಬೇಕು. ಬರಹಗಾರನು ಅದನ್ನು ಬಿಟ್ಟು ಅತ್ತಿತ್ತ ಎಷ್ಟೂ ಅಲೆಯಕೂಡದು.

೨) ತಿಳಿಯಾದ-ಕಸುವುಳ್ಳ ಬರಹದಲ್ಲಿ ಈ **ಐಕ್ಯ**ವು ಅತ್ಯವಶ್ಯ.

ಆ) ಕ್ರಮ:—ಕ್ರಮವು ಪರಿಚ್ಛೇದದಲ್ಲಿರಬೇಕಾದ ಇನ್ನೊಂದು ಗುಣ. ಅದರಲ್ಲಿ ತರ್ಕಶುದ್ಧವಾದ ವಿಚಾರಕ್ರಮವು ಇರಬೇಕು. ಅಂದರೆ ಅದನ್ನು ಓದುಗರು ಸಹಜವಾಗಿ ಗ್ರಹಿಸಿ, ಆನಂದಪಡಬಹುದು.

ಎಲ್ಲ ವಿಚಾರಗಳನ್ನು ಪ್ರಧಾನ ಕಲ್ಪನೆಯೊಡನೆ ಹೊಂದಿಸಿ ಅವುಗಳ ಮಹತ್ವವನ್ನನುಸರಿಸಿ ಅವುಗಳಿಗೆ ತಕ್ಕ ಸ್ಥಲವನ್ನು ಕೊಡಬೇಕು. ಪರಿಚ್ಛೇದದಲ್ಲಿ ಪ್ರಸಂಗಗಳ ಬಣ್ಣನೆಯಿದ್ದರೆ ಅವುಗಳ ವಿವರಣೆಯಲ್ಲಿ ಕಾಲಕ್ರಮವನ್ನು ಇಡಬೇಕು. ಅವು ಒದಗಿದ ಕ್ರಮದಿಂದ ಅವನ್ನು ಬಣ್ಣಿಸಬೇಕು. ಅಂದರೆ ವಿಚಾರಗಳ ರಚನೆಯಲ್ಲಿ **ತರ್ಕಕ್ರಮ, ಮಹತ್ವಕ್ರಮ, ಕಾಲಕ್ರಮ**ಗಳನ್ನನುಸರಿಸಲು ಯತ್ನಿಸಬೇಕು.

ಇ) ವೈವಿಧ್ಯ:—೧) ಪ್ರತಿ ಪರಿಚ್ಛೇದದಲ್ಲಿಯ ವಾಕ್ಯಗಳು ಒಂದೆ ಮಾದರಿಯವು ಇರಬಾರದು. ಅವುಗಳ ರಚನೆಯಲ್ಲಿಯೂ ಉದ್ದಳತೆಯಲ್ಲಿಯೂ ವಿವಿಧತೆ ಬೇಕು. ಎಲ್ಲೆಡೆಯಂತೆ ಇಲ್ಲಿಯೂ **ವೈವಿಧ್ಯವು ಸೊಬಗಿನ ಸೆಲೆಯು**. ಅದರಿಂದ ಪರಿಚ್ಛೇದವು ಆಕರ್ಷಕವಾಗುವದುಂಟು.

೨) ವಾಕ್ಯಗಳಂತೆ ಬೇರೆ ಬೇರೆ ಪರಿಚ್ಛೇದಗಳಲ್ಲಿಯೂ ವಿವಿಧತೆ ಬೇಕು. ಅವುಗಳ ಉದ್ದಳತೆಯಲ್ಲಿ ಭಿನ್ನತೆ ಇರಬೇಕು.

೨ ರಚನೆ:—

ಅ) ಆಂತರಿಕ:—ಪರಿಚ್ಛೇದವು ಒಂದು ನಿಬಂಧವೇ ಸರಿ. ಅದರಲ್ಲಿ ಒಂದೇ ವಿಷಯವನ್ನು **ಅರಳಿಸ**ಲಾಗಿರುವುದು—ವಿಸ್ತಾರವಾಗಿ ವಿವರಿಸಲ್ಪಡುತ್ತಿರುವದು. ಅದಕ್ಕೊಂದು **ಆದಿಯುಂಟು, ಮಧ್ಯವಿದೆ, ಕೊನೆಯಿದೆ**. ಅವೆಲ್ಲ ಯೋಗ್ಯ ರೀತಿಯಿಂದ ಬರೆಯಲ್ಪಟ್ಟರೆ, ಅದು ಅಂದವಾಗುವದು. ಆದುದರಿಂದ ಅವೆಲ್ಲವುಗಳನ್ನು ವಿವರಿಸುವುದು ಅವಶ್ಯ.

೧) ಆದಿ:—ಪರಿಚ್ಛೇದದ ಆದಿಯಲ್ಲಿ ಯಾವಾಗಲೂ ಪ್ರಧಾನ ವಾಕ್ಯವನ್ನಿಡಲು ಮರೆಯಬಾರದು. ಅದಕ್ಕೆ **ಕೀಲ-ವಾಕ್ಯ** (Key-Sentence) ಎಂಬ ಹೆಸರು. ಮುಂದಿನ ಭಾಗದಲ್ಲಿ ಅದರಲ್ಲಿಯ ಕಲ್ಪನೆಯ ವಿಸ್ತಾರವೇ ಇರುವುದರಿಂದ ಅದಕ್ಕೆ **ಬೀಜವಾಕ್ಯ**ವೆಂದರೂ ನಡೆಯುವದು

ವುದು. ಒಮ್ಮೊಮ್ಮೆ ಈ ಕೀಲವಾಕ್ಯವನ್ನು ಕೊನೆಯಲ್ಲಿಯೂ ಇಡುವುದುಂಟು.

೨) **ಮಧ್ಯ**:—ಮಧ್ಯದಲ್ಲಿ ಆದಿಯಲ್ಲಿಯ ವಿಧಾನದ ವಿವರಣೆಯಿರುವುದರಿಂದ ಅದರಲ್ಲಿ **ಐಕ್ಯವೂ ಕ್ರಮವೂ ವೈವಿಧ್ಯವೂ** ಇರಲುಬೇಕು. ಹಿಂದಿನ ಮುಂದಿನ ವಾಕ್ಯಗಳಲ್ಲಿ ಸಹಜವಾದ ಹೊಂದಿಕೆಯಿರಬೇಕು. **ಕಾರ್ಯ-ಕಾರಣ; ಸಾಮಾನ್ಯ-ವಿಶೇಷ** ಇತ್ಯಾದಿ ಕ್ರಮವೂ ಇರಬೇಕು. ವಾಕ್ಯಗಳ ರಚನೆ-ಉದ್ದಳತೆಗಳಲ್ಲಿ ವೈವಿಧ್ಯವಿರಬೇಕು.

೩) **ಕೊನೆಯು**:—ಕೊನೆಯು **ಆಕರ್ಷಕ ವಿಧಾನದಿಂದ** ಮಾಡಲ್ಪಡಬೇಕು. ಅದರಲ್ಲಿ ಪರಿಚ್ಛೇದದ ಸಾರವು ಇಳಿಯಬೇಕು.

ಆ) **ಬಾಹ್ಯ**:—ಪರಿಚ್ಛೇದದ **ಬಾಹ್ಯರಚನೆಯು** ವಿಷಯವಾಗಿ ವಿಶೇಷ ಬರೆಯುವಂತಿಲ್ಲ. ಅದರಲ್ಲಿ ಎರಡು ಸಂಗತಿಗಳನ್ನು ವಿಶೇಷವಾಗಿ ಗಮನಿಸಬೇಕು.

೧) ಪರಿಚ್ಛೇದಗಳು ತೀರ ಚಿಕ್ಕವಾಗಲಿ ತೀರ ದೊಡ್ಡವಾಗಲಿ ಇರಕೂಡದು. ಅವುಗಳ ಉದ್ದಳತೆಯಲ್ಲಿಯೂ ಒಂದು ಬಗೆಯ ವೈವಿಧ್ಯವಿದ್ದರೆ **ನಿಬಂಧದ** ಸೊಬಗು ಹೆಚ್ಚಾಗುವದು.

೨) ಒಂದು ಪರಿಚ್ಛೇದದಿಂದ ಇನ್ನೊಂದಕ್ಕೆ ಸಾಗುವಾಗ ಅವುಗಳಲ್ಲಿ ವಿಚಾರದ ಸಂಕ್ರಮಣವು ಸಹಜವಾಗಿ ಆಗಬೇಕು. ಪರಿಚ್ಛೇದಗಳ ಮಾಲೆಯಲ್ಲಿಯೂ ಒಂದು ಸುಸಂಬದ್ಧ ಕ್ರಮವು ಇರಬೇಕು. ಅವುಗಳಲ್ಲಿ ಸರಿಯಾದ ಹೊಂದಿಕೆಯಿರಬೇಕು.

೩ ಹೊಂದಿಸುವ ರೀತಿ:—

ವಾಕ್ಯ-ವಾಕ್ಯಗಳನ್ನಾಗಲಿ, ಪರಿಚ್ಛೇದ-ಪರಿಚ್ಛೇದಗಳನ್ನಾಗಲಿ ಹೊಂದಿಸಲು ಕೆಲವು ಸಾಧನಗಳುಂಟು. ಅವುಗಳಲ್ಲಿ ಪ್ರಮುಖವಾದವುಗಳನ್ನು ಮುಂದೆ ಕಾಣಬಹುದು.

೧) ಸರಿಯಾದ ಅವ್ಯಯಗಳನ್ನುಪಯೋಗಿಸಿ:—

ಸಮುಚ್ಚಯ—ಮತ್ತೆ-ಹಾಗೆಯೇ-ಕೂಡ-ಇಲ್ಲದೆ.

ವಿರೋಧ—ಆದರೆ-ಆದರೂ-

ಪರಿಣಾಮ—ಆದುದರಿಂದ-ಇದರಿಂದ-ಏಕೆಂದರೆ.-

ಪಕ್ಷಾಂತರ—ಈ ಮೇರೆಗೆ-ಒಟ್ಟಾರೆ-ಅಥವಾ-ಇಲ್ಲವೆ-ಆಗಲಿ-

ನಿತ್ಯಸಂಬಂಧ—ಹೇಗೆ-ಹಾಗೆ-; ಎಂಥ-ಅಂಥ. ಇ.

ಈ ಮೇರೆಗೆ-ಒಟ್ಟನಲ್ಲಿ, ಇವುಗಳನ್ನು ಒಂದು ಪರಿಚ್ಛೇದವನ್ನು ಇನ್ನೊಂದರೊಡನೆ ಹೊಂದಿಸಲು ಉಪಯೋಗಿಸಬಹುದು.

೨) ಪುನರುಕ್ತಿಯಿಂದ:—ಒಮ್ಮೊಮ್ಮೆ ಪುನರುಕ್ತಿಯಿಂದಲೂ ಈ ಕಾರ್ಯವು ಆಗುವುದು.

ಸೂಚನೆ:—ಮುಂದೆ ಕೊಟ್ಟ ಮಾದರಿಯ ಪರಿಚ್ಛೇದಗಳನ್ನು ಪರೀಕ್ಷಿಸಿ ಮೇಲ್ಕಾಣಿಸಿದ ಸಂಗತಿಗಳ ಉದಾಹರಣೆಗಳನ್ನು ಕಂಡುಹಿಡಿಯಬಹುದು.

ಮುಂಜಾವಿನ ಸಂಗಿತ

ಬೀಸುವ ವೇಳೆಯೆಂದರೆ ಸಾಮಾನ್ಯವಾಗಿ ರಾತ್ರಿಯ ಕೊನೆಯ ಜಾವದ ಸಮಯ. ಆಗ ಎಲ್ಲೆಲ್ಲಿಯೂ ಶಾಂತತೆಯ ಸಾಮ್ರಾಜ್ಯವು ನೆಲೆಗೊಂಡಿರುವದು. ಎಲ್ಲ ಪ್ರಾಣಿಗಳಿಗೂ ನಕ್ಕರೆನಿದ್ದೆಯ ಕಾಲವದು. ಹಳ್ಳಿಯ ಹೆಂಗಸರು ಎದ್ದು ಬೀಸುವದಕ್ಕೆ ಮೊದಲು ಮಾಡುವರು. ಸೃಷ್ಟಿಯು ತನ್ನ ನೈಸರ್ಗಿಕ ಸಂಗೀತಮಯ ವಾತಾವರಣದಿಂದ ಮೊದಲೇ ಕೂಡಿಕೊಂಡಿರುವದು. ಅದರಲ್ಲಿಯೇ ಬೀಸುವ ಕಲ್ಲು ಎಡೆಬಿಡದೆ ಮಂದ ಷಡ್ಜದಲ್ಲಿ ಸ್ವರವನ್ನು ಹಿಡಿದು ನಡೆದಿರುವದು. 'ನಾಗರ ಹೆಡೆಯಂತೆ ನಲಿನಲಿದು ಬೀಸುವ' ನಾರಿಯರು ಆ ಸ್ವರದಲ್ಲಿ ಸ್ವರವನ್ನು ಬೆರೆಯಿಸಿ ಕೈ ಬಳೆಗಳ 'ಗಲಕು ಗಲಕು' ಎಂಬ ಸಪ್ಪಳವೇ ತಾಳಗಳನ್ನು ಹಾಕುತ್ತಿರಲು, ವೀಣೆ ಕೊಳಲುಗಳನ್ನು ಮೂದಲಿಸುವ ಮಂಜುಲ ಕಂಠದಿಂದ ಚೆಲುವು ಒಲುವುಗಳನ್ನು ಬಣ್ಣಿಸಿ ಹಾಡುತ್ತಿರುವರು. ಅಂತಹ ಸಂಗೀತ ಸಂಯೋಗವು ಅದಾರ ಮನಸ್ಸನ್ನು ಸೆಳೆದುಕೊಳ್ಳದಿರುವದು? ಅಳುತಿರುವ ಎಳೆಯ ಹಸುಳೆಗಳು ಆ ಸಂಗೀತನ್ನು ಕೇಳಿ ಅಳುವದನ್ನು ನಿಲ್ಲಿಸಿ ಸಮಾಧಾನಗೊಂಡು ನಿದ್ದೆಹೋಗುವವು. ಅರೆನಿದ್ದೆಯಲ್ಲಿರುವವರು

ಆ ಸಂಗೀತದಿಂದ ಸೂಸುತ್ತಿರುವ ಸಂತೋಷತರಂಗದಲ್ಲಿ ಓಲಾಡಿ ಓಲಾಡಿ ಮೈಮರೆಯುತ್ತಲಿರುವರು. ಮನಸ್ಸಿನ ದುಗುಡವನ್ನು ಹೊಡೆದೋಡಿಸಿ ಅದನ್ನು ಪ್ರಸನ್ನತೆಯ ಕಡೆಗೆ ತಿರುಗಿಸುವುದಾ ಮೋಹಿನಿಯ ಮಂತ್ರ. ಇಂತಹ ಸಂತೋಷವನ್ನು ನಿತ್ಯನಿತ್ಯವೂ ಅನುಭವಿಸುತ್ತಿರುವವರೆಂತಹ ಪುಣ್ಯಶಾಲಿಗಳೋ! ಜೀವಿತಕಾಲದಲ್ಲಿ ಒಮ್ಮೆಯಾದರೂ ನಾವದನ್ನು ಅನುಭವಿಸಿಯೇ ತೀರಬೇಕು.

— ಆನಂದಕಂದ

ವೀರರ ಜನನ.

ರಾಷ್ಟ್ರದ ಅಭಿವೃದ್ಧಿಗೆ ದೃಢಕಾಯರೂ ಸ್ಥಿರಬುದ್ಧಿಯವರೂ ಆದ ಪ್ರಜೆಗಳು ಬೇಕೆಂಬುದನ್ನು ಯಾರೂ ಒಪ್ಪಬಹುದು. ಹಾಗಾದರೆ ಇಂಥ ವೀರ ಬಂಟರು ಬೆಳೆಯಲು ಯಾವ ಏರ್ಪಾಡು ಮಾಡಬೇಕೆಂಬ ಬಗ್ಗೆ ನಾವು ವಿಚಾರ ಮಾಡಬೇಕಲ್ಲವೇ? ಕೊನೆಯು ಸರ್ವಾಂಗಸುಂದರವಾಗ ಬೇಕಾದರೆ ಅದರ ಮೂಲವೂ ಹಾಗಿರಬೇಕೆಂಬುದನ್ನು ಮರೆಯಲಾಗದು. ಆದಿಗೂ ಅಂತ್ಯಕ್ಕೂ ನಿಕಟಸಂಬಂಧವಿರುವದು. ಬೆಳೆಯ ಗುಣವು ಮೊಳಕೆ ಯಲ್ಲಿರುವುದೇನಾಶ್ಚರ್ಯ? ನಮಗೆ ನವೀನವಾದ ಉತ್ತಮ ಹಣ್ಣು ಗಳು ಬೇಕಾದರೆ ನಾವು ಆ ಹಣ್ಣುಗಳಾಗುವ ಗಿಡದ ಆಯ್ಕೆಯನ್ನು ಬೀಜ ದಿಂದಲೂ ಮಾಡುತ್ತೇವೆ. ಮೊದಲು ಬೀಜದ ಗುಣವನ್ನು ನೋಡುವೆವು. ಆ ಮೇಲೆ ಆ ಬೀಜವನ್ನು ಬಿತ್ತಬೇಕಾದ ಹೊಲದ ಗುಣಪರೀಕ್ಷೆ ಮಾಡುತ್ತೇವೆ. ಕೆಲವೊಂದು ಬಗೆಯ ಸಸ್ಯಾದಿಗಳು ಬಲವಾಗಿ ಬೆಳೆಯ ಬೇಕಾದರೆ ಕೆಲವೊಂದು ಗುಣವುಳ್ಳ ನೆಲವೇ ಅವಶ್ಯವಾಗಿ ಬೇಕಾಗುತ್ತದೆ. ವಿಷಬೀಜಕ್ಕೆ ಅಮೃತಫಲವಾಗುವದಿಲ್ಲ. ಅಂದ ಬಳಿಕ ಸುಪ್ರಜಾ ನಿರ್ಮಾ ಣವಾಗಬೇಕಾದರೆ ತಾಯಿತಂದೆಗಳ ಮದುವೆಯಿಂದ ಎಚ್ಚರಪಡಬೇಕಾ ಯಿತಲ್ಲವೇ? ಆದ್ದರಿಂದಲೇ ವಿವಾಹಕ್ಕೆ ಅಷ್ಟೊಂದು ಮಹತ್ವ. ಮಾನವ ಜಾತಿಯ ಪ್ರಗತಿಯನ್ನುಂಟುಮಾಡುವ ವೀರ ವಿಭೂತಿಗಳನ್ನು ಪಡೆಯು ವದೇ ಮದುವೆಯ ಮುಖ್ಯ ಉದ್ದೇಶವಿರಬೇಕು.

--ತಾರಾನಾಥ.

೩ ಸಾರವಿಸ್ತಾರ.

೧ ಅಂದರೇನು ?

ಇದೊಂದು ಪರಿಚ್ಛೇದವನ್ನು ಬರೆಯುವ ಇನ್ನೊಂದು ರೀತಿ. ಇಲ್ಲಿಯೂ ಪರಿಚ್ಛೇದವನ್ನು ಬರೆಯಲು ಬೇಕಾದ ಕೌಶಲವು ಅವಶ್ಯವು. ಕಳೆದ ಪ್ರಕರಣದಲ್ಲಿ ಒಂದು ವಿಷಯವನ್ನು ಕುರಿತು ಪರಿಚ್ಛೇದವನ್ನು ಬರೆಯಲು ಕಲಿತದ್ದಾಯಿತು. ಇಲ್ಲಿ **ವಿಚಾರಸಾರವುಳ್ಳ**–ಮಹತ್ವದ ವಿಚಾರವನ್ನು ಒಳಗೊಂಡ–ಒಂದು **ಕಿರಿನುಡಿ**ಯನ್ನು, ಚಿಕ್ಕವಾಕ್ಯವನ್ನು, ಬೆಳೆಯಿಸಿ ಬರೆಯುವ ರೀತಿಯನ್ನು ಅರುಹಬೇಕಾಗಿದೆ.

೨ ಬರೆವುದೇತಕ್ಕೆ ?

ಈ ಬಗೆಯಾಗಿ ಬರೆಯುವುದೇತಕ್ಕೆ ? ಎಂಬುದನ್ನು ಮೊದಲು ಅರಿತುಕೊಳ್ಳುವಾ ! ಅಂದರೆ ಇದರ ವಿಷಯವಾಗಿ ಕುತೂಹಲವು ಹೆಚ್ಚಾಗಿ ಅದನ್ನು ಬರೆಯಲು ಉತ್ಸಾಹವು ಬೆಳೆಯುವುದು.

ಒಂದು ಕಲ್ಪನೆಯನ್ನು ಹಿಗ್ಗಿಸಲು-ಬೆಳೆಯಿಸಿ ಬರೆಯಲು-ಕಲಿಯುವುದರಿಂದ ಅದರ ಸಾಂಗ–ಉಪಾಂಗ ಜ್ಞಾನವು ನಮಗೆ ಆಗುವುದು. ಸರಿಯಾದ ಪರಿಚ್ಛೇದಗಳನ್ನು ಬರೆಯುವ ಕೌಶಲವು ಬೆಳೆದು ಮುಂದೆ ನಿಬಂಧ ಬರಹವನ್ನು ಕಲಿಯಲು ಅನುಕೂಲವಾಗುವದು.

೩ ಹೇಗೆ ?

೧) ಕೊಟ್ಟ ವಾಕ್ಯವನ್ನು ಪುನಃ ಪುನಃ ಓದಿ ಅದರ ತಿರುಳನ್ನು-ಮುಖ್ಯ ಅಂಶವನ್ನು-ಅರಿಯಿರಿ. ಅದನ್ನು ವಿಸ್ತರಿಸುವಾಗ ತೀರ ಅವಶ್ಯವಾದ ಮಾತುಗಳನ್ನಷ್ಟೇ ಸೇರಿಸಿ ಅನವಶ್ಯಕವಾದ ಜೊಳ್ಳು ಸಂಗತಿಗಳನ್ನು ತೂರೆಯಿರಿ–ಬಿಟ್ಟುಬಿಡಿರಿ.

೨) ವಾಕ್ಯಗಳಲ್ಲಿ ಸರಿಯಾದ ಹೊಂದಿಕೆಯಿರಲಿ. ಕಳೆದ ಪ್ರಕರಣದಲ್ಲಿಯ ಸೂಚನೆಗಳನ್ನು ಮರೆಯದಿರಿ. ಹೊಂದಿಕೆಯಲ್ಲಿ ಶೈಥಿಲ್ಯ ಉಂಟಾಯಿತೆಂದರೆ ವಿಸ್ತಾರದ **ಬಿಗುವು** ಅಳಿಯುವುದು.

೩) ವಿಸ್ತಾರವು ಒಂದು ಪರಿಚ್ಛೇದವನ್ನು ಮೀರಬಾರದು. ಅಷ್ಟೇ ಇರಬೇಕು. ಅದೊಂದು ಆ ವಿಷಯವನ್ನೊಳಗೊಂಡ ಚಿಕ್ಕ ನಿಬಂಧವೇ ಆಗಬೇಕು.

೪ ಕೆಲವು ಮಾದರಿಗಳು:—

೧ ಉದ್ಯೋಗವುಳ್ಳವನ ಜೊದ್ದುವುದು ಸಿರಿ ಬಂದು.

ದುಡಿದವನೆ ಪಡೆಯಬೇಕೆಂಬುದು ನಿಸರ್ಗ-ದೇವತೆಯ ನಿಯಮ. ಹೈಗಳ್ಳನನ್ನಾಕೆ ಎಂದೂ ಹರಸಳು ಹಾರುವ ಹಕ್ಕಿಯು, ಅಲೆಯುವ ಮೃಗವು, ಅರಸುವ ಮೀನು, ತಮ್ಮ ಜೀವನಕ್ಕೆ ಬೇಕಾದ ವಸ್ತುಗಳನ್ನು ಪಡೆಯುವವು. ಅದನ್ನುಳಿದು ಸ್ಯೆಮರೆತು ಮಲಗಿದವರ ಮುಖದಲ್ಲಿ ಬೀಳುವುದು ಮಣ್ಣೊಂದಲ್ಲದೆ ಇನ್ನೇನು? ಆದುದರಿಂದ ನಮಗೆ ಬೇಕಾದುದನ್ನು ದೊರಕಿಸಲು ಉದ್ಯೋಗವೇ ಮಿಗಿಲಾದ ಸಾಧನವು. ಅದರಿಂದಲೇ ನಮ್ಮ ಬಾಳು ನಾಗುವುದು, ನಮಗೆ ವೈಭವವು ಸಿಗುವುದು.

೨ ದಯವೇ ಧರ್ಮದ ಮೂಲವಯ್ಯ.

ಪರಮಾತ್ಮನ ಪ್ರಾಪ್ತಿಯು ಧರ್ಮದ ಗುರಿ. ಅವನ ಪ್ರೀತಿಯು ಆ ಗುರಿಯನ್ನು ಮುಟ್ಟುವ ಹಿರಿದಾರಿ. ದೇವನನ್ನು ಪ್ರೀತಿಸುವ ವಿವಿಧ ಬಗೆಗಳಲ್ಲಿ ಆತನ ಮಕ್ಕಳನ್ನು ಪ್ರೀತಿಸುವುದು-ವಿಶೇಷವಾಗಿ ಆತನ ಅನೇಕ ಬವಣೆಗಳಿಂದ ಬಳಲುವ ಹೀನ-ದೀನ ಮಕ್ಕಳನ್ನು-ಪ್ರೀತಿಸುವುದು ಮಿಗಿಲಾದುದು. ಈ ಪ್ರೀತಿಗೇ **ದಯೆ** ಎಂಬ ಹೆಸರು. ಆದುದರಿಂದ ದಯೆಯು ಪ್ರತಿಯೊಂದು ಧರ್ಮದ ಮೂಲವಾಗಿರುವುದು.

೩ ಮಾತಾಡಿದಂತೆ ನಡೆದಾತ ಜಗವೆಲ್ಲ ಕೂತಲ್ಲಿ ಆಳ್ವ!

ಸತ್ಯವಂತರು ಆಡಿದಂತೆ ಮಾಡುವರು. ಅವರದು ಮತಿಯಂತೆ ಮಾತು; ಮಾತಿನಂತೆ ಕೃತಿ. ಈ ಏಕರೂಪತೆಯಿಂದಲೇ ಜನರು ಅವರನ್ನು ನಂಬುವರು; ಆದರಿಸುವರು; ಅವರು ಹೇಳಿದುದನ್ನು ಕೇಳುವರು. ಈ ಮೇರೆಗೆ ತಮ್ಮ ನೈತಿಕ ಬಲದಿಂದ ಇವರು ಅನೇಕರನ್ನು ತಿದ್ದುವರು. ಅವರನ್ನು ಸರಿಯಾದ ದಾರಿಯಿಂದ ನಡೆಯಿಸುವರು. ಅದಕ್ಕಾಗಿ ಅವರು ತಮ್ಮ ಸ್ಥಲದಿಂದ ಕದಲುವ ಕಾರಣವಿಲ್ಲ. ತಮ್ಮ ಆಕರ್ಷಣ ಶಕ್ತಿಯಿಂದ ಅವರು ಜನರನ್ನೆಯೆ ತಮ್ಮೆಡೆಗೆ ಸೆಳೆದು ಅವರನ್ನು ಉದ್ಧರಿಸುವರು.

೪ ಬಡವಂ ಬಲ್ಲಿದನಾಗನೇ?

ಜಗಚ್ಚಕ್ರವು ಸಂತತವಾಗಿ ತಿರುಗುವದರಿಂದ ಮೇಲಿನದು ಕೆಳಗೆ,

ಕೆಳಗಿನದು ಮೇಲೆ ಆಗುವುದು ಸಹಜ. ಈ ಗತಿಯು ಸರ್ವಗಾಮಿಯು. ಬೀಜವು ಮಣ್ಣಿನಿಂದೆದ್ದು, ಹೂತು, ಕಾತು, ಮರಳಿ ಮಣ್ಣನ್ನು ಕೂಡು ವದುಂಟು–ಮಾನವನ ಅವಸ್ಥೆಯು ಹಾಗೆಯೇ! ಎದ್ದವನು ಬೀಳುವಂತೆ, ಬಿದ್ದವನು ಏಳುವನು. ಅದೇ ಪ್ರೇರೆಗೆ ಬಡವನು ಸಿರಿವಂತನಾಗುವುದೂ ಸಿರಿವಂತನು ಬಡವನಾಗುವದೂ ಖಂಡಿತ. ಶಾಶ್ವತ ಐಶ್ವರ್ಯವೂ ದಾರಿ ದ್ರ್ಯವೂ ಯಾರಿಗೂ ದೊರೆಯದು.

೫ ತಾಗುವಾ ಮುನ್ನವೇ ಬಾಗುವಾ ತಲೇ ಲೇಸು.

ಮುಂಜಾಗ್ರತೆಯು ಜಾಣತನದ ಹಿರಿಕುರುಹು. ವಿವೇಕಶಾಲಿಯು ಯಾವಾಗಲು ಮುಂದೇನಾಗುವುದೆಂಬುದನ್ನು ಅರಿತೇ ವರ್ತಿಸುವನು. ಅವನಿಗೆ ಮುಂದಿನ ತಗ್ಗು-ದಿನ್ನೆಗಳು ಗೊತ್ತಾಗುವವು. ಆದುದರಿಂದ ಅವನಿಗೆ ಕಷ್ಟಕ್ಕೀಡಾಗುವ ಪ್ರಸಂಗವು ಬರುವದಿಲ್ಲ. ಅವನ ಬಾಳು ಸುಖಮಯವಾಗುವದು. ಆದರೆ ಹಿಂದುಮುಂದನ್ನರಿಯದ ಕುರುಡ ಕೋಣರು, ತಿಳಿಯದೆ ನುಸುಳಿಬಂದ ಗಂಡಾಂತರಗಳಲ್ಲಿ ಸಿಲುಕಿ, ಅತಿ ಯಾಗಿ ಗೋಳಾಡುವರು. ಓಗಿರಲು ತಾಗುವ ಪೂರ್ವದಲ್ಲಿ ಬಾಗುವ ಜಾಣ್ಮೆಯೆ ಒಳಿತಲ್ಲವೇ?

೬ ಪೂಜೆಯೆಂದರೆ ವಾತ್ಸಲ್ಯ-ಮಮತೆಗಳ ಆಲಿಂಗನ.

ಪೂಜ್ಯನಲ್ಲಿ ವಾತ್ಸಲ್ಯ; ಪೂಜಾರಿಯಲ್ಲಿ 'ಮಮತೆ.' ಹೀರುವುದು ವಾತ್ಸಲ್ಯದ ಸ್ವಭಾವ; ಹರಿಯುವುದು ಮಮತೆಯ ಸ್ವಭಾವ. ಅದು ಹೀರಿದತ್ತ ಇದು ಹರಿದೀತು; ಇದು ಹರಿದು ಬಂದರೆ ಅದು ಹೀರೀತು. ಮಮತೆಗೆ ಮಹಾಪೂರ ಬಂದು, ಅದು ವಿಶ್ವವನ್ನೆಲ್ಲ ತುಂಬಿತುಳುಕ ಬಹುದು ಆಗ ವಾತ್ಸಲ್ಯ ಮಮತೆಗಳಲ್ಲಿ ಐಕ್ಯವು ಒಡಮೂಡುವುದು. ಆಗ ಎಲ್ಲೆಲ್ಲಿಯೂ ವಾತ್ಸಲ್ಯ.

ಚೆನ್ನ.

೭ ತನ್ನ ತಾನರಿತರೆ ತನ್ನರಿವೆ ಗುರು

ತಾನಾರೆಂಬುದನ್ನು ಅರಿಯಲು ತನ್ನ ಜೀವನವನ್ನು ಹತ್ತು ಕಡೆ ಯಿಂದ ನೋಡಿ ಅದರ ಸ್ವರೂಪವನ್ನು ಕಂಡುಹಿಡಿಯಲುಬೇಕು.

ತನ್ನನ್ನು ತಾನರಿಯುವದೆಂದರೆ ಅದು ಬರೀ ಆತ್ಮವಿಚಾರವಲ್ಲ, ದೇಹದ ವರೆಗಿನ ವಿಚಾರವೂ ಅಹುದು; ಬರೀ ವೇದಾಂತವಿಚಾರವಲ್ಲ, ವ್ಯವಹಾರದ ವರೆಗಿನ ವಿಚಾರವೂ ಅಹುದು; ಬರೀ ವ್ಯಕ್ತಿವಿಚಾರವಲ್ಲ, ವಿಶ್ವದ ವರೆಗಿನ ವಿಚಾರವೂ ಅಹುದು. ಇಂಥ ಆತ್ಮಜ್ಞಾನವು ಗರುವಿನಂತೆ ಆದಾರನ್ನು ಉದ್ಧರಿಸಲಿಕ್ಕಿಲ್ಲ ?

ಬೇಂದ್ರೆ.

ಅಭ್ಯಾಸ ೬

ಕೆಳಗಿನ ಅವತರಣಗಳನ್ನು ವಿಸ್ತರಿಸಿ ಬರೆಯಿರಿ.

೧ ಜಗದ ಜಾತ್ರೆಯಲ್ಲಿ ಕಹಿಯಿಲ್ಲದೆ ಬರಿಯ ಸಿಹಿಯೆಲ್ಲಿಯದು ? ೨ ಬೋಧವಿಲ್ಲದೆ ಬೋಧವನ್ನಾರೂ ಸ್ವೀಕರಿಸರು. ೩ ಅರಿಯುವದರಲ್ಲಿ ಒಂದು ಆನಂದವಿದೆ. ೪ ಬಡಕಾದ ಮೈಯಲ್ಲಿ ಬಡವಾದ ಮನವಿರುವದು. ೫ ನಾಲಿಗೆಯು ಹೃದಯದ ಪ್ರತಿನಿಧಿಯಾಗಲಿ.

೪ ಸಾರಸಂಗ್ರಹ

೧ ಅಂದರೇನು ?

ಒಂದು ವಿಸ್ತಾರವಾದ ಅವತರಣದಲ್ಲಿಯ **ಸಾರವನ್ನು-ಮುಖ್ಯಾಂಶವನ್ನು** ಓರಿ ಬರೆಯುವುದೇ **ಸಾರಸಂಗ್ರಹವು**. ಸುಂತ ಬರಹಗಾರನು ತನ್ನ ಬರಹದಲ್ಲಿ ಅವತರಣಗಳನ್ನು ಸೇರಿಸಿ, ಉದಾಹರಣೆಗಳನ್ನು ಉಪಯೋಗಿಸಿ, ಸಂಭಾಷಣೆ, ಬಣ್ಣನೆ, ಇತ್ಯಾದಿಗಳನ್ನು ತುಂಬಿ, ಅದರ ಸೌಂದರ್ಯವನ್ನು ಹೆಚ್ಚಿಸುವದುಂಟು; ತನ್ನ ಮುಖ್ಯ ವಿಷಯುವನ್ನು ರಂಜಕವಾಗುವಂತೆ ಮಾಡುವದುಂಟು. ಸಂಗ್ರಹಕಾರನು ಅದನ್ನೆಲ್ಲ ಅಲ್ಲಗಳೆದು **ಪ್ರಧಾನ ವಿಷಯುವ**ನ್ನಷ್ಟೇ ಎತ್ತಿ ತೋರಿಸುವನು.

೨ ಬರೆವುದೇತಕ್ಕೆ ?

೧) **ಸಾರಸಂಗ್ರಹವು** ಪ್ರಪಂಚದಲ್ಲೆಲ್ಲ ದಿನಾಲು ನಡೆದ ಸಂಗತಿ. ಹಂಸವು ನೀರನ್ನು ತೊರೆದು ಕ್ಷೀರವನ್ನು ಸೇವಿಸುವುದು. ಒಕ್ಕಲಿಗನು ಜೊಳ್ಳನ್ನು ತೂರಿ ಕಾಳನ್ನು ಕೂಡಹಾಕುವನು. ಈ ಮೇರೆಗೆ ಸಾರವನ್ನು

ಹೀರುವ ಶಕ್ತಿಯು ಜ್ಞಾನಪ್ರಪಂಚದಲ್ಲಿಯೂ ಅಷ್ಟೇ ಮಹತ್ವದ್ದುಂಟು. ಅದನ್ನು ಬಲಿಸುವುದು ಅಷ್ಟೇ ಅಗತ್ಯದ್ದುಂಟು.

೨) ಈ ಬಗೆಯ ಅಭ್ಯಾಸಕ್ಕೆ ಮನಸ್ಸು ತೀರ ಏಕಾಗ್ರವಾಗಬೇಕಾಗುವುದು. ಅಂದರೇನೆ ಅದಕ್ಕೆ ವಿಸ್ತಾರವಾದ ಅವತರಣದಲ್ಲಿಯ ರಹಸ್ಯವೂ ಸಂಗತಿಯೂ ತಿಳಿಯುವುದು. ಆದುದರಿಂದ ಇದರ ಅಭ್ಯಾಸದ ಫಲವಾಗಿ ಮನಸ್ಸಿನ ಏಕಾಗ್ರತೆಯು ಹೆಚ್ಚುವುದುಂಟು.

೩) ಈ ಮೇರೆಗೆ ಚಿತ್ತವಿಟ್ಟು ಓದುವ ಕೌಶಲ್ಯವನ್ನು ನೀಡುವುದಲ್ಲದೆ **ಸಾರ-ಸಂಗ್ರಹವು, ಕಿರಿದರಲ್ಲಿ ಹಿರಿದಾದ ಅರ್ಥ**ವನ್ನು ಉಸುರಲು ಕಲಿಸುವದು. ಇದರ ಅಭ್ಯಾಸವು ಚೆನ್ನಾಗಿ ಆಯಿತೆಂದರೆ ನಮಗೆ ತಿಳಿಯಾಗಿಯೂ ಸಂಕ್ಷೇಪವಾಗಿಯೂ ಬರೆಯಲು ಬರುವುದು.

೪) ಓದಿದ್ದನ್ನೂ ಕೇಳಿದ್ದನ್ನೂ ತ್ವರಿತವಾಗಿಯೂ ಸ್ಪಷ್ಟವಾಗಿಯೂ ಅರಿತುಕೊಂಡು, ಅದನ್ನು ತಿಳಿಯಾಗಿಯೂ ಸಂಗ್ರಹವಾಗಿಯೂ ಬರೆಯುವ ಶಕ್ತಿಯು ಪ್ರತಿಯೊಬ್ಬನಿಗೆ ಬೇಕು. ಆದುದರಿಂದ ಈ ವಿಷಯವನ್ನು ಚಿತ್ತವಿಟ್ಟು ಅಭ್ಯಸಿಸುವುದು ಪ್ರತಿಯೊಬ್ಬನ ಕರ್ತವ್ಯ.

೩ ಹೇಗೆ ?:—

ಅ) ಪೂರ್ವಸಿದ್ಧತೆ

೧) **ಓದುವುದು**—ಕೊಟ್ಟ ಅವತರಣವನ್ನು ಮೊದಲು ಒಳ್ಳೆಯ **ದಕ್ಷತೆಯಿಂದಲೂ ಸೂಕ್ಷ್ಮತೆಯಿಂದಲೂ** ಕೊನೆಯವರೆಗೆ ಓದಬೇಕು. ಒಮ್ಮೆ ಓದುವುದರಿಂದ ಅದರ ಅಭಿಪ್ರಾಯವು ಸ್ಪಷ್ಟವಾಗಿ ತಿಳಿಯದಿದ್ದರೆ ಅದನ್ನು ಎರಡು ಮೂರು ಸಲ ಓದಬೇಕು.

೨) ಅದರಲ್ಲಿಯ ಮುಖ್ಯ ವಿಷಯನ್ನರಿಯಬೇಕು. ಮತ್ತು ಅದನ್ನನುಲಕ್ಷಿಸಿ ಆ ಅವತರಣಕ್ಕೆ ಒಂದು ಹೆಸರನ್ನು ಕೊಡಬೇಕು.

೩) ತರುವಾಯ ಪ್ರತಿಯೊಂದು ವಿವರವನ್ನು ಅಭ್ಯಸಿಸಬೇಕು. ಅದರಲ್ಲಿ ಪ್ರತಿಯೊಂದು ಶಬ್ದದ ಅರ್ಥವನ್ನೂ ವಾಕ್ಯದ ಆಶಯವನ್ನೂ ಅರಿಯಲು ಯತ್ನಿಸತಕ್ಕದ್ದು.

೪) ಜೊಳ್ಳಿನಿಂದ ಕಾಳನ್ನು ಬೇರೆಮಾಡಿ ಪ್ರಧಾನಾಂಶಗಳ ಟಿಪ್ಪಣಿಯೊಂದನ್ನು ಮಾಡಬೇಕು. ಸ್ವಲ್ಪ ಹೆಚ್ಚು ಟಿಪ್ಪಣಿಗಳನ್ನು ಮಾಡುವುದು ಒಳಿತು.

೫) ಇನ್ನೊಮ್ಮೆ ಅವತರಣವನ್ನೋದಿ, ಅದರಲ್ಲಿಯ ಮುಖ್ಯಾಂಶವೇನಾದರೂ ಉಳಿದಿದೆಯೋ ಹೇಗೆಂಬುದನ್ನು ನೋಡಿಕೊಳ್ಳಬೇಕು

ಬ) **ಸಂಗ್ರಹವನ್ನು ಬರೆಯುವುದು.**

೧) ಇಷ್ಟು ಸಿದ್ಧತೆಯಾದ ತರುವಾಯ, ಟಿಪ್ಪಣಿಗಳನ್ನುಪಯೋಗಿಸಿ ಒಂದು ಕಚ್ಚಾ ಕರಡನ್ನು ಬರೆಯಬೇಕು. ಅದನ್ನು ಸ್ಪಷ್ಟವಾದ ಪೂರ್ಣ ವಾಕ್ಯಗಳಲ್ಲಿ ಬರೆಯತಕ್ಕದ್ದು.

೨) ವಿಚಾರವು ಮೂಲದಲ್ಲಿಯದಿರಲಿ! ಭಾಷೆಯು ನಿಮ್ಮದಿರಲಿ! ಮೂಲದಲ್ಲಿಯ ಶಬ್ದಗಳನ್ನೂ ಶಬ್ದಸಮೂಹವನ್ನೂ ಆದಷ್ಟು ಉಪಯೋಗಿಸದಿರವುದು ಒಳಿತು. ಅದರಲ್ಲಿ ನಿಮ್ಮ ಸ್ವಂತ ಟೀಕೆ-ಟಿಪ್ಪಣಿಗಳನ್ನು ಸೇರಿಸಕೂಡದು.

೩) ಸಾರಾಂಶವು **ಸುಸಂಬದ್ಧವೂ ಸ್ವಯಂಪೂರ್ಣವೂ** ಇರಬೇಕು. ಅದನ್ನೋದಿದೊಡನೆ ಬರಹಗಾರನ ಭಾವವು ತಿಳಿಯುವಂತಿರಬೇಕು. ಅದಕ್ಕಾಗಿ ಮೂಲವನ್ನೋದುವ ಅವಶ್ಯಕತೆಯು ಬೀಳಬಾರದು.

೪) ಭಾಷೆಯು ಶುದ್ಧವಾದುದಿರಲಿ-ಸುಲಭವಾದುದಿರಲಿ-ಸ್ಪಷ್ಟವಾದುದಿರಲಿ. ಅದನ್ನಾವಾಗಲೂ **ವಿರೂಪಾನುವಾದದಲ್ಲಿಯೂ** (Indirect Speech) **ಭೂತಕಾಲದಲ್ಲಿಯೂ** ಬರೆಯುವ ರೂಢಿಯುಂಟು.

೫) **ಪುನರ್ನಿರೀಕ್ಷಣವಾಗಲಿ!** ಇನ್ನೊಮ್ಮೆ ನೋಡುವದಾಗಲಿ! ಮೂಲದೊಡನೆ ಸರಿಹೋಲಿಸಿ ಸಂಗ್ರಹದಲ್ಲಿಯ ಚಿಕ್ಕ ಪುಟ್ಟ ದೋಷಗಳನ್ನು ತಿದ್ದಬೇಕು. ಅದರಲ್ಲಿ ಶಬ್ದಗಳನ್ನೆಣಿಸಿ ಅದು ಮೂಲದ ಒಂದು ಮೂರಾಂಶದಷ್ಟು ಆಗಿರುವದೋ ಹೇಗೆಂಬದನ್ನು ನೋಡಬೇಕು. ಕಡಿಮೆಯಾಗಿದ್ದರೆ ಬೆಳಿಸಿ, ಹೆಚ್ಚಾಗಿದ್ದರೆ ಅಳಿಸಿ, ಕಡಿಮೆ ಮಾಡಿ, ಅದಕ್ಕೆ ಸರಿಯಾದ ರೂಪವನ್ನು ಕೊಡಬೇಕು.

೬) ಕೊನೆಗೆ ಶುದ್ಧಪ್ರತಿಯನ್ನು ತಯಾರಿಸಬೇಕು.

೪ ಕೆಲವು ಮಾದರಿಗಳು:—

೧ ನಮ್ಮ ಅಧೋಗತಿ.

ನಾವು ದಿನಕ್ಕೊಂದು ಚಂದದಂತೆ ನಮ್ಮ ಗಂಡಸುತನವನ್ನು ಕಳೆಕೊಳ್ಳಹತ್ತಿರುವೆನೆಂಬುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ. ಈ ಅಧೋಗತಿಯನ್ನು ನಾವು ತಡೆಯದಿದ್ದರೆ ದೇಶದ ಅತ್ಯಂತ ನಾಶವಾಗುವುದರಲ್ಲಿ ಸಂದೇಹವಿಲ್ಲ. ಅದು ಈಗಾಗಲೇ ನಮ್ಮ ರಾಷ್ಟ್ರಜೀವನದ ತಿರುಳನ್ನು ತುಂಡರಿಸಹತ್ತಿದೆ. ನಮ್ಮ ದೇಶಬಾಂಧವರ ಆರೋಗ್ಯ ಸ್ಥಿತಿಯನ್ನು ನಿರೀಕ್ಷಿಸಿದರೆ ನಮಗೇನು ತೋರುತ್ತದೆ? ಬಹು ಜನರು ಅಶಕ್ತರೂ, ಅಗ್ನಿಮಾಂದ್ಯ, ದೃಷ್ಟಿಮಾಂದ್ಯ, ಬಹುಮೂತ್ರ, ಉಪದಂಶ ಮುಂತಾದ ರೋಗರಚನೆಗಳಿಂದ ಪೀಡಿತರೂ ಆಗಿರುವರು. ಪ್ರತಿಯೊಂದು ಕುಟುಂಬದವರು ವೈದ್ಯ-ಡಾಕ್ಟರುಗಳಿಗೆ ತೆರುವ ಹಣವೇ ಇದಕ್ಕೆ ಸಾಕ್ಷಿ. ರೋಗಿಗಳ ಇಮ್ಮಡಿ ವೈದ್ಯರುಗಳ ಸಂಖ್ಯೆಯು ಬೆಳೆಯಹತ್ತಿದೆ. ಎಲ್ಲ ದೇಶಗಳಿಗಿಂತಲೂ ಔಷಧಕ್ಕಾಗಿ ನಾವೇ ಹೆಚ್ಚು ಹಣವನ್ನು ಸೂರೆಗೈಯ್ಯುವೆವಂತೆ! ನಾನಾ ಜನಾಂಗಗಳ ವ್ಯಕ್ತಿಗಳ ಜೀವನಸಮಯವನ್ನು ಸರಿಹೋಲಿಸಿದರೆ ನಾವು ಬದುಕುವ ವೇಳೆಯು ತೀರ ಕಡಿಮೆ. ನಮ್ಮ ನಿಲುವಿಕೆ, ಎತ್ತರ, ಮೈಕಟ್ಟು ಮುಂತಾದವುಗಳನ್ನು ನೋಡಿ ವಿದೇಶೀಯರು ನಗಬೇಕಾಗಿದೆ. ನಮ್ಮ ಹಿರಿಯರು ಬಂಗಾರವನ್ನು ತಿಂದು ಕರಗಿಸುತ್ತಿದ್ದರಂತೆ. ಉಕ್ಕಿನ ಹರವಾದ ಎದೆಯವರೂ, ಕಬ್ಬಿಣದಂಥ ಮೈಕಟ್ಟಿನವರೂ ಕ್ಷಾತ್ರ ತೇಜವುಳ್ಳವರೂ ಆದ ನಮ್ಮ ಪೂರ್ವಜರೆತ್ತ! ಕಣ್ಣುಗುಡ್ಡಿಗಳು ಒಳಗೆ ಸೇರಿ, ಜೋಲು ಮೋರೆಯಿಂದ ನಿರ್ಬಲರಾಗಿರುವ ಮೋಟುಮರಗಳಾದ ನಾವೆತ್ತ!! ತೆಕ್ಕೆಯಿಂದ ಗಾದಿಗೂ ಗಾದಿಯಿಂದ ಒರಗುವ ಖುರ್ಚಿಗೂ ಹೊಂದಿ ಬೀಳುವ ನಾವು, ಬರಬರುತ್ತ ಕಡಲೆಯ ಗಿಡಕ್ಕೆ ನಿಚ್ಚಣಿಕೆಯನ್ನು ಹಚ್ಚುವವರಲ್ಲಿ ಸಂದೇಹವಿಲ್ಲ. ನಡುಹರೆಯದ ಒಬ್ಬ ಹುಡುಗನ ಗಲ್ಲವನ್ನು ಹಿಂಡಿದರೆ ಕೈಯಲ್ಲಿ ಬರುವುದು ನೀರು, ನೆತ್ತರವಲ್ಲ! **ಎಳೆತನದಲ್ಲಿಯೇ ಹಳೆತನದ ಎಲ್ಲ ಲಕ್ಷಣಗಳೂ ಕಂಡುಬರುತ್ತವೆ.** ಆದರೆ ಈ ಸ್ಥಿತಿಗೆ ಅಪವಾದವೂ ಇದೆ. ನಮ್ಮಲ್ಲಿ

ಪ್ರಪಂಚದ ಅತೀವ ಪ್ರಚಂಡ ಬಾಹುಗಳನ್ನು ಸಹ ಸರಿಹೋಲುವ, ಕಿಂಬಹುನಾ, ಒಂದು ತೂಕ ಮೇಲಾಗಿರುವ ಶೂರಧೀರರೂ ಇನ್ನೂ ನಮೂನೆಗೆಂದು ಕೆಲವರು ಇರುವರು. ಭಾರತೀಯರು ಇವರ ಬಗ್ಗೆ ಅತ್ಯಂತ ಅಭಿಮಾನ ತಾಳಬೇಕಾಗಿದೆ.

--ತಾರಾನಾಥ.

ಮುಖ್ಯಾಂಶಗಳು: —

ನಮ್ಮ ಶಾರೀರಿಕ ಅವನತಿ—ರೋಗಗಳ ವೈಪುಲ್ಯ—ಆಯುರ್ಮರ್ಯಾದೆಯು ಕಡಿಮೆಯಾದುದು—ಅಂದಿನವರಲ್ಲಿ ಇಂದಿನವರಲ್ಲಿ ಅಜಗಜಾಂತರ—ನಮ್ಮ ವಿಲಾಸ ಜೀವನ—ತಾರುಣ್ಯದಲ್ಲಿ ವಾರ್ಧಕ್ಯದ ಕುರುಹುಗಳು—ಕೆಲವು ಅಪವಾದಗಳು.

ಸಾರ-ಸಂಗ್ರಹ:—

೨ ನಮ್ಮ ಶಾರೀರಿಕ ಅವನತಿ.

ದಿನದಿನಕ್ಕೆ ಹೆಚ್ಚುತ್ತಿರುವ ನಮ್ಮ ಶಾರೀರಿಕ ದೌರ್ಬಲ್ಯವು ತೀರ ಶೋಚನೀಯವಾದುದು. ಬಲಶಾಲಿಗಳಾದ ನಮ್ಮ ಪೂರ್ವಜರೆತ್ತ? ಬಲಹೀನರಾದ ನಾವೆತ್ತ? ನಮ್ಮ ವಿಲಾಸ ಜೀವನವು ನಮ್ಮಲ್ಲಿಯ ಸತ್ವವನ್ನೆಲ್ಲ ಹೀರಿ, ನಮ್ಮನ್ನು ಸಾವಿರ ರೋಗಗಳ ತವರೂರನ್ನಾಗಿ ಮಾಡಿರುವುದು. ಅದರಿಂದ ನಮ್ಮ ನಿಲುವಿಕೆ-ಆಯುರ್ಮರ್ಯಾದೆ- ಇತ್ಯಾದಿಗಳು ಕಡಿಮೆಯಾಗಿ ನಾವು ಎಲ್ಲ ಜನಾಂಗಗಳ ನಗೆಗೆ ಈಡಾಗಿರುವೆವು. ನಮ್ಮ ತರುಣರು ವಾರ್ಧಕ್ಯದ ಕುರುಹಗಳಿಂದ ಕೂಡಿದವರಾಗಿರುವರು. ಇದಕ್ಕೆ ಕೆಲವು ಅಪವಾದಗಳೂ ಇಲ್ಲವೆಂದಲ್ಲ. ಆದರೂ ಅದರಿಂದ ನಮ್ಮ ಅಧೋಗತಿಯ ತೀವ್ರತೆಯೇನೂ ಇಲ್ಲದಂತಾಗುವದಿಲ್ಲ. ಆದುದರಿಂದ ಅದನ್ನು ಬೇಗನೆ ತಡೆಯದಿದ್ದರೆ ನಮ್ಮ ನಾಡು ಹಾಳಾಗದಿರದು.

ಸೂಚನೆ:--ಮೂಲ ಅವತರಣದಲ್ಲಿ ಸುಮಾರು ೧೬೦ ಶಬ್ದಗಳಿವೆ ಮೇಲಿನ ಸಾರಾಂಶವು ೫೫ ಶಬ್ದಗಳುಳ್ಳದ್ದಾಗಿದೆ. ಆದುದರಿಂದ ಅದು ಸುಮಾರಾಗಿ ಮೂಲದ ⅓ ದಷ್ಟು ಆಗಿರುವುದು.

೩ ಸಮಾಜದ ಕಟ್ಟು.

ಸಮಾಜದ ಕಟ್ಟು ಕಟ್ಟಳೆಗಳು ಗಾಯನವಾದ್ಯಗಳ ಕಟ್ಟುಗಳಿದ್ದಂತಿರಬೇಕು. ಸಾಮಾಜಿಕ ಬಂಧನವು ಮುಕ್ತಿಯ ಮೂಲಕಾರಣವಾಗಬೇಕು. ಅಲ್ಲದೆ ಪ್ರಗತಿಯನ್ನು ನೆಲಕ್ಕೆ ಒತ್ತಿ ಮಾನವನನ್ನು ನಿರ್ಜೀವ ಯಂತ್ರವಾಗಿ ಹಾಳು ಮಾಡುವದಕ್ಕಲ್ಲ. ವೀಣೆಗೇರಿಸಿದ ತಂತಿಗಳು ಬಂಧನದಲ್ಲಿವೆ. ಆ ಬಂಧನದಿಂದ ಅನೇಕ ರಾಗ-ರಾಗಿಣಿಗಳಿಗೆ ಜನ್ಮ ಕೊಟ್ಟು, ಪರರನ್ನು ಆನಂದಸಾಗರದಲ್ಲಿ ಮುಳುಗಿಸಿ, ತಾವೂ ಕೀರ್ತಿಯನ್ನು ಪಡೆಯುತ್ತವೆ. ಬಂಧನದಿಂದಲೇ ರಸಭರಿತವಾದ, ಆಹ್ಲಾದಕರವಾದ ರಾಗಗಳನ್ನುತ್ಪಾದಿಸುವ ಸ್ವಾತಂತ್ರ್ಯವು ಬಂದಿತಲ್ಲವೇ? ಸಾಮಾಜಿಕ ಬಂಧನವೂ ಹೀಗೆ ಪ್ರಗತಿಗೆ ಉತ್ತೇಜನವನ್ನು ಕೊಡುವಂಥದ್ದಾಗಿರಬೇಕು. ವೀಣೆಯ ತಂತಿಗಳಂತೆ, ವ್ಯಕ್ತಿಯ ಪ್ರಗತಿಯನ್ನೂ, ಸಮಾಜದ ಸುಖವನ್ನೂ ಬೆಳೆಸುವಂಥಾದ್ದೇ ಶಾಸ್ತ್ರೋಕ್ತ ಬಂಧನ. ಇದ್ದಂತಿರುವದು ಯಂತ್ರಜೀವನ; ಪ್ರಾಣಿಜೀವನವಲ್ಲ. ಪರಿಸ್ಥಿತಿಯನ್ನು ಜಯಿಸಲು ಯತ್ನಿಸುವದೇ ಪ್ರಾಣಿಸ್ವಭಾವ; '**ಮುಂದೆ ಇನ್ನೂ ಮುಂದೆ**' ಎಂಬುದೇ ಅಹೋರಾತ್ರಿ ಪ್ರಾಣಿಗಳಲ್ಲಾಗುವ ಆಕಾಶವಾಣಿ........ನಮ್ಮಲ್ಲಿಯ ಪ್ರತಿಯೊಂದು ವ್ಯಕ್ತಿಗೂ ಪ್ರಫುಲ್ಲಿತವಾಗಿ ಅರಳಲಿಕ್ಕೆ ಯಾವಾಗ ಸಮಾಜದಲ್ಲಿ ಪ್ರೋತ್ಸಾಹವಿಲ್ಲದಿದ್ದರೂ, ಸಂದರ್ಭಮಾತ್ರವಾದರೂ ದೊರೆಯುವದೋ, ಆ ದಿನವೇ ನಮ್ಮ ಸಮಾಜವು ಅಜಿಂಕ್ಯವಾಗುವದು; ಆ ಹೊತ್ತೇ ಜ್ಞಾನಭಾಸ್ಕರನು ತನ್ನ ಪ್ರೇಮದ ಕಿರಣಗಳನ್ನು ಸುರಿಸುವನು. ಉಷಾದೇವಿಯು ತನ್ನ ಅನೇಕ ರೂಪವರ್ಣಗಳ ಸುಂದರ ಮತ್ತು ಲಲಿತರೂಪಗಳನ್ನು ತೋರಿಸುವಳು. ಅಂದೇ ನಿಸರ್ಗದೇವತೆಯು ತನ್ನ ಸುಂದರ ಬಾಲೆಯರಾದ ಪುಷ್ಪಪಲ್ಲವಗಳ ನರ್ತನದೊಡನೆ ಅನುಪಮ ಗಂಧರ್ವಗಾನವನ್ನು ಹಾಡುವಳು.

—ತಾರಾನಾಥ.

ಮುಖ್ಯಾಂಶಗಳು:

ಸಮಾಜದ ಬಂಧನ-ವೀಣೆಯ ಬಂಧನದಂತೆ-ಪ್ರಗತಿಗೆ ಸಾಧಕವಿರಬೇಕು. ಬಾಧಕವಿರಬಾರದು. ಅಂದರೆನೇ ಸಮಾಜದ ಏಳ್ಗೆ.

ಸಾರಸಂಗ್ರಹ:

ಸಮಾಜದ ಬಂಧನವು

ಸಮಾಜದ ಬಂಧನವು ವೀಣೆಯ ಬಂಧನದಂತೆ ಪ್ರಗತಿಪೋಷಕವಾದುದಿರಬೇಕು. ವೀಣೆಯು ಬಂಧನದಲ್ಲಿದ್ದ ತನ್ನ ತಂತಿಗಳಿಂದ ರಸಭರಿತ ಸಂಗೀತವನ್ನು ಹುಟ್ಟಿಸುವಂತೆ ಸಮಾಜವು ವ್ಯಕ್ತಿಗಳಿಗೆ ಚೆನ್ನಾಗಿ ಬೆಳೆಯಲು ಅವಸರಕೊಟ್ಟು ಅವರಿಂದ ತನ್ನ ಕಲ್ಯಾಣವನ್ನು ಸಾಧಿಸಿಕೊಳ್ಳಬೇಕು. ಬಿಡುಗಡೆಯೆ ಬಂಧನದ ಗುರಿಯಾಗಬೇಕು. ಅಂದೇ ಸಮಾಜವು ಬಲಶಾಲಿಯಾಗುವುದು.

ಅಭ್ಯಾಸ ೭.

ಮುಂದಿನ ಅವತರಣಗಳ ಸಾರಾಂಶವನ್ನು ನಿಮ್ಮ ಭಾಷೆಯಲ್ಲಿ ಬರೆಯಿರಿ.

೧ ಕನ್ನಡದ ಏಳ್ಗೆ.

ಕನ್ನಡನುಡಿಯ ಏಳಿಗೆ ಅಥವಾ ಇಳಿಗೆಯು ಅದರ ಕೈವಾರಿಗಳ ಕೈಯಲ್ಲಿವೆ. ಕನ್ನಡದ ಈಗಿನ ಬಡತನವನ್ನು ಕಂಡು ಬೆಚ್ಚಿಬೀಳುವ ಕಾರಣವಿಲ್ಲ. ೧೫ನೆಯ ಶತಮಾನಕ್ಕೆ ಮೊದಲು ಇಂಗ್ಲಿಷ್ ಭಾಷೆಯು ಹೇಳಲಾಗದಂತಹ ಕೀಳ್ಮೆಯಲ್ಲಿತ್ತು. ಅಂತಹ ಕಿರುಕುಳ ಸ್ಥಿತಿಯಲ್ಲಿದ್ದ ಹುಟ್ಟು-ಬಡವಾದ ಭಾಷೆಯು ಇಷ್ಟೊಂದು ಮೇಲ್ಮೆಗೆ ಬಂದಿದೆ; ಎಷ್ಟೋ ಶತಮಾನಗಳ ವೈಭವವನ್ನು ಅನುಭವಿಸಿದ ಕನ್ನಡಕ್ಕೆ ಮತ್ತೆ ಹೋರಾಡಿದರೆ ಹೆಗ್ಗಳಿಕೆಯ ಕಾಲವು ಬರಲಿಕ್ಕಿಲ್ಲವೆಂದು ಎಣಿಸುವುದು ಸರಿಯಾದೀತೆ? ಆದುದರಿಂದ ಇನ್ನು ಮೇಲೆ ಕನ್ನಡವು ತಲೆಯೆತ್ತಿ ಮೆರೆಯದಿದ್ದರೆ ಅದು ನಮ್ಮ ತಪ್ಪು ಹೊರತು ಕನ್ನಡನುಡಿಯದಲ್ಲ. ನಾವು ಇಂಬುಳ್ಳವರಾದರೆ, ನಮ್ಮ ಬಾಳು ಇಂಬುಳ್ಳದ್ದಾದರೆ ಕನ್ನಡವು ಇಂಬುಳ್ಳದ್ದು ಆಗುತ್ತದೆ. ಕನ್ನಡದ ಕಂಪನ್ನು ಸವಿದವರು ಕನ್ನಡದಲ್ಲಿ ನಂಬುಗೆಯುಳ್ಳವರಾಗಿ, ತಮ್ಮ ನಾಡಿನ ಮತ್ತು ನುಡಿಯ ಹೆಚ್ಚಳಕ್ಕಾಗಿ ಕೆಚ್ಚೆದೆಯಿಂದ ಮುಂದೆ ಬರಬೇಕು. ಅಂಜಿ, ಅಳುಕಿ ನಡೆದು ನಮ್ಮ ಬಾಳು ಕಿರಿದಾಗಿದೆ; ಕಿರಿದಾಗಿರುವ ಬಾಳು ಹಿರಿದಾಗಬೇಕಾಗಿದೆ. ನಾವು ಹಿಗ್ಗಿದರೆ ನಮ್ಮ ನಾಡು ಹಿಗ್ಗುವುದು. ನುಡಿ ಹಿಗ್ಗುವದು. ನಾವು ಕುಗ್ಗಿದುದರಿಂದ ನುಡಿ ಕುಗ್ಗಿದೆ. ಕುಣಿಯಲು ಬಾರದವನಿಗೆ ನೆಲ ಡೊಂಕು. ಕನ್ನಡಕ್ಕೆ ಹೆಸರಿಡದೆ ಕನ್ನಡಕ್ಕೆ ಹೆಸರು

ತನ್ನಿರಿ. ಕನ್ನಡಕ್ಕೆ ಹೆಸರು ಬರಬೇಕಾಗಿದ್ದರೆ ನೀವು ಹೆಸರಾಗಿರಿ. ಹೆಸರಾದ ಮೇಲೆ, ಕನ್ನಡಿಗರೆಂದು ಹೇಳಿಕೊಳ್ಳಲು ನಾಚಿಕೊಳ್ಳುವ ಕೃತಘ್ನತನವನ್ನು ಮಾಡಬೇಡಿರಿ. ಕನ್ನಡಕಂದರು ಜಗದ್ವಂದ್ಯ ಮಹಾಪುರುಷರಾದಾಗ, ಕನ್ನಡದ ಒಳ್ಗಂಪಿಗೆ ಮನ ಸೋಲದ ಮಾನವನಾರು ?

ಶಂ. ಬಾ. ಜೋಶಿ.

೩ ವಚನಕಾರರ ವೀರ ಸಂದೇಶವು.

ಬನ್ನಿರಿ. ಎಲ್ಲರೂ ಬನ್ನಿರಿ. ದೊಡ್ಡವರು ಚಿಕ್ಕವರು, ಸ್ತ್ರೀಯರು ಪುರುಷರು, ಹೊಲೆಯರು ಬ್ರಾಹ್ಮಣರು, ಸಮಗಾರರು ಅರ್ಚಕರು, ಆಳುಗಳು ಅರಸರು .... ಬನ್ನಿರಿ, ಎಲ್ಲರೂ ಬನ್ನಿರಿ ನಿಮ್ಮೆಲ್ಲರಿಗೆ ಪರಮ ಸುಖವು ಬೇಕಾಗಿದ್ದರೆ ಇತ್ತ ಬನ್ನಿರಿ. ನಿಮ್ಮ ನಿಮ್ಮ ಕ್ಷುದ್ರ ಅಹಂಭಾವಗಳನ್ನು ಮರೆಯಿರಿ ನಾವು ಆ ಕುಲದವರು, ಈ ಕುಲದವರು ... ಎಂಬ ವೃಥಾಭಿಮಾನವನ್ನು ತೊರೆಯಿರಿ ನಿಮ್ಮಲ್ಲಿರುವ ಶಕ್ತಿಗಳನ್ನೆಲ್ಲ ವಿಶ್ವಸಂಗೀತದೊಡನೆ ಮೇಳಗೂಡಿಸಲು ಕೊಟ್ಟ ವಿವಿಧ ವಾದ್ಯಗಳಿರುವವು. ಅವುಗಳನ್ನು ತಿದ್ದಿ, ತೀಡಿ ನೆಟ್ಟಗೆ ಮಾಡಿ, ಸಂಸ್ಕಾರ ಕೊಟ್ಟು ಸರಿಪಡಿಸಿರಿ. ಅವೆಲ್ಲ ಪರಸ್ಪರ ಪೋಷಕವೆ ಇಲ್ಲವೆ ಪೂರಕವೆ ಇರುವವೆಂಬುದನ್ನು ಮರೆಯಬೇಡಿರಿ ನೀವು ಒಂದು ಬೇಸೂರ, ಬೇತಾಲ, ಭಯಾನಕ ಬಡಿದಾಟದಲ್ಲಿ ತೊಡಗಿರುವಿರಿ ಎಂಬ ಕಲ್ಪನೆಯನ್ನು ಕಿತ್ತಿಹಾಕಿರಿ ನೀವು ಕಿವಿಗೊಟ್ಟು ಕೇಳಿರಿ. ಅಕೋ, ಇದು ಶಿವಲೋಕದ ಸುಂದರ ಸಂಗೀತವು. ಭವ್ಯವಾದ ಅನಂತ ಸೂರ್ಯಮಂಡಲಗಳೆಲ್ಲ ಈ ಸಂಗೀತದೊಡನೆ ತಾಲ ಹಿಡಿದು ಕುಣಿಯುತ್ತಿರುವವು.... ಈ ದಿವ್ಯ ಸಂಗೀತದಲ್ಲಿ ನೀವೆಲ್ಲರೂ ಮೇಳಗಾರರಿರುವಿರಿ. ನಿಮ್ಮ ನಿಮ್ಮ ಸ್ವರಗಳನ್ನು ಇದರಲ್ಲಿ ಕೂಡಿಸಿ ಇದನ್ನು ಇನ್ನೂ ಹೆಚ್ಚು ಸುರಮ್ಯ ಮಾಡಿರಿ. ಈ ಸಂಗೀತದೊಡನೆ ಹೆಜ್ಜೆಯಿಕ್ಕಿ ಸುಖದಲ್ಲಿ ನಲಿದಾಡುತ್ತ, ಪರಮಸುಖದತ್ತ ಸಾಗಿರಿ. ನೀವು ಹೊರಟಿರುವುದು ಶಿವಲೋಕದ ಯಾತ್ರೆಗೆ. ನಿಮ್ಮ ಶಕ್ತಿಗಳ ಪುಷ್ಪಾಂಜಲಿಯು ನಿಮ್ಮ ಕೈಯಲ್ಲಿದೆ. ಅವು ಬಾಡದಂತೆ, ಬತ್ತದಂತೆ, ಅತ್ತಿತ್ತ ಬೀಳದಂತೆ, ಆ ಸುಕೋಮಲ ಹೂಗಳನ್ನು ಎಚ್ಚರದಿಂದ ಒಯ್ದು, ಅವುಗಳನ್ನು ಶಿವಚರಣದಲ್ಲಿ ಅರ್ಪಿಸುವ ಭಾರವು ನಿಮ್ಮದಿದೆ. ನಿಮ್ಮ ಅಂಜಲಿಯು ಅಲ್ಲಿ ಸಲ್ಲಬೇಕಾಗಿದ್ದರೆ, ನಿಮ್ಮ ಕಾಯವಚಮನಗಳು ಶುದ್ಧವಿರಬೇಕು. ನಿಮ್ಮ ಭಾವವು ಅನನ್ಯವಿರಬೇಕು ನೀವು ನಡೆಯುವ ದಾರಿಯು ಕಠಿಣವಿರಬಹುದು ಆದರೆ ಜೈತ್ರಯಾತ್ರೆಗೆ ಹೊರಟವರ ವೀರಭಾವವು ನಿಮ್ಮಲ್ಲಿ ನೆಲೆಸಲಿ .... ಏಳಿರಿ! ಧೈರ್ಯಗೊಳ್ಳಿರಿ!! ಧರ್ಮಪಥವನ್ನು ಹಿಡಿಯಿರಿ! ಮತ್ತು ಧರ್ಮಸಾಮ್ರಾಜ್ಯದ ನಿವಾಸಿಗಳಾಗಿ ಪರಮಸುಖದ ಅಧಿಕಾರಿಗಳಾಗಿರಿ.

—ದಿವಾಕರ.

---

೫ ವಿರಾಮಚಿಹ್ನಗಳು.

೧ ಅಂದರೇನು?

ನಾವು ಮಾತಾಡುವಾಗ ಅಲ್ಲಲ್ಲಿ ನಿಲ್ಲುವುದುಂಟು. ಅದರಂತೆ ಬರೆಯುವಾಗಲೂ ನಿಲ್ಲಬೇಕಾಗುವುದು. ಅರ್ಥವು ಸುಲಭವಾಗಬೇಕಾದುದೇ ಇದರ ಉದ್ದೇಶ. ಈ ನಿಲ್ಲುವ ಸ್ಥಲವನ್ನು ಸೂಚಿಸುವ ಚಿಹ್ನಗಳೇ ವಿರಾಮಚಿಹ್ನಗಳು.

೨ ಏಕೆ ಬೇಕು?

೧) ಅರ್ಥವ್ಯಕ್ತಿಯು ಅವುಗಳ ಕಾರ್ಯದಲ್ಲಿ ಒಂದು. ಅವುಗಳನ್ನು ಉಪಯೋಗಿಸುವವರಿಂದ ಬರಹದಲ್ಲಿ ಸಂದಿಗ್ಧತೆಯು ಉಳಿಯುವದಿಲ್ಲ. ವಾಕ್ಯದಲ್ಲಿಯ ಬೇರೆ ಬೇರೆ ಶಬ್ದಗಳ ಹಾಗೂ ಶಬ್ದಸಮೂಹಗಳ ಪರಸ್ಪರ ಸಂಬಂಧವು ಸ್ಪಷ್ಟವಾಗುವದು.

೨) ನಾವು ಮಾತಾಡುವಾಗ ನಮ್ಮ ಭಾವವನ್ನು ಧ್ವನಿಯ ವಿಶಿಷ್ಟ ಏರಿಳಿತಗಳಿಂದ ಸೂಚಿಸುವೆವು. ಬರಹದಲ್ಲಿ ಅದೇ ಕೆಲಸವು ಈ ಚಿಹ್ನಗಳಿಂದ ನೆರವೇರುವುದು.

೩ ಉಪಯೋಗವು :

೧ ಪೂರ್ಣವಿರಾಮವು (.) :—

ವಾಕ್ಯವು ಮುಗಿದೊಡನೆಯೂ-ಶಬ್ದಗಳ ಸಂಕ್ಷಿಪ್ತ ರೂಪಗಳಲ್ಲಿಯೂ ಇದು ಬರುವುದು.

ಉ:- ಇಂದು ವೀ. ಸಿ. ಯವರ ಸುಶ್ರಾವ್ಯವಾದ ಕಾವ್ಯಗಾಯನವಾಯಿತು.
ಕೇ. ಪಿ. ಸಿ. ಸಿ. (ಕರ್ನಾಟಕ ಪ್ರಾಂತಿಕ ಕಾಂ. ಕಮಿಟಿ)

೨ ಅರ್ಧವಿರಾಮ (;) :—

ಇದು ಒಂದಕ್ಕೊಂದು ಸಂಬಂಧವಿದ್ದ ಚಿಕ್ಕಚಿಕ್ಕ ವಾಕ್ಯಗಳ ನಡುವೆ ಬರುವುದು.

ಉ:—ನೀನು ಕಲಿಯಬೇಕು, ಕಲಿಸಬೇಕು;
ಬೆಳೆಯಬೇಕು, ಬೆಳಿಸಬೇಕು.
ಮಾತು ಮಾಣಿಕ ; ಆದರೆ ಮೌನ ಮಲ್ಲಿಗೆ.
ಮತಿಯಂತೆ ಮಾತಿಲ್ಲ ; ಮಾತಿನಂತೆ ಕೃತಿಯಿಲ್ಲ.

೩) ಸ್ವಲ್ಪವಿರಾಮ (,):—ಇದಕ್ಕೆ **ಅಲ್ಪವಿರಾಮವೆಂದೂ** ಹೇಳುವದುಂಟು.

ಇದನ್ನು ಕೆಳಗೆ ಕಾಣಿಸಿದ ಸ್ಥಳಗಳಲ್ಲಿ ಉಪಯೋಗಿಸುವರು.

೧) ವಾಕ್ಯದಲ್ಲಿಯ ಶಬ್ದಮಾಲಿಯನ್ನು ಬಿಡಿಸಲು:—

ಉ:—ನಾನು ತನುವನ್ನು, ಮನವನ್ನು, ಧನವನ್ನು, ರಾಷ್ಟ್ರಕಾರ್ಯಕ್ಕೆ ಧಾರೆಯೆರೆಯಬಯಸುವೆ. ಸತ್ಯವು, ಪ್ರೇಮವು, ಸಂಯಮವು, ಧರ್ಮದ ತಳಹದಿಯು.
ನಾನಲ್ಲಿಗೆ ತೆರಳಿ, ಕೆಲಸವನ್ನೆಲ್ಲ ತೀರಿಸಿ, ಮರಳಿ ಬಂದೆ.

೨) ವಾಕ್ಯದಲ್ಲಿಯ ಶಬ್ದಯುಗಲಗಳನ್ನು ಬಿಡಿಸಲು:—

ಉದಾ:—ಉಚ್ಚ-ನೀಚರೂ, ಬಡವ-ಬಲ್ಲಿದರೂ, ಜಾಣ-ಕೋಣರೂ, ಎಲ್ಲರೂ ಮಾನವರೇ ಅಲ್ಲವೇ ?
ನಾವು ಭಕ್ತ-ಮುಕ್ತರೂ, ಶಾಂತ-ದಾಂತರೂ ಆಗಬೇಕು.

೩) ಸಂಬೋಧನೆ ಪದದ ತರುವಾಯ:—

ಉ:—ಮಗು, ಮಂಗನಂತಲೆಯದಿರು ದೇವ, ಕಾವುದು ಈ ಪಾತಕಿಯನ್ನು

ಸೂಚನೆ :—ಸಂಬೋಧನವು ತೀರ ಪ್ರಬಲವಾದುದಿದ್ದರೆ ಅಲ್ಲಿ ಭಾವಬೋಧಕ ಚಿಹ್ನೆವನ್ನಿಡಬೇಕು.

ಉ:—ರಕ್ಕಸಿಯೆ ! ನುಂಗಿದೆಯಾ ಈ ಕೂಸನ್ನು ?

೪) ಒಂದು ಶಬ್ದವು ಗುಪ್ತವಿರುವಲ್ಲಿ:—

ಉ:—ನಾನು ಪಡೆದುದು ಹೊಸ ಕಣ್ಣನ್ನು; ಅವನು, ಮಣ್ಣನ್ನು.

೪) ಪ್ರಶ್ನಚಿಹ್ನ:— (?) :—

ಪ್ರಶ್ನೆಗಳ ಕೊನೆಯಲ್ಲಿಯೂ, ನಡುವೆ ಸಂದೇಹವನ್ನು ಸೂಚಿಸುವಾಗಲೂ, ಇದನ್ನುಪಯೋಗಿಸುವರು.

ಉದಾ:—ನಿನಗೆ ನಗಲು ಬರುವದಿಲ್ಲವೇ ?

೫) ಭಾವಚಿಹ್ನ:—(!):—

ಅತಿಯಾದ ಸುಖ-ದುಃಖ, ಆಶ್ಚರ್ಯ-ನಿಂದೆ, ಇತ್ಯಾದಿ ಭಾವಗಳನ್ನು ಸೂಚಿಸುವ ಪದಗಳ ಕೊನೆಯಲ್ಲಿ ಇದು ಬರುವದು.

ಉ:—ಭಲೆ ! ಎಂಥ ಮೇಲ್ತರದ ಗೆಲವಿದು !
ಅಬ್ಬ ! ಏನು ಆರ್ಭಟ ಈ ಹುಂಬನದು !
ಅಯ್ಯೋ ! ಕೆಟ್ಟೆನು ! ಇನ್ನೆನ್ನ ಕಾಯುವವರಾರು !
ಛೀ ! ಸೀಚಾ ! ನೀನೆತ್ತ ? ಶಿವನೆತ್ತ ? ಹೋಗತ್ತ ಮರುಳೆ !

೭) ವಿವರಣ ಚಿಹ್ನ(:):—

ವಾಕ್ಯದ ಅರ್ಥವನ್ನು ವಿವರಿಸುವಲ್ಲಿ ಇದು ಬರುವುದು.

ಉ:—ನುಡಿದಂತೆ ನಡೆ : ಮಾತಿಗೂ ಕೃತಿಗೂ ಸಂಬಂಧವಿರಲಿ.

೭) ಗೀಟು (—):—

೧) ವಿಚಾರದ ಓಘವು ಒಮ್ಮೆಲೆ ನಿಂತುದನ್ನು-ಅದರಲ್ಲಿ ಒಮ್ಮೆಲೆ ಆದ ಬದಲನ್ನು ಇದು ಸೂಚಿಸುವುದು.

ಉ:—ನಾನಿಂದು ಪುಲಿಕೇಶಿಯಾಗಿದ್ದರೆ—ಇರಲಿ, ಅದರ ಆಲೋಚನೆ ಈಗೇಕೆ!

೮) ವಿವರಣ ಚಿಹ್ನ ಮತ್ತು ಗೀಟು (:—)

ಇದು ಉದಾಹರಣೆ-ವಿವರಣೆಗಳನ್ನು ಕೊಡುವಾಗ ಬರುವುದು.

ಉ:—ಪುರುಷಾರ್ಥಗಳು ನಾಲ್ಕು. ಅವು ಯಾವವೆಂದರೆ:—ಧರ್ಮ, ಅರ್ಥ, ಕಾಮ, ಮೋಕ್ಷ.
ಸುಭಾಷಿತ ಸೇರದವರಾರೆಂದರೆ:—ಮುಕ್ತರು, ಪಶುಗಳು.

೯) ಅವತರಣ ಚಿಹ್ನ (“ ”):—

ಅವತರಣಗಳನ್ನು ಬರೆವಾಗಲೂ, ಸ್ವರೂಪಾನುವಾದದಲ್ಲಿ ಪ್ರತ್ಯಕ್ಷ ಆಡಿದ ಮಾತುಗಳನ್ನು ಬರೆವಾಗಲೂ, ಇದನ್ನು ಉಪಯೋಗಿಸುವರು.

ಉದಾ:—“ಕುಲಂ ಕುಲಮಲ್ತು; ಛಲಂ ಕುಲಂ” ಎಂದುಸುರಿದನಾ ಕರ್ಣರಾಯ.
ನಮ್ಮ ಸಮಾಜವು ಒಂದು “ಶಿಸ್ತಿಲ್ಲದ ಸಂತೆ.”

ಅಭ್ಯಾಸ ೮.

ಮುಂದಿನ ಅವತರಣಗಳಲ್ಲಿ ಸರಿಯಾದ ವಿರಾಮಚಿಹ್ನಗಳನ್ನು ಸೇರಿಸಿ ಬರೆಯಿರಿ.

೧) ನನ್ನ ಹೃದಯಮಣಿಗಳಿರಾ ನೀವು ಈ ದಿನ ನನ್ನನ್ನು ಬಿಟ್ಟು

ಹೋಗುವಾಗ ನನಗೆ ಆಗುವ ದುಃಖವನ್ನು ಯಾವ ಪರಿಯಿಂದ ಬಣ್ಣಿಸಲಿ ನೀವಿಲ್ಲಿ ನಿರಂತರ ನಿವಾಸಿಗಳಾಗಿರಲಿಕ್ಕೆ ಬಂದವರಲ್ಲ ಆದರೆ ಇಲ್ಲಿ ವಿದ್ಯೆಕಲಿತು ವಿಶ್ವಪ್ರಪಂಚದಲ್ಲಿ ವೀರಚರಿತ್ರರಂತೆ ವರ್ತಿಸುವ ಆಕಾಂಕ್ಷೆಯಿಂದ ಬಂದಿರುವಿರಿ ಮನುಷ್ಯನು ಮಲಗುವದು ಪುನಃ ಎದ್ದು ಉತ್ಸಾಹದಿಂದ ಕಾರ್ಯಮಾಡಬೇಕೆಂದು ಮನುಷ್ಯನು ಜ್ಞಾನಪಡೆಯುವದು ತಾನು ಸಮರ್ಥನಾಗಿ ವೀರಚರಿತನಾಗಬೇಕೆಂದು ಹಾಗೆ ಮನುಷ್ಯನು ಕಲಿಯುವದು ಅಥವಾ ಆಶ್ರಮಕ್ಕೆ ಬರುವುದು ಅವನು ಪುನಃ ವಿಶಾಲ ಜಗತ್ತಿನಲ್ಲಿ ತನ್ನ ಕರ್ತವ್ಯವನ್ನು ಉತ್ತಮ ರೀತಿಯಿಂದ ಮಾಡಲೋಸುಗ ಹೋಗುವದಕ್ಕಾಗಿ ಸಾಧನವು ಎಷ್ಟೇ ಮನೋಹರವಿದ್ದರೂ ಮನುಷ್ಯನು ಸಾಧ್ಯವನ್ನುಮರೆಯಕೂಡದು ಜ್ಞಾನದ ಪರೀಕ್ಷೆ ಕರ್ಮದಲ್ಲಿ ಹೊರತು ಕಲ್ಪನೆಯಲ್ಲಲ್ಲ ವಿದ್ಯೆಯ ಪರೀಕ್ಷೆ ಪ್ರಪಂಚದಲ್ಲಿ ಹೊರತು ವಿದ್ಯಾಲಯದಲ್ಲಿ ಅಲ್ಲ.

೨) ಮುಚ್ಕೊ ಬಾಯಿ ಸಾಕು ಬೇಕಾದರೆ ತಗೊಂಡು ಹೋಗು ಇಲ್ಲದಿದ್ದರೆ ಬಿಟ್ಟು ಹೋಗು ಅಪ್ಪಾ ಒಂದು ದಿನ ಕೈಲಾಗದೆ ಬರದಿದ್ದಕ್ಕೆ ಒಂದು ವಾರದ ಸಂಬಳ ಹಿಡಿದು ಬಿಟ್ಟರೆ ಹ್ಯಾಗಪ್ಪಾ ಮಾಡೋದು ನೋಡಿದರೆ ಕೂಲಿ ದರ್ಬಾರು ನೋಡಿದರೆ ದಿವಾನರಿಗಿಂತಲೂ ಹೆಚ್ಚು ಅಂಥಾ ದರ್ಬಾರೇನು ಮಾಡಿದೆನಪ್ಪಾ ನಾನು ದರ್ಬಾರಲ್ಲದೆ ಮತ್ತೇನು ನಿನಗೆ ಕೆಲಸಕ್ಕೆ ಬರೋದಕ್ಕೆ ಕೈಲಾಗದಿದ್ದರೆ ಬಂದು ನಮಗೆ ತಿಳಿಸಬೇಕಾಗಿತ್ತು.

೩) ಈ ಗ್ರಂಥವನ್ನು ಓದಬೇಕೆಂದು ಇದನ್ನು ಬರೆದವನು ಯಾರನ್ನು ಆಗ್ರಹಪಡಿಸುವುದಿಲ್ಲ ಓದದಿರುವ ಸ್ವಾತಂತ್ರ್ಯವಿರಲು ಓದಿ ಸಿಟ್ಟಾಗುವದು ಥರವಲ್ಲ ಒಮ್ಮೆಯಾದರೂ ಈ ಗ್ರಂಥವನ್ನು ಬೆಲೆಗೆ ಕೊಂಡರೆ ಅದನ್ನು ಖಾಲೀ ಉಕ್ಕಿನ ಟ್ರಂಕಿನೊಳಗಾಗಲಿ ಅದರಂತೆ ಭದ್ರ ಬುರುಡೆಯಲ್ಲಾಗಲಿ ಇರಿಸಿ ನಿತ್ಯವೂ ಪೂಜಿಸಿದಲ್ಲಿ ಮಹಾಪುಣ್ಯವಿದೆಯೆಂದೂ ಮುಂದಿನ ಜನ್ಮದಲ್ಲಿ ಅವರಿಗೆ ಮಿದುಳೆಂಬ ಕೆಟ್ಟ ಹೊರೆಯು ತಪ್ಪೀತೆಂದೂ ಇಲ್ಲಿ ಸೂಚಿಸುತ್ತೇವೆ.

೬ ಕತೆಗಳು.

೧ ಅಂದರೇನು ?

ಕತೆಯನ್ನರಿಯದ ಮಾನವನಿಲ್ಲ. ಮಾನವನ ಜೀವನದೊಡನೆ ಬೆಳೆದು ಬಂದ ವಿಷಯವದು. ಬಾಲ್ಯದಲ್ಲಿಯ ಅಜ್ಜಿಯ **ಕಟ್ಟುಕತೆಗಳು**-ಸ್ವಲ್ಪ ತಿಳಿವು ಮೈದಾಳಿದೊಡನೆ ಕೇಳಿದ ಹಿರಿಯರ **ನೀತಿಕತೆಗಳು**-ಮುಂದೆ ಪ್ರೌಢಾವಸ್ಥೆಯಲ್ಲಿ ಓದಿದ ಸಾಹಿತಿಗಳ **ಸಣ್ಣಕತೆಗಳು**-ಕತೆಯ ಮೂರು ಪ್ರಧಾನ ಅವಸ್ಥಾಂತರಗಳು. ಮೊದಲನೆಯದರ ಉದ್ದೇಶವು ಬರೀ **ರಂಜನೆ**; ಎರಡನೆಯದರ ಗುರಿಯು ಬರೀ **ಬೋಧನೆ**; ಮೂರನೆಯದರಲ್ಲಿ ಇವೆರಡರ **ಮಧುರ ಮೀಲನ**ವಾಗಿರುವುದು.

೨ ಬರೆಯುವುದೇತಕ್ಕೆ ?

ಕತೆಗಳಿಂದ ರಂಜನವಾಗುವದಲ್ಲದೆ ನಮ್ಮ ಕಂಗಳಲ್ಲಿ ಸರಿಯಾದ ಅಂಜನವು ಬಿದ್ದು ಅವು ಚೆನ್ನಾಗಿ ತೆರೆಯುವವು. ಈ ಮೇರೆಗೆ **ಪ್ರಮೋದ ಪ್ರಬೋಧ**ಗಳೆರಡೂ, ಆನಂದ-ಬೋಧೆಗಳೆರಡೂ, ಇವುಗಳಿಂದ ಸಾಧ್ಯವಾಗುವ ಕಾರಣ ಅವುಗಳ ಮಹತ್ವವು ಅಷ್ಟಿಷ್ಟೆಂದಲ್ಲ. ಮೇಲಾಗಿ **'ಸಣ್ಣ ಕತೆಯು' ಮುಂದಿನ ಯುಗದ ಒಂದು ಪ್ರಧಾನ ಕಲಾಕೃತಿಯು.** ಆದುದರಿಂದ ಅದರ ಪರಿಚಯವನ್ನು ಚೆನ್ನಾಗಿ ಮಾಡಿಕೊಳ್ಳುವದು ಅತ್ಯವಶ್ಯ.

'ಸಣ್ಣ ಕತೆಯು ಅಲ್ಪಜೀವಿಗಳ ಮಹಾಕಾವ್ಯ' ಅದು ಸಾಮಾನ್ಯರ ಜೀವನದಲ್ಲಿಯ ಕೆಲವು ಉಜ್ವಲ ಪ್ರಸಂಗಗಳನ್ನೂ-ಕೆಲವು ಅಕಲ್ಪಿತ ಅಧಃಪತನದ ಪ್ರಸಂಗಗಳನ್ನೂ ಚಿತ್ರಿಸುವುದು. ಹೀನ-ದೀನರ ಚಾರಿತ್ರ್ಯವನ್ನು ಚಿತ್ರಿಸುವ ಹಿರಿದಾದ ಸಾಧನವಿದು. ಆದುದರಿಂದ ಇಂಥ ಸಾಧನವನ್ನು ಸರಿಯಾಗಿ ಉಪಯೋಗಿಸುವ ಕೌಶಲವನ್ನು ಮೊದಲಿನಿಂದಲೇ ಪಡೆಯುವುದುಚಿತವಲ್ಲವೇ!

ಕತೆಯ-ಸ್ಥಾನವು-ಪರಿಚ್ಛೇದ ನಿಬಂಧಗಳ ಮಧ್ಯದಲ್ಲಿದೆ. ಅದು ಪರಿಚ್ಛೇದಗಳ ಮಾಲೆಯು. ಅದನ್ನು ಬರೆಯಬಲ್ಲವನು. ನಿಬಂಧವನ್ನು ಬರೆಯಲು ಬೇಕಾದ ಕೆಲವು ಸಂಗತಿಗಳನ್ನು ಸಹಜವಾಗಿ ಅರಿತುಕೊಳ್ಳುವನು.

೩ ಬರೆಯುವುದೆಂತು?

ಕತೆಗಳ ಬರಹದಲ್ಲಿ ಮೂರು ಮೆಟ್ಟಲುಗಳನ್ನು ಕಲ್ಪಿಸಬಹುದು. ಅವನ್ನು ಕ್ರಮದಿಂದ ಏರಿದವನು ಕತೆಗಳನ್ನು ಚೆನ್ನಾಗಿ ಬರೆಯ ಬಲ್ಲನು.

೧ ನೆಯ ಮೆಟ್ಟಲು:—

೧) ಮಾದರಿಯ ಕತೆಯೊಂದನ್ನು ಚೆನ್ನಾಗಿ ಓದಿ ಅದರ ಮುಖ್ಯಾಂಶಗಳನ್ನು ಬರೆದಿಡಬೇಕು.

೨) ತರುವಾಯ ಪುಸ್ತಕವನ್ನು ಮುಚ್ಚಿಟ್ಟು ಆ ಕತೆಯನ್ನು ಬರೆಯಲು ಯತ್ನಿಸಬೇಕು.

೩) ಕೊನೆಗೆ ಮೂಲಕತೆಯೊಡನೆ ಅದನ್ನು ಸರಿಹೋಲಿಸಿ ಅದರಲ್ಲಿ ಅವಶ್ಯವಿದ್ದ ತಿದ್ದುಪಡಿಯನ್ನು ಮಾಡಬೇಕು.

೪) ಬರಬರುತ್ತ ಕತೆಯನ್ನು ಓದಿದ ಕೂಡಲೆ ಈ ರೀತಿ ಬರೆಯುವದನ್ನು ಮಾಡದೆ, ಕೆಲಕಾಲ ಕಳೆದ ಮೇಲೆ ಮಾಡಬೇಕು.

೨ ನೆಯ ಮೆಟ್ಟಲು:—

೧) ಕತೆಯ ಕೊಟ್ಟ ಕೆಲವು ಅಂಶಗಳನ್ನು ಚೆನ್ನಾಗಿ ಪರಿಶೀಲಿಸಿ ಅವುಗಳ ಸಹಾಯದಿಂದ ಮನಸ್ಸಿನಲ್ಲಿಯೆ ಕತೆಯೊಂದನ್ನು ಕಟ್ಟಬೇಕು. ಈ ಅಂಶಗಳ ಅಸ್ಥಿಪಂಜರದಲ್ಲಿ ಜೀವಕಳೆಯನ್ನು ತುಂಬಬೇಕು.

೨) **ವರ್ಣನೆಗಳೂ-ಸಂಭಾಷಣೆಗಳೂ** ಕತೆಯ ಸ್ನಾಯು, ಚರ್ಮಗಳು; **ಭಾವವು** ಅದರ ಜೀವ. ಇವನ್ನೆಲ್ಲ ಉಚಿತ ಸ್ಥಲದಲ್ಲಿ ಸೇರಿಸಿ ಕತೆಗೆ ಸಜೀವ ವಸ್ತುವಿನ ಸೌಂದರ್ಯವನ್ನು ನೀಡಬೇಕು. ವರ್ಣನೆಯಲ್ಲಿ ಸುಸಂಗತಿಯನ್ನು ಕಾಯ್ದು ಸಂಭಾಷಣೆಯಲ್ಲಿ ಪಾತ್ರೋಚಿತ ಮಾತುಗಳನ್ನು ಉಪಯೋಗಿಸಬೇಕು.

೩) ಅಂದರೆ ಕತೆಯು ಅಂದವಾಗಿ ಓದುಗರಿಗೆ ಆನಂದವನ್ನು ದಯಪಾಲಿಸುವುದು.

೩ ನೆಯ ಮೆಟ್ಟಲು:—

೧) ಕೊಟ್ಟ ವಿಷಯವನ್ನು ಕುರಿತು ಹೊಸ ಕಥೆಯನ್ನು ಕಲ್ಪಿಸುವುದು. ಇದಕ್ಕೆ ಕಲ್ಪನಾಶಕ್ತಿಯು ಸಾಕಷ್ಟು ಬಲಿಯಲು ಬೇಕು.

ವಿಷಯಕ್ಕೆ ತಕ್ಕ ಸನ್ನಿವೇಶಗಳನ್ನೂ ಅದಕ್ಕೆ ತಕ್ಕ ಪಾತ್ರಗಳನ್ನೂ ನಿರ್ಮಿಸುವ ಶಕ್ತಿ ಇರಲು ಬೇಕು.

೨) ಮೇಲಿನ ಎರಡು ಮೆಟ್ಟಲುಗಳನ್ನೇರಿದವನು ಮುಂದಿನದನ್ನು ಏರಲು ಸಮರ್ಥನಾಗುವನು.

ಕೆಲವು ಮಾದರಿಯ ಕತೆಗಳು.

೧ ಮೂರ್ಖಶಿಷ್ಯರು.

ಓರ್ವ ಜಾಣ ಗುರುಗಳಿಗೆ ಹಲವು ಮರುಳು ಶಿಷ್ಯರಿದ್ದರು. ಇಂಥ ಗುರುಗಳಿಗೆ ಇಂಥ ಶಿಷ್ಯರು ಹೇಗೆ ಎಂಬುದೊಂದು ಬಿಡಿಸಬಾರದ ಒಗಟು. ಬೆಳಕಿನ ಅಡಿಯಲ್ಲಿ ಕತ್ತಲಿರುವುದಿಲ್ಲವೇ! ಇದೇ ಅದರ ಉತ್ತರ.

ಗುರುಗಳೊಮ್ಮೆ ಬೇರೊಂದು ಹಳ್ಳಿಗೆ ನಡೆದಿದ್ದರು. ಶಿಷ್ಯರು ಅವರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ, ಅದನ್ನವರು ಹೊತ್ತುಕೊಂಡಿದ್ದರು. ದಾರಿಯಲ್ಲಿ ಪಲ್ಲಕ್ಕಿಯು ಒಮ್ಮೆ ಬಾಗಿದ್ದರಿಂದ ಒಳಗಿನ ನೀರಿನ ಕಮಂಡಲುವು ಕೆಳಗೆ ಬಿದ್ದಿತು. ಧ್ಯಾನಮಗ್ನರಾದ ಗುರುಗಳಿಗೆ ಅದು ಕಾಣಲಿಲ್ಲ. ಉಳುಕೊಳ್ಳುವ ಸ್ಥಳಕ್ಕೆ ಬಂದು ನೋಡುವಷ್ಟರಲ್ಲಿ ಕಮಂಡಲವು ಇರಲ್ಲಿಲ್ಲ.

ಆಗ ಗುರುಗಳು ಆ ಮರುಳರನ್ನು ಕರೆಯಿಸಿದರು. ಶಿಷ್ಯರು ಅವರೆದುರು ಕೈಯುಗಿದು ನಿಂತರು. ಗುರುಗಳು ಸಿಟ್ಟಿನಿಂದ ಗದ್ದರಿಸಿದರು.

" ಕಮಂಡಲುವೆಲ್ಲಿ? "

" ದಾರಿಯಲ್ಲಿ? ಮಹಾಸ್ವಾಮಿ! "

" ನೀವದನ್ನು ತರಲಿಲ್ಲೇಕೆ? "

" ನಮಗೆ ಹಾಗೆ ತಾವು ತಿಳಿಸಿರಲಿಲ್ಲ ಪ್ರಭೋ! "

" ಮಹಾ ಮೂರ್ಖರೇ! ದಾರಿಯಲ್ಲಿ ಬಿದ್ದ ಒಡವೆಗಳನ್ನು ತರಬೇಕೆಂದು ಬೇರೆ ಹೇಳಬೇಕೇ! ಇಷ್ಟು ತಿಳಿಯಬಾರದೇ ನಿಮಗೆ? "

ಗುರುಗಳು ಕೋಪದಿಂದ ಕೆಂಡದಂತಾದರು.

" ಇನ್ನು ಮುಂದೆ ಎಚ್ಚರ! ಪಲ್ಲಕ್ಕಿಯಿಂದೇನಾದರು ಬಿದ್ದರೆ ಅದನ್ನು

ತಪ್ಪದೆ ತರಬೇಕು. ತಿಳಿಯಿತೇ!" ಹೀಗೆ ಹೇಳಿ ಪಲ್ಲಕ್ಕಿಯಲ್ಲಿಯ ವಸ್ತುಗಳ ಪಟ್ಟಿಯೊಂದನ್ನು ಶಿಷ್ಯರ ಕೈಯಲ್ಲಿ ಕೊಟ್ಟರು.

ಕೆಲವು ದಿನಗಳ ತರುವಾಯ ಅವರಿಗೆ ಹಳ್ಳ ಒಂದನ್ನು ದಾಟಿ ಹೋಗಬೇಕಾಗಿತ್ತು. ಹಳ್ಳವು ನೆರೆಯಿಂದ ತುಂಬಿ ಸೂಸುತ್ತಿತ್ತು. ಆದರೂ ಅವರೊಳಗಿಂದ ಶಿಷ್ಯರು ಧೈರ್ಯದಿಂದ ಹಾದು ನಡೆದರು. ಒಂದೆರಡು ಹೆಜ್ಜೆಯಲ್ಲಿಯೇ ಆಚೆಯ ದಂಡೆಯನ್ನು ಮುಟ್ಟುವವರು. ಇಷ್ಟರಲ್ಲಿಯೇ ಒಬ್ಬನ ಕಾಲು ಜಾರಿದ್ದರಿಂದ ಪಲ್ಲಕ್ಕಿಯು ಹೊರಳಿತು. ಗುರುಗಳು ಪ್ರವಾಹದಲ್ಲಿ ಉರುಳಿದರು.

ಶಿಷ್ಯರು ಅಂತೂ ಇಂತೂ ಮಾಡಿ ದಂಡೆಯನ್ನೇರಿದರು. "ಎಲೆ! ಗುರುಗಳನ್ನು ತೆಗೆಯೋಣಯ್ಯ!" ಎಂದನೊಬ್ಬ. 'ಪಟ್ಟಿಯಲ್ಲಿಯ ಒಡವೆಗಳನ್ನು ಮೊದಲು ನೋಡಿ!' ಎಂದರುಳಿದವರು. ಪಟ್ಟಿಯನ್ನು ತೆಗೆದರು. ಜಾಗ್ರತೆಯಾಗಿ ಓದಿದರು. ಅದರಲ್ಲಿ ಬರೆದಿದ್ದ ಒಡವೆಗಳನ್ನೆಲ್ಲ ಹೊರದೆಗೆದರು. ಗುರುಗಳನ್ನು ಮಾತ್ರ ಬಿಟ್ಟುಬಿಟ್ಟರು.

ಯಾಕಂದರೆ ಅವರ ಹೆಸರು ಪಟ್ಟಿಯಲ್ಲಿರಲಿಲ್ಲ.

ಕತೆಯ ರೂಪರೇಷೆಯು:—ಈ ಕತೆಯಲ್ಲಿಯ ಮುಖ್ಯಾಂಶಗಳನ್ನು ಕೆಳಗೆ ಕಾಣಬಹುದು.

೧ **ಉಪಕ್ರಮ:**—ಜಾಣ ಗುರುಗಳು-ಮೂರ್ಖ ಶಿಷ್ಯರು. ಒಂದು ಬಿಡಿಸಬಾರದ ಸಮಸ್ಯೆ.

೨ **ಕಥಾವಸ್ತು:**—೧)ಗುರುಗಳ ಸಂಚಾರ-ದಾರಿಯಲ್ಲಿ ಕಮಂಡಲು ಪಲ್ಲಕ್ಕಿಯಿಂದ ಬೀಳುವುದು-ಧ್ಯಾನಸ್ಥ ಗುರುಗಳು—ಶಿಷ್ಯರದನ್ನು ಎತ್ತುವದಿಲ್ಲ-ಊರನ್ನು ಮುಟ್ಟಿದಾಗ ಗುರುಗಳು ಅದಕ್ಕಾಗಿ ಶಿಷ್ಯರಿಗೆ ಬಯ್ಯುವರು-ಎಲ್ಲ ಒಡವೆಗಳ ಪಟ್ಟಿಯನ್ನು ಮಾಡಿಕೊಟ್ಟು ಅವೆಲ್ಲವನ್ನು ತರಲು ಹೇಳುವರು.

೨) ಇನ್ನೊಮ್ಮೆ ತುಂಬಿದ ಹಳ್ಳವನ್ನು ದಾಟುವ ಪ್ರಸಂಗ:—ಶಿಷ್ಯರ ಕಾಲು ಜಾರಿ ಪಲ್ಲಕ್ಕಿಯಿಂದ ಗುರುಗಳೂ ಅನ್ಯವಸ್ತುಗಳೂ-ನೀರಿನಲ್ಲಿ ಮುಳುಗಿದವು-ಪಟ್ಟಿಯಲ್ಲಿಯ ಒಡವೆಗಳನ್ನೆಲ್ಲ ತೆಗೆದರು-ಗುರುಗಳನ್ನು ಬಿಟ್ಟರು.

೩ **ಉಪಸಂಹಾರ:**—ಅವರ ಹೆಸರು ಪಟ್ಟಿಯಲ್ಲಿರಲಿಲ್ಲ.

೨ ಎಡಬಿಡಂಗಿ.

ಜರಿರುಮಾಲು ರಾಮರಾಯರು ಪತ್ನೀಪುತ್ರ ಸಮೇತರಾಗಿ ರೈಲಿನಲ್ಲಿ ಬಿಜಯಮಾಡಿಸಿದ್ದರು. ಅವರು ಕುಳಿತಿದ್ದ ಗಾಡಿಯ ಬಳಿ ಕುರುಡನೊಬ್ಬನು ಬಂದು 'ದರಮ ಸೋಮಿ!' ಎಂದ. ರಾಯರು ಪಂಚೆಯ ಜರಿಯನ್ನು ತೀಡುತ್ತ "ಸೂ-ಮಗನೆ! ಧರ್ಮವಂತೆ ಧರ್ಮ! ನಾವು ಧರ್ಮ ಎಂದು ಕೊಡುವುದು, ಈ ಸೂ-ಮಗ ಬೀಡಿ ಹೊಡೆಯುವುದು! ಏನೂ ಇಲ್ಲ ಹೋಗು!" ಎಂದು ಗದರಿಸಿದರು.

'ಒಂದು ಕಾಸು ಸೋಮಿ!'

'ಒಂದು ಕಾಸು ಇಲ್ಲ, ಅರಕಾಸು ಇಲ್ಲ! ತೊಲಗು!'

ಭಿಕ್ಷುಕನು ತೊಲಗಿದನು. ರೈಲೂ ತೊಲಗಿತು.

'ಈ ಸೂ-ಮಕ್ಕಳಿಗೆ ಕೊಡುವದಕ್ಕೆ ನಾವು ಕಷ್ಟಪಟ್ಟು ಸಂಪಾದಿಸುವುದು!' ಎಂದರು ರಾಯರು.

*　　　*　　　*　　　*

'ಅಣ್ಣ ಕಾವೇರಿ ಬಂತು. ಕಾವೇರಿ!' ಎಂದು ರಾಯರ ಮಕ್ಕಳೆಲ್ಲ ಕೂಗಿದರು.

'ಕಾವೇರಿಗೆ ಹಾಕುವದಕ್ಕೆ ಕಾಸು ಎಲ್ಲಾ ಇಟ್ಟುಕೊಂಡಿದ್ದೀರೋ ಇಲ್ಲವೋ?' ಎಂದು ರಾಯರು ಕೇಳಿದರು. **ಕಾವೇರಿಗೆ ಕಾಸೆಸೆಯುವುದು ಕೈವಲ್ಯಕ್ಕೆ ಕಾಲುಮಣೆ** ಎಂದು ಅವರು ಕಲಿತಿದ್ದರು. ಮಕ್ಕಳಿಗೂ ಕಲಿಸುತ್ತಿದ್ದರು.

'ಅಣ್ಣ! ನನ್ನ ಕಾಸೆಲ್ಲೋ ಕಾಣೆ ಅಣ್ಣ!' ಎಂದು ರಾಮರಾಯರ ಎರಡನೆಯ ಮಗಳು ಅಳತೊಡಗಿದಳು.

'ಪರವಾ ಇಲ್ಲಮ್ಮ, ಇನ್ನೊಂದು ಕಾಸು ಕೊಡುತ್ತೇನೆ. ಅಳಬೇಡ, ಎಂದು ರಾಯರು ಎಲ್ಲಿ ಕಳೆದು ಹೋಗುತ್ತದೊ ಎಂಬ ಅವಸರದಿಂದ, ಗಣೇಶನ ಹೊಟ್ಟೆಯಂತಿದ್ದ ತಮ್ಮ ಹಣದ ಚೀಲವನ್ನು ಮಡಲಿಗೆ ಬಗ್ಗಿಸಿಕೊಂಡು ಬೆದಕಿದರು. ಅದರಲ್ಲಿ ಬೆಳ್ಳಿಯ ಎಂಟಾಣೆಗಿಂತ ಚಿಕ್ಕ ನಾಣ್ಯವು ಕಣ್ಣಿಗೆ ಕಾಣಿಸಲಿಲ್ಲ. ರಾಯರು, 'ತೆಗೊ! ತೆಗೊ! ಇದನ್ನೇ

ಹಾಕು!' ಎಂದು ಅವಸರದಲ್ಲಿ ಎಂಟಾಣೆಯ ನಾಣ್ಯವನ್ನೇ ಕಾವೇರಿಗೆ ಬೀಸಾಡಿಸಿ, ಜಿಟ್ಟೆ ಕಡಿದವರಂತೆ ನಿಟ್ಟುಸಿರಿಟ್ಟರು.

ಆ ಚೀಲಕ್ಕೆ ಪುನಃ ಹಣವನ್ನು ತುಂಬಿಕೊಳ್ಳುವಾಗ ರೂಪಾಯಿಗಳ ಮರೆಯಿಂದ ಒಂದು ಬಿಡಿ ಕಾಸು ಇಣಿಕಿ ನೋಡಿ, 'ನೋಡಿದೆಯೇ! ಕೊಟ್ಟೆ ನಿನಗೆ ಗಸ್ತು!' ಎಂದು ಕಣ್ಣು ಹಾರಿಸಿತು.

ರಾಯರದನ್ನು ನೋಡಿದರು. ಬೆಪ್ಪಾದರು. ಗೋಳೋ ಎಂದು ಅತ್ತರು.

—ಜಿ. ಪಿ. ರಾ.

೩ ಅಸಂತೋಷ.

ಕಮಲಕೆರೆಯು ಬಲು ಕಮನೀಯವಾದುದು. ಸುತ್ತಲಿನ ಮರಬಳ್ಳಿಗಳ ಹಸಿರು ಚೌಕಟ್ಟಿನಲ್ಲಿ ಹೊಳೆಯುವ ತಿಳಿಯಾದ ನೀರಿನ ವಿಸ್ತಾರವು ಅದಕ್ಕೆ ಅದ್ಭುತವಾದ ಕನ್ನಡಿಯ ಸೊಬಗನ್ನು ದಯಪಾಲಿಸಿತ್ತು. ಭೂದೇವಿಯ ಸೌಂದರ್ಯವನ್ನು ಪ್ರತಿಬಿಂಬಿಸುವ ಪ್ರಚಂಡ ಕನ್ನಡಿಯೇ ಅದು.

ಕೆರೆಯಲ್ಲಿ ಮೀನಗಳ ಜಲಕೇಳಿ, ದಡದ ಗಿಡಗಳಲ್ಲಿ ಹಕ್ಕಿಗಳ ಹಾರಾಟ–ಚೀರಾಟ, ಸಂತತವಾಗಿ ಸಾಗುವವು ಸಂತಸದ ವಾತಾವರಣವನ್ನು ಪಸರಿಸುವವು.

ಹೀಗಿರಲು ಅದೊಂದು ದಿನ ಹಕ್ಕಿಯೊಂದು ಮೀನಿನೊಡನೆ ಗೆಳೆತನವನ್ನು ಬೆಳೆಯಿಸಿತು. ಒಮ್ಮೆ ಹಕ್ಕಿಯು ಮೀನನ್ನು ಕೇಳಿತು. 'ಇಂಥ ನಿರ್ಮಲ ಜಲದಲ್ಲಲೆಯುವದು ಅತಿ ಸೋಜಿಗದ ಸಂಗತಿಯಲ್ಲವೇ! ಎಂಥ ಪುಣ್ಯಾತ್ಮನಯ್ಯ ನೀನು!' ಆಯಿತು–ಮೀನಮಹಾಶಯರು ಅಷ್ಟರಿಂದ ಉಬ್ಬಿದರು. ತನ್ನ ಜಲವಿಹಾರವನ್ನು ಬಾಯ್ತುಂಬ ಹೊಗಳಿದರು. ಅಲ್ಲಿಯ ಸುಖಾನುಭವನನ್ನು ಅತಿಯಾಗಿ ವರ್ಣಿಸಿದರು. ಕೊನೆಗೆ ಅದು ಕೇಳಿತು. 'ಏನಯ್ಯಾ! ಬಾನ-ಬಯಲಲ್ಲಿಯ ನಿನ್ನ ಸ್ವೈರ–ಸಂಚಾರವು ನಿಜವಾಗಿ ಒಳ್ಳೆ ಹೆಮ್ಮೆಯ ವಿಷಯ–ಆನಂದದ ಆಗರ. ಅಲ್ಲವೇ? ನೀನೇ ಧನ್ಯನಯ್ಯಾ! ಎಂಥ ಅದ್ಭುತ ಸಾಮರ್ಥ್ಯ ನಿನ್ನದು?'

ಇಷ್ಟರಿಂದ ಹಕ್ಕಿಯ ಅಹಂಕಾರವೂ ತಲೆಗೇರಿತು. ಅದು ಬಾನಿನ ಬಣ್ಣನೆಯನ್ನು ಯಥೇಚ್ಛವಾಗಿ ಮಾಡಿತು. ಪರಸ್ಪರರ ಬಣ್ಣನೆಯಿಂದ ಇಬ್ಬರ ಬಾಯಿಗೂ ನೀರು. ತನ್ನ ಅವಸ್ಥೆಯ ಬಗ್ಗೆ ಇಬ್ಬರಿಗೂ ಅಸಮಾಧಾನ-ಕಸಿವಿಸಿ.

ಈ ಅಸಂತೋಷವು ಹೆಚ್ಚಾಗಿ, ಒಂದು ದಿನ, ಮೀನವು ನೀರನ್ನು ತೊರೆಯಿತು-ಹಕ್ಕಿಯು ಅದನ್ನೆಯೆ ಸೇರಿತು. ಮರವನ್ನೇರಿ ಗಗನದಲ್ಲಿ ಹಾರಲು ಹವಣಿಸಿದರು ಮೀನಮಹಾಶಯರು. ನೀರನ್ನು ಸೇರಿ ಅದರ ನೆಲೆಯನ್ನರಿಯಲು ಹೊರಟರು ಪಕ್ಷಿ--ಪಂಡಿತರು. ಆದರೆ ಮೀನವು ಮರವನ್ನು ಮುಟ್ಟುವ ಮೊದಲೇ ಮರಣದ ದಾರಿಯನ್ನು ಹಿಡಿಯಿತು. ನೀರಿನ ನೆಲೆಯನ್ನಳೆಯುವ ಪೂರ್ವದಲ್ಲಿಯೆ ಕಮಲದ ಬಳ್ಳಿಯಲ್ಲಿ ಸಿಲುಕಿ ಹಕ್ಕಿಯು ಹರಣಕ್ಕೆರವಾಯಿತು.

ಅಂದು ಉಳಿದ ಹಕ್ಕಿಗಳಂದವು: 'ಎಂಥ ಉಪಕಾರ ಕೆರೆಯದು? ನಮಗೆ ಆಗಾಗ ಅದು ಮೀನಿನ ಸವಿಯನ್ನವನ್ನು ನೀಡುವದು.'

ಉಳಿದ ಮೀನಗಳುಸುರಿದವು. 'ಎಂಥ ಉಪಕಾರ ಈ ಮರ-ಬಳ್ಳಿಗಳದು? ನಮಗವು ಆಗಾಗ ಹಕ್ಕಿಗಳ ಸವಿಯೂಟವನ್ನು ದಯಪಾಲಿಸುವವು!'

—ಶ್ರೀ. ಗೋ. ಕು.

ಅಭ್ಯಾಸ ೯.

ಕೆಳಗೆ ಕೊಟ್ಟ ರೂಪರೇಖೆಯ ಸಹಾಯದಿಂದ ಕತೆಯನ್ನು ಬರೆಯಿರಿ. ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಯಲ್ಲಿಯ ಪ್ರಶ್ನಪತ್ರಿಕೆಗಳಿಂದ ಇವುಗಳನ್ನು ಆಯ್ದುಕೊಳ್ಳಲಾಗಿದೆ. ಮಗ್ಗುಲಿಗೆ ಕಾಣಿಸಿದ ಅಂಕಿಗಳು ವರ್ಷವನ್ನು ಸೂಚಿಸುವವು.

೧ ರಾಧೆ, ಸಿರಿವಂತರ ಮಗಳು-ಗೋವಿಂದ, ಬಡವರ ಮಗ-ಆ ಮಕ್ಕಳು ಕೂಡಿಯೆ ಆಡುವರು-ರಾಧೆಯು ಕೆರೆಯಲ್ಲಿ ಜಾರಿ ಬೀಳುವಳು-ಗೋವಿಂದನು ಆಕೆಯನ್ನು ತೆಗೆಯುವನು-ಆಕೆಯ ತಂದೆಯು ಅತೀವ ಕೃತಜ್ಞನಾಗುವನು-ಗೋವಿಂದನ ಶಿಕ್ಷಣಕ್ಕೆ ಸಹಾಯ-ಬಿ. ಎ.-ಆಕೆಯ ತಂದೆಯ ವ್ಯಾಪಾರದಲ್ಲಿ ಪಾಲುಗಾರನಾಗುವ-ರಾಧೆಯೊಡನೆ ಮದುವೆ.

—೧೯೩೧.

೨ ಓರ್ವ ವೀರ ಯುವಕ-ಕಾಳಗದಲ್ಲಿ ಓರ್ವ ಕಾಡು ಜನರ ನಾಯಕನ ಸೆರೆಯಾಳಾಗುವ-ಶೂರನಾದವನೂ ದುಃಖಿತ-ಅವನ ತಾಯಿಯು ಮರಣ-ಉನ್ಮುಖಳು-ಮರಳಿ ಬರುವ ವಚನ-ಹೋಗಲು ಅಪ್ಪಣೆ-ಬರುವ-ನಾಯಕನಿಂದ ಅಧಿಕಾರಸ್ಥಲವು ದೊರೆಯುವುದು ಅವನ ಮಗಳೊಡನೆ ವಿವಾಹ-ಅವನ ತರುವಾಯ ನಾಯಕನಾಗುವ.

—೧೯೩೨.

೩ ಒಂದು ಹಡಗವು ಒಡೆದಿದೆ-ಗೆಳೆಯರಿಬ್ಬರು ಒಂದು ಫಳಿಯನ್ನು ಹಿಡಿದು ತೇಲುತ್ತಿರುವರು-ಅದು ಒಬ್ಬನನ್ನೇ ತೇಲಿಸುವಂತಹದಿತ್ತು-ಒಬ್ಬನು ಮದುವೆಯಾದವನು-ಇನ್ನೊಬ್ಬನು ಬ್ರಹ್ಮಚಾರಿ-ಬ್ರಹ್ಮಚಾರಿಯು ಅದನ್ನು ಬಿಡುವ-ಮುಳುಗುವ-ಎರಡನೆಯವನು ಬದುಕಿದ-ಅವನು ಮುಳುಗಿದ ಗೆಳೆಯನ ತಾಯಿಯನ್ನು ಪೋಷಿಸುವ.

—೧೯೩೩.

೪ ಒಂದು ದಿನ್ನೆಯ ಮೇಲೆ ಒಂದು ಮೋಟಾರು ನಿಂತಿದೆ-ಒಬ್ಬ ಚಿಕ್ಕ ಹುಡುಗನು ಅಲ್ಲಿ ಬರುವ-ಅದರಲ್ಲಿ ಏರಿ ಕುಳಿತುಕೊಳ್ಳುವ-ಹಿಡಿಕೆಯನ್ನು ಜಗ್ಗುವ-ಗಾಡಿಯು ನಡೆಯುವದು-ದಿನ್ನೆಯ ಕೆಳಗೆ ಭರದಿಂದ ಸಾಗುವದು. ಹುಡುಗನು ಚೀರುವನು-ಜನರು ಒದರುವರು.

(ಈ ಕತೆಯನ್ನು ಪೂರ್ಣ ಮಾಡಿರಿ.)

—೧೯೩೪.

೫ ಒಬ್ಬ ಹುಡುಗನು ಉಗಿಬಂಡಿಯಲ್ಲಿ ಒಂಟಿಗನಾಗಿ ಪ್ರವಾಸ ಮಾಡುತ್ತಿರುವ. ಒಂದು ಚಿತ್ತಾಕರ್ಷಕವಾದ ಪುಸ್ತಕವನ್ನು ಓದುತ್ತಿರುವ-ಇಳಿಯಬೇಕಾದ ನಿಲ್ದಾಣವು ಬಂದುಹೋಯಿತು. ಮುಂದೆ ೨೦ ಮೈಲು ಸಾಗಿದ ಮೇಲೆ ಅವನಿಗದು ತಿಳಿಯಿತು. ಜೇಬಿನಲ್ಲಿ ಒಂದು ಕಾಸೂ ಇರಲಿಲ್ಲ.

(ಅವನು ಮುಂದೆ ಯಾವ ರೀತಿಯಿಂದ ಮನೆಗೆ ಬಂದು ತಲುಪಿರಬಹುದು !)

—೧೯೩೫.

ಆ) ಕೆಳಗಿನ ವಿಷಯಗಳನ್ನು ಕುರಿತು ಕತೆಗಳನ್ನು ರಚಿಸಿ ಬರೆಯಿರಿ!

೧ ಮುಯ್ಯಕ್ಕೆ ಮುಯ್ಯ. ೨ ಸತ್ಯಕ್ಕೆ ಸೋಲಿಲ್ಲ. ೩ ಪ್ರಾಪ್ತಿಯು ಅರ್ಧ ಪಾಲು. ೪ ಪ್ರಸಂಗಾವಧನ. ೫ ಇಬ್ಬರ ಕಲಹದಲ್ಲಿ ಮೂರನೆಯವನಿಗೆ ಲಾಭ. ೬ ಮುಹೂರ್ತಂ ಜ್ವಲಿತಂ ಶ್ರೇಯಃ. ೭ ಮನೆಗೆದ್ದು ಮಾರು ಗೆದೆಯಬೇಕು.

ಇ) ಹಿಂದಣ ಕತೆಗಳ ರೂಪರೇಷೆಗಳನ್ನು ಬರೆಯಿರಿ.

ಮೂರನೆಯ ಭಾಗ-ನಿಬಂಧಗಳು.

೧ ಪೀಠಿಕೆ.

೧ ನಿಬಂಧವೆಂದರೇನು ?

ನಿಬಂಧವೆಂದರೆ ಕಟ್ಟುಳ್ಳ ಬರಹ. ನಮ್ಮ ಮನಸ್ಸಿನಲ್ಲಿ ಮೂಡಿದ ವಿಚಾರಗಳು ಒಂದು ವಿಶೇಷವಾದ ರೀತಿಯಲ್ಲಿ ವ್ಯಕ್ತವಾದರೆ ಅದು **ನಿಬಂಧ**ವೆನಿಸುವುದು. ಆಂಗ್ಲ ಭಾಷೆಯಲ್ಲಿದಕ್ಕೆ ಆಲೋಚನೆಗಳನ್ನು ಜೈಲಿಗೆಳೆಯುವ '**ಪ್ರಯತ್ನ**' ಎಂದೆನ್ನುವರು. ಮೊದಮೊದಲು ಆಲೋಚನೆಗಳು ತೋಚಿದ ಕ್ರಮದಲ್ಲಿಯೆ ಹೊರಬಿದ್ದು ನಿಬಂಧದ ರೂಪವನ್ನು ತಾಳುತ್ತಿದ್ದವು ನಿಜ. ಆದರೆ ಬರಬರುತ್ತ ಅದರ ರಚನೆಯಲ್ಲಿ ಒಂದು ಬಗೆಯ ಸುಸಂಬದ್ಧ ಕ್ರಮವು ಉಂಟಾಗಿ, ಈಗದು **ಕೌಶಲ್ಯದಿಂದ ಹೆಣೆಯಲ್ಪಟ್ಟ ಆಲೋಚನೆಗಳ ಮಾಲೆಯಾಗಿರುವುದು.**

೨ ಅದರ ಮಹತ್ವ:—

ಇಂದು ನಿಬಂಧವು ಒಂದು ಅತ್ಯುತ್ತಮ ಕಲಾಕೃತಿ (1) **ಮಾಂಟೇನ-ಬೇಕನರಲ್ಲಿ** ಮೊಳೆತು, **ಆಡಿಸನ್, ಮೆಕಾಲೆ, ಲ್ಯಾಂಬರವರಲ್ಲಿ** ಬೆಳೆದು ಈ ಬಳ್ಳಿಯು ಇಂದು **ಗಾರ್ಡಿನರ, ವೆಲ್ಸ, ಕೂಚ** ಇವರಲ್ಲಿ ಹೂ-ಕಾಯಿ-ಹಣ್ಣುಗಳ ವೈಭವವನ್ನು ತಳೆದು, ಮೆರೆಯುತ್ತಿರುವುದು.

ಇಂದಿನ, ಮುಂದಿನ ಯುಗದಲ್ಲಿ ಅದು ಜನಜಾಗೃತಿಯ ಮಹಾ ಕಾರ್ಯವನ್ನು ಮಾಡಿದೆ, ಮಾಡಲಿದೆ. ವಾರ್ತಾಪತ್ರಿಕೆಗಳೂ, ಮಾಸ ಪತ್ರಿಕೆಗಳೂ ಇದರ ಸೇವೆಯನ್ನು ಮಾಡಲು ಸದೈವ ಸಿದ್ಧವಿರುವವು. '**ವೈಯ್ಯಕ್ತಿಕ ನಿಬಂಧ**' (Personal Essays) ಗಳುಳ್ಳ ಅನೇಕ ಗ್ರಂಥಗಳು ಜನರ ಅಭಿರುಚಿಯನ್ನು ತಿದ್ದಲು ಯತ್ನಿಸುತ್ತಲಿವೆ ಆದುದರಿಂದ **ಚಿಕ್ಕ ಕತೆ, ಭಾವಗೀತಗಳ** ಜತೆಯಲ್ಲಿ ಈ ಕಲಾಕೃತಿಯು ಜನತೆಯಲ್ಲಿ ವಿಚಾರಕ್ರಾಂತಿಯನ್ನುಂಟು ಮಾಡುವ ಮಹತ್ವದ ಸಾಧನವಾಗಲಿದೆ.

ಮೇಲಾಗಿ ಬಾಲಕರ ವಿಚಾರ-ವ್ಯಕ್ತಿಗೆ ಇದೊಂದು ಸುಲಭವಾದ ಸಾಧನ. ಬಾಲಕರಿದನ್ನು ಸರಿಯಾಗಿ ಉಪಯೋಗಿಸಲು ಕಲಿತರೆ, ಅವರ

---

1) ಇವರೆಲ್ಲ ಪಾಶ್ಚಾತ್ಯ ನಿಬಂಧಕಾರರು.

ನಿರೀಕ್ಷಣ ಶಕ್ತಿಯು ಬೆಳೆದು ಪ್ರಪಂಚದ ಬಗ್ಗೆ ಅವರಲ್ಲಿದ್ದ ಸಹಜ ಕುತೂಹಲವು ಹೆಚ್ಚಾಗುವುದು. ಇದರ ಜೊತೆಯಲ್ಲಿ ಅವರ ಭಾವ-ಬುದ್ಧಿ-ಕಲ್ಪನಾಶಕ್ತಿಗಳು ವಿಕಸಿತವಾಗಿ, ಅದನ್ನು ತಿಳಿಯಾದ ಸರಿಯಾದ ಭಾಷೆಯಲ್ಲಿ ಉಸುರುವ ಕೌಶಲ್ಯವು ಕೂಡ ಬೆಳೆಯದಿರದು. ಈ ದೃಷ್ಟಿಯಿಂದ ನಿಬಂಧವು ಅತಿ ಮಹತ್ವದ ಕಲಾಕೃತಿಯೆನ್ನಲು ಅಡ್ಡಿಯಿಲ್ಲ.

೩ ವಿವರಣ ಕ್ರಮಃ—

ಆದುದರಿಂದ ಪ್ರಬಂಧಗಳಲ್ಲಿಯ ಈ ಪ್ರಧಾನ ವಿಷಯವನ್ನು ಇಲ್ಲಿ ವಿಸ್ತಾರವಾಗಿ ವಿವೇಚಿಸಲಾಗುವುದು. ಮೊದಲು ಅದರ ರಚನೆಯ ವಿಷಯವಾಗಿ ಸಾಮಾನ್ಯ ಸೂಚನೆಗಳನ್ನು ಕೊಟ್ಟು ತರುವಾಯ ಅದರ ಮುಖ್ಯ ಪ್ರಭೇದಗಳಾದ **ವರ್ಣನ, ಕಥನ, ಚಿಂತನ, ಕಲ್ಪನಪರ** ನಿಬಂಧಗಳ ಸವಿವರ ವಿವೇಚನೆಯನ್ನು ಮಾಡಲಾಗುವದು. ಕೆಲವು ಸುಪ್ರಸಿದ್ಧ ಸಾಹಿತಿಗಳ ಮಾದರಿಯ ನಿಬಂಧಗಳನ್ನು ಅಲ್ಲಲ್ಲಿ ಕೊಟ್ಟು, **ವಿಷಯವಿವೇಚನೆ, ರಚನಾಕೌಶಲ್ಯ, ಶೈಲಿಯ ಚಮತ್ಕೃತಿ** ಇತ್ಯಾದಿಗಳ ಆದರ್ಶಗಳನ್ನು ಬಾಲಕರೆದುರು ಇಡಲಾಗುವುದು.

೨ ನಿಬಂಧ-ರಚನೆ.

೧ ಪ್ರಮುಖ ಗುಣಗಳು:—

ಪರಿಚ್ಛೇದದಂತೆ ನಿಬಂಧವೂ **ಸೌಂದರ್ಯ-ಸಾಮರ್ಥ್ಯಗಳನ್ನು** ಪಡೆಯಬೇಕಾದರೆ ಅದರಲ್ಲಿಯೂ ಕೆಳಗಿನ ಕೆಲವು ಮುಖ್ಯ ಗುಣಗಳು ಇರಲೇ ಬೇಕು. ಅವನ್ನು ತರಲು ಸಾಧ್ಯವಿದ್ದಷ್ಟು ಯತ್ನವನ್ನು ಮಾಡಲೇ ಬೇಕು. ಅವು ಪ್ರತಿಯೊಂದು ನಿಬಂಧದ ಜೀವಾಳದಂತಿರುವವು.

ಅ) **ಕಿರಿಮೆಃ**—ಬಾಲಕರ ನಿಬಂಧವು ಚಿಕ್ಕದಿರಬೇಕು--ಚೊಕ್ಕವಿರಬೇಕು. **ಕಿರಿದರಲ್ಲಿ ಹಿರಿದನ್ನು ಉಸುರುವ ಅಭ್ಯಾಸವು ಮೇಲು.** ಅದರಿಂದ ವಿಷಯವು ಹಿಡಿತದಲ್ಲಿ ಬರುವುದು. ವಿವೇಚನೆಯಲ್ಲಿ ಬಿಗುವು ಉಂಟಾಗುವುದು. ಸುಮ್ಮನೆ ಮಾತು ಬೆಳೆಯುತ್ತಿದ್ದರೆ ನಿಬಂಧದಲ್ಲಿ ಅನವಶ್ಯಕ-ಅಸಂಬದ್ಧ ಸಂಗತಿಗಳು ಸೇರಿ ಅವು ಅದರ ಸೊಬಗನ್ನು ಕೆಡಿಸುವವು.

ಆ) **ಐಕ್ಯ:**—ನಿಬಂಧದಲ್ಲಿ ಒಂದೇ ವಿಷಯದ ವಿವೇಚನೆಯಿರ ತಕ್ಕದ್ದು. ಸಲ್ಲದ ವಿಷಯಗಳನ್ನು ಸೇರಿಸಿ ವಿಷಯಾಂತರ ಮಾಡುವದರಿಂದ ಅದರ '**ಐಕ್ಯ**'ಕ್ಕೆ ಭಂಗಬರುವುದು. ಆದರೆ **ಈ ಐಕ್ಯವು ವೈವಿಧ್ಯವನ್ನು ಅಲ್ಲಗಳೆಯುವಂತಿರಬಾರದು.** ವಿಷಯವನ್ನು ವಿವಿಧ ದೃಷ್ಟಿಯಿಂದ ಬಣ್ಣಿಸಿದರೂ ಪರಿಣಾಮವು ಮಾತ್ರ ಒಂದೇ ಆಗಬೇಕು.

ಇ) **ಕ್ರಮ:**—ವಿವರಿಸಲಾದ ಆಲೋಚನೆಗಳಲ್ಲಿ ಒಂದು ತರ್ಕ ಶುದ್ಧವಾದ ಕ್ರಮವಿರಲಿ. ಅದರಲ್ಲಿ ಗೊಂದಲವಿರಕೂಡದು; ತಿಳಿಯಾದ ತರ್ಕಯುತವಾದ ವಿಚಾರಪ್ರವಾಹವು ಸರಿಯಾದ ಕ್ರಮದಿಂದ ಮುಂದು ವರಿಯಬೇಕು. **ಒಂದರೊಳಗಿಂದ ಇನ್ನೊಂದು ವಿಚಾರವು ಸಹಜ ವಾಗಿ ಅರಳಬೇಕು.** ಪರಿಚ್ಛೇದಗಳಲ್ಲಿಯೂ ತಕ್ಕ ಕ್ರಮಬದ್ಧತೆಯಿರಲಿ. ಆಲೋಚನೆಗಳ ಮಹತ್ವಕ್ಕನುಗುಣವಾಗಿ ಅವುಗಳ ವಿವೇಚನೆಯ ವಿಸ್ತಾರ ದಲ್ಲಿ ಸರಿಯಾದ ಪ್ರಮಾಣವಿರಲಿ.

ಈ) **ಶೈಲಿ:**—ಶೈಲಿಯಲ್ಲಿ ಎರಡು ಮಾತುಗಳು ಅಡಕವಾಗಿವೆ: (೧) **ಭಾಷೆ;** (೨) **ವ್ಯಕ್ತಿತ್ವ.**

೧) **ಭಾಷೆ:**—ಭಾಷೆಯು ಶುದ್ಧವಾದುದೂ, ಸುಲಭವಾದುದೂ, ಲಲಿತವಾದುದೂ, ಪರಿಣಾಮಕಾರಿಯಾದುದೂ ಇರಬೇಕು. '**ಅದು ಸುಸಂಸ್ಕೃತ ಜನರು ಉಸುರುವ ಸಹಜ ನುಡಿಯ ಮಾದರಿಯೂ, ಅತ್ಯುತ್ತಮ ಸಂಭಾಷಣೆಯನ್ನು ಪ್ರತಿಬಿಂಬಿಸುವ ಕನ್ನಡಿಯೂ**' ಆಗಿರಲಿ!

೨) **ವ್ಯಕ್ತಿತ್ವ:**—ನಿಮ್ಮ ನಿಬಂಧದಲ್ಲಿ, **ಸ್ವಂತ ಅನಿಸಿಕೆ, ಆಲೋ ಚನೆ, ಅಭಿಪ್ರಾಯ-ಅನುಭವಗಳೇ** ಅಡಕವಾಗಿರಲಿ. ಒಡನೆ ಅನ್ಯರ ವಿಚಾರಗಳೂ ಬರಬಹುದು. ಆದರೆ ತನ್ನ ಮತ್ತು ಅನ್ಯರ ವಿಚಾರಗಳ ಬೆರಿಕೆಯಲ್ಲಿ ಒಂದು ತೂಕವಿರಲಿ, '**ಅನ್ಯರದನ್ನು ತನ್ನದನ್ನಾಗಿ ಮಾಡಿ ಬರೆಯುವ ಯತ್ನವೇ ಒಳ್ಳೆಯ ನಿಬಂಧದ ಹಿರಿ ಕುರುಹು.**'

೨ ಪೂರ್ವ ಸಿದ್ಧತೆಃ—

ಯಾವದೇ ಕಲೆಯಲ್ಲಿ ಪ್ರಾವೀಣ್ಯವನ್ನು ಪಡೆಯಬೇಕಾದರೆ **ನಾಗವರ್ಮನು** ಉಸುರಿದ ಕೆಳಗಿನ ನಾಲ್ಕು ಸಂಗತಿಗಳು ಅವಶ್ಯವಾದವುಗಳು. (೧) **ಪ್ರತಿಭಾನ,** (೨) **ಕಾವ್ಯಪರಿಚಯಃ,** (೩) **ವೃದ್ಧಸೇವೆ,** (೪) **ಅಭ್ಯಾಸ** ಇದರಲ್ಲಿ ಎರಡನೆಯ ವಿಷಯವಾದ '**ಕಾವ್ಯಪರಿಚಯ**'ದ ಸ್ಥಲದಲ್ಲಿ '**ಪೂರ್ವಕೃತಿ ಪರಿಚಯ**' ಎಂಬುದನ್ನು ಇಟ್ಟರೆ ಈ ಪಟ್ಟಿಯು ಎಲ್ಲ ಕಲೆಗಳಿಗೆ ಸಮನಾಗಿ ಅನ್ವಯಿಸುವದು. **ನಾಗವರ್ಮನು** ಕಾವ್ಯದ ವಿಷಯವಾಗಿ ಬರೆಯುತ್ತಿದ್ದದರಿಂದ ಅವನು 'ಕಾವ್ಯವಿದ್ಯಾಪ್ರಚಯ ಪರಿಚಯ' ಎಂದು ಹೇಳಿರುವ.

ಈ ದೃಷ್ಟಿಯಿಂದ ನಿಬಂಧಬರಹದಲ್ಲಿ ನೈಪುಣ್ಯವನ್ನು ಪಡೆಯಬಯಸುವವರು ಏನು ಮಾಡಬೇಕೆಂಬುದನ್ನು ವಿಚಾರಿಸುವ.

೧) **ಪ್ರತಿಭೆ** (Genius):—ಇದು ಬರಹಗಾರರಲ್ಲಿರುವ ಮೂಲಶಕ್ತಿ. ಅದಿಲ್ಲದವನು ಬರಹಗಾರನಾಗುವುದೇ ಸಾಧ್ಯವಿಲ್ಲ. ಇದೇ ನೃಪತುಂಗನ '**ಅಕೃತ್ರಿಮ ಕೌಶಲ್ಯ.**' ಈ ಸಹಜ ಶಕ್ತಿಯು ಸಾಮಾನ್ಯವಾಗಿ ಪ್ರತಿಯೊಬ್ಬರಲ್ಲಿ ಇದ್ದೇ ತೀರುವುದು. ಕೆಲವರಲ್ಲಿದು ಬಲಿತಿರುವುದು, ಕೆಲವರಲ್ಲಿ ಬಲಿತಿರುವದಿಲ್ಲ. ಅದನ್ನು ಮುಂದಿನ ಅಭ್ಯಾಸದಿಂದ ಚೆನ್ನಾಗಿ ಬಲಿಸುವುದು ಎಲ್ಲರ ಆದ್ಯ ಕರ್ತವ್ಯ.

೨) **ಪೂರ್ವ-ಕೃತಿ-ಪರಿಚಯ:**—ಪೂರ್ವದ ಮಹನೀಯರು ಬರೆದ ಗ್ರಂಥಗಳ ಪರಿಶೀಲನವೇ 'ಕೃತಿ ಪರಿಚಯವು.' **ಹಿಂದಿನವರಿಂದ ಕಲಿಯದವನು ಮುಂದಿನವರಿಗೆ ಕಲಿಸಲರಿಯನು.** ಹಿಂದಿನ ಹಿರಿಯರು ತಮ್ಮ ಬೆಲೆಯುಳ್ಳ ವಿಚಾರಗಳನ್ನು ನಮಗಾಗಿ ಕಾದಿಟ್ಟಿರುವರು. ಅವನ್ನುಪಯೋಗಿಸಿ, ಜೀರ್ಣಿಸಿ ನಮ್ಮ ಬಲವನ್ನು ಮೊದಲು ಬೆಳೆಯಿಸಲು ಬೇಕು.

ಓದುವುದರಲ್ಲಿ ತ್ರಿವಿಧ ಉದ್ದೇಶವಿರಲಿ! (೧) **ವಿಷಯಸಂಗ್ರಹ,** (೨) **ಭಾಷಾಪ್ರಭುತ್ವ,** (೩) **ರಚನಾಕೌಶಲ್ಯ.** ಬಾಲಕರು ತಮ್ಮ ಜ್ಞಾನ ಭಂಡಾರವನ್ನು ಮೊದಲು ಪೂರ್ವಪಂಡಿತರ ಆಲೋಚನೆಗಳಿಂದ ತುಂಬಿ

ಕೊಳ್ಳಬೇಕು. ಅದರ ಜೊತೆಯಲ್ಲಿ ಶಬ್ದಸಂಗ್ರಹವು ಹೆಚ್ಚಾಗುವಂತೆ ಜಾಗ್ರತೆಯಿಂದ ಓದಿಕೊಳ್ಳಬೇಕು. ಇಷ್ಟಾದ ಮೇಲೆ ಪ್ರತ್ಯಕ್ಷವಾಗಿ ತನ್ನ ಮತ್ತು ಅನ್ಯ ಭಾಷೆಗಳಲ್ಲಿಯ ಕೆಲವು ಮಾದರಿಯ ನಿಬಂಧಗ್ರಂಥಗಳನ್ನು ಪರಿಶೀಲಿಸಿ, ಈ ಕಲಾಕೃತಿಯ ರಹಸ್ಯವನ್ನರಿತುಕೊಳ್ಳಬೇಕು.

ಈ ಗ್ರಂಥಗಳನ್ನು ಓದುವಾಗ ಒಂದು 'ನೋಟಬುಕ್ಕಿ'ನಲ್ಲಿ ಸ್ಫೂರ್ತಿಯುತವಾದ **ಹೊಸ ವಿಚಾರಗಳನ್ನೂ, ಅಂದವಾದ ರಚನಾ ವಿಶೇಷಗಳನ್ನೂ** ಸುಂದರವಾದ **ಒಳ್ನುಡಿ-ನಾಣ್ನುಡಿಗಳನ್ನೂ** ಆಯ್ದಿಡಬೇಕು. ಅವನ್ನು ಮರಳಿಮರಳಿ ಓದಿ ಮಿದುಳಿನಲ್ಲಿ ಕಾಯ್ದಿಡಲು ಯತ್ನಿಸಬೇಕು.

೩) **ವೃದ್ಧಸೇವೆ:**—ಹಿಂದಿನ ಹಿರಿಯರಂತೆ ಇಂದಿನ ಹಿರಿಯರ ಹತ್ತರ ನಿಂತು ಅವರಿಂದಲೂ ಈ ಬರಹದ ಗುಟ್ಟನ್ನು ಅರಿತುಕೊಳ್ಳಬೇಕು. ಅವರ ಸಹವಾಸದಲ್ಲಿದ್ದು, ಅವರ ಬರಹವನ್ನು ನಿರೀಕ್ಷಿಸಿ, ಅವರೊಡನೆ ವಿಚಾರವಿನಿಮಯ ಮಾಡಿ, ತಾನು ಬರೆದದ್ದನ್ನು ಅವರಿಂದ ತಿದ್ದಿಸಿಕೊಂಡು, ನಿಬಂಧ-ನೈಪುಣ್ಯವನ್ನು ಪಡೆಯತಕ್ಕದ್ದು. ಇದೇ ಎಲ್ಲಕ್ಕೂ ಪ್ರಭಾವಶಾಲಿಯಾದ ಸಾಧನ. ಎಲ್ಲ ಹಿರಿಯರು ಇದನ್ನೇಯೆ ಉಪಯೋಗಿಸಿದರು, ಇದನ್ನೇಯೆ ಉಪದೇಶಿಸಿರುವರು ಆದರೆ **ಹುಡ್** ಕವಿಯು ಉಸುರುವಂತೆ, 'Seek instruction with an humble mind' ಲೀನನಾಗಿ ಅವರಿಂದ ಕಲಿಯಬೇಕು.

೪) **ಅಭ್ಯಾಸ:**—'**ಸತತಾಭ್ಯಾಸ ಪ್ರಯತ್ನಃ**' ಎಂದು ಉಸುರುವ **ನಾಗವರ್ಮ**. ಅಭ್ಯಾಸವು ಸತತವಾದುದಿರಬೇಕು. ಈ ಅಭ್ಯಾಸದ ಸ್ವರೂಪವೇನು ?

೧) **ವಿಶಾಲವಾದ ಸೂಕ್ಷ್ಮನಿರೀಕ್ಷಣವೂ, ಆಳವಾದ ಆಲೋಚನೆಯೂ** ಇದರ ಒಂದಂಗ. ಕಂಗಳನ್ನು ಸದೈವ ತೆರದಿಡಿರಿ! ಮನಸ್ಸನ್ನು ಮುಚ್ಚದಿರಿ! ನಿಮ್ಮ ಸುತ್ತಲಿನ ಸ್ಥಿತಿಗತಿಗಳನ್ನು ನಿರೀಕ್ಷಿಸಿರಿ. (i) ಪ್ರಾಕೃತಿಕ ಪರಿಸರವೂ ಸಾಮಾಜಿಕ ಪರಿಸರವೂ ತಮ್ಮ ಗುಟ್ಟುಗಳನ್ನು ನಿಮಗೆ ಅರುಹಲಿ! ಯಾಕಂದರೆ **ಅರಿಯದೆ ಬರೆಯುವುದೇನನ್ನು** ? ಈ ನಿರೀಕ್ಷಣೆಯ ಜತೆಯಲ್ಲಿ ಆಲೋಚನೆಯು ಬೇಕು. ಅದು ನಿರೀಕ್ಷಣದಿಂದ

(i) ನಿಮ್ಮ ಸುತ್ತಲಿನ ನಿಸರ್ಗವೂ ಸಮಾಜವೂ.

ದೊರೆತ ಸಂಗತಿಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸುವುದು. ಅವು ನಮ್ಮ ಮಿದುಳಿನಲ್ಲಿ ಸರಿಯಾಗಿ ಸ್ಥಿರವಾಗಿ ನಿಲ್ಲುವಂತೆ ಮಾಡುವುದು. ಅದೇ ಕಾಲಕ್ಕೆ ತಮಗೆ ಹೊಳೆದ ಹೊಸ ಕಲ್ಪನೆಗಳನ್ನು ಬರೆದಿಡಲು ಮರೆಯ ಬಾರದು.

೨) **ಪ್ರತ್ಯಕ್ಷ ಬರಹವು** ಅಭ್ಯಾಸದ ಇನ್ನೊಂದು ವಿಷಯ! ಬರೆಯಲು ಚನ್ನಾಗಿ ಬರಲು, ಏನು ಮಾಡಬೇಕೆಂದು ಓರ್ವ ವಿದ್ಯಾರ್ಥಿಯು ನುರಿತ ಬರಹಗಾರನೋರ್ವನಿಗೆ ಕೇಳಿದನಂತೆ. ಆಗವನು—'**ಬರೆಯುವುದೇ ಬರೆಯಲು ಕಲಿಯುವ ಮೊದಲನೆಯ ಸಾಧನ**' ಎಂದುಸುರಿದನಂತೆ. 'ಎರಡನೆಯದು?' ಕೇಳಿದನಾ ವಿದ್ಯಾರ್ಥಿ. 'ಮರಳಿ ಬರೆಯುವುದು.' ಇದು ಅವನ ಉತ್ತರ. 'ಮತ್ತೇನಾದರೂ ಇದೆಯೆ'? ಮರಳಿ ಕೇಳಿದನಾ ಬಾಲಕನು. 'ಇನ್ನೊಮ್ಮೆ ಬರೆಯಿರಿ!' ಎಂದವನ ಗಟ್ಟಿಯಾದ ಉತ್ತರವದಕ್ಕೆ. ಇದರ ತಾತ್ಪರ್ಯವಿಷ್ಟು **ಸತತ ಬರೆಯುವ ಅಭ್ಯಾಸವು** ನಿಬಂಧವನ್ನು, ಅದೇಕೆ ಯಾವದೆ ಬಗೆಯ ಬರಹವನ್ನು ಬರೆಯಲು ಕಲಿಯುವ ಅತ್ಯುತ್ತಮವಾದ ಸಾಧನ.

೩ ಬರೆಯಲು ಪ್ರಾರಂಭ:—

ಇಷ್ಟು ಪೂರ್ವಸಿದ್ಧತೆಯಾಯಿತೆಂದರೆ ಕೊಟ್ಟ ವಿಷಯವನ್ನು ಕುರಿತು ಬರೆಯಲು ಹೇಗೆ ಪ್ರಾರಂಭ ಮಾಡಬೇಕೆಂಬುದನ್ನು ಇನ್ನು ಮುಂದೆ ವಿವರಿಸುವುದು ಕ್ರಮಪ್ರಾಪ್ತವು.

೧) **ವಿಷಯದ ಅರಿಕೆ**:- ಮೊದಲು ವಿಷಯವನ್ನು ಚನ್ನಾಗಿ ಅರಿತುಕೊಳ್ಳಬೇಕು. ಅದರ ಸ್ಪಷ್ಟವಾದ ಅರ್ಥವೇನು? ಅದರ ಮೇರೆಗಳಾವು? ಇತ್ಯಾದಿಗಳನ್ನು ತಿಳಿದುಕೊಂಡು ಬರೆದಿಡಬೇಕು. ಒಂದೇ ವಿಷಯವನ್ನು ಕುರಿತು ಬೇರೆ ಬೇರೆ ದೃಷ್ಟಿಯಿಂದ ಬರೆಯಲು ಬರುವುದು. '**ಪ್ರವಾಸ**'ವೆಂಬ ವಿಷಯವನ್ನು ಕುರಿತು ನಿಬಂಧವನ್ನು ಬರೆಯುವದಿದ್ದರೆ, ಒಂದು ಪ್ರವಾಸದ ವರ್ಣನೆಯನ್ನು ಕೊಡಬಹುದು; ಇಲ್ಲವೇ ಅದರ ರೀತಿಯನ್ನೊ ಅದರಿಂದುಂಟಾಗುವ ಹಿತಾಹಿತಗಳನ್ನೊ ಉಸುರಬಹುದು. ಇವುಗಳಲ್ಲಿಯ ಯಾವ ಪದ್ಧತಿಯನ್ನು ಸ್ವೀಕರಿಸಬೇಕೆಂಬುದನ್ನು ಮೊದಲೇ ಗೊತ್ತುಮಾಡುವುದು ಒಳಿತು.

೨) **ವಿಚಾರಸಂಗ್ರಹಃ** – ತರುವಾಯ ಆ ವಿಷಯವನ್ನು ಕುರಿತು ತನ್ನ ಹಾಗೂ ಅನ್ಯರ ವಿಚಾರಗಳನ್ನು ಕೂಡಹಾಕಬೇಕು ತನಗೆ ತಾನೇ ಅದರ ವಿಷಯವಾಗಿ ಪ್ರಶ್ನೆಗಳನ್ನು ಕೇಳುವುದು ಇದಕ್ಕೊಂದು ಉತ್ತಮವಾದ ಸಾಧನ. ಯಾಕಂದರೆ ನಾವು ಆಲೋಚಿಸುವಾಗ ಇದನ್ನೆಯೇ ಮಾಡುವದಿಲ್ಲವೇ? ಪ್ರಶ್ನೆಗಳನ್ನು ವಿವಿಧ ರೀತಿಯಿಂದಲೂ ದೃಷ್ಟಿಯಿಂದಲೂ ಕೇಳಬೇಕು. ಅವನ್ನೆಲ್ಲ ಬರೆದಿಡಬೇಕು. ತರುವಾಯ ಒಂದೇ ಉತ್ತರವನ್ನು ಪಡೆವ ಪ್ರಶ್ನೆಗಳಲ್ಲಿ ಒಂದನ್ನುಳಿದು ಮಿಕ್ಕವುಗಳನ್ನು ಬಿಟ್ಟುಬಿಡಬೇಕು. ಅವುಗಳ ಉತ್ತರಗಳನ್ನು ಒಂದೊಂದೆ ಸಾಲಿನಲ್ಲಿ ಬರೆದಿಡಬೇಕು. ಅವೇ ವಿಚಾರಗಳ ಅಂಶಗಳು. (Points)

೩) **ಅಂಶಗಳ ಆಯ್ಕೆ:**—ಮುಂದೆ ಈ ಅಂಶಗಳಲ್ಲಿ ಮುಖ್ಯವಾದವುಗಳನ್ನು ಆಯ್ದು ಉಳಿದವುಗಳನ್ನು ತೊರೆಯಬೇಕು. ಯಾಕಂದರೆ ನಿಬಂಧದಲ್ಲಿ ಆ ವಿಷಯದ ಪೂರ್ಣ ವಿವೇಚನೆಯು ಇಷ್ಟವೂ ಇಲ್ಲ. ಅವಶ್ಯವೂ ಇಲ್ಲ. ಅದೊಂದು ನಮಗೆ ಆ ಕಾಲಕ್ಕೆ ಹೊಳೆದ ಆಲೋಚನೆಗಳ ಪ್ರತಿಬಿಂಬ. ಅದನ್ನು ಕುರಿತು ಸಾಂಗೋಪಾಂಗ ಪರಿಚಯವನ್ನು ಮಾಡಿಕೊಡುವ ಶಾಸ್ತ್ರೀಯ ಗ್ರಂಥವಲ್ಲ. ಆದುದರಿಂದ ಕಲೆಹಾಕಿದ ಅಂಶಗಳಲ್ಲಿ ಮೂರು-ನಾಲ್ಕು ಅಂಶಗಳನ್ನು ಆಯ್ದರೆ ಸಾಕು. ಕೊಟ್ಟ ಸ್ಥಲಕಾಲಗಳಲ್ಲಿ ಅವನ್ನಷ್ಟು ಅರಳಿಸಿದರೆ ಕೆಲಸ ತೀರಿತು.

೪) **ಅಂಶಗಳ ಕ್ರಮಃ** – ಕೊನೆಗೆ ಈ ಅಂಶಗಳನ್ನು ಒಂದು ನಿರ್ದಿಷ್ಟವಾದ ಕ್ರಮದಿಂದ ಹಿಂದುಮುಂದಿಡಬೇಕು. ಮತ್ತು ನಿಬಂಧದ **ರೂಪರೇಖೆಯನ್ನು** ಸಿದ್ಧಪಡಿಸಬೇಕು. ರೂಪರೇಖೆಯಲ್ಲಿ ಆಯಾ ಅಂಶಗಳಿಗೆ ಅವುಗಳ ಮಹತ್ವಕ್ಕನುಗುಣವಾದ ಸ್ಥಲವನ್ನು ಕೊಡಬೇಕು. ಅದರಿಂದ ಇಡೀ **ನಿಬಂಧವು ಒಂದು ಸುಂದರ ಸುಸಂಬದ್ಧ ಆಕೃತಿಯಾಗಬೇಕು.**

೪ ಅಂಗರಚನೆಃ—

ಪ್ರತಿಯೊಂದು ನಿಬಂಧದ ಅಂಗಗಳು ಮೂರು. (೧) **ಉಪಕ್ರಮ**, (೨) **ಪ್ರಧಾನಭಾಗ**, (೩) **ಉಪಸಂಹಾರ.** ನಿಬಂಧದ ಈ ಮೂರು ಅಂಗಗಳು ಸರಿಯಾದ ರೀತಿಯಲ್ಲಿ, ಸರಿಯಾದ ಪ್ರಮಾಣದಲ್ಲಿ ಪರಿಪೋಷಿತ

ವಾದರೆ ಅದಕ್ಕೆ ಆಕರ್ಷಕತೆ ಬರುವುದುಂಟು. ಅದರ ಸಲುವಾಗಿ ಮುಂದೆ ಕೆಲವು ಸೂಚನೆಗಳನ್ನು ಮಾಡಿರುವೆವು. ಆದರೆ ಅವನ್ನು ತಿರುಳರಿತು ಉಪಯೋಗಿಸಬೇಕೆ ಹೊರತು ಯಾಂತ್ರಿಕವಾಗಿ ಅಲ್ಲ.

೧) **ಉಪಕ್ರಮ:**— ಉಪಕ್ರಮದಲ್ಲಿ ಸಾಮಾನ್ಯವಾಗಿ ವಿಷಯ-ವಿವೇಚನೆಯ ಪರಿಚಯ ಮಾಡಿಕೊಡುವ ರೂಢಿಯುಂಟು. ಅದು ಓದುಗರ ಮನಸ್ಸನ್ನು ಸೆಳೆಯುವಂತಹದಿರಬೇಕು. ಅಂದರೇನೆ ಅವರು ನಿಬಂಧದೆಡೆಗೆ ಸಾರುವದುಂಟು. ಉಪಕ್ರಮದಲ್ಲಿಯೇ ನಿಬಂಧದಲ್ಲಿಯ ನಿಮ್ಮ ವ್ಯಕ್ತಿತ್ವವು ಕಾಣಬೇಕು. ಹೊಸ ವಿಚಾರವನ್ನು ಹೊಸರೀತಿಯಿಂದ ನಿಬಂಧದಲ್ಲಿ ಇಡಲಾಗಿದೆ ಎಂಬುದು ಓದುಗರಿಗೆ ಹೊಳೆಯಲಿ!

ನಿಬಂಧವನ್ನು ಇದೇ ರೀತಿಯಿಂದ ಪ್ರಾರಂಭಿಸಬೇಕೆಂದು ಹೇಳಲು ಬರುವಂತಿಲ್ಲ. ಆದರೂ ಆಯ್ದ ವಿಷಯಕ್ಕೆ ಸಂಬಂಧಿಸಿದ—

೧) ಸಾಮಾನ್ಯ ಸಿದ್ಧಾಂತದಿಂದಲೂ
೨) ಹಿರಿಯರ ನುಡಿಯಿಂದಲೂ,
೩) ನಾಣ್ಣುಡಿಯಿಂದಲೂ, ಪದ್ಯದ ಸಾಲಿನಿಂದಲೂ
೪) ಪ್ರಸಂಗ-ಚಿಕ್ಕ ಕತೆಗಳಿಂದಲೂ

ಅದನ್ನು ಆರಂಭಿಸಬಹುದು. ಒಮ್ಮೊಮ್ಮೆ ಪ್ರಾರಂಭಕ್ಕೆ ಕೆಲವು ಪ್ರಶ್ನೆಗಳನ್ನು ಕೇಳುವುದುಂಟು.

ಉಪಕ್ರಮವು ಒಂದು ಚಿಕ್ಕ ಪರಿಚ್ಛೇದವಷ್ಟಿರಬೇಕು. ಅದಕ್ಕೂ ದೊಡ್ಡದಾದದ್ದಿರಕೂಡದು.

೨) **ಪ್ರಧಾನ ಭಾಗ:**—ಇದೇ ನಿಬಂಧದ ಶರೀರ. ಇದರಲ್ಲಿಯೆ ವಿಷಯದ ವಿವೇಚನೆಯಾಗುವುದುಂಟು. ಇದರ ಬೆಳವಣಿಗೆಯ ಮೇಲೆಯೆ ನಿಬಂಧದ ಯಶಾಪಯಶಸ್ಸುಗಳು ಅವಲಂಬಿಸಿರುವವು. ಆದುದರಿಂದ ಇದರ ವಿಷಯವಾಗಿ ಎಷ್ಟು ದಕ್ಷತೆಯನ್ನು ವಹಿಸಿದರೂ ಕಡಿಮೆಯೇ!

i) ವಿವೇಚನೆಯಲ್ಲಿ ಅತ್ತಿತ್ತ ಅಲೆದಾಟಬೇಡ. ಹೇಳಬೇಕಾದ ವಿಷಯವನ್ನು ನೇರವಾಗಿ ಹೇಳಬೇಕು. ವಿಷಯವನ್ನು ಸಿದ್ಧಪಡಿಸಲು ಬೇಕಾದ ಪ್ರಮಾಣಗಳನ್ನು ಔಚಿತ್ಯವನ್ನರಿತು ಉಪಯೋಗಿಸಬೇಕು.

ನಿಬಂಧದಲ್ಲಿಯ ಪ್ರತಿಯೊಂದು ಮಾತು ವಿವೇಚನೆಗೆ ಪುಷ್ಟಿಯನ್ನೀಯ ಬೇಕು.

ii) ವಿಚಾರವು ಕ್ರಮದಿಂದ ಅರಳಲಿ! ಹೆಜ್ಜೆಹೆಜ್ಜೆಗೆ ವಿಚಾರದಲ್ಲಿ ಪ್ರಗತಿ-ವಿಕಾಸ-ಆದದ್ದು ಕಂಡುಬರಲಿ. ಪ್ರತಿ ಪರಿಚ್ಛೇದದಲ್ಲಿ ಒಂದಡಿ ಮುಂದೆ ಬಿದ್ದುದು ಪ್ರತೀತವಾಗಬೇಕು.

iii) ನಿಬಂಧದಲ್ಲಿ ಸಾಧಕ-ಬಾಧಕ ಪ್ರಮಾಣಗಳ ತರ್ಕಯುತವಾದ ವಿವೇಚನೆಯಿದ್ದರೂ ನಡೆಯುಬಹುದು. **ನಿಶ್ಚಯಾತ್ಮಕ ನಿರ್ಣಯಕ್ಕೆ ಬರಲೇಬೇಕೆಂಬ** ಅವಶ್ಯಕತೆಯಿಲ್ಲ.

iv) ಹಿತವಾದ ಸ್ವಂತ ಅನಿಸಿಕೆ-ಅನುಭವಗಳನ್ನು ಮಿತಿಯಿಂದ ಹೇಳಬೇಕು. ಅತ್ಯುಕ್ತಿಯು ಯಾವಾಗಲು ತ್ಯಾಜ್ಯವಾದುದು.

v) ಅವತರಣಗಳು ಆದಷ್ಟು ಕಡಿಮೆ ಇರಲಿ! ವಿವರಣದ ರೀತಿಯೂ ಶೈಲಿಯೂ ನಿಮ್ಮದೆ ಇರಲಿ! ಅವತರಣಗಳು ಅಪರಿಹಾರ್ಯವೆಂದೆನಿಸಿದರೆ ಅವುಗಳಲ್ಲಿ ತೀರ ನೂತನವಾದ ಕೆಲವನ್ನು ಆರಿಸಿ ಉಪಯೋಗಿಸಬೇಕು.

೩) **ಉಪಸಂಹಾರ:**—ಉಪಕ್ರಮದಂತೆ ಇವರಲ್ಲಿಯೂ ಸ್ವತಂತ್ರ ವಿಚಾರವಿರಬೇಕು.-ಅದು ಬೆರಗುಗೊಳಿಸುವಂತಹದಿರಬೇಕು. ವಿವೇಚನೆಯ ಫಲಿತಾಂಶವು ಅದರಲ್ಲಿರಬಹುದು. ಅದೊಂದು ವಿಷಯದ ಸಮಾರೋಪ. ಇದನ್ನು ಅತ್ಯುತ್ತಮ ಮಾದರಿಯ ನಿಬಂಧಗಳ ಪರಿಶೀಲನದಿಂದಲೇ ಕಲಿಯತಕ್ಕದ್ದು. ನಿಶ್ಚಿತವಾದ ನಿಬಂಧನೆಗಳನ್ನು ಹೇಳಲು ಬರುವಂತಿಲ್ಲ.

ಆದಿಯಂತೆ ಕೊನೆಗೂ ವಿಷಯದ ತಿರುಳನ್ನೊಳಗೊಂಡ ಸತ್ಪುರುಷರ ವಚನ-ಕವಿತೆಯ ಸಾಲು-ಇತ್ಯಾದಿಗಳನ್ನಿಟ್ಟು ಅದಕ್ಕೆ ಸೊಬಗನ್ನುಂಟುಮಾಡಬಹುದು.

೫ ಪ್ರಭೇದಗಳು:—

ನಿಬಂಧಗಳಲ್ಲಿ ಕೆಲವರು **ಮೂರು,** ಕೆಲವರು **ನಾಲ್ಕು,** ಬೇರೆ ಕೆಲವರು **ಐದು** ಪ್ರಭೇದಗಳನ್ನು ಕಲ್ಪಿಸುವದುಂಟು. ನಾವು ಕೆಳಗಿನ ನಾಲ್ಕು

ಪ್ರಭೇದಗಳೇ ಪ್ರಧಾನವಾದವುಗಳೆಂದೆಣಿಸಿ ಅವುಗಳ ವಿಷಯವಾಗಿ ಮುಂದೆ ವಿವೇಚನೆಯನ್ನು ಮಾಡಿರುವೆವು.

೧) ವರ್ಣನಪರ ನಿಬಂಧಗಳು, ೨) ಕಥನಪರ ನಿಬಂಧಗಳು, ೩) ಚಿಂತನಪರ ನಿಬಂಧಗಳು, ೪) ಕಲ್ಪನಾಪರ ನಿಬಂಧಗಳು.

ಈ ನಾಲ್ಕು ಪ್ರಭೇದಗಳ ಹೆಸರುಗಳು ಅವುಗಳಲ್ಲಿಯ ಮುಖ್ಯ ವಿಷಯುಗಳನ್ನನುಲಕ್ಷಿಸಿ ಕೊಡಲ್ಪಟ್ಟಿವೆ. ಆದರೆ ಒಂದು ಪ್ರಭೇದದಲ್ಲಿ ಉಳಿದ ಪ್ರಭೇದಗಳಲ್ಲಿಯ ವಿಷಯುಗಳು ಇರುವದೇ ಇಲ್ಲವೆಂದು ತಿಳಿಯ ಬಾರದು. ಉದಾಹರಣಾರ್ಥವಾಗಿ:-ವರ್ಣನಪರ ನಿಬಂಧದಲ್ಲಿ ಕಥನವೂ ವಿಚಾರಗಳೂ ಕಲ್ಪನಾವಿಲಾಸವೂ ಇರುವದಿಲ್ಲವೆಂದಲ್ಲ. ಆದರೆ ಅದರಲ್ಲಿ ವರ್ಣನೆಗೆ ಪ್ರಾಧಾನ್ಯವಿದ್ದಮೂಲಕ ಅದಕ್ಕೆ ಆ ಹೆಸರು. ಮಿಕ್ಕ ಪ್ರಭೇದ ಗಳಿಗೂ ಇದೇ ಮಾತು ಅನ್ವಯಿಸುವುದು.

೩ ವರ್ಣನಪರ.

೧ [illegible]ಂದರೇನು ?:—

ನಾವು ಕಂಡ ವಸ್ತುವನ್ನು ಅನ್ಯರು ಕಾಣುವಂತೆ, ಅರಿತ ಪ್ರಸಂಗ ವನ್ನು ಅನ್ಯರು ಅರಿಯುವಂತೆ, ಪಡೆದ ಅನುಭವವನ್ನು ಅನ್ಯರು ಪಡೆಯು ವಂತೆ, ಸರಿಯಾಗಿ ಬಣ್ಣಿಸುವ ಬರಹಕ್ಕೆ ಮೇಲಿನ ಹೆಸರು. ನಮ್ಮ ಕಣ್ಣು ಗಳನ್ನು ತಣಿಸಿದ ಚಿತ್ರದ ಅಂದವಾದ ಪ್ರತಿಬಿಂಬವು ನಮ್ಮ ಬರಹದಲ್ಲಿ ಮೂಡಿ ಓದುಗರನ್ನು ತಣಿಸಬೇಕು

ವರ್ಣನೆಯಲ್ಲಿ ಎರಡು ರೀತಿಗಳಿವೆ. ಇದ್ದದ್ದನ್ನು **ಇದ್ದಂತೆಯೆ ಒಂದು ವಿವರವನ್ನು ಬಿಡದೆ ಬಣ್ಣಿಸುವುದು ಒಂದು ರೀತಿ. ಕಂಡದ್ದನ್ನು ಕಂಡ ಹಾಗೆ ವಿಶೇಷತಃ ನಮ್ಮಮನಸ್ಸಿನಲ್ಲಿ ಮೂಡಿದ ಅದರ ಮುಖ್ಯಾಂಶ ಗಳನ್ನು ಚಿತ್ರಿಸುವುದು ಇನ್ನೊಂದು ರೀತಿ.** ಎರಡೂ ಬಗೆಗಳು ಉಪ ಯುಕ್ತವಾದವುಗಳು. ಪ್ರಸಂಗವನ್ನರಿತು ಅವುಗಳಲ್ಲಿಯ ಒಂದನ್ನು ಉಪ ಯೋಗಿಸಬೇಕು. ವಿದ್ಯಾರ್ಥಿಗಳು ಹೆಚ್ಚಾಗಿ ಎರಡನೆಯ ರೀತಿಯಿಂದಲೇ ಬಣ್ಣಿಸಬೇಕು.

೨) ಬರೆವುದೆಂತು:—ಅ) ಸಾಮಾನ್ಯ ಪರಿಚಯ.

೧) ವರ್ಣ್ಯವಸ್ತುವನ್ನು ಇಲ್ಲವೆ ಪ್ರಸಂಗವನ್ನು ಸೂಕ್ಷ್ಮರೀತಿಯಿಂದ ನಿರೀಕ್ಷಿಸಬೇಕು. ಅದರ ಅಂಗಾಂಗಳ ಪರಿಚಯವನ್ನು ಮಾಡಿಕೊಳ್ಳಬೇಕು.

೨) ಅದರಲ್ಲಿ ಮುಖ್ಯಾಂಶಗಳನ್ನು ಆಯ್ದುಕೊಳ್ಳಬೇಕು. ಆಗ ವಸ್ತುಗಳ ಸಾಮಾನ್ಯಗುಣಗಳನ್ನು ತೊರೆದು ವಿಶೇಷಗುಣಗಳನ್ನಷ್ಟೇ ಹೆಚ್ಚಾಗಿ ಗಮನಿಸಬೇಕು.

೩) ಬಣ್ಣನೆಯಲ್ಲಿ ಒಂದು ಕ್ರಮವಿರಲಿ; ಪ್ರಮಾಣಬದ್ಧತೆಯಿರಲಿ. ಆಯಾ ಮಾತುಗಳಿಗೆ ಸರಿಯಾದ ಸ್ಥಲ ದೊರೆಯಲಿ!

೪) ಶೈಲಿಯು ಸುಲಭವಿರಲಿ; ವರ್ಣ್ಯವಾದ ಪ್ರಸಂಗಕ್ಕೆ ಉಚಿತವಾದ ಶಬ್ದಯೋಜನೆಯಿರಲಿ. ಕೋಮಲ ಪ್ರಸಂಗವನ್ನು ಬಣ್ಣಿಸುವಾಗ ಲಲಿತ ಶಬ್ದಗಳನ್ನೂ ಭೀಕರಪ್ರಸಂಗದ ಬಣ್ಣನೆಯಲ್ಲಿ ಕರ್ಕಶ ಶಬ್ದಗಳನ್ನೂ ಉಪಯೋಗಿಸಬೇಕು.

೫) ಅಲಂಕಾರಗಳನ್ನು ಮಿತಿಯಾಗಿ ಸೇರಿಸಿರಿ. ಅವು ಶೈಲಿಗೆ ಸೊಬಗನ್ನು ದಯಪಾಲಿಸುವವು ನಿಜ. ಆದರೆ ಅವುಗಳ ಅತಿಯಾದ ಉಪಯೋಗದಿಂದ ಶೈಲಿಯು ದುರ್ಬೋಧವಾದದದ್ದಾಗುವುದು.

ಆ) ವಿಶೇಷ ಪರಿಚಯ:—

ಇಡೀ ವಿಶ್ವವೇ ಬಣ್ಣನೆಗೆ ಯೋಗ್ಯವಾದ ವಿಷಯ. **ಬಣ್ಣನೆಯು ಬರಹದ ತುದಿ-ಮೊದಲು.** ಬರಹವು ಬಣ್ಣನೆಯಿಂದ ಪ್ರಾರಂಭವಾಗಿ ಬಣ್ಣನೆಯಲ್ಲಿಯೆ ಕೊನೆಗಾಣುವುದು. ಬಣ್ಣನೆಯು ಬಾಲಕರ ಆಟ, ಕವಿಗಳ ಕನಸು. ಅದುದರಿಂದ ಬಣ್ಣನೆಯು ತೀರ ಸುಲಭವಾದುದೂ ಉಂಟು; ತೀರ ಬಿಗಿಯಾದುದೂ ಉಂಟು.

ನಾವಿಲ್ಲಿ ಆರಿಸಿದುದು ಕೆಲವು ಸುಲಭ ವಿಷಯಗಳನ್ನು. ಅವುಗಳಲ್ಲಿ ಕೆಲವು ಮಾದರಿಯ ಬಣ್ಣನೆಗಳನ್ನು ಬರೆದು ತೋರಿಸಿ, ಅಂಥವುಗಳನ್ನು ವಿದ್ಯಾರ್ಥಿಗಳು ಬರೆಯಬೇಕೆಂದು ಕೆಲವು ವಿಷಯಗಳನ್ನು ಸೂಚಿಸಿರುವೆವು. ಮಾದರಿಗಳನ್ನನುಕರಿಸಿ ಬಾಲಕರು ಸೂಚಿತ ವಿಷಯಗಳ ಮೇಲೆ ನಿಬಂಧಗಳನ್ನು ಬರೆಯುವ ಅಭ್ಯಾಸವನ್ನು ಮಾಡಬೇಕು.

ಮಾದರಿಯ ನಿಬಂಧಗಳು.

೧ ವೆಸ್ಟಮಿನಿಸ್ಟರ ಅಬೆ.

೧) **ಉಪಕ್ರಮ:**—ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನ ಮಂದಿರವಿದು. ಇಲ್ಲಿ ಸತ್ತ ಸಾರ್ವಭೌಮರು ಮಲಗಿರುವರು. ಕವಿಪುಂಗವರು ಒರಗಿರುವರು. ಸತ್ತವರ ಸ್ಮಾರಕವೆಂದು ಇದಕ್ಕಿಂತ ಘನತರ ಯಾವ ಮಂದಿರವು ಜಗತ್ತಿನಲ್ಲಿ ಇನ್ನೆಲ್ಲಿಯೂ ಇಲ್ಲ

೨) **ಕಟ್ಟಡ:**- ಹೊರಗಿನಿಂದ ಉತ್ತಮವಾಗಿ ಶೃಂಗರಿಸಿದ ಸಣ್ಣ ಬಾಗಿಲೊಂದು ಕಾಣುತ್ತಿದೆ. ಒಳಗೆ ಮಾತ್ರ ಕಟ್ಟಡವು ಭವ್ಯವಾಗಿದೆ. ನಡುವೆ ಬಿಟ್ಟ ಸಣ್ಣ ಹಾದಿಯ ಎಡಬಲಕ್ಕೆ ರಾಜಕಾರಣಚತುರರ ಶಿಲಾಮೂರ್ತಿಗಳಿವೆ. ಮೊದಲು ಕಣ್ಣಿಗೆ ಬೀಳುವ ದೃಶ್ಯವೇ ಇದು. ರಾಜರಿಗಿಂತ, ಕವಿಗಳಿಗಿಂತ, ಇವರೇ ಆಂಗ್ಲರ ಕೀರ್ತಿಧ್ವಜವನ್ನು ನಿಲ್ಲಿಸಿದರೆಂದು ಇಲ್ಲಿಯವರ ಅಭಿಪ್ರಾಯವೆಂದು ಕಾಣುತ್ತಿದೆ. ಸಹಜವಾಗಿ ಮೇಲೆ ನೋಡಲು, ಅಲ್ಲಿ Earl of Chatham ನು ನನ್ನ ಕಡೆಗೆ ನೋಡುತ್ತ ನಿಂತಿದ್ದನು. ಹಾಗೇ ಎದುರಿಗೆ ದಿಟ್ಟಿಸಿ ನೋಡಿದೆ. **ಗ್ಲ್ಯಾಡ್‌ಸ್ಟನ್, ಪೂಲ್ಕ್ಸ್, ಡಿಸ್ರೇಲಿ** ಮೊದಲಾದವರು ಕಣ್ಣಿಗೆ ಬಿದ್ದರು. ಇವೇ ಮೊದಲಾದ ಶಿಲಾಮೂರ್ತಿಗಳ ನಡುವೆ ಹಾಯ್ದು ಪಾದ್ರಿಯ ಆಸನದ ಕಡೆಗೆ ಹೋದೆ. ಅಲ್ಲಿ ಉತ್ತಮವಾದ ಕೆತ್ತನೆಯ ಕೆಲಸವು ಕಣ್ಣಿಗೆ ಬಿತ್ತು. ಬಂಗಾರದ ಬಣ್ಣವನ್ನು ಅದಕ್ಕೆ ಕೊಟ್ಟಿದ್ದರು.

೩) **ಕವಿಗಳ ಮೂಲೆ:**—ಆ ಮೇಲೆ ನನಗೆ ಬೇಕಾದ Poets' Corner, **ಕವಿಗಳ ಮೂಲೆಗೆ** ಹೋದೆ. ಮೊನ್ನೆ ಮೊನ್ನೆ ತೀರಿಕೊಂಡ ಕಿಪ್ಲಿಂಗ ಕವಿಯ ಮೇಲೆ ಹಾಕಿದ ಕಲ್ಲು ಅಲ್ಲಿ ಕಣ್ಣಿಗೆ ಬಿತ್ತು. ಅದಕ್ಕೆ ತುಸು ದೂರದಲ್ಲಿಯೆ **ಹಾರ್ಡಿಯು** ಒರಗಿದ್ದನು. **ಮೆಕಾಲೆ, ಜಾನ್ಸನ್. ಗೋಲ್ಡ್‌ಸ್ಮಿಥ್**-ಎಲ್ಲರಿಗೂ ಒಂದೊಂದು ಹಿಡಿ ಮಣ್ಣನ್ನು ನಾವು ಕೊಡುವಂತೆ, ಒಂದೊಂದು ಕಲ್ಲನ್ನು ಇಲ್ಲಿ ಕೊಟ್ಟಿದ್ದಾರೆ. ಈ ಕಲ್ಲಿನ ಮೇಲೆ ಹಾಯ್ದಾಡುತ್ತ ನಾವು ಹೋಗುತ್ತೇವೆ. ಪ್ರತಿಯೊಂದು ಹೆಜ್ಜೆಯ ಬುಡಕ್ಕೆ

ಬಿಜ್ಜೆ (ವಿದ್ಯೆ) ಯ ಭಾರವನ್ನು ತುಳಿಯುತ್ತೇವೆ. ಅಡಿಗಡಿಗೆ ಇತಿಹಾಸವನ್ನು ದಾಟುತ್ತೇವೆ! ಎಂಥ ವಿಚಿತ್ರ? ಆದರೂ ಈ ಕವಿಗಳ ಮೂಲೆಯಲ್ಲಿ ನಡೆದಾಗ ಭವ್ಯತೆಯು ಬಂದು ಕಣ್ಣೆದುರು ನಿಲ್ಲುತ್ತದೆ. ಹೃದಯವು ಕಂಪಿಸುತ್ತದೆ. ಕಡೆಗೆ ದಿಕ್ಕು ತಪ್ಪಿದಂತಾಗಿ-ಯಾರನ್ನು ತುಳಿದರೇನು? ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು; ಮಣ್ಣು! ಎಂದು ಮನಸ್ಸಿಗೆ ಬಂದಂತೆ ಮನುಷ್ಯನು ನಡೆದುಹೋಗುತ್ತಾನೆ.

೪) **ವೈಜ್ಞಾನಿಕರ ಮೂಲೆ:**—ಇದಕ್ಕೆ ಸಮೀಪವಾಗಿ ವೈಜ್ಞಾನಿಕರ ಮೂಲೆಯಿದೆ. ಇಲ್ಲಿ **ನ್ಯೂಟನ್‌ನ** ದೊಡ್ಡ ಶಿಲಾಮೂರ್ತಿಯನ್ನು ನಿಲ್ಲಿಸಿದ್ದಾರೆ. **ಡಾರ್ವಿನ್, ಹರ್ಶಲ್** ಮೊದಲಾದವರ ಮೇಲೆ ಕಲ್ಲೊಗೆದಿದ್ದಾರೆ. ಇದಕ್ಕೆ ಹತ್ತಿರದಲ್ಲಿ ವ್ಯಾಪಾರಿಗಳು, ವಾಸ್ತುಶಿಲ್ಪಿಗಳು, ಸರದಾರರು, ಸೇನಾಪತಿಗಳು ಮೊದಲಾದ ಅನೇಕರಿಗೆ ಜಾಗವು ದೊರೆತಿದೆ. ಇವರಲ್ಲಿ ಎಲ್ಲರೂ ಅಷ್ಟೊಂದು ಹೆಸರುವಾಸಿಯಾದವರಲ್ಲ. '**ಪಿಟ್**'ಯ ಮೇಲೆ ಜಾಗ ದೊರೆತಂತೆ ಕಾಣುತ್ತಿದೆ.

೫) **ಅರಮನೆ:**—ಆಮೇಲೆ ಅರಸರ ಅರಮನೆಗೆ ಹೋದೆ 'ರಾಜದಂಡವೂ ಕಿರೀಟವೂ ಕೆಳಕ್ಕುರುಳಲೇಬೇಕೆ'ಂಬುದು ನಿಜವಾಗಿದ್ದರೂ ಸತ್ತಮೇಲೆ ಸಹ ಅವರಿಗೊಂದು ವಿಶಿಷ್ಟಸ್ಥಾನವನ್ನು ಕಲ್ಪಿಸಿದ್ದಾರೆ. ಇದಕ್ಕೆ Royal Chapel (ರಾಜವಿಭಾಗ) ಎಂದು ಹೆಸರು. ಪಾಪಿಷ್ಟರಾದ ಅರಸರಿಗೂ ಸಹ ಇಲ್ಲಿ ಶ್ರೇಷ್ಠವಾದ ಸ್ಥಾನವನ್ನು ಕಲ್ಪಿಸಿದ್ದಾರೆ. **ಸಿಂಹದೆದೆಯ ರಿಚರ್ಡ್, ೩ನೆಯ ಎಡ್ವರ್ಡ್, ರಾಣಿ ಎಲಿಜಾಬೆಥ್** ಮೊದಲಾದ ಅರಸು-ಅರಸಿಯರು ಈ ರಾಜಮಂದಿರದಲ್ಲಿ ಒರಗಿದ್ದಾರೆ. ಮುಖ್ಯತ: ಗೋರಿಯ ಮೇಲೆ ಆ ಆ ವ್ಯಕ್ತಿಗಳು ಮಲಗಿಕೊಂಡಂತೆ ಮೂರ್ತಿಯನ್ನು ಕಟೆದಿದ್ದಾರೆ. ಈ ಗೋರಿಗಳ ನಡುವೆ ಹಾಯ್ದು ಅರಸರ ಪ್ರಾರ್ಥನಾಮಂದಿರಕ್ಕೆ ಹೋಗಬಹುದು. ಇಲ್ಲಿಯ ಕೆತ್ತನೆಯ ಕೆಲಸವೆಲ್ಲ ಬಂಗಾರದ ಬಣ್ಣದಲ್ಲಿಯೇ ಆಗಿದೆ. ಮಂದಿರದ ಹಿಂದೆ ಭವ್ಯವಾಗಿ ೭ನೆಯ **ಹೆನ್ರಿಯ** ಗೋರಿಯು ನಿಂತಿದೆ.

ಸಮ್ರಾಟರ ಪಟ್ಟಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಒಂದು ಕಲ್ಲುಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗು

ವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂಡಬೇಕು. ಈ ಸಿಲೆಯನ್ನೊಳಗೊಂಡ ಸಿಂಹಾಸನವು ಈ ಮಂದಿರದ ಒಂದು ಭಾಗದಲ್ಲಿದೆ. ಅದರಲ್ಲಿ ಯಾವ ಸಿದ್ಧಿಯಿದೆಯೋ, ಯಾವ ಮಂತ್ರವಿದೆಯೋ ನಾನರಿಯೆ.

೬) **ಉಪಸಂಹಾರ:**—ಇದನ್ನೆಲ್ಲ ನೋಡಿದರೆ ' ಮರ್ತ್ಯತ್ವವೇ ! ಎಷ್ಟು ಗೋರಿ ಗುಂಪುಗಳು ಇಲ್ಲಿವೆ ! ನೋಡಿ ಅಂಜು ' ಎಂಬ ಓರ್ವ ಕವಿಯ ಹಾಡು ನೆನಪಿಗೆ ಬರುತ್ತದೆ.

—ವಿನಾಯಕ

೨ ಗೆರಸೊಪ್ಪೆಯ ಜಲಪಾತ.

೧) **ಉಪಕ್ರಮ-ಗೆರೆಸೊಪ್ಪೆಯ** ಹೆಸರನ್ನು ಕೇಳಿದವರು ಬಹಳ; ಅದನ್ನು ನೋಡಿದವರು ಕೆಲವರು ಮಾತ್ರ. ನಿಜ, ನಾವು ಕೇಳಿದುದನ್ನೆಲ್ಲಾ ನೋಡಲು ಬಂದೀತೆ? ಆದರೆ ಗೆರಸೊಪ್ಪೆಯು ನಮ್ಮ ನಾಡಿನಲ್ಲಿದ್ದು ನಾವು ಅದನ್ನು ನೋಡದೆ ಹೋದರೆ ಹೇಗೆ? ಅದು ಪ್ರಪಂಚದ ಅತಿ ಸೊಗಸಿನ ಸ್ಥಳಗಳಲ್ಲಿ ಒಂದೆನಿಸುವ ಯೋಗ್ಯತೆಯುಳ್ಳದ್ದು.

೨) **ಜಲಪಾತ:**—ನೀವು ಮೊರೆಮೊರೆದು ಹೋಗುವ ನೋಟವು ನಮ್ಮ ಸಂತೋಷವನ್ನು ಅರಳಿಸುವುದು. ಅದರಲ್ಲೂ ಅದು ಒಮ್ಮೆಲೇ ಕೆಳಗೆ ದುಮುಕುವ ನೋಟವು ಒಳ್ಳೆಯ ಸಾಹಸದ ಕಲ್ಪನೆಯನ್ನು ಹುಟ್ಟಿಸುವುದು. ಈ ನೀರು ಎಷ್ಟು ಸಾಹಸದಿಂದ ಕೆಳಕ್ಕೆ ಹಾರಿತು-ಎಂದೆಮಗೆ ಎನಿಸುವುದು.

ಗೆರೆಸೊಪ್ಪೆಯಲ್ಲಿ ಹೀಗೆಯೆ ಇದೆ. ಅಲ್ಲಿ ಹಾರುವುದು ಚಿಕ್ಕ ಚರಂಡಿಯಲ್ಲ. ಒಂದು ಫರ್ಲಾಂಗಿಗಿಂತ ಅಗಲವಾದ ಒಂದು ನದಿಯೇ ಕೆಳಕ್ಕೆ ದುಮುಕುವುದು. ದುಮುಕಾಟವೂ ಚಿಕ್ಕದಲ್ಲ; ಹತ್ತೆಂಟು ಆಳು ಪ್ರಮಾಣ ಹಾರುವದಲ್ಲ; ಎಂಟು ನೂರು ಅಡಿಗೂ ಹೆಚ್ಚಿಗೆ ಹಾರುವುದು. ಹೀಗೆ ಬೀಳುವ ನೀರಿಗೆ **ಜಲಪಾತ** ಇಲ್ಲವೆ **ಜೋಗು** ಎನ್ನುವುದು ರೂಢಿ.

೩) **ಸಾಮಾನ್ಯ ವರ್ಣನೆ:**—ಪಶ್ಚಿಮ ಘಟ್ಟಗಳಿಂದ ಕೆಳಕ್ಕೆ ಹಾರುವ ನದಿಯು **ಶರಾವತಿಯು**. ಗೆರೆಸೊಪ್ಪೆಯ ಹೆಸರಾದ ಜೋಗು,

ಈ ಶರಾವತಿಯ ಜಲಪಾತವಲ್ಲದೆ ಬೇರೆಯಲ್ಲ. ಎರಡು ಬೆಟ್ಟಗಳ ಎಡೆಯಲ್ಲಿ ಅದು ಹರಿಯುವುದು. ಮಲೆನಾಡಿನ ನೀರನ್ನೆಲ್ಲಾ ಕೂಡಿಸಿಕೊಂಡು ಆ ನದಿಯು ಬರುವುದು. ಮುಂದೆ ಆಳವಾದ ಕಣಿವೆಯಿದೆ. ಸಾಧಾರಣ ಒಂಬತ್ತುನೂರು ಅಡಿಗಳಷ್ಟು ಆಳವಿದೆ. ಅದನ್ನು ಕಂಡು, ನದಿಯು ನಿಂತು ಯೋಚಿಸುವುದು-ಹಾರುವುದೇ, ಬಿಡುವುದೇ, ಎಂದು. ಹಾರದೆ ಉಪಾಯವಿಲ್ಲ; ಅದಕ್ಕೆ ಹೋಗಲು ಬೇರೆ ದಾರಿಯಿಲ್ಲ; ಹಾರಿಯೇ ಬಿಡುವುದು....

೪) **ನಾಲ್ಕು ತಡಿಸಲುಗಳು**:—ಹಾರುವಾಗ ನಾಲ್ಕು ತಡಿಸಲುಗಳಾಗಿ ಬೀಳುವುದು. ಮೊದಲಿನ ತಡಿಸಲಿನ ಹೆಸರು **ರಾಜಾ** ಎಂದು. ಅದು ಮೇಲಿಂದ ಕೆಳಕ್ಕೆ ಒಂದೇ ದುಮುಕಾಟವನ್ನು ಮಾಡುವುದು. ಹಾರಿದ ಭರಕ್ಕೆ ಗಾಳಿಯ ಅಬ್ಬರದಿಂದಲೇ ಅದರ ನೀರು ತುಂತುರಗಳಾಗಿ ಕೆಳಗೆ ಬೀಳುವವು. ಈ ತಡಸಲಿನ ಆಳವು ೮೩೦ ಅಡಿಗಳಷ್ಟಿದೆ

ಇದರ ಮಗ್ಗುಲಿಗೆ '**ಅಬ್ಬರ**' ತಡಸಲು ಎಂದಿದೆ. ಅಬ್ಬರ-ಎಂದರೆ ತಿಳಿಯದೇನು? ನದಿಯ ಈ ಭಾಗದ ನೀರು, ಬಂಡೆಯನ್ನು ಅಬ್ಬರದಿಂದ ಕೊರೆದು ಭೋರ್ಗರೆಯುತ್ತ ವಕ್ರವಾಗಿ ಸುತ್ತುವುದು. ಕೊನೆಗೆ ಎರಡು ಸೀಳುಗಳಾಗಿ ಒಡೆದು ಕೆಳಗಿನ ಕಣಿವೆಯನ್ನು ಸೇರುವುದು. ಇದು ಎಬ್ಬಿಸಿದಷ್ಟು ಗದ್ದಲವನ್ನು, ಉಳಿದ ತಡಸಲುಗಳು ಎಬ್ಬಿಸುವದಿಲ್ಲ.

ಇನ್ನುಳಿದ ಎರಡು ತಡಸಲುಗಳು, ತಲೆಯ ಬುಡದಿಂದ ತುದಿಯ ತನಕ ಬಂಡೆಯ ಗೋಡೆಯ ಮೇಲೆ ಕುಣಿಯುತ್ತ, ಒಂದಕ್ಕೆ ಹತ್ತಾಗಿ ಹತ್ತಕ್ಕೆ ನೂರಾಗಿ, ನೂರಕ್ಕೆ ಸಾವಿರಾಗಿ ಒಡೆದು ಕೆಳಗಿಳಿಯುವವು. ನರ್ತಿಸುವ ಚದುರೆಯರಂತೆ ಅವುಗಳ ನೋಟವಿದೆ. ಈ ನಾಲ್ಕು ತಡಸಲುಗಳ ನೋಟವು ಈ ಪ್ರಾಂತದ ಒಂದೊಂದು ಕಡೆಯಿಂದ ಒಂದೊಂದು ತೆರನಾಗಿ ತೋರುವುದು.

೫) **ನೋಡಲು ತಕ್ಕ ಸಮಯ**:—ಮಳೆಗಾಲದಲ್ಲಿ ಬರೀ ನೀರಿನ ನೆರೆಯೇ ಅಲ್ಲಿ. ನೀರು ಬಿದ್ದು ಕೆಳಗಿನ ಕಣಿವೆಯಲ್ಲಿ ಮುಗಿಲಾಗಿ ಮುಚ್ಚಿ ಬಿಡುವುದು. ನೀರಿನ ಆರ್ಭಟೆಯಲ್ಲದೆ, ಅದು ಉಂಟುಮಾಡಿದ ಯಾವ

ನೋಟವೂ ಮುಗಿಲಿನಿಂದ ಕಾಣಲು ಸಿಗುವುದಿಲ್ಲ. ಸೆಕೆಗಾಲದಲ್ಲಿ ನದಿಯ ನೀರು ಇಂಗುತ್ತ ಬಂದು ನದಿಯು ಮುಪ್ಪಿನಿಂದ ನಡೆಯುವ ಮುದುಕ ನಂತೆ ಕಾಣುವುದು. ಆದರೆ ನವಂಬರ-ಡಿಶೆಂಬರ ತಿಂಗಳುಗಳಲ್ಲಿ ನೀರು ಸಾಕಷ್ಟಿದೆ; ಮುಗಿಲಿನ ಅಪಾಂತರವೂ ಇಲ್ಲ. ಆಗ ಇದನ್ನು ನೋಡಲು ಎಲ್ಲ ದೇಶಗಳಿಂದಲೂ ಜನರು ಬರುತ್ತಾರೆ.

೬) **ಉಪಸಂಹಾರ:**—ಇಂಥ ಅದ್ಭುತರಮ್ಯ ಜಲಪಾತಗಳನ್ನು ಜಗತ್ತಿಗೆ ತೋರಿಸುವ ಸೌಭಾಗ್ಯವು ನಮಗೆ ದೊರೆತದ್ದಕ್ಕಾಗಿ ನಾವು ತುಂಬಾ ಅಭಿಮಾನ ತಾಳಬೇಕಲ್ಲವೇ?

—ಕಾರಂತ.

೩ ಸರ್ವಜ್ಞನು.

ಜಗತ್ತಿನಲ್ಲಿಯ ಸತ್ಪುರುಷರೆಲ್ಲರೂ ಒಂದು ಬಗೆಯ ಕ್ರಾಂತಿ ಪುರುಷರೇ! ತಮ್ಮ ಮನಸ್ಸನ್ನು ಹಾಳುಮಾಡಿ ಅದರಲ್ಲವರು ಆನಂದದ ಬಲರುಗಳನ್ನು ನೆಟ್ಟವರು. ನಿರಂತರವಾಗಿ ಕಂಪನ್ನು ಬೀರುವ ಆ ಬಾಡದ ಹೂಗಳ ಪರಿಮಳವು ಅನ್ಯರ ಮನಸ್ಸಿನಲ್ಲಿಯೂ ಅದೇ ಮಾದರಿಯ ವಿಪ್ಲವ ವನ್ನೆಬ್ಬಿಸಿ ಅವರಿಗೂ ಶಾಶ್ವತವಾದ ಸುಖವನ್ನು ಒದಗಿಸಿ ಕೊಟ್ಟಿರುವುದು. ಈ ದೃಷ್ಟಿಯಿಂದ ಅವರೆಲ್ಲರೂ ಒಂದೇ ಬಳಗದವರು. ಆದರೂ ವ್ಯಕ್ತಿತ್ವ ವೆಂಬುದು ಅವರನ್ನು ಬಿಟ್ಟಿಲ್ಲ. ಅವರ ಉಪದೇಶದ ಮಾದರಿಯು ಅವರ ವೈಶಿಷ್ಟ್ಯವನ್ನವಲಂಬಿಸಿದೆ. ಹಲವರ ಉಪದೇಶದ ಪದ್ಧತಿಯು ಸೌಮ್ಯ ಸ್ವರೂಪದ್ದಿದ್ದರೆ, ಹಲವರದು ಜ್ವಾಲಾಮುಖಿಯನ್ನೇ ಹೋಲುತ್ತಿದೆ

ನಮ್ಮ **ಸರ್ವಜ್ಞನು** ಎರಡನೆಯ ತರಗತಿಗೆ ಸೇರಿದವನು. ಅವನು ಹುಟ್ಟಾ ಸ್ವತಂತ್ರನು; ಯಾವ ಬಗೆಯ ಕಟ್ಟಿಗೂ ಒಳಗಾಗದವನು. ಇತಿಹಾಸವು ಅವನ ಕಾರ್ಯದ ವಿಷಯವಾಗಿ ಮೌನವನ್ನು ತಾಳಿದ್ದರೂ, ಅವನ ವೀರ್ಯವತ್ತಾದ ವಚನಗಳು ಅವನ ಕೆಲಸದ ಮಹತ್ವವನ್ನು ಸಾರಿಹೇಳುತ್ತಿವೆ.

ಸರ್ವಜ್ಞನು ಪ್ರಕೃತಿಮಾತೆಯ ಚೊಚ್ಚಿಲಮಗ. ಆಕೆಯ ಮಡಿಲಲ್ಲಿ ಮನಬಂದಂತೆ ನಲಿದಾಡಿ ಆಕೆಯಿಂದಲೇ ಬುದ್ಧಿಯನ್ನು ಕಲಿತವನು. ನಾಡಿನಲ್ಲೆಲ್ಲ ಅಲೆದಾಡಿ ದೊರಕಿಸಿದ ಅನುಭವಗಳೇ ಆತನ ಜ್ಞಾನ್ಮೆಯ ಆಡಿಗಲ್ಲು.

ಯಾವ ಬಗೆಯ ದಾಕ್ಷಿಣ್ಯವನ್ನೂ ಇಡದೆ ಸರ್ವಜ್ಞನು ಕಂಡಂತೆಯೆ ಆಡಿದವನು. ಭೂಮಂಡಲವು ಮುನಿದು ಕೆಂಡದಂತಾದರೂ ಅದರ ಪರಿವೆ ಅವನಿಗಿಲ್ಲ. ಅವನು ಮಾಡಿದಂತೆ ಆಡಿದವನು; ನುಡಿದಂತೆ ನಡೆದವನು. ಖಂಡತುಂಡಾದ ಅವನ ನುಡಿಯು ಸಿಡಿಲಿನಂತೆ ಜನರನ್ನು ಹೊಡೆದು ಅವರಲ್ಲಿ ಅಭೂತಪೂರ್ವವಾದ ಕ್ರಾಂತಿಯನ್ನುಂಟುಮಾಡಿರಲಿಕ್ಕೆ ಸಾಕು. ಸರ್ವಜ್ಞನು ಕನ್ನಡ ನಾಡಿನ ಕಡುಗೊಡಲಿ! ಈತನ ಏಟಿನಿಂದ ಮುಳ್ಳುಮರಗಳೆಷ್ಟೋ ಮಣ್ಣುಪಾಲಾದವು. ಸಮಾಜವು ನಿಷ್ಕಂಟಕವಾಯಿತು.

ಸರ್ವಜ್ಞನು ಸ್ವಾತಂತ್ರ್ಯಪ್ರಿಯನಿದ್ದರೂ ಸ್ವೈರಾಚಾರಿಯಲ್ಲ; ಕ್ರಾಂತಿಕಾರಕನಿದ್ದರೂ ಶಾಂತಿಯನ್ನು ತೊರೆದವನಲ್ಲ. ಅವನು ಮತಪಂಥಗಳ ಗಲಾಟೆಯಲ್ಲಿ ವಿಶೇಷವಾಗಿ ಸಿಲುಕಿಲ್ಲ. ಜಾತಿಯಿಂದ ವೀರಶೈವನಿದ್ದರೂ ಅವನು ಸರ್ವಸಮ್ಮತವಾದ ಸನಾತನ ತತ್ವಗಳನ್ನೆಯೆ ಹೆಚ್ಚಾಗಿ ಹೇಳಿರುವನು.

ಮೇಲಾಗಿ ಸರ್ವಜ್ಞನು ಜನಸಾಮಾನ್ಯರ ಮುಂದಾಳು. ಅವರಿಗಾಗಿ ಅವತರಿಸಿದವನು. ಜನತೆಯನ್ನುದ್ಧರಿಸಲು ಅವನು ತನ್ನ ಕಿರಿಗನ್ನಡ ನುಡಿಯನ್ನೂ, ಅನುಭವಜ್ಞಾನವನ್ನೂ ಧಾರೆಯೆರೆದವನು. ಒಂದೇ ಸ್ಥಲದಲ್ಲಿ ಬಹುದಿನ ನಿಲ್ಲದೆ, ಅಖಂಡವಾಗಿ ಎಲ್ಲೆಡೆಯಲ್ಲಿ ಸಂಚರಿಸಿ ಮಲಗಿದ ಜನರನ್ನು ಬಡಿದೆಬ್ಬಿಸಿದ ಮಹಾತ್ಮನಿವನು. ಆದ್ದರಿಂದ 'ಜನಯುಗಕ್ಕೆ' ತಕ್ಕವನಾದ ಇವನ ಹುರಿಗೊಳಿಸುವ ಉಪದೇಶದ ಬೆಳಕಿನಲ್ಲಿ ನಮ್ಮ ತರುಣರು, ಮುಂದಿನ ಏಳ್ಗೆಯ ದಾರಿಯನ್ನು ಕಾಣಲೆಂದು ಹಾರೈಕೆ.

— ಚಿಚ್ಚಕೋರ.

ಅಭ್ಯಾಸ ೧೦.

ಮಾದರಿಯ ರೂಪರೇಷೆಗಳನ್ನು ಉಪಯೋಗಿಸಿ ನಿಬಂಧಗಳನ್ನು ಬರೆಯಿರಿ.

೧ ವಸ್ತುಗಳು.

೧ ನನ್ನ ಗಡಿಯಾರ.

೧ **ಉಪಕ್ರಮು:**-ನನ್ನ ಗಡಿಯಾರದ ಹುಚ್ಚು. ೨ **ಪಡೆದ ರೀತಿ:**-ಯಾರಿಂದ? ಎಂದು? ಹೇಗೆ? ೩ **ಸೊಬಗು:**-ಎಂತಹದು? ೪ **ಉಪಯೋಗ:**-ಅಭ್ಯಾಸದಲ್ಲಿ, ಪ್ರವಾಸದಲ್ಲಿ. ೫ **ಉಪಸಂಹಾರ:**-ನನ್ನ ನಡತೆಯನ್ನು ಸರಿಪಡಿಸಿದ ಗೆಳೆಯ.

ಅಂತಹ ಅನ್ಯ ವಿಷಯಗಳು:—

(ಅ) ನನ್ನ ಉಂಗುರ, (ಆ) ನನ್ನ ಕೊಡೆ, (ಇ) ನನ್ನ ಸೈಕಲ್ಲು.

೨ ವನಸ್ಪತಿಗಳು.

೧ ನನ್ನ ಮಾಮರ.

೧ **ಉಪಕ್ರಮು:**-'ಅಜ್ಜ, ನೆಟ್ಟ ಆಲದ ಮರ' ಈ ಬಗೆಯ ಅಭಿಮಾನವಲ್ಲ, ೨ **ಸ್ಥಳ:**-ಎಲ್ಲಿ? ೩ **ಸ್ವರೂಪ:**-ಅದರ ವಿಸ್ತಾರ, ಆಕಾರ, ನೆಳಲು, ತಂಪು. ೪ **ಉಪಯೋಗ:**-ಸೊಬಗು-ತಂಪು-ತಸಿವಣ್ಣುಗಳು. ೫ **ಉಪಸಂಹಾರ:**—ಅದನ್ನೆಂದಾದರೂ ಮರೆಯಬಹುದೇ?

ಅಂತಹ ಅನ್ಯ ವಿಷಯಗಳು:—

ಬಾಳೆ, ದಾಳಿಂಬು, ದ್ರಾಕ್ಷಿ, ಮಲ್ಲಿಗೆ.

೩) ಪ್ರಾಣಿಗಳು.

೧ ನನ್ನ ಆಕಳು.

೧ **ಉಪಕ್ರಮು:**- ಆಕಳು ತಾಯಿ ನಮಗೆ. ೨ **ಸ್ವರೂಪ:**-ನಿಲುವು, ಬಣ್ಣ, ಕೊಂಬುಗಳು. ೩ **ಸ್ವಭಾವ:**-ಇರುಕಳಿಲ್ಲ. ತೀರ ಸಾದು. ಮಮತೆಯ ಮೂರ್ತಿ. ೪ **ಉಪಸಂಹಾರ:**-ಹಸುವೇ (ಆಕಳೇ, ಮಗುಗಳಿಗೆ ಕಸುವನ್ನೀಯುವ ಕಾಮಧೇನು.

ಅಂತಹ ಅನ್ಯ ವಿಷಯಗಳು:—

೧ ಸಿಂಹ, ಹುಲಿ, ಚಿಗರಿ. ೨ ನವಿಲು, ಪಾರಿವಾಳ, ಕೋಗಿಲೆ, ಗಿಳಿ,

೪) ಕಟ್ಟಡಗಳು:—

೧ ನನ್ನ ಮನೆ.

೧ **ಉಪಕ್ರಮ:**—ಮನೆಯು ಸಂತಸದ ಸೊನೆಯು. ೨ **ಪರಿಸರ:**—ಎಲ್ಲಿದೆ? ಸುತ್ತಲಿನ ಬನಸಿರಿ. ೩ **ಆಕಾರ:**—ಆಕೃತಿ, ಕೋಣೆಗಳು, ಅಂತಸ್ತುಗಳು. ೪ **ಬಳಗ:**—ಅನುಕೂಲತೆಗಳು, ಬಂಧುಗಳು, ಸೇವಕರು. ೫ **ಉಪಸಂಹಾರ:**—ವರಂ ಪರ್ಣಶಾಲಾ ಪ್ರಮೋದೇನ ಪೂರ್ಣಾ.

ಅನ್ಯ ವಿಷಯಗಳು:—

ಶಾಲೆ, ಗುಡಿ, ಅರಮನೆ, ನಾಟ್ಯಗೃಹ.

೫) ಯಂತ್ರಗಳು:—

೧ ನನ್ನ ಮೋಟಾರು.

೧ **ಉಪಕ್ರಮ:**—ಇದು ಮೋಟಾರ ಯುಗವು. ೨ **ಪಡೆದ ರೀತಿ:**—ಕೊಂಡ ಕಾರಣ ಪರಿಸ್ಥಿತಿ. ೩ **ವರ್ಣನೆ:**—ಆಕಾರ, ಸೀಟುಗಳು. ೪ **ಉಪಯೋಗ:**— ವ್ಯವಹಾರದಲ್ಲಿ ಅಲೆದಾಡಲು, ಪ್ರವಾಸ ಮಾಡಲು. ೫ **ಉಪಸಂಹಾರ:**—ಇದರ ಉಪಕಾರವನ್ನು ಮರೆಯುವಂತಿಲ್ಲ.

ಅನ್ಯ ವಿಷಯಗಳು:—

ನನ್ನ ಹಡಗ, ವಿಮಾನು, ಮುದ್ರಣಯಂತ್ರ, ಪಂಪು, ಟೆಲಿಫೋನ, ಆಕಾಶವಾಣಿ.

೬) ಊರುಗಳು:—

೧ ನನ್ನ ಹಳ್ಳಿ.

೧ **ಉಪಕ್ರಮ:**—ಹಳ್ಳಿಯೆ ಸೌಭಾಗ್ಯದ ಬಳ್ಳಿ. ೨ **ಪರಿಸರ:**—ನಿಸರ್ಗದ ಸೊಬಗು, ಹಳ್ಳ, ಬೆಟ್ಟ. ೩ **ರಚನೆ:**—ಆಕಾರ, ವಿಸ್ತಾರ, ಪ್ರಮುಖ ಕಟ್ಟಡಗಳು. ೪ **ಜನರು:**—ಜಾತಿ ಪಂಗಡಗಳು. ಸೌಹಾರ್ದ ಸಹಕಾರಗಳು. ೫ **ಉಪಸಂಹಾರ:**—ಸ್ವಂತ ಅಭಿಪ್ರಾಯ-ಅನಿಸಿಕೆ.

ಅನ್ಯ ವಿಷಯಗಳು:—

ಉದ್ಯಾನ, ಪಟ್ಟಣ, ನಿಲ್ದಾಣ, ಐತಿಹಾಸಿಕ ಸ್ಥಳ.

೭) ನಿಸರ್ಗದ ನೋಟಗಳು:—

೧ ನಾನು ಸವಿದ ಮುಂಜಾವು.

೧ **ಉಪಕ್ರಮ:**— ಸಕ್ಕರೆನಿದ್ದೆಯಿಂದ ಒಂದು ದಿವ್ಯದರ್ಶನದ ಅಭಾವ. ೨ **ನಸುಕು:**—ಅರುಣನ ಹೊಂಬೆಳಕು, ಚಿಕ್ಕೆಗಳು ಅಡಗಲಿವೆ. ತಂಗಾಳಿಯು ತೀಡಲಿದೆ. ೩ **ಸೂರ್ಯೋದಯ:**—ಮೂಡಣದ ಸಿರಿ-ಸೊಬಗು, ಬೆಳಕಿನ ಸುಳಿ, ಹಕ್ಕಿಗಳ

ಇಂಚರ. **೪ ನವಜೀವನ:**— ಸೃಷ್ಟಿಯಲ್ಲಿ ನವಚೇತನ. ಸ್ವರ್ಗೀಯ ಸಂತಸ. **೫ ಉಪಸಂಹಾರ:** — ಅದೊಂದು ಹುರುಪಿನ ಹೊಳೆಯು.

ಅನ್ಯ ವಿಷಯಗಳು: —

೧ ವಸಂತಕಾಲ, ಚಳಿಗಾಲ, ಬೆಳದಿಂಗಳು, ಸಾಯಂಕಾಲ.

೨ ನದಿ, ಸರೋವರ, ಸಾಗರ, ಪರ್ವತ, ಜಲಪಾತ.

೮) ಪ್ರಸಂಗಗಳು:—

೧ ನನ್ನ ಬೇಸಿಗೆಯ ಬಿಡುವು.

೧ **ಉಪಕ್ರಮ:**— ಬಿಡುವಿನ ಮಹತ್ವ. ಅದರಿಂದಾಗುವ ಸಂತಸ. ಎಂಥ ಬೆದಗಿನ ಬೀಡಿದು? ಎಂದು ಪ್ರಾರಂಭಿಸಿರಿ. ೨ **ಸ್ಥಲ:**—ಎಲ್ಲಿದೆ? ಹೇಗಿದೆ? ಪರಿಸರ, ವಿಶೇಷ. ೩ **ಕಾರ್ಯಕ್ರಮ:**— ಬೆಳಗಿನಿಂದ ಬೈಗಿನವರೆಗೆ ಮಾಡಿದುದೇನು? ಆಟ-ನೋಟ-ಸಂಗಡಿಗರು. ೪ **ವಿಶೇಷ ಸಂಗತಿ:**—ವಿಶೇಷ ಸಂಗತಿಯೊದಗಿದ್ದರೆ ಅದರ ಬಣ್ಣನೆ. ೫ **ಉಪಸಂಹಾರ:—ಅಭಿಪ್ರಾಯ,** ಮೈ ಮನಸ್ಸಿನ ಮೇಲಾದ ಪರಿಣಾಮ, ಬಿಡುವಿನ ಬೆಲೆ.

ಅನ್ಯ ವಿಷಯಗಳು: —

ಪ್ರವಾಸ, ದೀವಳಿಗೆ, ಹುಟ್ಟಿದ ಹಬ್ಬ, ಮದುವೆ, ಜಾತ್ರೆ.

೯) ವ್ಯಕ್ತಿಗಳ ಪರಿಚಯ:—(ಸ್ವಭಾವ ಚಿತ್ರಗಳು.)

೧ ಸರ್ವಜ್ಞ.

೧ ದಿನಚರಿ, ೨ ಆಶೆ-ಆಕಾಂಕ್ಷೆಗಳು, ೩ ಗುಣದೋಷಗಳು, ೪ ಕಾರ್ಯ, ೫ ವೈಶಿಷ್ಟ್ಯ.

ಅನ್ಯ ವಿಷಯಗಳು:—

ಶ್ರೀಯವರು; ಶ್ರೀನಿವಾಸರು; ಆಲೂರರವರು; ಬೇಂದ್ರೆಯವರು; ತಾರಾನಾಥರು; ಹರ್ಡೇಕರ; ಮಂಜಪ್ಪನವರು; ರಾಜರತ್ನರು; ವೀ. ಸೀ. ಯವರು.

೪ ಕಥನಪರ.

೧ ಎಂದರೇನು? :—

ಒಂದು ಕಾಲಖಂಡದಲ್ಲಿ ಒದಗಿದ ಸಂಗತಿಗಳನ್ನು ಅವು ಒದಗಿದ ಕ್ರಮವನ್ನನುಸರಿಸಿ ಬಣ್ಣಿಸುವದು **ಕಥನಪರ ನಿಬಂಧದ** ಕಾರ್ಯ. ಈ ದೃಷ್ಟಿಯಿಂದ ಅದರಲ್ಲಿ ವರ್ಣನೆಗಳ ಒಂದು ಮಾಲೆಯಿರುವುದೆನ್ನಲು

ಅಡ್ಡಿಯಿಲ್ಲ. ಈ ಮಾಲೆಯು ಮೂಲ ಕಥಾಸೂತ್ರವನ್ನವಲಂಬಿಸಿರುವುದು. ಇದರಲ್ಲಿ—

೧) **ಕಥೆಗಳು,** (೨) **ಜೀವನಚರಿತೆಗಳು,** (೩) **ಐತಿಹಾಸಿಕ ಸಂಗತಿಗಳು**. ಇವು ಅಡಕವಾಗಿರುವವು.

೨) ಬರೆಯುವದೆಂತು?:—ಅ) ಸಾಮಾನ್ಯ ಪರಿಚಯ.

೧) ಕತೆಗಳಲ್ಲಿ ಅಥವಾ ಅನ್ಯ ಪ್ರಸಂಗಗಳಲ್ಲಿ, ಸಂಗತಿಗಳು ಯಾವ ಕ್ರಮದಿಂದ ಒದಗಿರುವವೋ ಅದೇ ಕ್ರಮದಿಂದ ಅವನ್ನು ಬಣ್ಣಿಸಬೇಕು. ಅವುಗಳಲ್ಲಿಯ ಕಾರ್ಯಕಾರಣ ಸಂಬಂಧವನ್ನೂ ಬೇರೆ ಬಗೆಯ ಸಂಬಂಧವನ್ನೂ ಪ್ರಾಮುಖ್ಯದಿಂದ ಹೇಳಬೇಕು.

೨) ನಿಮ್ಮ ವರ್ಣನಕೌಶಲದಿಂದ ವರ್ಣಿತ ಪ್ರಸಂಗವು ಓದುಗರ ಕಣ್ಣುಗಳ ಮುಂದೆ ಕಟ್ಟಿದಂತಾಗಬೇಕು. ಇಷ್ಟು **ನಾಟಕೀಯತೆಯೂ, ವಾಸ್ತವಿಕತೆಯೂ** ನಿಮ್ಮ ನಿಬಂಧದಲ್ಲಿ ಬರಲುಬೇಕು.

೩) ಕಥನ-ವಿಷಯವು ಒದಗಿದ ಸ್ಥಲಕಾಲಗಳನ್ನಾಗಲಿ ಅದರಲ್ಲಿ ಭಾಗವಹಿಸಿದ ವ್ಯಕ್ತಿಗಳನ್ನಾಗಲಿ, ಅದರ ಕಾರಣಪರಿಣಾಮಗಳನ್ನಾಗಲಿ, ವರ್ಣಿಸಿ ನಿಬಂಧವನ್ನು ಪ್ರಾರಂಭಿಸಬೇಕು.

೪) ಅದರಿಂದ ಕಲಿಯಬಹುದಾದ ಪಾಠವನ್ನು ಸೂಚಿಸಿ ಅದನ್ನು ಮುಗಿಸಬಹುದು. ಒಮ್ಮೊಮ್ಮೆ ಅನಿರೀಕ್ಷಿತವಾದ, ಓದುಗರು ಊಹಿಸದಂತಹ, ಮುಕ್ತಾಯವು ಅವರಲ್ಲಿ ಅಚ್ಚರಿಯನ್ನು ಹುಟ್ಟಿಸುವದುಂಟು.

ಆ) ವಿಶೇಷ ಪರಿಚಯ:—

೧) ಕತೆಗಳು:— ಇವುಗಳ ವಿವೇಚನೆಯನ್ನು **೨ನೆಯ** ಭಾಗದಲ್ಲಿ ಮಾಡಲಾಗಿದೆ.

೨) ಜೀವನಚರಿತೆಗಳು:— ಪ್ರತಿಯೊಂದು ಜೀವನಚರಿತೆಯಲ್ಲಿ ಕೆಳಗಿನ ಸಂಗತಿಗಳಲ್ಲಿ ಸಾಧ್ಯವಿದ್ದವುಗಳನ್ನು ಉಸುರಲು ಯತ್ನಿಸಬೇಕು.

೧ ಜನ್ಮ:—ಸ್ಥಲ-ಕಾಲ-ಪರಿಸ್ಥಿತಿ.

೨ **ಕುಲ:—ತಂದೆ-ತಾಯಿ-ಮನೆತನ.**

೩ ಬಾಲ್ಯ:—**ಪ್ರವೃತ್ತಿ-ಶಿಕ್ಷಣ.**

೪ ಯೌವನ:—ವ್ಯವಸಾಯ-ಕಾರ್ಯ.

೫ ಕೊನೆಯ ದಿನಗಳು:— ಮುಪ್ಪು-ಮರಣ.

೬ ಹಿರಿತನ:— ಸ್ವಭಾವಚಿತ್ರ-ಕಾರ್ಯದ ಮಹತ್ವ.

೩) ಐತಿಹಾಸಿಕ ಪ್ರಸಂಗಗಳು:— ಇದರಲ್ಲಿ ಕೆಳಗಿನ ಸಂಗತಿಗಳನ್ನು ಕ್ರಮವರಿತು ಬಣ್ಣಿಸಿರಿ.

೧ ಪೂರ್ವಪರಿಸ್ಥಿತಿ:— ಕಾರಣಪರಂಪರೆ.

೨ ಪ್ರಸಂಗ-ವರ್ಣನ:— ಅದರಲ್ಲಿಯ ಬೇರೆ ಬೇರೆ ಸಂಗತಿಗಳ ಯಥಾಕ್ರಮ ವರ್ಣನೆ-ಪರಸ್ಪರ ಸಂಬಂಧ.

೩ ಪ್ರಸಂಗದ ಕೊನೆ:— ಅದರ ಫಲಿತಾಂಶ-ಪರಿಣಾಮ.

೪ ಅಭಿಪ್ರಾಯ:— ಸಮಕಾಲೀನದು-ನಿಮ್ಮದು.

i) ಜೀವನ ಚರಿತೆಗಳು

ಬಂಕಿಮಚಂದ್ರ.

ಉಪಕ್ರಮ:— '**ಬಂಕಿಮಚಂದ್ರ! ಬಂಕಿಮ! ಯಾಕೆ** ಬಾಗಿರುವೆ?' ಎಂದೊಮ್ಮೆ **ರಾಮಕೃಷ್ಣ ಪರಮಹಂಸರು**, ಬಂಕಿಮಚಂದ್ರನು ಅವರೆಡೆಗೆ ಬಂದಾಗ, ಕೇಳಿದರು. 'ದಾಸ್ಯದ ಒದೆತದಿಂದ ಸ್ವಾಮಿ!' ಎಂದನು ಬಂಕಿಮಚಂದ್ರ. **ಪರಮಹಂಸರು** ಮುಗುಳುನಗೆಯಿಂದ ತಮ್ಮ ಅಸಮ್ಮತಿಯನ್ನು ಸೂಚಿಸಿದರು. 'ಅಲ್ಲಯ್ಯ! ಹಾಗಲ್ಲ! ನೀನು ಬಾಗಿದುದು ರಾಧೆಯ ಪ್ರೀತಿಯಿಂದ' ಎಂದು ಉಸುರಿದರು.

ನಮ್ಮ ಪುಣ್ಯಭೂಮಿಯ ದಾಸ್ಯದಿಂದ ಎಂಥ ತೀವ್ರತಮವಾದ ಅವಮಾನವೆಸಿಸುವುದು ಈ ಮಹರ್ಷಿಯನಿಗೆ? ಬಂಕಿಮನು **ನವಯುಗದ ಚಂಡೋಲ; ದೇಶಭಕ್ತಿಯ ಆದಿ** ಕವಿ.

ಜನನ-ಬಾಲ್ಯ:-ಬಂಕಿಮಚಂದ್ರರು ಕ್ರಿ. ಶ. ೧೮೩೮ರ ಜೂನ ತಿಂಗಳ ೨೭ನೆಯ ತಾರೀಖಿನ ದಿನ ಜನಿಸಿದರು. ಇವರು ಹುಟ್ಟಿದುದು '**ಇಪ್ಪತ್ತು ನಾಲ್ಕು ಪರಗಣೆ**' ಯಲ್ಲಿಯ ಒಂದು ಕುಲೀನ ಬ್ರಾಹ್ಮಣರ ಕುಲದಲ್ಲಿ. **ಚಟ್ಟೋಪಾಧ್ಯಾಯ**ವೆಂಬುದು ಇವರ ಕುಲದ ಹೆಸರು. ಇವರ ತಂದೆಯವರು ಡೆಪ್ಯುಟಿ ಮ್ಯಾಜಿಸ್ಟ್ರೇಟರಿದ್ದರು.

ತಂದೆಯವರು ಬಂಕಿಮರನ್ನು ತೀರ ಚಿಕ್ಕಂದಿನಲ್ಲಿ ಶಾಲೆಗೆ ಕಳುಹಿದರು. ಹಳ್ಳಿಯ ಶಾಲೆಯಲ್ಲಿಯ ಶಿಕ್ಷಣವನ್ನು ಮುಗಿಸಿ, ಬಂಕಿಮರು **ಮಿದನಾಪುರ**ದಲ್ಲಿಯ ಇಂಗ್ಲೀಷು ಶಾಲೆಯನ್ನು ಸೇರಿದರು. ಶಾಲೆಯಲ್ಲಿ ಬಂಕಿಮರ ಜ್ಞಾನ-ಲಾಲಸೆಯ ತೀವ್ರತೆಯು ಸತತವಾಗಿ ಬೆಳೆಯುತ್ತಲಿತ್ತು.

ಮುಂದಿನ ಶಿಕ್ಷಣ:—ಮುಂದೆ ಅವರು **ಹುಗಳಿಯ** 'ಕಾಲೇಜ'ದಲ್ಲಿ ಕೆಲಕಾಲ ವ್ಯಾಸಂಗಮಾಡಿ, **ಪ್ರೆಸಿಡೆನ್ಸಿ ಕಾಲೇಜನ್ನು** ಸೇರಿದರು. ಅಲ್ಲಿ ಅವರಿಗೆ ಒಂದು ಮೇಲ್ತರಗತಿಯ ಶಿಷ್ಯವೃತ್ತಿಯೂ ದೊರೆಯಿತು. ಕೊನೆಗೆ ಬಿ. ಎ. ಪರೀಕ್ಷೆಯಲ್ಲಿ ಒಂದನೆಯ ತರಗತಿಯಲ್ಲಿ ಅವರು ಉತ್ತೀರ್ಣರಾದರು. ಅದೇ ಕಲಕತ್ತೆಯಲ್ಲಿ ವಿಶ್ವವಿದ್ಯಾಲಯವು ಸ್ಥಾಪನೆಯಾಗಿತ್ತು. ಈ ನೂತನ ವಿದ್ಯಾಲಯದ ಮೊದಲಿನ ಈರ್ವ ಪದವೀಧರರಲ್ಲಿ ಒಬ್ಬನಾದುದರಿಂದ ಸರಕಾರದವರು ಡೆಪ್ಯುಟಿ ಮ್ಯಾಜಿಸ್ಟ್ರೇಟರ ಸ್ಥಲವನ್ನು ಕೊಟ್ಟು, ಬಂಕಿಮರನ್ನು ಸತ್ಕರಿಸಿದರು.

ಸರಕಾರದ ಕೆಲಸ:—ಈ ಅಧಿಕಾರಸ್ಥಲದಲ್ಲಿರುವಾಗ ಬಂಕಿಮರ ಸಹಾನುಭೂತಿಯ ವೈಶಾಲ್ಯವೂ ನಿರ್ಣಯದಲ್ಲಿಯ ಸ್ವತಂತ್ರ ವೃತ್ತಿಯೂ ಒಡೆದುಕಾಣುತ್ತಿದ್ದವು. ಅನೇಕ ಜಿಲ್ಹೆಗಳಲ್ಲಿ ಕೆಲಸ ಮಾಡಿ ಇವರು ಜನತೆಯ ಕಲ್ಯಾಣವನ್ನು ಚನ್ನಾಗಿ ಮಾಡಿದರು. ಬಂಕಿಮರ ಯೋಗ್ಯತೆಯು ಬೇಗನೆ ಸರಕಾರದವರ ಮೆಚ್ಚುಗೆಯನ್ನು ಪಡೆಯಿತು. ಮತ್ತು ಇವರು ಬಂಗಾಲ ಸರಕಾರದ ಮುಖ್ಯ ಕಾರ್ಯದರ್ಶಿಗಳಾದರು.

ಸಾಹಿತ್ಯಸೇವೆಃ—ಇವರ ನಿಜವಾದ ವ್ಯಕ್ತಿತ್ವವು ಅರಳಿದುದು ಇವರ ಕಲಾಪೂರ್ಣ ಗ್ರಂಥಗಳಲ್ಲಿ. '**ದುರ್ಗೇಶ ನಂದಿನಿಯು**' ಇವರ ಪ್ರಥಮ ಪ್ರಯತ್ನ. ಈ ಕಾದಂಬರಿಯು ವಂಗಸಾಹಿತ್ಯದಲ್ಲಿ ದೊಡ್ಡ ಕ್ರಾಂತಿಯನ್ನೆ ಎಬ್ಬಿಸಿತು. ಮುಂದವರು ಅನೇಕ ಕಾದಂಬರಿಗಳನ್ನು ಬರೆದರು. '**ವಂಗದರ್ಶನ**' ವೆಂಬ ಅವರ ಮಾಸಪತ್ರಿಕೆಯು ಅವರ ಕೀರ್ತಿಯನ್ನು ಬಂಗಾಲದ ಮೂಲೆ ಮೂಲೆಗಳಲ್ಲಿ ಪಸರಿಸಿತು. ಆಂಗ್ಲ-ಮುಗ್ಧರಾದ ಬಾಬುಗಳು ವಂಗಭಾಷೆಯನ್ನೋದುವದರಲ್ಲಿ ಗೌರವವನ್ನು ತಾಳತೊಡಗಿದರು.

ಇಳಿವಯುಸ್ಸಿನಲ್ಲಿ ಬಂಕಿಮರ ಮನಸ್ಸು ಧರ್ಮತತ್ವಜ್ಞಾನಗಳ ಅಭ್ಯಾಸದೆಡೆಗೆ ಹೊರಳಿತು. ಅವರು '**ಧರ್ಮತತ್ವ**' '**ಕೃಷ್ಣಚರಿತ್ರೆ**' ಗಳನ್ನು ಬರೆದರು.

ಅವರ ಮೃತ್ಯು:— ಮುಂದವರು ಗೀತೆಯ ಹೊಸ ಆವೃತ್ತಿ ಯೊಂದನ್ನು ಹೊರಡಿಸುವದರಲ್ಲಿ ತೊಡಗಿದರು. ಅದನ್ನು ಅವರು ಮಾಡುತ್ತಿರುವಾಗಲೇ ಅವರಿಗೆ ಕಾಲನ ಕರೆಯು ಬಂದು ಅವರು ೧೮೯೪ ಎಪ್ರಿಲ ೮ನೆಯ ತಾರೀಖಿನ ದಿನ ಮೃತ್ಯುವಶರಾದರು.

ಅವರ ಹಿರೇತನ:— ವಂಗ ಸಾಹಿತ್ಯ-ನಿರ್ಮಾತರಲ್ಲಿ ಇವರ ಸ್ಥಾನವು ಅದ್ವಿತೀಯವಾದುದು. ಇವರ ಸಾಹಿತ್ಯದಲ್ಲಿ ಪೂರ್ವ-ಪಶ್ಚಿಮ ಸಂಸ್ಕೃತಿಗಳ ಮಧುರ ಮಿಲನವಾಗಿವೆ. ತರುಣ ವಂಗೀಯರ ಬುದ್ಧಿಗೆ ಯೋಗ್ಯ ವಲನ ವನ್ನು ಕೊಟ್ಟವರಲ್ಲಿ ಇವರು ಅಗ್ರೇಸರರು. '**ವಂದೇ ಮಾತರಮ್**' ಈ ದಿವ್ಯ ಮಂತ್ರದ ದ್ರಷ್ಟಾರರು ಭಾರತಿಯರಿಗೆಲ್ಲ ಪ್ರಿಯವಾದುದರಲ್ಲಿ ಏನಾಶ್ಚರ್ಯ?

ii) ಐತಿಹಾಸಿಕ ಪ್ರಸಂಗ.

ಓಬಿಯ ಪ್ರತಾಪ.

ಚಿತ್ರದುರ್ಗವು ದುರ್ಭೇದ್ಯವಾದ ಗಿರಿದುರ್ಗವಾಗಿದ್ದಿತು. ಹೈದರನು ಎಷ್ಟು ಸಾಹಸಪಟ್ಟರೂ ಅದು ಜಗ್ಗಲೊಲ್ಲದು. ಕೋಟೆಯ ಒಳಕ್ಕೆ ಹೋಗಲು ಎಲ್ಲಿಯೂ ಇಂಬುದೊರೆಯಲೊಲ್ಲದು. ಬೇಹುಗಾರರು ಗುಟ್ಟಾಗಿ ಸಂದನ್ನು ಹುಡುಕುತ್ತಿರುವಾಗ ಒಂದು ದಿನ ಒಬ್ಬ ಮೊಸರಿನವಳು ಒಂದು ಬಂಡೆಯ ಬಿರುಕಿನಿಂದ ನುಸುಳಿ ಕೋಟೆಯೊಳಗೆ ಹೋದುದನ್ನು ನೋಡಿದರು. ಆ ಜಾಡನ್ನು ಹಿಡಿದುಕೊಂಡು ಹೈದರನ ಸಿಪಾಯಿಗಳು ಕೋಟೆಯಲ್ಲಿ ನುಗ್ಗಲು ಅಣಿಯಾದರು. ಈ ಕಳ್ಳದಾರಿಯು ಬಹಳ ಇಕ್ಕಟ್ಟಿನದಾಗಿದ್ದು, ಅದರಲ್ಲಿ ಒಬ್ಬನೇ ಮನುಷ್ಯನು ಮಲಗಿಕೊಂಡು ಹೊಟ್ಟೆಯನ್ನು ಹೊಸೆಯುತ್ತ ಹೋಗಬೇಕಾಗುತ್ತಿತ್ತು. ಈ ದಾರಿಯ ಆಚೆಯ ಬಾಯಿಯ ಬಳಿಯಲ್ಲಿ ಒಂದು ಸಿಹಿ ನೀರಿನ ಕೊಳವಿತ್ತು.

ಕೋಟೆಯ ಬೆಟ್ಟದ ಅರ್ಧದಾರಿಗೆ ಒಂದು ಕಾವಲು ಕಟ್ಟೆಯಿದ್ದಿತು. ಇಲ್ಲಿ ಒಬ್ಬ ಕಹಳೆಯವನು ಯಾವಾಗಲೂ ಕಾಯುತ್ತಿದ್ದನು. ವಿಷಮ

ಸಂದರ್ಭವು ಬಂದರೆ ಆತನು ಕಹಳೆಯೂದಿ ಎಚ್ಚರವನ್ನು ಕೊಡತಕ್ಕದು. ಹೈದರನ ದಂಡಾಳುಗಳು ಆ ಕಳ್ಳದಾರಿಯನ್ನು ಕಂಡುಹಿಡಿದು, ಒಳ ನುಗ್ಗುವುದಕ್ಕೆ ನಸು ಮುಂಚೆ ಈ ಕಹಳೆಯವನು ಹಸಿದು ಊಟಕ್ಕೆಂದು ಬಳಿಯಲ್ಲಿಯ ತನ್ನ ಗುಡಿಸಲಿಗೆ ಹೋಗಿದ್ದನು. ಆತನ ಹೆಂಡತಿಯಾದ **'ಓಬಿಯು'** ಆತನಿಗೆ ಉಣಬಡಿಸಿ ನೀರಿಗೆಂದು ಕೊಳಕ್ಕೆ ಬಂದಳು ಅಷ್ಟ ರಲ್ಲಿ ಆಕೆಗೆ ಆ ಕಳ್ಳಗುಂಡಿಯಲ್ಲಿ ಏನೋ ಸಪ್ಪಳವು ಕೇಳಬಂದಿತು. ತುಸು ಹೊತ್ತಿನಲ್ಲಿಯೆ ಅದು ಹಗೆಗಳ ಸುಳಿವು ಎಂಬುದು ಆಕೆಗೆ ಮನವರಿಕೆ ಯಾಯಿತು. ಕೂಡಲೆ ಆಕೆಯು ತನ್ನ ಗುಡಿಸಲಕ್ಕೆ ಓಡಿಹೋಗಿ ಒಂದು ಒನಕೆಯನ್ನು ತೆಗೆದುಕೊಂಡು ಬಂದು ಆ ಗವಿಯ ಬಾಯಿಗೆ ನಿಂತಳು. ಅಷ್ಟರಲ್ಲಿ ಒಂದು ತಲೆಯು ಆ ಗುಂಡಿಯೊಳಗಿಂದ ಹೊರಕ್ಕೆ ಚಾಚಿತು. ಮರುನಿಮಿಷದಲ್ಲಿ ಓಬಿಯು ಒನಕೆಯ ಹೊಡೆತದಿಂದ ಆ ಸೀಪಾಯಿಯನ್ನು ಕೊಂದು ಎಳೆದು ಹಾಕಿದಳು. ಹೀಗೆ ಸುಮಾರು ಇನ್ನೂರು ದಂಡಾಳುಗಳು ಒಂದೇ ಸವನೆ ಓಬಿಯ ಒನಕೆಗೆ ಆಹುತಿಯಾದರು

ಇತ್ತ ನೀರಿಗೆಂದು ಹೋದ ಹೆಂಡತಿಯು ಎಷ್ಟು ಹೊತ್ತಾದರೂ ಬರಲಿಲ್ಲವೆಂದು ಕರೆಕರೆದು ಬೇಸತ್ತು, ಕೊಂಬಿನವನು ಆಕೆಯನ್ನು ಹುಡು ಕುತ್ತ ತನ್ನ ಕಾವಲುಕಟ್ಟೆಯ ಕಡೆಗೆ ಹೊರಟನು. ಅದೇ ದಾರಿಯಲ್ಲಿ ನಡೆಯುತ್ತಿರುವ ಆ ಘೋರವಾದ ನರಮೇಧವನ್ನು ನೋಡಿ ಬೆರಗಾದನು. ಆಗ ಓಬಿಯ ಮೈಮೇಲೆ ಪ್ರಜ್ಞೆಯಿರಲಿಲ್ಲ. ಹಿಂಸಾಮದವೂ ತಲೆಗೇರಿ ಪ್ರಳಯಕಾಲದ ಕಾಳಿಯಂತೆ ಆಕೆಯ ಆಕಾರವು ಅಕರಾಲ ವಿಕರಾಲ ವಾಗಿತ್ತು. ಮಂತ್ರಪ್ರೇರಿತವಾದ ಮೂರ್ತಿಯಂತೆ ಆಕೆಯ ಸಂಹಾರ ಸತ್ರವು ಯಂತ್ರಗತಿಯಿಂದ ಅವಿರತವಾಗಿ ಸಾಗಿತ್ತು. ಈಕೆಯ ಎಲ್ಲ ಶಕ್ತಿ ಗಳು ಒಂದೇ ಒಂದಾದ ಕಂಡನಕಾರ್ಯದಲ್ಲಿ ಕೇಂದ್ರೀಕೃತವಾಗಿದ್ದವು. ವಿಲಯಸಮಾಧಿಯಲ್ಲಿ ವಿಲೀನಭಾವ ಆಕೆಯ ಕಣ್ಣಿಗೆ ಒಂದೇ ಒಂದು ರೂಪ ಕಾಣುತ್ತಿತ್ತು. ಅದು ಹಗೆ!

ಓಬಿಯು ಗಂಡನನ್ನು ಗುರುತಿಸಲಿಲ್ಲ. ಆತನು ಆಕೆಯ ಹಗೆಯಾಗಿ ಕಂಡನು. ಆಕೆಯು ಆತನನ್ನು ಹೊಡೆಯ ಹೋದಳು. ಅದನ್ನು ತಪ್ಪಿಸಿ ಕೊಂಡು ಆತನು ತನ್ನ ಕಟ್ಟೆಗೆ ಹೋಗಿ ಕಹಳೆಯನ್ನು ಊದಿದನು.

ದುರ್ಗದ ದಂಡಾಳುಗಳು ಅಲ್ಲಿಗೆ ಓಡಿಬಂದರು. ಚಾಮುಂಡಿಯ ಆ ನವೀನ ಅವತಾರವನ್ನು ನೋಡಿ ವಿಸ್ಮಿತರಾದರು. ಆ ಹೊತ್ತಿಗೆ ಹೈದರನ ಕೆಲ ಸೈನಿಕರು ಕೋಟೆಯನ್ನು ಏರಿ ಮೇಲೆ ಬಂದಿದ್ದರು. ಅವರು ತಮ್ಮ ಪರಾಕ್ರಮದ ಧನ್ಯತೆಯನ್ನು ಬೀರುತ್ತ **ಓಬಿಯ** ಮೇಲೆ ನುಗ್ಗಿ ಆಕೆಯನ್ನು ಕಡಿದು ಹಾಕಿದರು!

ಈ ಪ್ರಸಂಗದಲ್ಲಿ ಹೈದರನಿಗೆ ಜಯದೊರೆಯಲಿಲ್ಲ. ಚಿತ್ರದುರ್ಗವು ಆತನಿಗೆ ಕೈವಶವಾಗಲಿಲ್ಲ. **ಓಬಿಯ ಪ್ರತಾಪದ** ಪ್ರಭಾವದ ಮೂಲಕ ಆತನು ಹತಪ್ರಭನಾಗಿ ಹಿಂದಿರುಗಬೇಕಾಯಿತು.

— ದೇ. ಪಾ.

ಅಭ್ಯಾಸ ೧೧.

ಕೆಳಗಿನ ವಿಷಯುಗಳನ್ನು ಕುರಿತು ನಿಬಂಧಗಳನ್ನು ಬರೆಯಿರಿ!

೧) ೧ ಶ್ರೀವಿದ್ಯಾರಣ್ಯರು ೨ ಶ್ರೀಬಸವಣ್ಣನವರು ೩ ಶ್ರೀಮುಹಮ್ಮದ ಪೈಗಂಬರರು, ೪ ಶ್ರೀಲೋಕಮಾನ್ಯರು ೫ ಶ್ರೀವಿವೇಕಾನಂದರು ೬ ಶ್ರೀಸಿತಾಮಾತೆ ೭ ಕಿತ್ತೂರ ಚನ್ನಮ್ಮನವರು ೮ ಶ್ರೀಪುರಂದರದಾಸರು ೯ ಲೆಲಿನ್.

೨) ೧ ರಕ್ಕಸತಂಗಡಿಯು ಕಾಳಗ ೨ ನರಗುಂದದ ಯುದ್ಧ ೩ ಮಥುರೆಯ ಮುತ್ತಿಗೆ ೪ ಎರಡನೆಯ ಪಾನಿಪತ್ತು ೫ ಅಫಝುಲಖಾನರ ಕೊಲೆ.

ಚಿಂತನಪರ.

೧) ಅಂದರೇನು ?:—

ಚಿಂತನವೆಂದರೆ ಆಲೋಚನೆ. ಒಂದು ವಿಷಯುವನ್ನು ಕುರಿತು ನಾವು ಮಾಡಿದ ಆಲೋಚನೆಗಳನ್ನು ಕ್ರಮುವರಿತು ಬರೆದೆವೆಂದರೆ ಅದು ಚಿಂತನಪರ ನಿಬಂಧವಾಗುವುದು. ನಾವು ಯಾವುದೇ ವಿಷಯುವನ್ನು ಕುರಿತು ಆಲೋಚಿಸಬಹುದು. ಆ ಆಲೋಚನೆಯು ಹಿಡಿತಕ್ಕೆ ಸಿಲುಕದ ವಿಷಯುವೇ ಇಲ್ಲವೆಂದರೂ ಸಲ್ಲುವುದು

ಎಲ್ಲ ನಿಬಂಧಗಳಲ್ಲಿ ಇದೇ ಪ್ರಧಾನವಾದ ಪ್ರಭೇದ. ಇದನ್ನು ಬರೆಯುಲು ನಾವು ನಮ್ಮ ಬುದ್ಧಿಸಂಸ್ಕಾರಗಳನ್ನೆಯೆ ಹೆಚ್ಚಾಗಿ ಅವಲಂಬಿಸಬೇಕಾಗುವುದು. ಇಲ್ಲಿ ಬಹಳ ಎಚ್ಚರದಿಂದ ಸಾಗಬೇಕಾಗುವುದು.

ಯಾಕೆಂದರೆ ವಿಚಾರದ ಪ್ರವಾಹಕ್ಕೆ ನಾವಿರ ದಾರಿಗಳು. ಅದು ಒಂದನ್ನು ಬಿಟ್ಟು ಇನ್ನೊಂದನ್ನು ತಿಳಿಯದೇ ಸೇರಬಹುದು. ಅದಕ್ಕಾಗಿ ನಾವು ಒಮ್ಮೆ ಪ್ರಾರಂಭಿಸಿದ ರೀತಿಯನ್ನು ಹಾಗೆಯೆ ಕೊನೆಯ ವರೆಗೆ ಸಾಗಿಸಲು ಹೆಚ್ಚಿನ ಏಕಾಗ್ರತೆಯೂ ಜಾಗರೂಕತೆಯೂ ಅತ್ಯವಶ್ಯ.

೨) ಬರೆವುದೆಂತು ?

(ಅ) **ಸಾಮಾನ್ಯ ಪರಿಚಯ:**— ಎರಡನೆಯ ಪ್ರಕರಣದಲ್ಲಿಯ **ಸಾಮಾನ್ಯ ಸೂಚನೆಗಳನ್ನು** ಚನ್ನಾಗಿ ಪರಿಶೀಲಿಸಿ ತರುವಾಯ, ಕೊಟ್ಟ ವಿಷಯಪೆಡೆಗೆ ಹೊರಳಬೇಕು. ಅಲ್ಲಿ ಮೊದಲು **ಪ್ರಧಾನಭಾಗ**ದಲ್ಲಿಯ ವಿವೇಚನೆಯ ಕ್ರಮವನ್ನು ಗೊತ್ತುಮಾಡಿ ಆಮೇಲೆ **ಉಪಕ್ರಮ-ಉಪ ಸಂಹಾರ**ಗಳ ರೀತಿಯನ್ನು ನಿಶ್ಚಯಿಸಬೇಕು.

೧) ಪ್ರಧಾನಭಾಗ:—

೧) ವಿಷಯವನ್ನು ಚನ್ನಾಗಿ ಚಿತ್ತದಲ್ಲಿಡಲು ಯತ್ನಿಸಬೇಕು. ಮನಸ್ಸನ್ನು ಅದರ ಸುತ್ತಲು ತಿರುಗಿಸಬೇಕು. ಹೀಗೆ ಕೆಲಕಾಲ ಕಳೆಯಿತೆಂದರೆ ನಿಧಾನವಾಗಿ ವಿಚಾರಗಳು ಮೂಡಲು ಮೊದಲು ಮಾಡುವವು.

೨) ವಿಷಯವನ್ನು ಕುರಿತು ಹಲವು ಪ್ರಶ್ನೆಗಳನ್ನು ಕೇಳಬೇಕು. ಪ್ರಶ್ನೆಗಳನ್ನು ಕೇಳುವಾಗ '**ಏನು? ಏಕೆ? ಹೇಗೆ? ಎಂತು? ಎಲ್ಲಿ? ಎಂದು?**' ಇತ್ಯಾದಿಗಳನ್ನು ಪ್ರಯೋಗಿಸಬಹುದು. ಪ್ರಶ್ನೆಗಳನ್ನು ಒಂದು ಹಾಳೆಯ ಮೇಲೆ ಬರೆದಿಡಬೇಕು.

೩) ತರುವಾಯ ಅವುಗಳಲ್ಲಿ ಪ್ರಧಾನವಾದವುಗಳನ್ನು ಆಯ್ದು ಅವಕ್ಕೆ ದೊರೆತ ಉತ್ತರಗಳ ಅಂಶಗಳನ್ನು ಒಂದು ಸರಿಯಾದ ಕ್ರಮದಿಂದ ಬರೆದಿಡಬೇಕು. ಇವೇ ವಿಚಾರದ **ಅಂಶಗಳು**. (Points) ಇವನ್ನು ಬೆಳೆಯಿಸಿಯೆ ನಿಬಂಧವನ್ನು ಬರೆಯತಕ್ಕದ್ದು.

೪) ಮೇಲಿನ **ಅಂಶಗಳಲ್ಲಿ** ಕೆಲ ವಿವರಗಳನ್ನು ತುಂಬಿ ನಿಬಂಧದ **ರೂಪರೇಷೆಯನ್ನು** (Outline) ಸಿದ್ಧಪಡಿಸಬೇಕು. ತರುವಾಯ ಮುಂದೆ ಕಾಣಿಸಿದ ಸೂಚನೆಗಳ ಮೇರೆಗೆ ಉಪಕ್ರಮ ಉಪಸಂಹಾರಗಳನ್ನು ಸಿದ್ಧ

ಪಡಿಸಿ ಪ್ರತ್ಯಕ್ಷ ಬರಹವನ್ನು ಪ್ರಾರಂಭಿಸಬೇಕು. **ರೂಪರೇಷೆಯಿಲ್ಲದ ಬರಹವು ಕತ್ತಲಲ್ಲಿಯ ಅಲೆದಾಟ.** ದಾರಿಯೂ ಕಾಣುವಂತಿಲ್ಲ; ಗುರಿಯೂ ಸಿಗುವಂತಿಲ್ಲ.

೫) ವಿಷಯವಿವೇಚನೆಯಲ್ಲಿ ನಿಮ್ಮ ವ್ಯಕ್ತಿತ್ವವು ಹೊರಹೊಮ್ಮಬೇಕು. ಸ್ವಂತ ಆಲೋಚನೆಗಳ ಆವಿಷ್ಕರಣವಾಗಬೇಕು. ವಿಷಯದ ಒಂದಂಗವನ್ನು ವಿವರಿಸಿದರೆ ನಡೆಯುಬಹುದು. ಎಲ್ಲವನ್ನು ಪೂರ್ತಿಯಾಗಿ ಬರೆಯಲೇಬೇಕೆಂತಲ್ಲ.

೨) **ಉಪಕ್ರಮ:** - ನಿಬಂಧವನ್ನು ಹೇಗೆ ಪ್ರಾರಂಭಿಸಬೇಕೆಂಬುದೆ ತಿಳಿಯುವದಿಲ್ಲವೆಂದು ವಿದ್ಯಾರ್ಥಿಗಳನೇಕರು ಗುಣಗುಟ್ಟುವದುಂಟು. ಸರಿ. ಅದು ಸ್ವಲ್ಪ ಬಿಗಿಯಾದುದಿರುವುದು ನಿಜ. ಆದರೂ ಅದರಿಂದ ತೀರ ಬೆಚ್ಚಿಬೀಳುವ ಕಾರಣವಿಲ್ಲ. ಇಲ್ಲಿ ನುರಿತ ಬರಹಗಾರರ ಮಾದರಿಗಳನ್ನನುಕರಿಸುವದು ರಾಜಮಾರ್ಗ. ಹಿಂದಿನ ಅಧ್ಯಾಯದಲ್ಲಿಯ ಸೂಚನೆಗಳು ಈ ವಿಷಯದ ಮೇಲೆ ಕೆಲಮಟ್ಟಿಗೆ ಬೆಳಕನ್ನು ಚೆಲ್ಲಬಲ್ಲವು. ಆದರೆ ಅವುಗಳನ್ನೇ ಪೂರ್ತಿಯಾಗಿ ನಂಬಬಾರದು. ವೈಯಕ್ತಿಕ ನವನಿರ್ಮಿತಿಗೆ ಎಲ್ಲೆಡೆಯಂತೆ ಇಲ್ಲಿಯೂ ಪೂರ್ಣ ಎಡೆಯಿರುವದು. ಅದು **ಚಿತ್ತಾಕರ್ಷಕವಾಗ**ಬೇಕೆಂಬ ಗುರಿಯನ್ನಷ್ಟು ಮರೆಯದೆ ಪ್ರಸಂಗಕ್ಕೆ ತಕ್ಕ ಮಾತಿನಿಂದ ನಿಬಂಧವನ್ನು ಪ್ರಾರಂಭಿಸಬೇಕು.

೩) **ಉಪಸಂಹಾರ:**---ಉಪಕ್ರಮದ ವಿಷಯವಾಗಿ ಹೇಳಿದ ಎಲ್ಲ ಸಂಗತಿಗಳು ಉಪಸಂಹಾರಕ್ಕೂ ಅನ್ವಯಿಸುವವು. ಹಿಂದೆ ಹೇಳಿದಂತೆ (೧) ಸಾರಾಂಶದಿಂದಲೂ (೨) ವಿಷಯಕ್ಕೆ ಪೋಷಕವಾದ ಅವತರಣದಿಂದಲೂ (೩) ಸ್ವಂತ ಅಭಿಪ್ರಾಯದಿಂದಲೂ ನಿಬಂಧವನ್ನು ಕೊನೆಗಾಣಿಸಬೇಕು. **ಚಮತ್ಕೃತಿಯು ಉಪಕ್ರಮದಂತೆ ಉಪಸಂಹಾರದ ತಿರುಳಿದ್ದುದರಿಂದ** ಅದನ್ನು ಯಾವ ಹೊಸ ರೀತಿಯಿಂದ ಉಂಟು ಮಾಡಿದರೂ ಸರಿಯೆ! ಸೊಬಗನ್ನು ಕಟ್ಟಿನಲ್ಲಿಡುವವರಾರು? ಅದು ತನ್ನದೇ ಆದ ರೀತಿಯಿಂದ ಸ್ವತಂತ್ರವಾಗಿ ಮೆರೆವುದು; ಮೆರೆಯಲು ಬೇಕು. ಅದರಲ್ಲಿಯೇ ಚೆಲುವಿನ ಜೀವಾಳ!

ಆ) ವಿಶೇಷ ಪರಿಚಯ:—

೧) ಮುಂದೆ ಕೆಲವು ಮಾದರಿಯ ನಿಬಂಧಗಳ ರೂಪರೇಖೆಗಳನ್ನು ಕೊಟ್ಟಿರುವೆವು. ಕೆಲವನ್ನು ನಾವು ಬರೆದಿರುವೆವು. ಕೆಲವನ್ನು ನಮ್ಮ ನಾಡಿನಲ್ಲಿಯ ನುರಿತ ಸಾಹಿತಿಗಳಿಂದ ಆಯ್ದಿರುವೆವು. ಅವನ್ನು ದಕ್ಷತೆ ಯಿಂದ ಪರಿಶೀಲಿಸಿ ವಿದ್ಯಾರ್ಥಿಗಳು, ಈ ಕಲೆಯನ್ನು ಅರಿತುಕೊಳ್ಳ ಬಹುದು.

೨) ಇನ್ನೊಂದು ಮಾತು. ಒಂದೆರಡು ನಿಬಂಧದ ನಿರೀಕ್ಷಣೆಯಾದ ಮೇಲೆ, ವಿದ್ಯಾರ್ಥಿಗಳು ಮೊದಲು ಬರೀ ವಿಷಯವನ್ನಷ್ಟೆ ತಿಳಿದುಕೊಂಡು ತಾವು ಸ್ವತಃ ಅದರ ಮುಖ್ಯಾಂಶಗಳನ್ನು ಕಂಡುಹಿಡಿದು ತಮ್ಮ ರೂಪ ರೇಖೆಯನ್ನು ಸಿದ್ಧಪಡಿಸಬೇಕು.

೩) ತರುವಾಯ ಅದನ್ನು ಈ ಗ್ರಂಥದಲ್ಲಿಯ ರೂಪರೇಖೆಯೊಡನೆ ಪರಿಶೋಲಿಸಿ ಅದರಲ್ಲಿ ಉಚಿತವಾದ ಮಾರ್ಪಾಟುಗಳನ್ನು ಮಾಡಿಕೊಳ್ಳ ಬೇಕು. ಆ ಮೇಲೆ ತಾವೇ ನಿಬಂಧವನ್ನು ಬರೆದು, ಅದನ್ನು ಇಲ್ಲಿಯ ನಿಬಂಧದೊಡನೆ ಹೋಲಿಸಿ ಮರಳಿ ತಮ್ಮದನ್ನು ಅವಶ್ಯವಿದ್ದಲ್ಲಿ ತಿದ್ದಿ ಕೊಳ್ಳಬೇಕು.

೪) ಕೊನೆಗೆ ಶುದ್ಧಪ್ರತಿಯನ್ನು ಮಾಡಿ, ತಿದ್ದುಪಾಟಕ್ಕಾಗಿ ಗುರು ಗಳಿಗೆ ಸಲ್ಲಿಸಬೇಕು. ಈ ಕ್ರಮವು ವಿದ್ಯಾರ್ಥಿಗಳಿಗೆ ಉಪಕಾರಕವಾಗ ದಿರದೆಂದು ನಮ್ಮ ನಂಬಿಗೆ.

೩) ರೂಪರೇಖೆಗಳು:—

೧ನೆಯ ಗುಂಪು:—ಗುಣಗಳು.

೧ ಸತ್ಯ.

೧ **ಉಪಕ್ರಮ:—** ನಹಿ ಸತ್ಯಾತ್ ಪರೋ ಧರ್ಮಃ। ಧರ್ಮ ಪ್ರಧಾನಾಂಗ.

೨ **ಎಂದರೇನು:—** ಮೂರರ್ಥಗಳು-(೧) ಸನಾತನವಾದ ಸಂಗತಿ, (೨) ಮತಿ-ಮಾತು-ಕೃತಿಯಲ್ಲಿ ಸಾಮ್ಯ, (೩) ಭೂತಹಿತ.

೩ **ಮಹಿಮೆ:—** ಸತ್ಯವೇ ಎಲ್ಲದರ ಆಧಾರ. ಅಸತ್ಯಕ್ಕೂ ಕೂಡ. ಅದಿಲ್ಲದೆ ಜಗದ ಆಟವೇ ಸಾಗದು—ಸತ್ಯಮೇವ ಜಯತೆ! ಅದಕ್ಕೆ ಸೋಲಿಲ್ಲ, ಸಾವಿಲ್ಲ. ಉದಾಹರಣೆ ಗಳು.

೪ **ಉಪಸಂಹಾರ:**—ಸತ್ಯವು ಕಹಿಯಾಗಿದೆ-ಸಿಹಿಯಾಗಿಲ್ಲ. ಜನರು ಅದನ್ನು ಒಲ್ಲರು-ಪ್ರಿಯವಾದ ಸತ್ಯವನ್ನು ಆಡಬೇಕು.

ಸತ್ಯ.

೧) **ಉಪಕ್ರಮ:**—'**ಸತ್ಯವೇ ಪರಧರ್ಮ! ಅದನ್ನು ಮೀರುವ ಧರ್ಮವಿಲ್ಲ**' ಎಂದು ಹಿಂದಿನ ಹಿರಿಯರು ಸಾರಿರುವರು. ಇದು ಸುಮ್ಮನೆ ಉಸುರಿದ ಜೊಳ್ಳು ಮಾತಲ್ಲ. ಆಳವಾದ ಆಲೋಚನೆಯಿಂದ, ದೀರ್ಘ ಕಾಲದ ಅನುಭವದಿಂದ, ಸಿದ್ಧವಾದ ನಂಬಿಕೆಯ ನುಡಿಯಿದು.

೨) **ಎಂದರೇನು?:**—ಸತ್ಯವೆಂಬ ಶಬ್ದವು ರೂಢಿಯಲ್ಲಿ ಮೂರರ್ಥಗಳನ್ನು ತಾಳಿರುವುದು. (೧) ಸತ್ಯವೆಂದರೆ ಸನಾತನವಸ್ತು. ಅಂದೂ-ಇಂದೂ-ಮುಂದೂ-ಎಂದೆಂದೂ ಯಾವುದು ಒಂದೇ ರೀತಿಯಾಗಿ ಇರುವುದೋ ಅದೇ ಸತ್ಯ. ಇದು ಸತ್ಯದ **ವಸ್ತುಗತವಾದ** (Objective) ಅರ್ಥವು. (೨) ಮತಿ-ಮಾತು-ಕೃತಿಗಳಲ್ಲಿಯ ಸಾಮ್ಯವು ಇದರ ಎರಡನೆಯ ಅರ್ಥ. ಇದು **ವ್ಯಕ್ತಿಗತವಾದುದು.** (Subjective) ಇದೂ ಕೂಡ ಮೊದಲನೆಯ ಅರ್ಥದಿಂದಲೇ ಹೊರಟಿರುವುದು. ಸತ್ಯದ ಸನಾತನತ್ವವು ವ್ಯಕ್ತಿಯ ಮೂರು ಅವಸ್ಥೆಗಳಲ್ಲಿ ಹೇಗೆ ಉಳಿಯುವುದೆಂಬುದನ್ನು ಈ ಸಾಮ್ಯವು ತೋರಿಸುವುದು. (೩) ಪ್ರಾಣಿಗಳ ಆತ್ಯಂತಿಕ ಹಿತವನ್ನು ಸಾಧಿಸುವುದೆ ಸತ್ಯವೆಂದು, ಸತ್ಯಕ್ಕೆ ಇನ್ನೊಂದು ಅರ್ಥವನ್ನು ಮಹನೀಯರು ಕಲ್ಪಿಸಿರುವರು. ಇದು **ಪರಿಣಾಮದ ದೃಷ್ಟಿಯಿಂದ** ಸೂಚಿತವಾದ ಸತ್ಯದ ಲಕ್ಷಣವು.

೩) **ಮಹಿಮೆ:**—ಒಂದರ್ಥದಿಂದ ಸತ್ಯವು ಇಡೀ ವಿಶ್ವದ ಆಧಾರ. ವಿಶ್ವದಲ್ಲಿ ಅಚ್ಚಳಿಯದೆ ಉಳಿಯುವ ವಸ್ತುವೇ ಅದು. ಉಳಿದುದೆಲ್ಲ ಅಳಿಯುವುದು; ಬದಲಾಗುವದು. ಸತ್ಯವೂ ಅಳಿಯಿತೆಂದರೆ ವಿಶ್ವವು ಉಳಿಯುವ ಬಗೆ ಹೇಗೆ? ಇನ್ನೊಂದರ್ಥದಿಂದ ಸತ್ಯವು ಸಮಾಜವ್ಯವಹಾರದ ಆಧಾರ. ನಮ್ಮ ವ್ಯವಹಾರವೆಲ್ಲ ಸತ್ಯವನ್ನೆಯ ಆಶ್ರಯಿಸಿದೆ. ಅದರ ನೆರವಿಲ್ಲದಿದ್ದರೆ ಇವೆಲ್ಲ ಇದ್ದಲ್ಲಿಯೆ ನಿಲ್ಲುವುದು. ಸತ್ಯದ ಬೆಂಬಲವಿಲ್ಲದಿದ್ದರೆ ಅಸತ್ಯದ ಆಟವೂ ಸಾಗುವಂತಿಲ್ಲ; ಬೇರೆಯವರ ಪಾಡೇನು?

ಸತ್ಯಮೇವ ಜಯತೆ! ಸತ್ಯಕ್ಕೆ ಸೋಲಿಲ್ಲ-ಸಾವಿಲ್ಲ! ವ್ಯವಹಾರದಲ್ಲಿ ಅದಕ್ಕೆ ತಾತ್ಕಾಲಿಕವಾಗಿ ಸೋಲು ಬಂದಂತೆ ಕಂಡರೂ, ಕೊನೆಗೆ ಅದು ಗೆಲ್ಲಲೇಬೇಕು. ಯಾಕಂದರೆ **ಶಾಶ್ವತವಾಗಿರುವುದೇ ಅದರ ಸ್ವಭಾವ.** ದೂರದೃಷ್ಟಿಯಿಲ್ಲದವರಿಗೆ ಅದು ಬೇಗ ಕಾಣದ್ದರಿಂದ ಅವರು ಸತ್ಯದ ಈ ಸಾಮರ್ಥ್ಯದಲ್ಲಿ ಅಪನಂಬಿಕೆಯನ್ನಿಟ್ಟು, ಅಸತ್ಯವನ್ನು ಪೂಜಿಸುವದುಂಟು. ಆದರೆ ಕೊನೆಗೆ ದಿಟವೇ ದಿಟವಾಗಿ ನಿಲ್ಲುವದು. ಸಟೆಯು ಎಂದೆಂದಿಗೂ ಸಟೆಯೇ--ಸುಳ್ಳೇ!

ಸತ್ಯದ ಈ ಸಾಮರ್ಥ್ಯದಲ್ಲಿ ನಂಬಿಕೆಯಿಲ್ಲದ ಕೆಲವರು ಸತ್ಯದ ಮೂರನೆಯ ಅರ್ಥಕ್ಕೆ ತಮಗೆ ಅನುಕೂಲವಾದ ಇನ್ನೊಂದು ಬಗೆಯಾಗಿ ಭಾಷ್ಯವನ್ನು ಮಾಡುವದುಂಟು. ಜನರಿಗೆ ಹಿತವಾದುದು ಸತ್ಯ. ಅಹಿತವಾದುದು ಅಸತ್ಯ. ಎಂದು ಅವರ ಮತ. ಸತ್ಯದಲ್ಲಿಯೆ ಆತ್ಯಂತಿಕ ಹಿತವಿದೆ ಎಂಬುದನ್ನು ಮರೆತ ಲಕ್ಷಣವಿದು. ಸಟೆಯಾದುದು ಕೆಲಕಾಲ ಹಿತವಾದಂತೆ ತೋರಿದರೂ ಅದೆಂದಿಗೂ ನಮ್ಮ ಆತ್ಯಂತಿಕ ಹಿತವನ್ನು, ಕಲ್ಯಾಣವನ್ನು ಸಾಧಿಸಲರಿಯದು. ಆದುದರಿಂದ ಸತ್ಯ-ಹಿತಗಳಲ್ಲಿ ಭೇದವನ್ನು ಕಲ್ಪಿಸುವದು ಒಳಿತಲ್ಲ. **ಸತ್ಯವೇ ಹಿತವು-ಹಿತವೇ ಸತ್ಯವು ಇದೇ ನಿಜ.**

೪) **ಉಪಸಂಹಾರ:**—ಆದರೆ ಮರವುಳ್ಳ ಮನುಜರಿಗೆ ಸತ್ಯವು ಕಹಿಯಾಗಿದೆ-ಸಿಹಿಯಾಗಿಲ್ಲ. ಜನರದನ್ನು ಎದುರಿಸಲು, ಸ್ವೀಕರಿಸಲು ಒಲ್ಲರು. ಅವರಿಗೆ ಪ್ರಿಯವು ಸತ್ಯಕ್ಕಿಂತ ಹೆಚ್ಚು ಸೇರುವುದು. ಅದಕ್ಕಾಗಿಯೆ ಹಿರಿಯರು, ' **ಪ್ರಿಯವಾದ ಸತ್ಯವನ್ನುಸುರು** ' ಹೇಳಿರುವರು.

೨ ಪ್ರೇಮ

೧ **ಉಪಕ್ರಮ:**—'ಪ್ರೇಮವೇ ಜೀವನ; ದ್ವೇಷವೇ ಮರಣ' ಆಂಗ್ಲ ಒಳ್ನುಡಿ. ಜಗವು ಜೀವಿಸುವುದು ಪ್ರೇಮದಿಂದ.

೨ **ಎಂದರೇನು ? :**—ಅನ್ಯರಲ್ಲಿ ತನ್ನತನವನ್ನು ಕಾಣುವ ಭಾವನೆಯ ಉಕ್ಕು.

೩ **ಮಹಿಮೆ:**—ಅದು ಕುಲವನ್ನು-ಸಮಾಜವನ್ನು-ಜನಾಂಗವನ್ನು ಕಟ್ಟುವುದು. ಮಾನವಜೀವನವನ್ನು ಮೀರಿ, ಮಾನವನನ್ನು ವಿಶ್ವದೊಡನೆ ಬೆರೆಯಲು ಕಲಿಸುವುದು. ಆದರಿಂದಲೇ ಜೀವನದಲ್ಲಿ ರಸ-ಆನಂದ-ಅದು ಕಲ್ಲೆದೆಯನ್ನು ಕರಗಿಸಬಹುದು—

೪ ಬಗೆಗಳು:—ಅನಂತ ಬಗೆಗಳು-ರೂಪಗಳು-ಮಗುವಿನಲ್ಲಿ ಮಮತೆ, ತಾಯಿಯಲ್ಲಿ ವಾತ್ಸಲ್ಯ, ಮಡದಿಯಲ್ಲಿ ಕಾಮ, ಹಿರಿಯರಲ್ಲಿ ಸಲಿಗೆ, ದೇವರಲ್ಲಿ ಕರುಣ ಇ.

೫ ಉಪಸಂಹಾರ:—ಅನ್ಯರ ಅಂತರಂಗದ ಕದವನ್ನು ತೆರೆಯುವ ಹೊನ್ನಿನ ಹಿಡಿಕೆ ಅದು.

ಪ್ರೇಮ.

೧ **ಉಪಕ್ರಮ:**–'ಸತ್ಯವು' ಜಗದ ಆಧಾರವಿದ್ದಂತೆ, 'ಪ್ರೇಮ'ವು ಅದರ ಬಂಧನವಾಗಿದೆ. ಸತ್ಯದ ತಳಹದಿಯ ಮೇಲೆ ಸ್ಥಿರವಾಗಿ ನೆಲೆಸಿದ ಜಗತ್ತನ್ನು 'ಪ್ರೇಮವು' ದೃಢವಾಗಿ ಬಿಗಿಯುವುದು. ಈ ರೀತಿಯ ಆಧಾರವಿಲ್ಲದಿದ್ದರೆ ಜಗ-ಜಗಗಳ ಮಾಲೆಯು ಚದರಿಹೋಗುತ್ತಿತ್ತು.

೨ **ಎಂದರೇನು ?** :—ಪ್ರೇಮವು ಸತ್ಯದಲ್ಲಿಯ ಆಕರ್ಷಣ. ಸತ್ಯದ ಅಂಶಗಳಿದ್ದಲ್ಲೆಲ್ಲ ಪ್ರೇಮವು ಇದ್ದೇ ತೀರುವುದು. ಪ್ರತಿಯೊಂದು ಜೀವಿಯಲ್ಲಿ ಸತ್ಯವಿದೆ–ಆದುದರಿಂದ ಅಲ್ಲಿ ಪ್ರೀತಿಯು ಇದೆ. **ಜೀವಿಗಳ ಎದೆಯಲ್ಲಿ ಒಲವಿನ ಸೆಲೆಯಿದೆ.** ಅಲ್ಲಿಂದ ಹೊರಹೊಮ್ಮುವ ಪ್ರೀತಿಯ ಪ್ರವಾಹವು ಅವನ್ನೆಲ್ಲ ಒಂದುಗೂಡಿಸಿ ಸಂತಸದ ಕಡಲಿನೆಡೆಗೆ ಸೆಳೆದೊಯ್ಯುವುದು. ಆದುದರಿಂದಲೇ ಪ್ರೀತಿಯು ಸಂತಸವನ್ನೀಯುವ ಸೆಳೆತ; **'ಅನ್ಯರಲ್ಲಿ ತನ್ನತನವನ್ನು ಕಂಡು ಎಲ್ಲರನ್ನು ಒಂದಾಗಿರಿಸುವ ಭಾವನೆಯ ಉಕ್ಕು'**

೩) ಬಗೆಗಳು:— ಜೀವಿ ಜೀವಿಗಳ ಸಂಬಂಧವು ಬೇರೆ ಬೇರೆಯಾದುದರಿಂದ ಆಯಾ ಸ್ಥಲದಲ್ಲಿ ವ್ಯಕ್ತವಾದ ಪ್ರೇಮಕ್ಕೆ ಬೇರೆ ಬೇರೆ ಹೆಸರುಗಳು ಬಂದಿವೆ. ತಾಯಿಯಲ್ಲಿ ವಾತ್ಸಲ್ಯ, ಮಗುವಿನಲ್ಲಿ ಮಮತೆ, ನಲ್ಲ-ನಲ್ಲೆಯರಲ್ಲಿ ಕಾಮ; ಕಿರಿಯರಲ್ಲಿ ಆದರ; ಹಿರಿಯರಲ್ಲಿ ಸಲಿಗೆ; ದೇವರಲ್ಲಿ ಕರುಣ; ಭಕ್ತರಲ್ಲಿ ಭಕ್ತಿ; ಇತ್ಯಾದಿ ರೂಪಗಳನ್ನು ತಾಳಿ ಪ್ರೇಮವು ತನ್ನ ಕಾರ್ಯವನ್ನು ನೆರವೇರಿಸುವುದುಂಟು. ಇವು ತೋರಿಕೆಗೆ ಬೇರೆಂದೆನಿಸಿದರೂ ನಿಜವಾಗಿಯೂ ಒಂದೇ.

ಎಷ್ಟೋ ಸಲ ಪ್ರೇಮವು ಮೋಹವಾಗಿ ಪರಿಣಮಿಸುವುದು. ಆಗ ನಮ್ಮಲ್ಲಿಯ ವಿವೇಕವು ಅಳಿದು ನಮ್ಮ ಪ್ರೀತಿಯ ವ್ಯಕ್ತಿಯು ಆಡಿದ್ದೆಲ್ಲ ಆನಂದದಾಯಕವು; ಮಾಡಿದ್ದೆಲ್ಲ ಮೋದಪ್ರದವು. ಆದುದರಿಂದ **ಆತನ**

ವಿಷಯುಕ ಆಕರ್ಷಣವು ಪ್ರೇಮ; ದೇಹವಿಷಯುಕವಾದುದು ಮೋಹ ವೆಂಬುದನ್ನು ಮರೆಯಬಾರದು.

೪) **ಮಹತ್ವ:**—ಪ್ರೇಮವು ಕುಟುಂಬವನ್ನು ಕಟ್ಟುವುದು; ಸಮಾಜವನ್ನು ನಿರ್ಮಿಸುವುದು; ಇಡೀ ವಿಶ್ವವನ್ನೇ ಬಿಗಿಯುವುದು. ಈ ಪ್ರೀತಿಯು ಹೆರೆಯಿರದಿದ್ದರೆ ನಮ್ಮ ಸಮಾಜರಥವು ಸುಖವಾಗಿ ಸಾಗುತ್ತಲೇ ಇರಲಿಲ್ಲ. ಪ್ರಗತಿಯಲ್ಲಿಯ ತಿಕ್ಕಾಟದಿಂದ ಉಂಟಾಗುವ ಬೇಗೆಯು ಅದನ್ನೆಂದೊ ಸುಟ್ಟುಬಿಡುತ್ತಿತ್ತು. '**ಕೆಂಪಾದ ಹಲ್ಲು ಉಗುರುಗಳುಳ್ಳ ಕಾಲವು**' ಎಲ್ಲವನ್ನು ತುತ್ತಿ ಮುಂದಿನ ಜೀವನವನ್ನೇ ನಿಲ್ಲಿಸಿ ಬಿಡುತ್ತಿತ್ತು.

ಪ್ರೇಮವು 'ತನ್ನಂತೆ ಪರರನ್ನು' ಕಾಣಲು ಕಲಿಸುವುದು. ಅದರ ಪ್ರಭಾವದಿಂದಲೇ ನಾವು ಅನ್ಯರ ಸುಖದಲ್ಲಿ ನಮ್ಮ ಸುಖವನ್ನು, ಅನ್ಯರ ದುಃಖದಲ್ಲಿ ನಮ್ಮ ದುಃಖವನ್ನು ಕಾಣುವೆವು. ಅವರು ನಗುವಾಗ ನಗುವೆವು; ಅಳುವಾಗ ಅಳುವೆವು. ಈ ಸಹಾನುಭೂತಿಯು ಮಾನವನನ್ನು ಅಮಾನವ ಸ್ಥಿತಿಯಿಂದ ಮೇಲಕ್ಕೆತ್ತಿ, ಅವನಿಗೆ ಅತಿಮಾನವನ ಗುರಿಯನ್ನು ಕಾಣುವ ಯೋಗ್ಯತೆಯನ್ನು ದಯಪಾಲಿಸುವುದು. ಅದರಿಂದಲೇ ಮಾನವನ ವಿಕಾಸ; ಅದರಲ್ಲಿಯೆ ಮಾನವನ ಮೇಲ್ಮೆ.

೫) **ಉಪಸಂಹಾರ:**—ಪ್ರೇಮವು ಅನ್ಯರ ಅಂತರಂಗವನ್ನು ತೆರೆದು, ಅದರೊಡನೆ ಬೆರೆಯಲು ಅನುಕೂಲತೆಯನ್ನು ಒದಗಿಸುವ ಹೊನ್ನಿನ ಹಿಡಿಯೆ ಸರಿ!

೩ ಸಂಯಮ.

೧ ಉಪಕ್ರಮ:-ಉಗಿಯ ಸಾಮರ್ಥ್ಯದ ರಹಸ್ಯವೇನು? ತೀರ ಸಂಕುಚಿತ ಸ್ಥಲದಲ್ಲಿ ಒತ್ತಿ ಇಡುವುದು

೨ ಎಂದರೇನು?:-ಬಿಗಿಹಿಡಿಯುವುದು. ಇಂದ್ರಿಯಗಳನ್ನು ಮನಸ್ಸಿನಿಂದ.ಮನಸ್ಸನ್ನು ವಿವೇಕದಿಂದ.

೩ ಮಹತ್ವ:-ಇದರಿಂದ ನಮ್ಮ ಶಕ್ತಿಯು ಬೆಳೆಯುವುದು. ಮನವನ್ನು ಗೆದ್ದವರು ಜನರನ್ನು ಸಹಜವಾಗಿ ಗೆಲ್ಲುವರು. 'ಜಿತಂ ಜಗತ್ ಕೇನ? ಮನೋಹಿ ಏನ.' **ಸಂಯಮವಿಲ್ಲದೆ ಸಾಮರ್ಥ್ಯವಿಲ್ಲ.**

೪ ಉಪಸಂಹಾರ:-ಅದೇ ಕಸುವಿನ ಕುಲಿಮೆ. ಸಾಮರ್ಥ್ಯದ ಸೆಲೆ.

ಸಂಯಮ.

೧ ಉಪಕ್ರಮ:— ಉಗಿಯ ಸಾಮರ್ಥ್ಯವನ್ನರಿಯದ ಮಾನವನಿಲ್ಲ. ಇಂದದು ಎಲ್ಲ ಕ್ಷೇತ್ರಗಳಲ್ಲಿ ತನ್ನ ಶಕ್ತಿಯನ್ನು ತೋರಲಿದೆ ಅದಕ್ಕೆ ಇಷ್ಟು ಬಲವು ಬಂದಿತೆಂತು? ಅದರ ಪ್ರಚಂಡ ಸಾಮರ್ಥ್ಯದ ಸೆಲೆಯಲ್ಲಿ? ಸಂಗ್ರಹದಲ್ಲಿ ಅಲ್ಲವೇ? ಸಂಯಮದಲ್ಲಿ ಅಲ್ಲವೇ?

೨ ಎಂದರೇನು?:— ಸಂಯಮವೆಂದರೆ ಬಿಗಿಹಿಡಿಯುವುದು. ನಮ್ಮ ಇಂದ್ರಿಯಗಳನ್ನು ಮನಸ್ಸಿನಿಂದಲೂ, ಮನಸ್ಸನ್ನು ವಿವೇಕದಿಂದಲೂ ಬಿಗಿಹಿಡಿಯುವುದೇ **ಆತ್ಮಸಂಯಮವು**. ಧನವನ್ನು ಬಳಸದೆ ಗಳಿಸಿಡುವುದು **ಧನಸಂಯಮವು**. ಅದೇ ಮೇರೆಗೆ ಬೇರೆ ಶಕ್ತಿಗಳನ್ನು ಸಂಗ್ರಹಿಸುವುದು, ಆಯಾ ಶಕ್ತಿಗಳ ಸಂಯಮವೇ ಸರಿ.

೩ ಏಕೆ?:— ಈ ಮೇರೆಗೆ ನಮ್ಮ ಶಕ್ತಿಗಳನ್ನೆಲ್ಲ ಅತ್ತಿತ್ತ ಹರಿಯಗೊಡದೆ, ಹಿಡಿತದಲ್ಲಿಟ್ಟೆವೆಂದರೆ ಅವುಗಳ ಸಾಮರ್ಥ್ಯವು ಮಿತಿಮೀರಿ ಬೆಳೆಯುವುದು. ವಿಷಯಸುಖವನ್ನು ಸ್ವೈರವಾಗಿ ಉಪಭೋಗಿಸುವ ಇಂದ್ರಿಯಗಳು ಬೇಗನೇ ಬಲಗುಂದುವವು. ವಿವೇಕದ ನಿಯಂತ್ರಣವನ್ನು ತಪ್ಪಿಸಿ ಮಂಗನಂತೆ ಕುಣಿದಾಡುವ ಮನಸ್ಸಿನಲ್ಲಿ ಯಾವ ಮಾತನ್ನು ಅರಿಯುವ ಶಕ್ತಿಯಿರುವದಿಲ್ಲ. ಮಿತಿಯನ್ನರಿಯದೆ ಅತಿಯಾಗಿ ವೆಚ್ಚ ಮಾಡುವವನ ಭಂಡಾರವು ಕೆಲಕಾಲದಲ್ಲಿಯೇ ಬರಿದಾಗುವುದು. ಅವನು ಬಡತನದ ಬವಣಿಗೆ ಈಡಾಗುವನು. ಉಳಿದ ಶಕ್ತಿಗಳದೂ ಇದೇ ಪಾಡು.

ಯಂತ್ರದಲ್ಲಿ ಸಂಯತವಾದ ಉಗಿಯು ಪ್ರಚಂಡವಾದ ಹಡಗುಗಳನ್ನು ಸೆಳೆಯಬಹುದು. ಸುರಂಗದಲ್ಲಿ ಸಂಗ್ರಹಿತವಾದ ಮದ್ದು ದೊಡ್ಡ ಬೆಟ್ಟಗಳನ್ನು ಒಡೆಯಬಹುದು. ಅದೇ ಮೇರೆಗೆ ಸೃಷ್ಟಿಯಲ್ಲಿಯ ಮಿಕ್ಕ ಶಕ್ತಿಗಳು ಸಂಯಮದಿಂದ ತಮ್ಮ ತಮ್ಮ ಬಲವನ್ನು ಬೆಳೆಯಿಸಿಕೊಳ್ಳುವವು.

ಸೂರ್ಯಕಾಂತಮಣಿಯಲ್ಲಿ ಕೇಂದ್ರೀಕೃತವಾದ ಕಿರಣಗಳಲ್ಲಿ ಎಲ್ಲ ವಸ್ತುಗಳನ್ನು ಸುಡುವ ಸಾಮರ್ಥ್ಯವು ಬರುವಂತೆ ಸಂಯತ ಮನಸ್ಸಿನಲ್ಲಿಯೂ ಅಂಥ ಅದ್ಭುತ ಶಕ್ತಿಯು ಮೈದಾಳುವುದು. **'ಜಿತಂ ಜಗತ್ ಕೇನ? ಮನೋ ಹಿ ಏನ' ಮನಸ್ಸನ್ನು ಗೆದ್ದವರೇ ಜನರನ್ನು, ಜಗತ್ತನ್ನು ಗೆಲ್ಲುವವರೆಂದು** ಶ್ರೀಶಂಕರಾಚಾರ್ಯರು ಉಸುರಿರುವರು.

೪ **ಹೇಗೆ?**:—ಆದರೆ ಈ ಸಂಯಮವನ್ನು ಮಾಡುವದೆಂತು? 'ಕಣ್ಣು ನಾಲಿಗೆಗಳ' ಸಂಯಮವು ಮನಃಸಂಯಮದ ಪೂರ್ವಸಿದ್ಧತೆಯೆಂದು ಹಿರಿಯರು ಹೇಳಿರುವರು. ಕಣ್ಣು ಕಂಡದ್ದನ್ನು ನಾಲಿಗೆ ಸವಿದದ್ದನ್ನು, ಮನಸ್ಸು ಬೇಡುವುದು. ಅದಕ್ಕಾಗಿ ಆಯಾ ಆಕರ್ಷಕ ವಸ್ತುಗಳನ್ನು ದೂರದಲ್ಲಿಟ್ಟು ವಿವೇಕದಿಂದ ಮನಸ್ಸಿನ ಹರಿದಾಟವನ್ನು ತಡೆಯುವ ಅಭ್ಯಾಸವನ್ನು ನಿದಾನವಾಗಿ ಸಾಗಿಸಿದರೆ, **ಮನಃಸಂಯಮವು** ಸಾಧ್ಯವಾಗಬಹುದು. **ಕಲಿಸಿದ್ದನ್ನು ಕಲಿಯುವ ಶಕ್ತಿಯು ಮನಸ್ಸಿನಲ್ಲಿದೆ**. ಆದರೆ ದೃಢನಿಶ್ಚಯದಿಂದ ದೀರ್ಘಕಾಲದ ವರೆಗೆ ಅದಕ್ಕೆ ಕಲಿಸಲುಬೇಕು.

೫ **ಉಪಸಂಹಾರಃ**—ತಾತ್ಪರ್ಯವೇನೆಂದರೆ: ಸಂಯಮವಿಲ್ಲದೆ ಸಾಮರ್ಥ್ಯವಿಲ್ಲ. ಅದೇ ಕಸುವಿನ ಕುಲಿಮೆ, ಬಲದ ಸೆಲೆ.

೪ ಸ್ವಾತಂತ್ರ್ಯ.

೧ **ಉಪಕ್ರಮಃ**—ಪೂರ್ಣವಿಕಾಸವು ಮಾನವನ ಗುರಿ. ಅದನ್ನು ಸಾಧಿಸಲು ಪ್ರತಿಯೊಬ್ಬನಿಗೆ ಸ್ವಾತಂತ್ರ್ಯ ಬೇಕು. ಸ್ವಾತಂತ್ರ್ಯವು ಎಲ್ಲರ ಜನ್ಮಸಿದ್ಧ ಹಕ್ಕು.

೨ **ಎಂದರೇನುಃ**—ಆದರ ಎರಡಂಗಗಳು—(೧) ಸ್ವಾವಲಂಬನ, (೨) ಬಂಧಮೋಚನ. ಬೆಳವಣಿಗೆಯನ್ನು ತಡೆಯುವ ಬಂಧನಗಳ ಅಭಾವ. ಸ್ವೈರಾಚಾರವಲ್ಲ; ಆದರಲ್ಲಿ ಬೆಳವಣಿಗೆಯಿಲ್ಲ.

೩ **ಬಗೆಗಳುಃ**—ಸ್ವತಂತ್ರ, ವಿವೇಕತಂತ್ರ, ಹಿರಿಯರತಂತ್ರ. ಅತಂತ್ರವಲ್ಲ. ಈ ಎರಡು ನಿಯಂತ್ರಣವುಳ್ಳ ಸ್ವಾತಂತ್ರ್ಯವೇ ನಮ್ಮನ್ನುದ್ಧರಿಸುವುದು. ಅದೇ ನಿಜವಾದ ಸ್ವಾತಂತ್ರ್ಯ.

೪ **ಪಡೆವುದೆಂತು?ಃ**—(೧) ಸರಿಯಾದ ಬಂಧನಗಳನ್ನು ಪಾಲಿಸಿ, ನಿಯಮಗಳ ಪಾಲನವೇ ಅವನ್ನು ಮೀರುವ ಸಾಧನ. (೨) ವಿವೇಕವಾಣಿಯನ್ನು ಕೇಳಿ.

೫ **ಉಪಸಂಹಾರಃ**—ನಿಯಂತ್ರಿತ ಸ್ವಾತಂತ್ರ್ಯವು ನಮ್ಮ ಗುರಿ. ಎಲ್ಲೆಡೆಯಂತೆ ಇಲ್ಲಿಯೂ ಆಳಾಗಿಯೇ ಆಳಲು ಕಲಿಯಬೇಕು.

ಸ್ವಾತಂತ್ರ್ಯ.

೧ **ಉಪಕ್ರಮ**:—ಮಾನವನಲ್ಲಿ ಅನೇಕ ಶಕ್ತಿಗಳಿವೆ. ಅವೆಲ್ಲವುಗಳ ಪೂರ್ಣ ಬೆಳವಣಿಗೆಯೇ ಮಾನವನ ಗುರಿ. ಅದನ್ನು ಸಾಧಿಸಲು ಪ್ರತಿಯೊಬ್ಬನಿಗೆ ಸರಿಯಾದ ಆಸ್ಪದವಿರಲೇಬೇಕು. ಈ ದೃಷ್ಟಿಯಿಂದ ಸ್ವಾತಂತ್ರ್ಯವು ಎಲ್ಲರ ಜನ್ಮಸಿದ್ಧ ಹಕ್ಕು.

೨ **ಎಂದರೇನು ?**:—ಸ್ವಾತಂತ್ರ್ಯಕ್ಕೆ ಎರಡಂಗಗಳಿವೆ. ಒಂದು **ಸ್ವಾವಲಂಬನ**. ಇನ್ನೊಂದು **ಮುಕ್ತಿ—ಬಂಧನದಿಂದ ಬಿಡುಗಡೆ**. ಸ್ವಾವಲಂಬಿಯಾದವನು ಅನ್ಯರ ಬಂಧನಕ್ಕೆ ಒಳಗಾಗುವದಿಲ್ಲ. ಅದು ಪರಾವಲಂಬನದ ಪರಿಣಾಮ. ಆದುದರಿಂದ ಬಂಧನದ ಅಭಾವವು ಸ್ವಾವಲಂಬನದ ಸಹಜ ಫಲ. ಅದೇ ಮೇರೆಗೆ ಸ್ವಾವಲಂಬನವು ಬಂಧ-ಮುಕ್ತಿಯು ಸ್ವಾಭಾವಿಕ ಪರಿಣಾಮ. ಆದರೆ **ಸ್ವಾತಂತ್ರ್ಯವೆಂದರೆ ಸ್ವೈರಾಚಾರವಲ್ಲ**, ಎಂಬುದನ್ನು ಮರೆಯಬಾರದು.

೩) **ಬಗೆಗಳು**:—ಮಾನವನ ವಿಕಾಸಕ್ಕೆ ನಿಯಂತ್ರಣವೂ ಕೂಡ ಆತ್ಯವಶ್ಯ. ಸ್ವತಂತ್ರ ಮನುಷ್ಯನು ಅದನ್ನು ಪೂರ್ತಿಯಾಗಿ ಅಲ್ಲಗಳೆಯಬಾರದು! ಸ್ವತಂತ್ರನು ತನ್ನ ತಂತ್ರದಿಂದ ನಡೆಯುವನು. ತನ್ನವರ ತಂತ್ರದಿಂದ ವರ್ತಿಸುವನು. ವಿವೇಕವು ಒಳಗಿನ ತಂತ್ರ; ಹಿರಿಯರು ಹೊರಗಣ ತಂತ್ರ. ಈ ಅಂತರ್ಬಾಹ್ಯ ನಿಯಂತ್ರಣಗಳನ್ನು ಅನುಲಕ್ಷಿಸಿ ಸ್ವಾತಂತ್ರ್ಯವು ದ್ವಿವಿಧವಾಗಿರುವುದು ಈ ನಿಯಂತ್ರಣವುಳ್ಳ ಸ್ವಾತಂತ್ರ್ಯವೇ ನಮ್ಮನ್ನುದ್ಧರಿಸುವುದು. ಅದು ಅತಂತ್ರ ಸ್ವೈರಾಚಾರದಿಂದ ಸಾಧ್ಯವಿಲ್ಲ. ಇಂಥ ಸ್ವಾತಂತ್ರ್ಯವೇ ನಿಜವಾದ ಸ್ವಾತಂತ್ರ್ಯ.

ವ್ಯಕ್ತಿಯ ಮಾತೇ ಸಮಾಜಕ್ಕೂ ರಾಷ್ಟ್ರಕ್ಕೂ ಅನ್ವಯಿಸುವುದು. ಸಮಾಜದಲ್ಲಾಗಲಿ ರಾಷ್ಟ್ರದಲ್ಲಾಗಲಿ, **ಸಮತ್ವಬುದ್ಧಿಯುಳ್ಳ ಹಿರಿಯರೇ ಮುಂದಾಳುಗಳಿರಬೇಕು**. ನಾಡಿನ ಹಿತಾಹಿತವು ಅವರಿಗೆ ತಿಳಿಯುವಷ್ಟು ಇನ್ನಾರಿಗೂ ತಿಳಿಯುವದಿಲ್ಲ. **ಅವರೇ ನಾಡಿನ ಮೆದುಳು**. ಮುನ್ನೋಟವನ್ನು ಪಡೆದ ಕಣ್ಣು. ಅವರ ನಿಯಂತ್ರಣದಲ್ಲಿ ಸಮಾಜವು ನಡೆಯತೊಡಗಿದರೆ ಅದರ ಹಾಗೂ ಅದರಲ್ಲಿಯ ಪ್ರತಿಯೊಂದು ವ್ಯಕ್ತಿಯ ಕಲ್ಯಾಣವಾಗುವುದು. ಅದರಿಂದಲೇ ಸಮಾಜಕ್ಕೆ ನಿಜವಾದ ಸ್ವಾತಂತ್ರ್ಯದ ಸುಖವು ಅನುಭವಿಸಲು ದೊರೆಯುವುದು. ಇಲ್ಲಿಯೂ ಸ್ವಾತಂತ್ರ್ಯವು ವರತಂತ್ರ-ಪರತಂತ್ರ, ಶ್ರೇಷ್ಠರ ತಂತ್ರವಾದುದಿರಬೇಕು.

೪) **ಪಡೆಯುವ ರೀತಿ**:—ಮನಸ್ಸಿನ ಕೀಳುಭಾವನೆಗಳ ವಶದಿಂದ ಬಿಡುಗಡೆಹೊಂದಿ, ನಿಜವಾದ ವಿವೇಕಿಗಳ ಅಧೀನವಾಗಿರಲು ಯತ್ನಿಸು

ವುದು ಸ್ವಾತಂತ್ರ್ಯಪ್ರಾಪ್ತಿಯ ದಾರಿಯಲ್ಲಿಯ ಮೊದಲನೆಯ ಹೆಜ್ಜೆ. ವಿವೇಕಿಗಳಾದ ಹಿರಿಯರು ತಮ್ಮ ಆದರ್ಶದಿಂದಲೂ ಉಪದೇಶದಿಂದಲೂ ನಮ್ಮನ್ನು ಕೇಳ್ಮೆಯ ಕೊಳ್ಳದಿಂದ ಮೇಲಕ್ಕೆತ್ತಿ ನಮ್ಮಲ್ಲಿಯ ವಿವೇಕ ಶಕ್ತಿಯನ್ನು ಎಚ್ಚರಗೊಳಿಸುವರು. ಬರಬರುತ್ತ ಅವರು ನಮ್ಮನ್ನು ನಮ್ಮ ವಿವೇಕದ ಹೇಳಿಕೆಯಂತೆ ನಡೆಯಲು ಹೇಳುವರು. ನಮ್ಮಲ್ಲಿಯ ವಿವೇಕದ ಬಲವು ನಾಕಷ್ಟು ಬೆಳೆಯಿತೆಂದರೆ ಅವರು ತಮ್ಮ ನಿಯಂತ್ರಣವನ್ನು ಸಡಿಲಿಸುವರು. ಒಂದರ್ಥದಿಂದ ನಿಯಂತ್ರಣವು ಉಳಿದೇ ತೀರುವುದು. ಮುಂದದು ಅವರದಾಗದೇ ನಮ್ಮದೇ ಆಗುವುದು. ಇಷ್ಟೇ ಭೇದವದರಲ್ಲಿ. ಈ ಮೇರೆಗೆ ನಮ್ಮ **ಅಂತಃಕರಣಪ್ರವೃತ್ತಿಯೇ ಪ್ರಮಾಣವಾಯಿ**ತೆಂದರೆ ನಾವು ಪೂರ್ತಿಯಾಗಿ ಸ್ವತಂತ್ರರಾದವೆಂದು ತಿಳಿಯಬೇಕು.

೫) **ಉಪಸಂಹಾರ**:– ಆದುದರಿಂದ ಪರತಂತ್ರ ಸ್ವಾತಂತ್ರ್ಯದಲ್ಲಿಯೇ ನಿಜವಾದ ಸ್ವಾತಂತ್ರ್ಯಸುಖ. ಎಲ್ಲೆಡೆಯಂತೆ ಇಲ್ಲಿಯೂ **ಆಳಾಗಿಯೇ ಆಳಬೇಕು, ಬಾಳಬೇಕು.**

೫ ಸ್ವದೇಶಾಭಿಮಾನ.

೧ **ಉಪಕ್ರಮ**:—ರಾಷ್ಟ್ರದೇವೋ ಭವ! ಇದು ಇಂದಿನ ಮಹಾಮಂತ್ರ. ಆದೇ ನಮ್ಮಲ್ಲಿ ನವಚೈತನ್ಯವನ್ನುಂಟುಮಾಡುವುದು.

೨ **ಎಂದರೇನು?**:- ತಾಯ್ನಾಡಿನ ಪ್ರೀತಿ.

೩ **ಅದರ ಗುಣಗಳು**:—ಅದು ಮಾನವನ ಪ್ರಗತಿಯ ಕುರಹು. ಅಂತರಂಗ ವೈಶಾಲ್ಯ-ನಾಡು-ನುಡಿ-ಸಂಸ್ಕೃತಿಗಳ ರಕ್ಷಣ. ಅವುಗಳ ಉದ್ಧಾರ.

೪ **ಅದರ ದೋಷಗಳು**:—ಸಂಕುಚಿತ ದೇಶಾಭಿಮಾನವು ಜಗತ್ತಿನ ಅಶಾಂತಿಗೆ ಕಾರಣ. ಅದು ವಿಶಾಲತೆಯನ್ನು ಹೊಂದುತ್ತಿರಬೇಕು. **ಬೆಳೆವುದು ನಿಂತೊಡನೆ ಅಳಿಗಾಲಕ್ಕೆ ಪ್ರಾರಂಭ.**

೫ **ಉಪಸಂಹಾರ**:—ವಿಶಾಲವಾದ ದೇಶಪ್ರೇಮವೇ ಮುಂದಿನ ಪ್ರಗತಿಯ ಅಡಿಗಲ್ಲು.

ಸ್ವದೇಶಾಭಿಮಾನ.

೧) **ಉಪಕ್ರಮ**:—ಅಂದು ತಂದೆಯು ದೇವರಾದರೆ, ಇಂದು ರಾಷ್ಟ್ರವು ದೇವರು; ಅಂದು ತಾಯಿಯು ದೇವಿಯಾದರೆ, ಇಂದು

ತಾಯ್ನಾಡು ದೇವಿ. **ರಾಷ್ಟ್ರದೇವೋ ಭವ!** ಎಂಬುದು ಇಂದಿನ ಮಹಾ ಮಂತ್ರ! ವಂದೇ ಮಾತರಮ್! ಎಂಬುದು ಇಂದಿನ ವಂದನೆ! ಅದೇ ನಮ್ಮನ್ನು ಹುರಿಗೊಳಿಸುವುದು; ನಮ್ಮಲ್ಲಿ ನವಚೈತನ್ಯವನ್ನುಂಟುಮಾಡು ವದು.

೨) **ಎಂದರೇನು?** :—ತನ್ನ ತಾಯ್ನಾಡಿನ ಪ್ರೀತಿಯೆ ಸ್ವದೇಶಾ ಭಿಮಾನವು. ನಾವು ಈವರೆಗೆ ನಮ್ಮನ್ನು ಹಡೆದ ತಾಯಿಗೆ ತೋರಿಸುವ ಪ್ರೇಮಾದರಗಳನ್ನು ತಾಯ್ನಾಡಿಗೂ ಸಲ್ಲಿಸತಕ್ಕದ್ದು. ತಾಯಿಯು ನಮ್ಮನ್ನು ನಾಕಿಸಲುಹುವಂತೆ ತಾಯ್ನಾಡು ಮಾಡುವದಿಲ್ಲವೆ? ಭೂಮಿ ತಾಯಿಯ ಕಲ್ಪನೆಯು ನಮ್ಮವರಿಗೇನು ಹೊಸದಾದದ್ದಲ್ಲ. 'ಭೂಮಿ ಕೊಡಲಾಕಿದ್ದಾಗ, ನಮಗ್ಯಾನ ಕಡಿಮಿ?' ಎನ್ನುವ ರೈತರು ನಮ್ಮಲ್ಲ ದೆಷ್ಟೋ ಜನ. ಭೂಮಾತೆಯು ಅಮೂರ್ತಳು-ಮೂರ್ತಸ್ವರೂಪದಲ್ಲಿ ಕಾಣದಿದ್ದರೂ ಆಕೆಯು ತನ್ನ ಒಲವನ್ನು ಕರೆಯಲು ಮರೆಯುವದಿಲ್ಲ. ಕಾಣದಮಾತ್ರಕ್ಕೆ ಅವಳು ತಾಯಿಯಲ್ಲವೆ? ನಾವವಳನ್ನು ಪ್ರೀತಿಸಲು ಬೇಡವೇ?

೩) **ಗುಣಗಳು:**—ಸ್ವದೇಶಾಭಿಮಾನವು ಮಾನವನ ಮನೋವಿಕಾ ಸದ ಕುರುಹು. ಅದು ಅವನ ಅಂತರಂಗದ ವೈಶಾಲ್ಯವನ್ನು ಸೂಚಿಸು ವುದು. ಈವರೆಗೆ ಅವನ ದೃಷ್ಟಿಯು ತನ್ನ, ತನ್ನ ಕುಟುಂಬದ, ಹಿತವನ್ನು ಳಿದು ಇನ್ನೊಂದನ್ನು ಕಾಣುತ್ತಿರಲಿಲ್ಲ. ಇಂದದು ಹಿಗ್ಗಿ ನಾಡು-ನುಡಿ- ಧರ್ಮ-ಸಂಸ್ಕೃತಿ ಇತ್ಯಾದಿ ವಿಷಯಗಳನ್ನು ವಿಚಾರಿಸುವಷ್ಟು ವಿಕಸಿತ ವಾಗಿದೆ. ಇದು ಆತನ ಆಂತರಿಕ ಪ್ರಗತಿಯನ್ನೆಯೆ ತೋರಿಸುವುದಿಲ್ಲವೆ?

ಇದರಿಂದವನು ತನ್ನ ನೀಚ ಸ್ವಾರ್ಥವನ್ನು ತೊರೆದು, ಮೇಲ್ತರ ಗತಿಯ ಸ್ವಾರ್ಥವನ್ನು ಸಾಧಿಸಲು ಯತ್ನಿಸುವ. ಕುಟುಂಬವನ್ನಷ್ಟೇ ರಕ್ಷಿಸಲು ಹೆಣಗುವವನು ರಾಷ್ಟ್ರದ ಜನರನ್ನೆಲ್ಲ ಉದ್ಧರಿಸಲು ಯತ್ನಿಸುವ. ಈ ವೃತ್ತಿಯಿಂದ ಇಡೀ ರಾಷ್ಟ್ರದ ಕಲ್ಯಾಣವಾಗುವುದು. ಅದಕ್ಕೆ ವೈಭವವು ಪ್ರಾಪ್ತವಾಗುವುದು.

೪) **ದೋಷಗಳು:—ಸ್ವ-ಪ್ರೀತಿಯು** ಸಂಕುಚಿತವಾಗಿ ನೀಚ ಸ್ವಾರ್ಥವು ಬಲಿಯಿತೆಂದರೆ ಅದು ನೆರೆಯುವರನ್ನು ಕಾಡಲು ಮುಂದು ಮಾಡುವಂತೆಯೆ, **ಸ್ವ-ದೇಶ ಪ್ರೀತಿಯುದೂ** ಆಗುವುದುಂಟು. ಮನುಷ್ಯನು ಹಾಗೆಯೆ ಪ್ರಗತಿಯನ್ನು ಹೊಂದುತ್ತ, ವಿಶ್ವಪ್ರೀತಿಯೆಡೆಗೆ ಸಾಗತೊಡಗಿದನೆಂದರೆ ಅವನ ವಿಶಾಲವಾದ **ಸ್ವದೇಶಪ್ರೀತಿಯು** ಅನ್ಯರ, ಪ್ರಗತಿಯನ್ನು ತಡೆಯುವದಿಲ್ಲ. ಆದರೆ ತನ್ನ ನಾಡಿನ ಏಳ್ಗೆಯಲ್ಲಿ ಅನ್ಯರ ಆಹುತಿ ಬಿದ್ದರೂ ಅಡ್ಡಿಯಿಲ್ಲ ಎಂಬ ಭಾವನೆಯಿಂದ ಪ್ರೇರಿತವಾದ ಸಂಕುಚಿತ ಸ್ವದೇಶಾಭಿಮಾನವು ತೀರ ಸದೋಷವಾಗದಿರದು. ಅಂಥ ಸಂಕುಚಿತತನವೇ ಇಂದಿನ ಜಗತ್ತಿನಲ್ಲಿಯ ಅಶಾಂತಿಗೆ, ಗೋಳಾಟಕ್ಕೆ ಕಾರಣ. ಈ ಬಗೆಯಾಗಿ ಸಂಕುಚಿತವೃತ್ತಿಯುಳ್ಳ ಪ್ರಬಲ ರಾಷ್ಟ್ರಗಳು ದುರ್ಬಲರನ್ನು ಮಣ್ಣುಗೂಡಿಸಿ ಅವರ ಗೊಬ್ಬರದಿಂದುದಿಸಿದ ಬೆಳೆಯನ್ನು ಸ್ವೈರವಾಗಿ ಉಪಭೋಗಿಸುತ್ತಿರುವವು. ಸ್ವದೇಶಪ್ರೇಮದ ಪವಿತ್ರ ಹೆಸರಿನಿಂದ ಎಂಥ ಹೇಸಿ ಕೆಲಸವನ್ನು ಮಾಡಲೂ ಅವು ಹೇಸುವದಿಲ್ಲ. ಆದುದರಿಂದ ಇಂಥ ಸಂಕುಚಿತ ಸ್ವದೇಶಾಭಿಮಾನವು ಎಷ್ಟೂ ಸರಿಯಲ್ಲ.

೫) **ಉಪಸಂಹಾರ:**—ಒಂದು ಕಣ್ಣಿನಿಂದ **ಸ್ವದೇಶಹಿತ**ವನ್ನು ಕಾಣುತ್ತಿರುವಾಗಲೇ ಇನ್ನೊಂದರಿಂದ **ವಿಶ್ವಹಿತ**ವನ್ನು ಲಕ್ಷಿಸುವುದೇ ನಿಜವಾದ ಪ್ರಗತಿಪರ ಜೀವನದ ಲಕ್ಷಣ. ಇಂಥ ವಿಶಾಲ ದೇಶಪ್ರೇಮವೇ ವಿಶ್ವಶಾಂತಿಯ ಅಡಿಗಲ್ಲು.

೬ ಪರೋಪಕಾರ

೧ ಉಪ**ಕ್ರಮ:**—ಪರಾರ್ಥವು ಸ್ವಾರ್ಥವಾದವನೇ ಸಜ್ಜನರಲ್ಲಿ ಮಿಗಿಲಾದವನು.

೨ ಅಂದರೇನು? :—ತನ್ನಂತೆ ಪರರ ಬಗೆದು-ಅವರ ಹಿತವನ್ನು ಸಾಧಿಸಲು ತನು-ಮನ-ಧನವನ್ನು ಅರ್ಪಿಸುವುದು.

೩ **ಮಹಿಮೆ:**—ದಯವು ಧರ್ಮದ ಮೂಲ. ಉಪಕಾರಧರ್ಮವು ಪರಮಾತ್ಮನ ಶ್ರೇಷ್ಠ ಧರ್ಮ. ಅನ್ಯರ ಹಿತದಲ್ಲಿಯೆ ತಮ್ಮ ಹಿತ. ಸ್ವಾರ್ಥತ್ಯಾಗವು ಹಿರಿತನದ ಕುರುಹು—

೪ **ಉಪಸಂಹಾರಃ**—**They alone live, who live for others; the rest are more dead than alive.** ಪರರಿಗಾಗಿ ಬಾಳುವವರ ಬಾಳೇ ಬಾಳು. ಉಳಿದವರ ಬಾಳು ಹಾಳು.

ಪರೋಪಕಾರ.

೧) **ಉಪಕ್ರಮ:— 'ಹಸಿದರ ಮೊಗಮಂ ನೋಡಂ'** ನಮ್ಮ **ಆದಿಗೊಂಡ.** 'ಹಸುಗೂಸುಗಳ್ಗೆ ಹಾಲಂ, ಹಸಿದರ್ಗೆ ಅನ್ನಂ ಸಲಿಸುವ ಬೆಸಸವು' ಅವನದು. ಕೆರೆ ಕಟ್ಟಿಸುವುದು-ಅರವಟ್ಟಿಗೆಯನ್ನಿಡುವುದು, ಆರಾಮತೋಟವನ್ನು ಮಾಡಿಸುವುದು, ಇವನ್ನುಳಿದು ಇನ್ನೊಂದು ಕೆಲಸ ವಿಲ್ಲಿಲ್ಲವಂತೆ ಅವನಿಗೆ. ಇಂಥ ಹಿರಿಯರ ನಾಡವರಿಗೆ ಪರೋಪಕಾರದ ಪಾಠವನ್ನು ಹೇಳಬೇಕೆ?

೨) **ಎಂದರೇನು:—**ಎರಡನೆಯವರ ಅರ್ಥವನ್ನು, ಹಿತವನ್ನು ಸಾಧಿಸಿ ಅವರಿಗೆ ಉಪಕಾರವನ್ನು ಮಾಡುವುದು ಪರೋಪಕಾರಿಯು ಆದ್ಯ ಕರ್ತವ್ಯವು. ಅವನಿಗೆ ತನ್ನಂತೆ ಅನ್ಯರು. ಅವರ ಹಿತವೇ ತನ್ನ ಹಿತವು. ಅದನ್ನು ಸಾಧಿಸಲು, ಅವನು ತನ್ನ ತನು-ಮನ-ಧನವನ್ನು ಅರ್ಪಿಸಲು ಸನ್ನದ್ಧನಿದ್ದನು.

೩) **ಏಕೆ?:—**ತನ್ನ ಕಲ್ಯಾಣವನ್ನು ಬದಿಗಿರಿಸಿ ಅನ್ಯರ ಹಿತಕ್ಕಾಗಿ ನಾವು ಅವೇತಕ್ಕೆ ಹೆಣಗಬೇಕು? ಹಾಗೆ ಮಾಡುವುದೆಂದರೆ ಅದೊಂದು ಶುದ್ಧ ಆತ್ಮಘಾತವಲ್ಲವೇ, ಮೂರ್ಖತನವಲ್ಲವೇ! ಅದರಿಂದೇನು ಪ್ರಯೋಜನ? ಎಂದು ಇಂದಿನ ಬಣಗು ಬುದ್ಧಿವಂತರು (?) ಕೇಳಬಹುದು.

ಮಾನವನು ಸಮಾಜದಲ್ಲಿರುವ ಪ್ರಾಣಿ. ಅವನಿಗೆ ಸದೈವ ಅನ್ಯರ ನೆರವಿನ ಅವಶ್ಯಕತೆ. ಅದಿಲ್ಲದೆ ಇವನ ಯಾವ ಕೆಲಸವೂ ಸಾಗದು. ಇವನ ಸುಖ-ದುಃಖದಲ್ಲಿ ಅನ್ಯರು ಪಾಲುಗಾರರಾದರೆ, ಸುಖವು ಇಮ್ಮಡಿ ಬೆಳೆದು ದುಃಖವು ಅರ್ಧಕ್ಕಿಳಿಯುವುದು. ಇವನ ರಕ್ಷಣೆ ಪೋಷಣೆಯು ಕೆಲಸಪಟ್ಟಿಗೆ ಅನ್ಯರ ಸಹಾಯವನ್ನು ಅಪೇಕ್ಷಿಸುವುದು. ಹೀಗಿರಲು ಸದೈವ ಉಪಕಾರವನ್ನು ಅಪೇಕ್ಷಿಸುವವನು, ಅದನ್ನಷ್ಟೇ ತತ್ಪರತೆಯಿಂದ ಸಲ್ಲಿಸಬೇಕಲ್ಲವೇ?

ಉಪಕಾರವು ಅಂತರಂಗವನ್ನು ಹಿಗ್ಗಿಸುವುದು. ಜೀರಿಯುವರ ಬವಣೆಯಿಂದ ಕೋಮಲ ಹೃದಯವು ಅಳುಕಿ, ತನ್ನ ಒಳಗಿನ ನೋವನ್ನು ಅಲ್ಲಗಳೆಯಲು ಅದು ಉಪಕಾರದ ರೂಪವನ್ನು ತಾಳುವುದು. ಈ

ನೋರೆಗೆ ಪ್ರತಿಫಲವನ್ನು ಬಯಸುವ ಪರಾರ್ಥಪ್ರವೀಣನು ಪರಮಾರ್ಥ ಸಾಧನದ ಒಂದು ಮೆಟ್ಟಲನ್ನು ಏರುವನು. ಇದಕ್ಕಾಗಿಯೇ, '**ದಯವೆ ಧರ್ಮದ ಮೂಲವಯ್ಯ; ಉಪಕಾರ-ಧರ್ಮವೇ ಪರಮಾತ್ಮನ ಪರ ಧರ್ಮ**'ವೆಂದು ಹಿರಿಯರು ಉಸುರಿರುವರು.

ಪರಾರ್ಥವು ಸ್ವಾರ್ಥವಾದವನೇ ನಿಜವಾದ ಹಿರಿಯ. ಪರಾರ್ಥ ಕ್ಕಾಗಿ ಸ್ವಾರ್ಥದ ತ್ಯಾಗದಲ್ಲಿಯೇ ನಿಜವಾದ ಹಿರಿತನ.

೪) **ಹೇಗೆ?:**—ಆದರೆ ಇದನ್ನು ಸಾಧಿಸುವುದೆಂತು? ಅದರ ಒಂದು ರೀತಿಯನ್ನು ಹಿಂದೆ ಅರುಹಿದ್ದಾಗಿದೆ. ಪರಾರ್ಥವು ನಿಷ್ಕಾಮವಿರ ಬೇಕು. ಅದಕ್ಕೆ ವಿವೇಕದ ಬೆಂಬಲಬೇಕು. ಪರಾರ್ಥವನ್ನು ಮಾಡುವ ಪೂರ್ವದಲ್ಲಿ, ನಾವು ಸಾಧಿಸಲಿರುವುದು ಸರಿಯಾದ ಪರಾರ್ಥವೋ, ಅದ ರಿಂದಪರ ನಿಜವಾದ ಕಲ್ಯಾಣವಾಗುವುದೋ, ಇತ್ಯಾದಿ ಮಾತುಗಳನ್ನು ಚೆನ್ನಾಗಿ ಪರಿಶೀಲಿಸಬೇಕು. ಮತ್ತು ಸಾಧ್ಯವಿದ್ದಷ್ಟು ನಾವು ಅನ್ಯರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಹೆಣಗಬೇಕು. ಆ ದೃಷ್ಟಿಯಿಂದಲೆ ಅವರಿಗೆ ನಾವು ನೆರವನ್ನೀಯಬೇಕು. ಇಲ್ಲದೆ ಹೋದರೆ ನಮ್ಮ ದಾನವು ಅನ್ಯರಲ್ಲಿ ಅಲಸಿಕೆಯನ್ನು ಬೆಳಸಿ ಅವರಲ್ಲಿ ದೈನ್ಯದ ವ್ಯಸನವನ್ನು ಬೇರೂರಿಸಿದ ದೋಷಕ್ಕೆ ನಮ್ಮನ್ನು ಗುರಿಮಾಡಬಹುದು.

'ಕೊಟ್ಟು ಕುದಿಯಲು ಬೇಡ-ಕೊಟ್ಟು ಆಡಿಕೊಳ್ಳಬೇಡ! ಕೊಟ್ಟು ನಾ ಕೆಟ್ಟೆನೆನಬೇಡ' ಎಂದು ಉಸುರಿರುವ ಸರ್ವಜ್ಞ. ಸಿಟ್ಟಾಗಿ ಕೊಡ ಬಾರದು ಗರ್ವದಿಂದ ಕೊಡಬಾರದು. ದುಃಖದಿಂದ ಕೊಡಬಾರದು. ಆನಂದದಿಂದ ಕೊಡಬೇಕು. ಕರ್ತವ್ಯಬುದ್ಧಿಯಿಂದ ಕೊಡಬೇಕು.

೫) **ಉಪಸಂಹಾರ:**—They alone live, who live for others, the rest are more dead than alive. ಪರರಿಗಾಗಿ ಬಾಳುವವರ ಬಾಳೇ ನಿಜವಾದ ಬಾಳು; ಉಳಿದವರ ಬಾಳು-ಬಾಳಲ್ಲ, ಹಾಳು!

೭ ಭಕ್ತಿ.

೧ **ಉಪಕ್ರಮ:**—ಭಕ್ತಿಯೆ ಮುಕ್ತಿಯ ಜನನಿ. ಅದೇ ನಿಜವಾದ ಪರಮಾರ್ಥ.

೨ **ಎಂದರೇನು?:**—ಪರಮಾತ್ಮನಲ್ಲಿಯ ಉತ್ಕಟವಾದ ಒಲವು-ಪ್ರೀತಿ.

೩ ಮಾಡುವುದೇತಕ್ಕೆ? :—(೧) ಪರಮಾತ್ಮನು ಜೀವನವನ್ನು ಕೊಟ್ಟಿರುವ. ಪಾಲನವನ್ನು ಮಾಡಲಿರುವ... ಕೃತಜ್ಞತೆಯನ್ನು ತೋರಿಸುವದು ನಮ್ಮ ಕರ್ತವ್ಯ. (೨) ಅವನೇ ಬಲದ ಆಗರ; ಆನಂದದ ಸಾಗರ. ಭಕ್ತಿಯಿಂದ ಅವು ದೊರೆಯುವವು.

೪ ಮಾಡುವದೆಂತು?:—ಒಳ್ಳೆಯ ಗ್ರಂಥಗಳನ್ನೋದಿ. ಒಳ್ಳೆಯವರ ಸಹವಾಸದಲ್ಲಿ ಇಂತು. ಒಳ್ಳೆಯ ಕರ್ಮಗಳನ್ನು ಮಾಡಿ. ಅವನ ಸ್ಮರಣೆಯನ್ನು ಮಾಡಿ.

೫ ಉಪಸಂಹಾರ:—Trust in God and do the right. ದೇವರನ್ನೆ ನಂಬಿ ಸರಿಯಾದುದನ್ನು ಮಾಡಿರಿ!

ಭಕ್ತಿ.

೧ **ಉಪಕ್ರಮ**:—ಮಾನವನ ಅನೇಕ ಬಯಕೆಗಳಲ್ಲಿ ತೀರ ಶ್ರೇಷ್ಠವಾದುದಾವುದು? ಯಾವುದನ್ನು ಸಾಧಿಸಿದರೆ ಎಲ್ಲವನ್ನು ಸಾಧಿಸಿದಂತಾಗುವುದು? ಅದರ ಸಾಧನವಾವುದು! ಇತ್ಯಾದಿಗಳನ್ನು ನಿಶ್ಚಯಿಸುವುದು ಪ್ರತಿಯೊಬ್ಬನ ಕರ್ತವ್ಯ.

೨ ಎಂದರೇನು:—ಪರಮಾತ್ಮನೇ ನಮ್ಮ **ಪರಮ ಅರ್ಥ**, ಎಲ್ಲಕ್ಕೂ ಮಿಗಿಲಾದ ಅರ್ಥ. ಅವನನ್ನು ಅತ್ಯುತ್ಕಟವಾಗಿ ಪ್ರೀತಿಸುವದೇ ಭಕ್ತಿ. ನಾವು ನಮ್ಮ ತಂದೆ-ತಾಯಂದಿಯರನ್ನು ಗುರು-ಹಿರಿಯರನ್ನು ಬೇರೆ ಬೇರೆ ಪ್ರಿಯ ಒಡವೆಗಳನ್ನು ಯಾವ ರೀತಿಯಿಂದ ಎಷ್ಟು ಪ್ರಬಲವಾಗಿ ಪ್ರೀತಿಸುವೆವೋ ಅದೇ ರೀತಿಯಿಂದ-ಕಿಂಬಹುನಾ ಅದಕ್ಕೂ ಹೆಚ್ಚು ಪ್ರಬಲವಾಗಿ ಪರಮಾತ್ಮನನ್ನು ಪ್ರೀತಿಸುವದೇ ಭಕ್ತಿಯು.

೩ ಏಕೆ:— ನಾವು ಪರಮಾತ್ಮನನ್ನು ಅದೇಕೆ ಪ್ರೀತಿಸಬೇಕು. ಅದರಿಂದ ನಮಗೆ ದೊರೆಯುವುದೇನು? ಪರಮಾತ್ಮನು ನಮಗೆ ಜೀವನವನ್ನು ದಯಪಾಲಿಸಿರುವ; ನಮ್ಮನ್ನು ಸಾಕುವ, ಸಲಹುವ; ನಮ್ಮ ಬಾಳಿಗೆ ಅತ್ಯವಶ್ಯವಾದ ಗಾಳಿ-ನೀರು-ಅನ್ನಗಳನ್ನು ವಿಪುಲವಾಗಿ ನೀಡಿರುವ. ಹೀಗಿರಲು ಆತನಿಗೆ ನಮ್ಮ ಕೃತಜ್ಞತೆಯನ್ನಾದರೂ ನಾವು ಸಲ್ಲಿಸಬೇಡವೇ?

ಅನ್ನವನು ಕೊಟ್ಟವಗೆ ಎಲ್ಲವನು ನೀಡುವೆವು
ಜನ್ಮ ಕೊಟ್ಟವಗಿನ್ನು ಮರೆಯಬಹುದೇ?

ಇಂಥವನನ್ನು ಭಜಿಸುವುದು ನಮ್ಮ ಕರ್ತವ್ಯವಲ್ಲವೇ?

ಮೇಲಾಗಿ ಪರಮಾತ್ಮನೇ ಬಲದ ಆಗರ-ಆನಂದದ ಸಾಗರ. ನಮ್ಮ ಬಾಳ್ವೆ ಚೆನ್ನಾಗಿ ಸಾಗಬೇಕಾದರೆ, ವೈಭವಪೂರ್ಣವಾಗಬೇಕಾದರೆ, ನಮಗೆ ಮಿಗಿಲಾದ ಬಲವು ಬೇಕು, ಹೆಚ್ಚಿನ ಆನಂದವು ಬೇಕು. ಅವನ್ನು ಪಡೆಯುವುದು ದೇವನಿಂದಲ್ಲವೆ ಇನ್ನಾರಿಂದ? ಅವನ್ನವನು ನಮಗೆ ಸಲ್ಲಿಸಬೇಕಾದರೆ ನಮ್ಮ ಸೇವೆಯಿಂದ ಅವನಲ್ಲಿಯ ಕರುಣವು ಜಾಗೃತವಾಗಲಿಕ್ಕೆ ಬೇಕಲ್ಲವೇ? ನಾವವನನ್ನು ಭಕ್ತಿಯಿಂದ ಭಜಿಸಿದೆವೆಂದರೆ ಕರುಣಸಾಗರನಾದ ಆತನು ಅವನ್ನೆಲ್ಲ ನಮಗೆ ಕರುಣಿಸದಿರನು. ಅನಂತ ಕೈಗಳಿಂದ ಆತನು ನೀಡಲು ಮುಂದುವರಿದಾಗ ಎರಡು ಕೈಗಳಿಂದ ನಾವು ಎಷ್ಟೆಂದು ಸ್ವೀಕರಿಸಬಹುದು!

೪ **ಹೇಗೆ?** :—ಭಕ್ತಿಯನ್ನು ಎರಡು ವಿಧದಿಂದ ಮಾಡುವುದುಂಟು. ಒಂದು **ಅಪ್ರತ್ಯಕ್ಷ**–ಒಂದು **ಪ್ರತ್ಯಕ್ಷ. ಸತ್-ಶ್ರವಣ–ಸತ್-ಸಂಗ ಸತ್-ಕರ್ಮ,** ಇವು ಮೊದಲನೆಯ ವರ್ಗಕ್ಕೆ ಸೇರಿದವುಗಳು. ಪರಮಾತ್ಮನ ಮಹಿಮೆಯನ್ನು ಬಣ್ಣಿಸುವ ಒಳ್ಳೆಯ ಗ್ರಂಥಗಳನ್ನೋದಿ, ಒಳ್ಳೆಯ ಕೀರ್ತನೆ-ಉಪನ್ಯಾಸಗಳನ್ನು ಕೇಳಿ, ನಮ್ಮಲ್ಲಿಯ ಭಕ್ತಿಭಾವವನ್ನು ಜಾಗೃತಗೊಳಿಸುವುದು ಮೊದಲನೆಯ ಕೆಲಸ. ಮುಂದೆ ಹಿರಿಯರ ಪ್ರತ್ಯಕ್ಷ ಸಹವಾಸದಲ್ಲಿ ನಿಂತು ಅವರ ಮೇಲ್ಪಂಕ್ತಿಯನ್ನು ತೀಡಲು ಯತ್ನಿಸತಕ್ಕದ್ದು. ಅವರ ಆದರ್ಶವು ನಮ್ಮನ್ನು ಸಂತತವಾಗಿ ಮೇಲಕ್ಕೆ ಸೆಳೆಯುವುದು. ಕೆಳಗೆ ಬೀಳಗೊಡುವದಿಲ್ಲ. ಅದರಿಂದ ಸ್ಫೂರ್ತಿಗೊಂಡು ಒಳ್ಳೆಯ ಕೆಲಸದಲ್ಲಿಯೆ ನಾವು ಸದೈವ ತೊಡಗಿದೆವೆಂದರೆ ನಮ್ಮಲ್ಲಿ ಸತ್-ಪ್ರವೃತ್ತಿಯು ಇನ್ನಿಷ್ಟು ಬಲಿಯುವುದು.

ಪರಮಾತ್ಮನ ನೆನವು ಭಕ್ತಿಯ ಪ್ರತ್ಯಕ್ಷ ರೀತಿ. ಬಲ್ಲವರಿಂದ ಅದರ ರೀತಿಯನ್ನರಿತು ಎಡಬಿಡದೆ ಪರಮಾತ್ಮನನ್ನು ನೆನೆಯುವುದು ಭಕ್ತಿಯ ಹಿರಿಯ ಬಗೆ. ಆದರಿಂದ ಅವನು ಆವಿರ್ಭವಿಸಿ '**ಅನುಭಾವಯತಿ ಭಕ್ತಾನ್**' ಭಕ್ತರಿಗೆ ಕಾಣಿಸಿಕೊಳ್ಳುವನು. ಅವರನ್ನು ಕರುಣಿಸುವನು. ಅವರ ಜೀವನವು ಸಫಲವಾಗುವುದು. ಅವರು ಸಂತಸದ ಕಡಲಲ್ಲಿ ಮುಳುಗುವರು.

೫ ಉಪಸಂಹಾರ:—ಆದುದರಿಂದ ಓರ್ವ ಆಂಗ್ಲ ಕವಿಯು ಉಸುರಿದ ಮೇರೆಗೆ ನಾವು '**ದೇವರನ್ನು ನಂಬಬೇಕು ಒಳಿತನ್ನು** (ಭಕ್ತಿಯನ್ನು) **ಮಾಡಬೇಕು**' Trust in God and do the right' ಇದೇ ನಮ್ಮ ಗುರಿ! ಇದೇ ನಮ್ಮ ದಾರಿ!

೮ ಸತ್ಸಂಗ.

೧ **ಉಪಕ್ರಮ:**—ಜತೆಯಂತೆ ಮತಿ. ಶೀಲವು ಪರಿಸರದ ಫಲ. ಅನುಕರಣವು ಮಾನವನ ಸಹಜ ಧರ್ಮ.

೨ **ಎಂದರೇನು? :**—ಸಜ್ಜನರ ಸಹವಾಸ. ಅವರ ಜತೆಯಲ್ಲಿರೋಣ.

೩ **ಪ್ರಭಾವ:**—ಸುತ್ತಲು ಒಳ್ಳೆಯ ಆದರ್ಶವಾತಾವರಣ. ಸಹಜವಾಗಿ-ಅನಾಯಾಸವಾಗಿ ಪರಿಣಾಮ. ಹಿರಿಯರಿಂದ ಕಿರಿಯರಿಗೆ ಸ್ಫೂರ್ತಿ. ಉಪದೇಶಕ್ಕಿಂತ ಉದಾಹರಣೆ ಮೇಲು. ಮರ-ಬಳ್ಳಿ; ಗಾಳಿ-ಹುಟ; ಹೂ-ದಾರ.

೪ **ಉಪಸಂಹಾರ:** - ಜೀವನವೇ ಪಾವನವಾಗುವುದು. ಪ್ರಯತ್ನವಿಲ್ಲದೆ ಪ್ರಗತಿ· **'ಸಾಧನವಿಲ್ಲದೆ ಸನ್ಮಾರ್ಗ'** ಶ್ರೀರಾಮದಾಸರು.

ಸತ್ಸಂಗ.

೧ **ಉಪಕ್ರಮ:**—ಅನುಕರಣವು ಮಾನವನ ಸಹಜ ಪ್ರವೃತ್ತಿ. ಅವನು ಕಲಿಯುವುದು ಅನುಕರಣದಿಂದ, ಬಲಿಯುವುದು ಅನುಕರಣದಿಂದ. ಅವನನುಕರಿಸುವುದು ಪರಿಸರದವರನ್ನಲ್ಲದೇ ಇನ್ನಾರನ್ನು? ಅವನದು **ಜತೆಯಂತೆ ಮತಿ**. ಆದುದರಿಂದ ಅವನ ಶೀಲವು ವಿಶೇಷವಾಗಿ ಅವನ ಪರಿಸರದ ಫಲ.

೨ **ಎಂದರೇನು?:**—ಒಳ್ಳೆಯವರ ಸಹವಾಸವೇ ಸತ್ಸಂಗ. ಈ ಒಳ್ಳೆಯವರೆಂದರಾರು? ವಿಪುಲ ಧನವುಳ್ಳವರೇ? ಚುರುಕು ಬುದ್ಧಿಯುಳ್ಳವರೇ? ಕಸುವುಳ್ಳ ದೇಹವುಳ್ಳವರೇ? ಇವರಾರೂ ಅಲ್ಲ. ಒಳ್ಳೆಯರೆಂದರೆ ಒಳ್ಳೆಯ ಸ್ವಭಾವವುಳ್ಳವರು, ಒಳ್ಳೆಯ ಶೀಲವುಳ್ಳವರು, ಒಳ್ಳೆಯ ನಡತೆಯುಳ್ಳವರು. ಇವರೇ **ಸತ್-ಜನರು.** ಇವರ ಸಂಗವೇ ಸತ್ಸಂಗ

೩ **ಬೇಕೇತಕ್ಕೆ?:**—ಸಜ್ಜನರು ಕೆಲವೊಂದು ಆದರ್ಶಗಳ ಮೂರ್ತಿಗಳು. ಇವರ ಸುತ್ತಲು ಒಂದು ಬಗೆಯ ಆದರ್ಶ ವಾತಾವರಣವು ಪಸರಿ

ಸಿರುವುದು. ಇವರ ನಡೆ-ನುಡಿ-ಎಲ್ಲದರಲ್ಲಿ ಅದು ಒಡಮೂಡಿರುವುದು. ಇಂಥವರ ಹತ್ತಿರ ಇರುವುದರಿಂದ ಅವರ ಪರಿಣಾಮವು ನಮ್ಮ ಮನಸ್ಸಿನ ಮೇಲೆ ಅನಾಯಾಸವಾಗಿ ಆಗುವುದು. ನಾವವರಂತೆ ನಡೆಯಲು ಸಹಜವಾಗಿ ಕಲಿಯುವೆವು.

ಈ ಮೇರೆಗೆ ಹಿರಿಯರಿಂದ ಕಿರಿಯರಿಗೆ ಸ್ಫೂರ್ತಿದೊರೆಯುವುದು. **ಉಪದೇಶಕ್ಕಿಂತ ಉದಾಹರಣೆಯೆ ಮೇಲಿರುವುದರಿಂದ** ದೊರೆತ ಚೇತನವು ನಮ್ಮಲ್ಲಿ ಆಳವಾಗಿ ಇಳಿಯುವುದು. '**ಒಳ್ಳಿದರ ಒಡನಾಡಿ ಕಳ್ಳನೊಳ್ಳಿದನಕ್ಕು.**' ಮರವು ಬಳ್ಳಿಯನ್ನು ಮೇಲಕ್ಕೆತ್ತುವುದು; ಗಾಳಿಯು ಕಸಕ್ಕೆ ಬಾಸಿನ ಸೊಬಗನ್ನು ತೋರಿಸುವುದು; ಹೂಗಳ ಜೊತೆಯಲ್ಲಿ ದಾರವು ಮಹಿಳೆಯರ ಕೊರಳನ್ನಲಂಕರಿಸುವುದು, ಮುಡಿಯನ್ನು ಮಂಡಿಸುವುದು.

ಸಜ್ಜನರು ನಮ್ಮಲ್ಲಿಯ ಕೀಳ್ಮೆಯನ್ನು ಕಳೆದು ನಮಗೆ ಉನ್ನತ ಗುರಿಯೆಡೆಗೆ ಒಯ್ಯುವರು. ಅವರ ಜತೆಯಲ್ಲಿ ಈ **ಉನ್ನತಿ ಪಥವು** ನಮಗೆ ದುಃಖಪ್ರದವಾಗದೆ ಸುಖ-ಪ್ರದವಾಗುವುದು. ಆದುದರಿಂದಲೇ ಸತ್ಸಂಗವು ಸಹಜವಾಗಿ ಸನ್ಮಾರ್ಗವನ್ನು ತೋರುಸುವುದು ಎಂದು ಹಿರಿಯರ ಮತ.

೪) **ಹೇಗೆ**?:—ಆದರೆ ಈ ಸತ್ಸಂಗವನ್ನು ಪಡೆವುದೆಂತು? ಅಲ್ಲಿ ನಾವು ನಡೆವುದೆಂತು? ಆದರ್ಶಜೀವನದ ಪ್ರಬಲವಾದ ಬಯಕೆಯು ನಮಗೆ **ಸಂತರನ್ನು** ತೋರಿಸುವುದು. ಅವರು ಸಜ್ಜನರಹುದೋ ಅಲ್ಲವೋ ಎಂಬುದನ್ನು ಸೂಕ್ಷ್ಮರೀತಿಯಿಂದ ಕಂಡುಹಿಡಿದು ತರುವಾಯ ಅವರ ಬಳಿ ನಿಲ್ಲಲು ಪ್ರಾರಂಭಿಸಬೇಕು. ನಮ್ಮ ನಮ್ರತೆಯಿಂದ ಅವರ ಹೃದಯವು ತೆರೆಯಿತೆಂದರೆ, ಅವರ ಅಂತರಂಗದ ಪರಿಚಯವು ನಮಗಾಗತೊಡಗುವುದು. ಕೊಬ್ಬಿದವರ ಪಾಲಿಗೆ ಬರೀ ಬೊಬ್ಬೆಯು ಹಬ್ಬ; ಇನ್ನೊಂದಿಲ್ಲ.

ವಿನಯದಿಂದವರ ಬಳಿ ನಿಂತು, ಅವರಲ್ಲಿಯ ಗುಣಗಳನ್ನಷ್ಟು ಸ್ವೀಕರಿಸತಕ್ಕದ್ದು. '**ನಮ್ಮಲ್ಲಿಯ ಸುಚರಿತಗಳನ್ನಷ್ಟೇ ನೀವು ಸ್ವೀಕರಿಸಿರಿ! ಇನ್ನುಳಿದ ವಿಷಯುಗಳನ್ನಲ್ಲ!**' ಎಂದು ನಮ್ಮ ಉಪನಿಷತ್ತುಗಳ ಮುನಿ

ಗಳ ಉಪದೇಶವಿದೆ. ಎಷ್ಟು ಯಥಾರ್ಥ ಮಾತಿದು ! ಯಾಕಂದರೆ ಈ ಜಗತ್ತಿನಲ್ಲಿ ಪೂರ್ಣತೆಯೂ ತೀರ ವಿರಲ. ಗುಣದೋಷಗಳ ಬೆರಿಕೆಯೆ ಎಲ್ಲರಲ್ಲಿ. ಗುಣಗಳು ಹೆಚ್ಚಿದ್ದವರು ಹಿರಿಯರು; ದೋಷಗಳು ವಿಪುಲವಾಗಿದ್ದವರು ಕೀಳರು ಆದುದರಿಂದ ನಾವು ಆರಿಸಿದ ಹಿರಿಯಲ್ಲಿಯೂ ದೋಷಗಳಿರುವುದು ಸಹಜ ಮತ್ತು ದೋಷಗಳ ಅನುಕರಣವು ಅಷ್ಟೇ ಸಹಜ. ಅದಕ್ಕಾಗಿ ನಾವು ಪ್ರಯತ್ನಪೂರ್ವಕವಾಗಿ ದೋಷಗಳನ್ನು ತೊರೆದು ಗುಣಗಳನ್ನು ಅರಸುವುದು.

೫) **ಉಪಸಂಹಾರಃ**—ಹೀಗೆ ನಾವು ಮಾಡಿದೆವೆಂದರೆ ನಮ್ಮ ಜೀವನವು ಪಾವನವಾಗುವದು. ಪ್ರಯತ್ನವಿಲ್ಲದೆ ನಮ್ಮ ಪ್ರಗತಿಯಾಗುವುದು. **ಸಾಧನವಿಲ್ಲದೆ ನಮಗೆ ಸನ್ಮಾರ್ಗದೊರೆಯುವುದೆಂದು** ಶ್ರೀಸಮರ್ಥರ ಆಶ್ವಾಸನ.

೨ನೆಯ ಗುಂಪು:—ಸಮಸ್ಯೆಗಳು.

೧ ಜೀವನದ ಆದರ್ಶ.

೧ **ಉಪಕ್ರಮ:**—ಆದರ್ಶದ ಮಹತ್ವ:-ಗುರಿಯು ಚುಕ್ಕಾಣಿಯಿದ್ದಂತೆ. ಅದು ಮೇಲಕ್ಕೆತ್ತುವುದು. ಪ್ರವಾಸಿಯು ತಾನು ಮುಟ್ಟಬೇಕಾದ ಸ್ಥಲವನ್ನು ಮೊದಲು ಗೊತ್ತುಪಡಿಸಬೇಕು.

೨ **ಎಂದರೇನು ? :**—ಆದರ್ಶವೆಂದರೆ ಗುರಿ. ನಮ್ಮ ಜೀವನದ ಪ್ರವಾಹವು ಯಾವ ಮಹಾಸಾಗರವನ್ನು ಸೇರಬೇಕು ? ಎಲ್ಲಿ ಹೋಗುವುದರಿಂದ ಮುಂದೆ ಸಾಗುವ ಆಕಾಂಕ್ಷೆಯು ಅಳಿಯುವುದೋ ಅದೇ ಗುರಿ.

೩ **ಯಾವುದಿದೆ ? :**—ಹೆಣ್ಣು, ಹೊನ್ನು, ಮಣ್ಣು, ಎಲ್ಲರೂ ಇವನ್ನೆಯೆ ಬಯಸುವರು. ಇವುಗಳಿಗಾಗಿ ಹೆಣಗುವರು. ಮೇಲಿನ ನಿಕಷವನ್ನು ಪಯೋಗಿಸಿದರೆ ಇವುಗಳ ಸ್ಥಾನವೆಲ್ಲಿ !

೪ **ಯಾವುದಿರಬೇಕು ? :**—

ಯಂ ಲಬ್ಧ್ವಾಃ ಚಾಪರಂ ಲಾಭಂ ಮನ್ಯತೆ ನಾಧಿಕಂ ತತ: |
ಯಸ್ಮಿನ್ ಸ್ಥಿತೋನ ದುಃಖೇನ ಗುರುಣಾಪಿ ವಿಚಾಲ್ಯತೆ |

ಪರಾರ್ಥ ಪರಮಾರ್ಥ.

೫ **ಉಪಸಂಹಾರ:**—ಆದರ್ಶ ಜೀವಿಗಳೇ ಸಮಾಜದ ಉದ್ಧಾರಕರು.

೧ ಜೀವನದ ಆದರ್ಶ.

೧ **ಉಪಕ್ರಮ:**—ಪ್ರವಾಸಿಯು ತಾನು ಹೋಗಬೇಕಾದ ಸ್ಥಲವನ್ನು ಮೊದಲು ಗೊತ್ತುಮಾಡಿ ತರುವಾಯ ಅದರೆಡೆಗೆ ನೇರವಾಗಿ ಸಾಗುವನು. ಅದೇ ಗೊತ್ತಿಲ್ಲದವನು ಅತ್ತಿತ್ತ ಸುತ್ತಾಡಿ ಎತ್ತಲೋ ಸಾಗುವನು. ಅವನದು ಪ್ರವಾಸದಲ್ಲಿ ಅಲೆದಾಟ. ಈ ಸುತ್ತಾಟದಲ್ಲಿಯೇ ಅವನೊಂದು ದಿನ ಸತ್ತುಹೋಗುವುದುಂಟು.

೨ **ಎಂದರೇನು ?**:—ನಮ್ಮ ಜೀವನವು ಒಂದು ಪ್ರವಾಸ. ನಾವು ಎಲ್ಲಿಂದಲೋ ಬಂದು ಎಲ್ಲಿಯೋ ತೆರಳುವೆವು. ಗುರಿಯು ಗೊತ್ತಿದ್ದವರು ಸರಿಯಾಗಿ ಅದರೆಡೆಗೆ ಸಾಗುವರು. ಉಳಿದವರ ಜೀವನವು ಚುಕ್ಕಾಣಿಯಿಲ್ಲದ ಹಡಗದ ಹೊರಳಾಟ. ಅದು ಅದಾವ ಬಂಡೆಗಲ್ಲನ್ನು ತಟ್ಟಿ, ಅದೆಂದು ಒಡೆಯುವದೋ ಹೇಳುವವರಾರು ? ಆದುದರಿಂದ ನಮ್ಮ ಜೀವನವಾಹಿನಿಯು ಯಾವ ಮಹಾಸಾಗರವನ್ನು ಸೇರಬೇಕು ? ಎಲ್ಲಿ ಸಾಗುವುದರಿಂದ ಮುಂದುವರಿಯುವ ಬಯಕೆಯು ಉಳಿಯಲಿಕ್ಕಿಲ್ಲ ? ಇಂಥ ಗುರಿಯನ್ನು, ಆದರ್ಶವನ್ನು, ನಿಶ್ಚಯಿಸುವುದು ನಮ್ಮೆಲ್ಲರ ಕರ್ತವ್ಯವಲ್ಲವೇ ?

೩ **ಯಾವುದಿದೆ** ? :—ಇಂದು ನಮ್ಮ ಗುರಿಯು ಯಾವುದಿದೆ ! ನಿಜವಾಗಿ ಗುರಿಯನ್ನರಿತು ಹೊರಟವರು ತೀರ ವಿರಲ ! ಆದಕಾರಣ ನಮ್ಮ ಜೀವನವು ಎತ್ತ ಸಾಗಿದೆ ಎಂದು ವಿಚಾರಿಸುವುದೇ ಹೆಚ್ಚು ಉಚಿತ. ಇವರ ಪ್ರಥಃಕರಣ ಮಾಡಿದರೆ ನಮಗೇನು ತೋರುವುದು ? ನಮ್ಮ ಹಿಂದಿನ ಹಿರಿಯರು ಉಸುರಿದಂತೆ, **ಹೆಣ್ಣು, ಹೊನ್ನು, ಮಣ್ಣು** ಇವೇ ನಮ್ಮನ್ನು ಸೆಳೆಯುವ ಆದರ್ಶಗಳು. ನಮ್ಮಲ್ಲಿಯ ಕೆಲವರು ಹೆಣ್ಣಿಗಾಗಿ, ಕೆಲವರು ಹೊನ್ನಿಗಾಗಿ, ಬೇರೆ ಕೆಲವರು ಮಣ್ಣಿಗಾಗಿ, ಮನ್ನಣೆಗಾಗಿ ಹೆಣಗುತ್ತಿರುವರು. ಎಲ್ಲರೂ ಬಯಸುವುದು ಅವನ್ನೆಯೆ. ಎಲ್ಲರೂ ಹೋರಾಡುವುದು ಅವಕ್ಕಾಗಿಯೆ !

ಎಂದಿನಿಂದಲೂ '**ಜೀವನಕಲಹವು**' ನಡೆದುದು ಇದಕ್ಕಾಗಿಯೇ; ಅದು ಜೀವನಕ್ಕಾಗಿ ಅಲ್ಲ. ಬಹುಕಾಲ ಬಾಳಬೇಕು; ಚೆನ್ನಾಗಿ ಬಾಳಬೇಕು

ಉನ್ನತವಾಗಿ ಬಾಳಬೇಕು. ಇದು ಮಾನವನ ಗುರಿಯಿದ್ದಂತೆ ಕಾಣುವು ದಿಲ್ಲ **ಆದಷ್ಟು ಬೇಗ, ಆದಷ್ಟು ಹೆಚ್ಚು ಇಂದ್ರಿಯ ಸೌಖ್ಯವನ್ನುಣ್ಣು ವುದು ಮಾನವನ ಬಲವಾದ ಬಯಕೆ.** ಅದಕ್ಕಾಗಿ ಅವನ ಯತ್ನ. ಅದರಲ್ಲಿಯೆ ಅವನ ಕೊನೆ.

೪ ಯಾವುದಿರಬೇಕು?:—ಚಿರಸುಖವು.-ಅಳಿಯದ ಆನಂದವು ಮಾನವನ ಗುರಿಯಿರಬೇಕು. 'ಆವುದನ್ನು ಮೀರಿದ ಲಾಭವಿಲ್ಲವೊ ಆವು ದನ್ನು ಪಡೆದವನಿಗೆ ದುಃಖವಿಲ್ಲವೊ' ಇಂಥ ಸ್ಥಿರವಾದ ಗುರಿ ನಮ್ಮನ್ನು ಮೇಲಕ್ಕೆತ್ತುವುದು. ವಿಷಯಸುಖವು ಅಚಿರವಾದುದು. ಅದರ ಭೋಗದಿಂದ ಬಲವು ಕುಂದುವುದು, ನಮ್ಮ ಅಸಂತೋಷವು ಹೆಚ್ಚಾಗುವುದು. ಆದುದ ರಿಂದ ಅದನ್ನರಸದೆ **ಚಿರವಾದ ಶಾಂತಿಯನ್ನು** ಪಡೆಯಲು ಯತ್ನಿ ಸುವುದು ಎಲ್ಲರ ಕರ್ತವ್ಯ.

ಈ ಚಿರಸುಖವು ನೆಲೆಸಿರುವುದು ಪರಮಾತ್ಮನಲ್ಲಿ **ಅವನೇ ಸುಖದ ಆಗರ, ಸಂತಸದ ಸಾಗರ.** ಅದಕ್ಕಾಗಿ ಪರಮಾತ್ಮಪ್ರಾಪ್ತಿಯೆ ಅದನ್ನು ಪಡೆಯುವ ಏಕಮೇವ ಸಾಧನ. ಅದೇ ನಮ್ಮ ಹಿರಿ ಗುರಿಯು, ಜೀವನದ ಆದರ್ಶವು ಇರಲು ಬೇಕು.

೫ ಉಪಸಂಹಾರ:— ಈ ಬಗೆಯ ಆದರ್ಶವನ್ನು ಹಿಂಬಾಲಿಸುವ ಜೀವನವು ಎಲ್ಲರಿಗೆ ಆದರ್ಶಭೂತವಾಗದಿರದು. ಇಂಥವರೆ ಸಮಾಜದ ಆದರ್ಶ ಹಿರಿಯರು, ಉನ್ನತ ಉದ್ಧಾರಕರು.

೨ ಆದರ್ಶ ಹಿರಿಯರು.

೧ ಉಪಕ್ರಮ:—ಹಿರಿಯರೇ ಕಿರಿಯರಿಗೆ ಮೇಲ್ಪಂಕ್ತಿ. ಅವರು ವರ್ತಿಸಿದಂತೆ ಇವರು ನಡೆಯುವರು. ಅವರಂತೆ ಇವರು.

೨ ಅವರ ಲಕ್ಷಣ:—ಮೈಬಲವಲ್ಲ, ಬುದ್ಧಿಬಲವಲ್ಲ, ಧನಬಲವಲ್ಲ, ಜನಬಲವಲ್ಲ, ಬಿರುದುಗಳಲ್ಲ, ಸೌಂದರ್ಯವಲ್ಲ. **ಅಂತರಂಗದ ಕೋಮಲತೆ-ಪಾವಿತ್ರ್ಯ-ವೈಶಾಲ್ಯ-ಶೀಲ ಬಲವೇ ಹಿರಿತನದ ಹಿರಿಕುರುಹು.**

೩ **ಅವರ ಪ್ರಭಾವ:**—ಅವರಿಂದ **ಸ್ಫೂರ್ತಿ, ವ್ಯಕ್ತಿಯ, ಸಮಾಜದ, ರಾಷ್ಟ್ರದ,** ಉದ್ಧಾರ ಅವರೇ ಸಮಾಜದ ಮುಂದಾಳುಗಳು. ಅವರಿಲ್ಲದಿದ್ದರೆ ಸಮಾಜವು ಕೊಳೆಯುವುದು, ಅಳಿಯುವುದು

೪ **ಅವರ ಬರವು:**—ಸಮಾಜಕ್ಕೆ ಬೇಕಾದರೆ ಅವರು ಬರುವರು. 'ಸತ್ಯವಂತರು ಸತ್ತರೆಂದೆನಬೇಡ! ಹೆತ್ತಾಯಿ ಮಗನ ಕರೆಸಂತೆ ಅವರು' ನಮ್ಮನ್ನುದ್ಧರಿಸುವರು

೫ **ಉಪಸಂಹಾರ:**—ಆದುದರಿಂದ ಹಿರಿಯರ ಆದರ್ಶವನ್ನು ಎದುರಿಗಿಟ್ಟು, **ಆದರ್ಶ**ಹಿರಿಯರಾಗಲು ಪ್ರಯತ್ನಿಸಬೇಕು

ಆದರ್ಶ ಹಿರಿಯರು.

೧ **ಉಪಕ್ರಮ:**— ಹಿರಿಯರೇ ಯಾವಾಗಲೂ ಕಿರಿಯರಿಗೆ ಮೇಲ್ಪಂಕ್ತಿ. ಅವರು ನಡೆದಂತೆ ಇವರು ನಡೆಯುವರು; ಅವರು ನುಡಿದಂತೆ ಇವರು ನುಡಿಯುವರು. ಕಿರಿಯರು ಹಿರಿಯರ ವಡೆನುಡಿ, ಪಡಿನೆಳಲು. ಸರಿಯಾದ ಹಿರಿಯರಿದ್ದಲ್ಲಿ, ಸರಿಯಾದ ಕಿರಿಯರಿರುವರು. ಆದುದರಿಂದ ನಮ್ಮ ಹಿರಿತನದ ಕಲ್ಪನೆಯು ಸರಿಯಾದುದಿರುವುದು ಅತ್ಯವಶ್ಯ.

೨ **ಅವರ ಕುರುಹು:** —ನಿಜವಾದ ಹಿರಿಯರಾರು? ಅವರ ಹಿರಿ ಕುರುಹು ಆವುದು? ಹಿರಿತನದ ಯಥಾರ್ಥವಾದ ಲಕ್ಷಣವು, ಮೈಬಲವಲ್ಲ, ಬುದ್ಧಿಬಲವಲ್ಲ; ಧನಬಲವಲ್ಲ; ಜನಬಲವಲ್ಲ; ಬಿರುದಿನ ಬಲವಲ್ಲ; ಸೊಬಗಿನ ಐಸಿರಿಯಲ್ಲ; ಇವುಗಳಲ್ಲಾವುದೂ ನಿಜವಾದ ಹಿರಿಯರ ಲಕ್ಷಣವಲ್ಲ. ಇವನ್ನು ವಿಪುಲವಾಗಿ ಪಡೆದ ಅನೇಕರು, ತೀರ ಕೀಳ-ಹುಳಗಳಿರುವ ಸಂಭವವುಂಟು. ನೀಚ ಸ್ವಾರ್ಥದ ಕೊಳಚಿಯಲ್ಲಿ ನಿಂತು, ಇವರು ಬೇರೆ ಬೇರೆ ಅಂಟುರೋಗಗಳ ಜನರಾಗಿ-ಸಮಾಜದ ಆರೋಗ್ಯವನ್ನೂ ಶಾಂತಿಯನ್ನೂ ಕೆಡಿಸುವುದುಂಟು.

ಆಳವಾದ ವಿವೇಕ, ಅಗಲಾದ ಹೃದಯ, ವಿಮಲವಾದ ಚಾರಿತ್ರ್ಯ: ಇವೇ ನಿಜವಾದ ಹಿರಿಯರ ನಿಶ್ಚಿತವಾದ ಲಕ್ಷಣಗಳು. ಇಂಥವರೇ ಹಿರಿಯರೆಂದರಿಯಬೇಕು, ಮಿಕ್ಕವರು ಕೀಳ-ಕಿರಿಯರು.

೩ **ಇವರ ಪ್ರಭಾವ:**— ಇಂಥ ಹಿರಿಯರು ನವಜೀವನದ, ನವ ಸ್ಫೂರ್ತಿಯ ಸೆಲೆಗಳು. ಜನಸಾಮಾನ್ಯರು ಇವರಿಂದ ನವಚೈತನ್ಯವನ್ನು ಪಡೆದು ನವಕಾರ್ಯವನ್ನು ನೆರವೇರಿಸಲು ಸಮರ್ಥರಾಗುವರು. ಇವರ ಸಾನ್ನಿಧ್ಯದಿಂದ ಕಿರಿಯರು ಕೂಡ ಹಿರಿಯರಾಗುವರು. ಪರುಷದ ಕೇವಲ ಸ್ಪರ್ಶದಿಂದ ಕಬ್ಬಿಣವು ಹೊನ್ನಾಗುವದಿಲ್ಲವೇ? ಇವರ ಉಜ್ವಲ ಉದಾಹರಣೆಯು ಅನೇಕರಲ್ಲಿ ಮೇಲಿನಂತೆ ಅದ್ಭುತ ಮಾರ್ಪಾಟವನ್ನು ಮಾಡುವುದುಂಟು.

ಇವರೇ ವ್ಯಕ್ತಿಯಂತೆ ಸಮಾಜವನ್ನೂ ರಾಷ್ಟ್ರವನ್ನೂ ಉದ್ಧರಿಸುವರು. ಇವರ ಮೇಲ್ಪಂಕ್ತಿಯೆ ಅವರನ್ನು ಮೇಲಕ್ಕೆತ್ತುವುದು. ಆದರ್ಶದ ಮೂರ್ತಿಗಳಾದ ಇವರು ರಾಷ್ಟ್ರದ ಎದುರು ಯೋಗ್ಯವಾದ ಆದರ್ಶಗಳನ್ನಿಟ್ಟು ಅದನ್ನು ಕೆಳಕ್ಕೆ ಬೀಳಗೊಡುವದಿಲ್ಲ. ಇವರಿಲ್ಲದೆ ಹೋದರೆ ಸಮಾಜವು ಕೀಳ್ಮೆಯಲ್ಲಿ ಕೊಳೆಯುವುದು, ಅತಿ ಬೇಗ ಅಳಿಯುವುದು.

೪ **ಇವರ ಬರವು:**— ಯಾವ ಕಾಲದಲ್ಲಿಯೆ ಆಗಲಿ ಇಂಥ ಮಹನೀಯರು ಪ್ರತಿಯೊಂದು ಸಮಾಜದಲ್ಲಿ ಇದ್ದೇ ಇರುವರು. ಆದರೆ ಸಾಮಾನ್ಯವಾಗಿ ಇವರಿರುವುದು ಮರೆಯಾಗಿ. ಮುಂದೆ ಬಂದು ಮೆರೆಯುವುದು ಇವರ ಸ್ವಭಾವಕ್ಕೆ ಸರಿ ಹೋಗದ ಮಾತು. ತನ್ನ ವಿಲಾಸದಲ್ಲಿಯೆ ವಿಲೀನವಾದ ಸಮಾಜವು ಇವರನ್ನು ಉಪೇಕ್ಷಿಸಿ, ಬೇರೆ ಕೀಳು ಆದರ್ಶಗಳನ್ನು ಹಿಂಬಾಲಿಸುವದು. ಮುಂದೆ ಕೆಲಕಾಲ ಕಳೆದ ಮೇಲೆ ಅದು ಅವುಗಳ ಕಟು ಫಲಗಳನ್ನುಣ್ಣುವ ಸಮಯವೊದಗಿತೆಂದರೆ ತುಂಬಾ ಗೋಳಾಡಿ, ತರವಾಯ ಇವರನ್ನರಸಲು ತೊಡಗುವದು, ಆತುರದಿಂದ ಇವರ ಬರವನ್ನು ಕಾಯುತ್ತ ಕುಳಿತುಕೊಳ್ಳುವದು. ಆಗ ಇವರ ಪ್ರಕಟನ-ಆಗಮನ. ಮರಳಿ ಸಮಾಜದ ಸುಸ್ಥಿತಿ-ಉದ್ಧಾರ.

" **ಸತ್ಯವಂತರು** ನೀನು ಸತ್ತರೆಂದೆನಬೇಡ" ಎನ್ನುವ ಸರ್ವಜ್ಞ. "ಹೆತ್ತಮ್ಮ ಮಗನ ಕರೆವಂತೆ ಅವರು ನಿನ್ನನ್ನೆತ್ತಿಕೊಂಬುವರು. ಹೆದರಬೇಡ" ಎಂದುಸುರುವನವನು. ಇವರಿರುವವರೆಗೆ ನಮಗೆ ಉದ್ಧಾರದ ಆಶೆ.

೫ **ಉಪಸಂಹಾರ:**—ಆದುದರಿಂದ ಹಿರಿಯರ ಆದರ್ಶವನ್ನೆದುರಿಟ್ಟುಕೊಂಡು ಆದರ್ಶಹಿರಿಯರಾಗಲು ಯತ್ನಿಸಿದವರು ಹಿರಿದಾದ ಕಾರ್ಯವನ್ನು ಮಾಡಲು ಸಮರ್ಥರಾಗದಿರರು.

೩ ಗೆಲವಿನ ಗುಟ್ಟು.

೧ **ಉಪಕ್ರಮ:**—ಎಲ್ಲರಿಗೆ ಗೆಲವು ಬೇಕು, ಸೋಲು ಬೇಡ. ಆದರೆ ಗೆಲವಿನ ಗುಟ್ಟನ್ನರಿತವರು ವಿರಲ. ಅದಕ್ಕೆ ಆದಾವ ಸಂಗತಿಗಳು ಅತ್ಯವಶ್ಯ.

೨ **ವಿವೇಕ:**-ಯಾವ ವಿಷಯದಲ್ಲಿ ಗೆಲವು ಬೇಕಾಗಿದೆ ಅದರ ಸಾಂಗ-ಉಪಾಂಗ-ಪರಿಜ್ಞಾನ. ಗೆಲವಿಗೆ ಬೇಕಾದ ಸಾಧನಗಳ ಪೂರ್ಣಪರಿಚಯ. ತಮ್ಮ ಸಾಮರ್ಥ್ಯದ ಅರಿವು.

೩ **ತ್ಯಾಗ:**—ಅದನ್ನು ಪಡೆಯಲು ಮಾಡಬೇಕಾದ ತ್ಯಾಗದ ಸಿದ್ಧತೆ. ಕೊಡದೆ ಪಡೆಯಲು ಬರವಂತಿಲ್ಲ. ತ್ಯಾಗದಿಂದಲೇ ಗೆಲವಿನ ಯೋಗ-ಭೋಗ.

೪ **ನಿಶ್ಚಯ:**—ಗೆಲವನ್ನು ಪಡೆದೇ ತೀರುವೆನೆಂಬ ದೃಢಸಂಕಲ್ಪ. ಅದರಲ್ಲಿ ಅವಿಚಲಿತ ಸ್ಥೈರ್ಯ.

೫ **ಪ್ರಯತ್ನ:**—ಸಂತತವಾದ ಪ್ರಯತ್ನವನ್ನು ಪುನಃ ಪುನಃ ದಕ್ಷತೆಯಿಂದ ಸಾಗಿಸಬೇಕು.

೬ **ಉಪಸಂಹಾರ:**—ಮೇಲಿನ ನಾಲ್ಕು ಗುಣಗಳಲ್ಲಿಯೆ ಗೆಲವು ಅಡಗಿರುವದು. ಇವಿದ್ದವರಿಗೆ ಗೆಲವು ಊಳಿಗದಾಳು.

೪ ಜೀವನಕಲೆ.

೧ **ಉಪಕ್ರಮ:**—ಜೀವನಕಲಹ. ಕಲಹವೆತ್ತ! ಕಲೆಯೆತ್ತ! ಕಲಹದಲ್ಲಿ ಕಲೆಯು ಸಾಧ್ಯವೇ!

೨ **ಕಲೆಯ ಗುರಿ:—ಯಂತ್ರಕಲೆ** ಮೈಸುಖವನ್ನು ನೀಡುವುದು; **ಕುಶಲ ಕಲೆ** ಮನವನ್ನು ತಣಿಸುವುದು; ಸೌಂದರ್ಯ ಉಪಾಸನೆಯು ಅದರ ಸಾಧನ.

೩ **ಜೀವನ ಕಲೆ:**—ಜೀವನವೇ ಕಲೆಯಾಗಬೇಕು. ಸೌಂದರ್ಯ ಉಪಾಸನೆಯನ್ನು ಮಾಡಬೇಕು ಜೀವನವು ಅಂತರ್ಬಾಹ್ಯ ಸುಂದರವಾಗಬೇಕು.

೪ ಬಾಹ್ಯ ಸೌಂದರ್ಯ:—ಮನೆ, ಮೈ, ನಡೆ, ನುಡಿ, ಸುಂದರ ಆದರಲ್ಲಿ ಕೃತ್ರಿಮತೆ ಇರದೆ ಸ್ವಾಭಾವಿಕತೆ ಬೇಕು.

೫ ಅಂತಃಸೌಂದರ್ಯ:— ಸ್ವಭಾವದಲ್ಲಿ ಬದಲು—ಆತ್ಮವಿಕಾಸದಿಂದ ಸಾಧ್ಯ—ಸುಶೀಲ.

೬ ಉಪಸಂಹಾರ:—ಇಂಥ ಮಾದರಿಯ ಸಜೀವ ಕಲಾಕೃತಿಗಳು ಇಡೀ ನಾಡನ್ನೆಯೇ, ವಿಶ್ವವನ್ನೆಯೇ, ಸಿಂಗರಿಸದಿರವು.

೫ ಸಂಕಟಗಳ ಸೌಭಾಗ್ಯ.

೧ ಉಪಕ್ರಮ:—ಆಪದಃ ಸಂತು ನಃ ಶಶ್ವತ ಯೇನ ಸಂಸ್ಮರ್ಯತೆ ಹರಿಃ। ಕುಂತೀದೇವಿಯ ಬೇಡಿಕೆ.

೨ ವಿರೋಧ:—ಸಂಕಟವು ದೌರ್ಭಾಗ್ಯದ ಕುರುಹು, ಅಲ್ಲಿ ಸೌಭಾಗ್ಯವೆಲ್ಲಿಯದು? ತೋರಿಕೆಗೆ ಇದು ಸರಿಯಾದುದು. ಆಳವಾದ ವಿಚಾರದಿಂದ ಇದು ಅಳಿಯುವದು. ಸಂಕಟವು ಅನೇಕ ದೃಷ್ಟಿಯಿಂದ ಉಪಯುಕ್ತ.

೩ ಶಕ್ತಿಸಂವರ್ಧನ:—ಆಂತರಿಕ ಶಕ್ತಿಗಳಿಗೆ ವ್ಯಾಯಾಮ. ತಾಳ್ಮೆ, ಧೈರ್ಯ, ಸಾಹಸಗಳ ಉದಯ. ಮಾನವನು ಪ್ರಬಲನಾಗುವನು—ಪೂರ್ಣನಾಗುವನು.

೪ ಪರೀಕ್ಷಾಕಾಲ:—ಒರೆಗಲ್ಲು—ನಮ್ಮ ಯೋಗ್ಯತೆ ನಮಗೆ ತಿಳಿಯುವುದು. ಅಗ್ನಿಯಲ್ಲಿ ಬಂಗಾರ, ಮೇಲಾದದ್ದು ಹೆಚ್ಚಿಗೆ ಹೊಳೆಯುವದು, ಕೀಳಾದದ್ದು ಹೆಚ್ಚಿಗೆ ಕಪ್ಪಾಗುವದು.

೫ ಪರಮಾತ್ಮನ ನೆನವು:—ಅಹಂಕಾರನಾಶ—ಆಸುರವೃತ್ತಿಯಳಿದು ದೈವೀವೃತ್ತಿಯ ಉದಯ—ಭಕ್ತಿಯ ಬೆಳೆ.

೬ ಉಪಸಂಹಾರ:—ಸುಖಂ ಹಿ ದುಃಖಾನ್ಯನುಭೂಯ ಶೋಭತೆ । ಸಂಕಟವು ಸಂತಸದ ಬೆಲೆಯನ್ನು ಹೆಚ್ಚಿಸುವದು.

೩ನೆಯ ಗುಂಪು—ತತ್ವಗಳು.

ಮುಹೂರ್ತಂ ಜ್ವಲಿತಂ ಶ್ರೇಯಃ

ಉಪಕ್ರಮ :—‘ ಅದೊಂದು ಬೆಳಕಿನ ಬಳ್ಳಿಯಿತ್ತು, ಮಿಂಚಿನ ಮಲರಿತ್ತು ’ ಒಂದು ಮಗುವಿನ ಬಗ್ಗೆ ಓರ್ವ ಕವಿಯ ಅಭಿಪ್ರಾಯ. ಇಂಥ ಬಾಳೇ ಬಾಳು.

೨ ವಿಶದೀಕರಣ:—ಬಹುಕಾಲ ಕೊಳೆಯುವದಕ್ಕಿಂತ, ಕೆಲಕಾಲ ಹೊಳೆಯುವುದು ಮೇಲು. ಕಾಲಕ್ಕೆ ಬೆಲೆಯಿಲ್ಲ; ಕಾಂತಿಗೆ ಬೆಲೆ, ತೇಜಸ್ಸಿಗೆ ಮಹತ್ವ.

೩ ಏಕೆ ? :—

೧ನೆಯ ಕಾರಣ:—ಅನ್ಯರಿಗೆ ಹಿತ. ಹೂವಿನಿಂದ ಸಂತಸ. ಮಿಂಚಿನಿಂದ ಬೆಳಕು. ತೇಜಸ್ಸುಳ್ಳವರಿಂದ ನೆರವು. ಅದೇ ಕತ್ತಲೆಯಿಂದ ಕುರುಡತನ. ಹೊಗೆಯಿಂದ ತಾಪ.

೨ನೆಯ ಕಾರಣ:—ತನಗೆ ಕೀರ್ತಿ-ಅಭಿಮನ್ಯು. ಅದರಿಂದಲೇ ಜನ್ಮಸಾಫಲ್ಯ.

೪ ಉಪಸಂಹಾರ:—ಸಾಹಸದ ಬಾಳಿದಲಿ, ಗಳಿಗೆಯೊಂದರ ಬಾಳು. ಹಂಗಿನಲ್ಲಿಯು ಬಂಜೆಜೀವನದಿಂದೇನು ಪ್ರಯೋಜನ ?

ಮುಹೂರ್ತಂ ಜ್ವಲಿತಂ ಶ್ರೇಯಃ

೧ ಉಪಕ್ರಮ:—'ಅದೊಂದು ಬೆಳಕಿನ ಬಳ್ಳಿ; ಮಿಂಚಿನ ಮಲರು ಆ ಕಳೆದ ಮುತ್ತು.' ಎಂದೋರ್ವನು, ಮರೆಯಾದ ಮುದ್ದುಮಗುವಿನ ಬಗ್ಗೆ ಉಸುರಿದ ದುಃಖೋದ್ಗಾರಗಳು. ಈ ಬಗೆಯಾಗಿ ಪ್ರಿಯಜನರ ಎದೆಯಲ್ಲಿ ನೆಲೆಯಾಗಿ ನೆಲೆಸುವುದೇ ನಿಜವಾದ ಜೀವನ. ಅದು ಮರಣವಲ್ಲ. ಇಂಥ ಬಾಳೇ ಬಾಳಲ್ಲವೇ ?

೨ ವಿಶದೀಕರಣ:—ಚಿರಂತನವಾಗಿ ಹೊಗೆಸುತ್ತಿ ಬಾಳುವುದಕ್ಕಿಂತ ಅರಗಳಿಗೆ ಪ್ರಜ್ವಲಿತವಾಗಿ ಇದ್ದು ಅಳಿಯುವುದು ಮೇಲು. ಇದು ಮೇಲಿನ ಸಂಸ್ಕೃತ ಒಳ್ನುಡಿಯ ತಾತ್ಪರ್ಯ. ಬಹುಕಾಲ ಕೊಳೆಯುವದಕ್ಕಿಂತ ಕೆಲಕಾಲ ಹೊಳೆಯುವುದು ಒಳಿತಲ್ಲವೇ ? ಕಾಗೆ ಬಲಿಯನ್ನುಂಡು ಸಾವಿರ ವರುಷ ಬಾಳಿದರೇನು ? ಅದರಿಂದ ಅದಾರಿಗೆ ಸುಖ, ಸಮಾಧಾನ ? ಕೋಗಿಲೆಯ ಅರಗಳಿಗೆಯ ಸಹವಾಸದಲ್ಲಿ ಸಂತಸದ ಸುರಿಮಳೆಯು. ಅಲರು ಅರಳುವುದು ಒಂದರೆಗಳಿಗೆ. ಆದರೆ ಅಷ್ಟರಲ್ಲಿ ಅದೆಷ್ಟು ಕಂಪನ್ನು ಬೀರುವದದು ? ಅದೆಷ್ಟು ಜನರನ್ನು ತಣಿಸುವುದು ? ಕಾಲಕ್ಕೆ ಬೆಲೆಯಿಲ್ಲ; ಕಾಂತಿಗೆ ಬೆಲೆ-ಶಾಂತಿಗೆ ಬೆಲೆ.

೩ ಏಕೆ ? :—ಹೀಗೇಕೆ ಇರಬೇಕು ? ಕಾರಣವು ತೀರ ಸ್ಫುಟವಾದುದಿರುವುದು. ಸಾಮಾನ್ಯವಾಗಿ ತನಗೂ, ಅನ್ಯರಿಗೂ, ಪ್ರಿಯವಾದುದೂ-

ಹಿತವಾದುದೂ ಬೆಲೆಯುಳ್ಳದ್ದೆಂದು ಜನರ ಅಭಿಪ್ರಾಯ. ಅಪ್ರಿಯವಾದುದನ್ನು-ಅಹಿತಕರವಾದುದನ್ನು ಅದಾರು ಕೊಂಡಾಡುವರು? ಅದರಲ್ಲಿ ತನ್ನ ಹಿತಕ್ಕಿಂತ ಅನ್ಯರ ಹಿತಕ್ಕೆ ಬೆಲೆ ಹೆಚ್ಚು.

ಉಜ್ವಲ ವಸ್ತುಗಳು ಕೆಲಕಾಲ ಬಾಳಿದರೂ ಅದರಿಂದ ಜನತೆಗೆ ಸುಖ, ಶಾಂತಿಗಳು ಲಭಿಸುವವು. ಅವುಗಳ ಇರವಿನಿಂದ ಜನರ ಕಲ್ಯಾಣವಾಗುವುದು. ಬೆಳಕು ಅಲ್ಪಕಾಲ ಬೆಳಗಿದರೂ ಅದಾರಿಗೆ ಹೊಸ ಕಣ್ಣನ್ನು ಕೊಡುವದಿಲ್ಲ? ಮಿಗಿಲಾದ ಸಂತೋಷವನ್ನು ನೀಡುವದಿಲ್ಲ? ಅದೇ ದೀರ್ಘಕಾಲ ಪಸರಿಸಿದ ಕತ್ತಲೆಯಿಂದ ಯಾರಿಗೆ ಸಮಾಧಾನ? ಯಾರಿಗೆ ಉಪಕಾರ? ಅದೇ ಮೇರೆಗೆ ತೇಜಸ್ವಿಗಳಾದ ವಿಭೂತಿಗಳು ತಮ್ಮ ಕಿರು-ಬಾಳಿನಲ್ಲಿಯೂ ಅದ್ಭುತಕಾರ್ಯವನ್ನು ನಿರ್ವಹಿಸಿ, ಜನತೆಯ ಅನಂತ ಕಲ್ಯಾಣವನ್ನು ಸಾಧಿಸುವದುಂಟು. ಅವರ ಚರಿತ್ರೆಗಳು ಮುಂದಿನವರಿಗೆ ಸ್ಫೂರ್ತಿಯ ಸೆಲೆಗಳಾಗುವದುಂಟು.

ತನ್ನ ಅದ್ಭುತ ಪರಾಕ್ರಮದಿಂದ **ಅಭಿಮನ್ಯು ಬಾಲನು** ಅಲ್ಪ ವಯಸ್ಸಿನಲ್ಲಿಯೆ ವೀರಸ್ವರ್ಗವನ್ನು ಪಡೆದು ಅಲ್ಲಿಂದ ಮುಂದಿನ ಬಾಲವೀರರಿಗೆಲ್ಲ ಆದರ್ಶಪ್ರಾಯನಾದನು. **ಶಂಕರಾಚಾರ್ಯರು** ತಮ್ಮ ಎಳೆತನದಲ್ಲಿಯೇ ಆರ್ಯಧರ್ಮದ ಪುನರುಜ್ಜೀವನವನ್ನು ಮಾಡಲಿಲ್ಲವೇ? ಇಷ್ಟು ಹಿಂದೇಕೆ? ಇಂದಿನ ಯುಗದಲ್ಲಿಯೆ ನಮ್ಮ **ವಿವೇಕಾನಂದರು** ಇದನ್ನೆಯೆ ಮಾಡಲಿಲ್ಲವೇ? ನಮ್ಮ ಹಿಂದೂ ಧರ್ಮದ ವಿಜಯಧ್ವಜವನ್ನು ಪ್ರಪಂಚದಲ್ಲೆಲ್ಲ ಮೆರೆಯಿಸಿದಾಗ ಅವರ ವಯಸ್ಸು ಅದೆಷ್ಟಿತ್ತು? ಈ ರೀತಿಯಿಂದ ಎಳೆವಯಸ್ಸಿನಲ್ಲಿಯೆ ಪ್ರಚಂಡಕಾರ್ಯವನ್ನು ನೆರವೇರಿಸಿದ ಮಹನೀಯರಿಗೆ ನಮ್ಮಲ್ಲಿ ಕೊರತೆಯಿಲ್ಲ. **ಅವರ ಬಾಳು ಕಿರಿದಾದರೂ, ಬೆಳಕು ಹಿರಿದು.**

ಇಂಥವರು ಜನತೆಯ ಹಿತವನ್ನು ಸಾಧಿಸಿ ತಮ್ಮ ಕೀರ್ತಿಯನ್ನು ಅಜರಾಮರ ಮಾಡಿದ್ದುಂಟು. '**ದೇಹವು ಅಳಿದರೂ ಕೀರ್ತಿಯು ಉಳಿಯಬೇಕು**' ಎಂದು ಮಹನೀಯರು ಉಸುರಿರುವರು. ಈ ಮಣ್ಣಿನ ಶರೀರಕ್ಕಿಂತ ಕೀರ್ತಿ-ಶರೀರವೇ ಮೇಲಾದದ್ದು. ಸತ್ಕೀರ್ತಿಯಿಂದಲೇ ನಮ್ಮ ಜನ್ಮದ ಸಾಫಲ್ಯ.

೪ **ಉಪಸಂಹಾರ:**—ಆದುದರಿಂದ **ಸಾಹಸದ ಬಾಳಿರಲಿ!** ಅದು ಗಳಿಗೆಯೊಂದರ ಬಾಳಿದ್ದರೂ ನಡೆಯಬಹುದು. ಹಂಗಿನಲ್ಲಿ ಕಳೆದ ಶತ ವರುಷದ ಬಂಜೆಜೀವನದಿಂದ ಏನು ಫಲ? ಕೆಲಕಾಲವೇಕಾಗಲೊಲ್ಲದು **ಹುಲಿಯಾಗಿ ಬಾಳಬೇಕು, ಕಲಿಯಾಗಿ ಜೀವಿಸಬೇಕು.**

೨ ಬಿತ್ತಿದ್ದನ್ನು ಬೆಳೆದುಕೋ!

೧ **ಉಪಕ್ರಮ:**—ಪ್ರಕೃತಿಯು ಮಾನವನ ಆದಿ ಗುರು. ಆಕೆಯ ನಿರೀಕ್ಷಣದಿಂದ ಮಾನವನು ಅನೇಕ ಪಾಠಗಳನ್ನು ಕಲಿಯುವ. ಅವುಗಳಲ್ಲಿ ಮೇಲಿನದು ಒಂದು.

೨ **ಅದರ ವ್ಯಾಪ್ತಿ:**—ಬೀಜಕ್ಕೆ ಸರಿಯಾದ ಫಲ-ಉದಾಹರಣೆಗಳು. ಗೋದಿ-ಮಾವು.

೩ **ಅದರಿಂದ ಸೂಚನೆ:**—ಕ್ರಿಯೆಯಂತೆ ಪ್ರತಿಕ್ರಿಯೆ. ಧ್ವನಿಯಂತೆ ಪ್ರತಿಧ್ವನಿ. ಬೆಲೆಯಂತೆ ಒಡವೆ. ಪ್ರೀತಿಗೆ ಪ್ರೀತಿ. ದ್ವೇಷಕ್ಕೆ ದ್ವೇಷ. ಕರ್ಮದಂತೆ ಫಲ. ಒಳ್ಳೆಯ ನಡತೆಯಿಂದ ಸುಖ. ಕೆಡಕಿನಿಂದ ಕೇಡು.

೪ **ಉಪಸಂಹಾರ:**—ಸತ್ಕರ್ಮದಿಂದ ಸತ್ ಫಲವನ್ನು ಪಡೆಯಬೇಕು. ಅಸತ್ತು ಸತ್ತನ್ನು ಕೊಡಲಾರದು.

೩ ನಾಳೆ ಎಂಬುವನ ಮನೆ ಹಾಳು.

೧ **ಉಪಕ್ರಮ:**—ಕಾಲನಿಗೆ ಹಿಂಗುರುಳಿಲ್ಲ, ಮುಂಗುರುಳುಂಟು. ಹಿಂದಿನಿಂದ ಹಿಡಿಯಲು ಬರುವದಿಲ್ಲ. ಮುಂಚಿತವಾಗಿಯೇ ಹಿಡಿಯಬೇಕು.

೨ **ಇದರ ವಿಶದೀಕರಣ:**—ಇಂದಿನ ಕೆಲಸವನ್ನು ನಾಳೆ ಮಾಡಲೆಳಸದೆ, ನಾಳಿನದನ್ನೆಯೆ ಇಂದು ಮಾಡಬೇಕು. 'ಸಕಾಲಕ್ಕೆ ಹಾಕಿದ ಒಂದು ಹೊಲಿಗೆಯು ಹತ್ತನ್ನು ಉಳಿಸುವುದು.' ಇಂದಿನದನ್ನು ಮುಂದೆ ಇಡುತ್ತ ಹೋದರೆ, ನಮ್ಮ ಕಾರ್ಯಹಾನಿಯಾಗುವುದು.

೩ **ಆಲಸ್ಯದ ಬೆಳವಣಿಗೆ:**—ಈ ರೂಢಿಯಿಂದ ನಮ್ಮಲ್ಲಿಯ ಚಟುವಟಿಕೆಯು ಕಡಿಮೆಯಾಗಿ, ಆಲಸ್ಯವು ಹೆಚ್ಚುವುದು.

೪ **ಕೆಲಸದ ಹೆಚ್ಚಳ:**—ಕೆಲಸದ ಹೊರೆಯು ಹೆಚ್ಚುವುದು. ಎಲ್ಲವನ್ನು ಸರಿಯಾಗಿ ಸಾಗಿಸಲು ತೊಂದರೆ.

೫ **ಪರಿಸ್ಥಿತಿಯಲ್ಲಿ ಬದಲು:**—ಇಂದಿನ ಅನುಕೂಲತೆಯು ನಾಳೆಯಿರುವುದಿಲ್ಲ. ಪ್ರತಿಕೂಲ ಪರಿಸ್ಥಿತಿಯಿಂದ ತಡೆಗಳು.

೬ **ಉಪಸಂಹಾರ:**—ಇವೆಲ್ಲವುಗಳ ಫಲವಾಗಿ ಕೆಲಸವು ಕೆಟ್ಟು ನಮ್ಮ ಮನೆಯು ಹಾಳಾಗುವುದು.

೪ ಜಾತಿಹೀನರ ಮನೆಯ ಜ್ಯೋತಿ ತಾ ಹೀನವೇ ?

೧ **ಉಪಕ್ರಮ:** -ಗುಣಿಗಳಲ್ಲಿ ಗುಣವು ಪೂಜ್ಯವಾದುದು, ಲಿಂಗವಲ್ಲ, ವಯಸ್ಸಲ್ಲ! ಗುಣವಿಲ್ಲದ ಮನುಜನು ಹೆಣವಿದ್ದಂತೆ.

೨ **ವಿಶದೀಕರಣ:**— ಜಾತಿಯಿಂದ ಜ್ಯೋತಿಯು ಮಲಿನವಾಗುವುದಿಲ್ಲ. ಜ್ಯೋತಿಗೆ ಸ್ವಯಂಸಿದ್ಧವಾದ ಹೊಳಪು. ಅದು ಹೊರಗಣ ಸಂಗತಿಗಳಿಂದ ಅಲಿಪ್ತ. ಕೀಳುಜಾತಿಯವರಲ್ಲಿಯ ಮೇಲುಗುಣಗಳು ಗೌರವಾಸ್ಪದ.

೩ **ಮೇಲು-ಕೀಳುಗಳು:**—ವಸ್ತುವಿನ ಮೇಲ್ಮೆಯು ಅದರ ಗುಣದಲ್ಲಿ; ಬಾಹ್ಯ ಪರಿಸರದಲ್ಲಿಲ್ಲ. ಕಮಲ, ಗುಲಾಬಿ, ಕಸ್ತೂರಿ. ಇಂದಿನ ಕಲ್ಪನೆಗಳು ತಪ್ಪು ಸಿದ್ಧಾಂತವನ್ನಾಶ್ರಯಿಸಿವೆ. ಅವನ್ನು ತಿದ್ದುವುದವಶ್ಯ. ಅವುಗಳಿಂದ ನಾಡಿನ ಹಾನಿ.

೪ **ಗುಣಗ್ರಹಣ:**—ಗುಣವನ್ನರಸಿ ಉಳಿದುದನ್ನು ಮರೆಯಬೇಕು.

೫ **ಉಪಸಂಹಾರ:**—ಕುಲಂ ಕುಲಮಲ್ತು ಛಲಂ ಕುಲಂ.

೫ ಹಳೆಯ ರೀತಿಯು ಅಳಿದು ಹೊಳೆಯುವುದು ಹೊಸದಲ್ಲಿ

೧ **ಉಪಕ್ರಮ:**—ಸಾಮರಸ್ಯವು ಜಗದ ಜೀವಾಳ. ಅದಿರುವವರೆಗೆ ಇಲ್ಲಿ ಶಾಂತಿ; ಇಲ್ಲದಿರೆ ಅಶಾಂತಿ. ಅಳಿದ ಸಾಮರಸ್ಯವನ್ನು ಮರಳಿ ಉಂಟುಮಾಡಲು ಹೊಸ ನೀತಿ ರೀತಿಗಳು ಬರಬೇಕಾಗುವವು.

೨ **ವಿವರಣ:**—ಕಾಲಕಾಲಕ್ಕೆ ಪ್ರಪಂಚದಲ್ಲಿ ಪ್ರಚಲಿತವಿದ್ದ ರೀತಿಗಳಲ್ಲಿ ಬದಲು. ಇದು ಜಗತ್ತಿನ ರೀತಿ. ಹೊಸ ಯುಗಕ್ಕೆ ಹೊಸ ಯುಗಧರ್ಮ.

೩ **ಏಕೆ?:**—೧ನೆಯ ಕಾರಣ-ಹಳೆಯದು ಬಹುಕಾಲದಿಂದ ಹಾಳಾಗುವುದು. ಅದರಲ್ಲಿ ಹುರುಳು ಮರೆಯಾಗಿ ಬಾಹ್ಯರೂಪವು ಉಳಿಯುವುದು. ಇದು ನಿಸರ್ಗದ ನಿಯಮ.

೨ನೆಯ ಕಾರಣ:—ನವಯುಗದಲ್ಲಿ ನವಪರಿಸ್ಥಿತಿ. ಅದಕ್ಕೆ ತಕ್ಕ ರೀತಿಯಿದ್ದರೆ ಅದರಿಂದ ಅವಕ್ಕೆ ಉಪಯೋಗ. ಇಲ್ಲದೆ ಹೋದರೆ ಆ ನಾಡಿನ ಪ್ರಗತಿಗೆ ತಡೆ.

೪ ಉಪಸಂಹಾರ:—ಹೊಸದನ್ನು ಕಂಡು ಹೆದರುವ ಕಾರಣವಿಲ್ಲ **ಬದಲು ಜೀವನದ ಹಿರಿ ಕುರುಹು.**

೪ನೆಯ ಗುಂಪು:—ವಿವಾದಗಳು.

೧ ಹಕ್ಕೊ-ಕರ್ತವ್ಯವೊ ?

೧ **ಉಪಕ್ರಮ:**—'**ಹಕ್ಕೆ**'ಂಬುದು ಇಂದಿನವರ ನಾಲಿಗೆಯ ಮೇಲೆ ನಲಿದಾಡುವ ಶಬ್ದವು. ಬಾಲ-ವೃದ್ಧರು, ಬಡವ-ಬಲ್ಲಿದರು, ಸ್ತ್ರೀ-ಪುರುಷರು, ಎಲ್ಲರೂ "ಹಕ್ಕಿ'ನ **ಪೂ**ಜಕರು. **ಕರ್ತವ್ಯ**ಬುದ್ಧಿಯು ಇಂದು ಮರೆಯಾಗಿದೆ.

೨ **ಹಕ್ಕೆಂದರೇನು:**—ನಾವು ಪಡೆಯಲೇ ಬೇಕಾದ ಸಂಗತಿಯು. ಕೆಲವು ಜನ್ಮಸಿದ್ಧ; ಕೆಲವು **ಕರ್ಮ**ಸಿದ್ಧ; ಅವು ದೊರೆಯದಿದ್ದರೆ ನಮ್ಮ ಬಾಳು ಹಾಳು.

೩ **ಕರ್ತವ್ಯವೆಂದರೇನು ? :**—ನಾವು ಮಾಡಲೇ ಬೇಕಾದ ಕೆಲಸ. ಇವು ಕೆಲವು ಜನ್ಮ-ಜನ್ಯ, ಕೆಲವು **ಕರ್ಮ-ಜನ್ಯ.** ಅವನ್ನು ನಾವು ಮಾಡಲಿಲ್ಲವೆಂದರೆ ನಮ್ಮ ಅಹಿತ. ಸಮಾಜದ ಅಹಿತ.

೪ **ಇವುಗಳ ತುಲನೆ:**— '**ಹಕ್ಕು**' **ಸೊಕ್ಕಿನ ಸೆಲೆ.** ಅಸಂತೋಷದ ನೆಲೆ; ಕಲಹದ ತವರೂರು. **ಕರ್ತವ್ಯವು ವಿನಯದ ಮನೆ;** ವಿವೇಕದ ತೆನೆ; ಶಾಂತಿಯ ಸೊನೆ.

೫ **ಉಪಸಂಹಾರ:**—ನಾವು ಧರ್ಮಪ್ರಧಾನ; ಕರ್ತವ್ಯಕುಶಲರು. ಮಾಡಿದವನಿಗೆ ಬೇಡುವ ಹಕ್ಕು; **ಕರ್ತವ್ಯವೇ ಹಕ್ಕನ್ನು ಪಡೆಯುವ ಸಾಧನವಾಗಬೇಕು.**

ಹಕ್ಕೋ ! ಕರ್ತವ್ಯವೋ !

೧ **ಉಪಕ್ರಮ:**—'**ಹಕ್ಕು**' ಇಂದಿನವರ ಜೀವನದ ಪ್ರೇರಕ ಶಕ್ತಿ. ಎಲ್ಲರ ನಾಲಿಗೆಯ ಮೇಲೆ ನಲಿದಾಡುವ ಶಬ್ದವದು; ಎಲ್ಲರ ತಲೆಯಲ್ಲಿ ಸುಳಿದಾಡುವ ಕಲ್ಪನೆಯದು. ಬಾಲರಿರಲಿ; ವೃದ್ಧರಿರಲಿ, ಬಡವರಿರಲಿ; ಬಲ್ಲಿದವರಿರಲಿ; ಸ್ತ್ರೀಯರಿರಲಿ; ಪುರುಷರಿರಲಿ;—ಎಲ್ಲರೂ '**ಹಕ್ಕಿನ**' ಪೂಜಕರು. **ಕರ್ತವ್ಯದ** ಕಲ್ಪನೆಯು ಇಂದು ಕನಸಿನ ವಿಷಯವಾಗಿದೆ.

೨ ಹಕ್ಕೆಂದರೇನು?:—ಇಂಥ ಸಮಯದಲ್ಲಿ ಇವುಗಳ ಸರಿಯಾದ ಪರಿಚಯವಿರುವುದು ಅತ್ಯವಶ್ಯ. **ನಾವು ಪಡೆಯಲೇಬೇಕಾದ ಸಂಗತಿಯೇ ನಮ್ಮ 'ಹಕ್ಕು'.** ನಾವು ಸುಖವಾಗಿ ಬಾಳಬೇಕಾದರೆ ನಮಗೆ ಯಾವ ಯಾವ ಮಾತುಗಳು ಅತ್ಯಗತ್ಯವಾದವುಗಳೋ ಅವನ್ನೆಲ್ಲ ಪಡೆಯುವುದು ನಮ್ಮ 'ಹಕ್ಕು'. ಅವನ್ನು ನಮ್ಮಿಂದ ಯಾರಾದರೂ ಕಸಿದುಕೊಂಡರೆ ಅವರು ನಮ್ಮ ಪವಿತ್ರವಾದ '**ಹಕ್ಕನ್ನು**' ಕಾಲ್ಕೆಳಗೆ ತುಳಿದ ದ್ರೋಹಿಗಳು. ಅಂಥವರನ್ನು ಎದುರಿಸುವುದು, ಚದರಿಸುವದು ನಮ್ಮ 'ಹಕ್ಕು'.

ಹಕ್ಕುಗಳಲ್ಲಿ ಕೆಲವು **ಜನ್ಮಸಿದ್ಧ**; ಕೆಲವು **ಕರ್ಮಸಿದ್ಧ**. ಜನ್ಮಸಿದ್ಧ ಹಕ್ಕುಗಳು ನಾವು ಜನಿಸಿದಂದಿನಿಂದ ನಮಗೆ ದೊರೆತವುಗಳು. ಬಾಳುವುದು ಅಂಥದೊಂದು ಹಕ್ಕು; ಬೆಳೆಯುವುದು ಇನ್ನೊಂದು. ಕರ್ಮಸಿದ್ಧ ಹಕ್ಕುಗಳು ಸಮಾಜದಲ್ಲಿಯ ನಮ್ಮ ಕರ್ಮವನ್ನು-ನಮ್ಮ ಸ್ಥಾನವನ್ನು ಅವಲಂಬಿಸಿವೆ. ನಾವು ಕೂಲಿಯವರಿದ್ದರೆ ನಮಗೆ ಕೂಲಿಯವರ ಹಕ್ಕು ದೊರೆಯುವದು. ಒಕ್ಕಲಿಗರಿದ್ದರೆ ಒಕ್ಕಲಿಗರ ಹಕ್ಕು ದೊರೆಯುವುದು. ಉಳಿದ ಹೋರೆಯಲ್ಲಿಯೂ ಇದೇ ರೀತಿ.

ಇಂಥ ಅನೇಕ ಹಕ್ಕುಗಳನ್ನು ಇದ್ದರೆ ಉಪಭೋಗಿಸಬೇಕು, ಇಲ್ಲದಿದ್ದರೆ ಪಡೆಯಲು ಹೆಣಗಬೇಕು. ಅದರಿಂದಲೇ ನಿಜವಾದ ಸುಖ-ಅದರಲ್ಲಿಯೆ ನಿಜವಾದ ಕಲ್ಯಾಣ ಎಂಬುದು ಇಂದಿನ ಮಹನೀಯರ ಮತ.

೩ ಕರ್ತವ್ಯವೆಂದರೇನು?:—ಮನುಷ್ಯನಿಗೆ ಅನೇಕ ಹಕ್ಕುಗಳಿದ್ದಂತೆ ವಿವಿಧ ಕರ್ತವ್ಯಗಳು ಇವೆ. **ಕರ್ತವ್ಯವೆಂದರೆ ಮಾಡತಕ್ಕ ಕೆಲಸ.** ಹಕ್ಕುಗಳಂತೆ ಕರ್ತವ್ಯಗಳು ಎರಡು ವಿಧ. **ಜನ್ಮಜನ್ಯ** ಒಂದು,—**ಕರ್ಮಜನ್ಯ** ಇನ್ನೊಂದು. ಮನುಷ್ಯನು ಹುಟ್ಟಿದಂದಿನಿಂದ ಹಲವು ಕರ್ತವ್ಯಗಳು ಅವನನ್ನು ಹಿಂಬಾಲಿಸುವವು. ಬಾಲ್ಯದಲ್ಲಿ ಮಗುವಿನ ಕರ್ತವ್ಯ, ತಾರುಣ್ಯದಲ್ಲಿ ಪತಿಯ ಕರ್ತವ್ಯ, ಪ್ರೌಢನಾದ ಮೇಲೆ ಪಿತನ ಕರ್ತವ್ಯ, ಇವು ಜನ್ಮಜನ್ಯ. ವಿದ್ಯಾರ್ಥಿಯ ಕರ್ತವ್ಯ, ನಾಗರಿಕನ ಕರ್ತವ್ಯ ಇವು ಕರ್ಮಜನ್ಯ.

ಇವುಗಳಿಗೆ ನಮ್ಮ ಹಿರಿಯರು **ಧರ್ಮವೆಂದು** ಕರೆಯುತ್ತಿದ್ದರು. ಪ್ರತಿಯೊಬ್ಬನು **ಸ್ವಧರ್ಮವನ್ನು ನೆರವೇರಿಸಿ** ತನ್ನ ಹಾಗು ಸಮಾಜದ

ಕಲ್ಯಾಣವನ್ನು ಮಾಡಿಕೊಳ್ಳಬೇಕೆಂದು ಅವರ ಮತ. '**ಸ್ವಧರ್ಮೇ ನಿಧನಂ ಶ್ರೇಯಃ। ಪರಧರ್ಮೋ ಭಯಾವಹಃ'!** ತನ್ನ ಧರ್ಮದಲ್ಲಿಯೆ ಸಾಯುವದೊಳಿತು. ಅನ್ಯರ ಧರ್ಮವು ಭಯಜನಕವು. ಸ್ವಧರ್ಮದಿಂದ ಜನ-ಜನಾರ್ದನನ್ನು ಪೂಜಿಸಿರಿ! ಎಂದು **ಭಗವಂತನ** ಸಂದೇಶ. ಅದ ರಿಂದಲೇ ನಮ್ಮ ಹಿತ, ಅನ್ಯರ ಹಿತ!

೪ ಇವುಗಳ ತುಲನೆ:—ಇಂದಿನ ಹಕ್ಕನ್ನಾಶ್ರಯಿಸಿದ ಸಮಾಜ ಗಳನ್ನು ಸ್ವಲ್ಪ ಸೂಕ್ಷ್ಮ ರೀತಿಯಿಂದ ಅವಲೋಕಿಸಿದರೆ ನಾವಲ್ಲಿ ಕಾಣು ವುದೇನನ್ನು? **ಹಕ್ಕು ಸೊಕ್ಕಿನ ಸೆಲೆ-ಅಸಂತೋಷದ ನೆಲೆ-ಕಲಹದ ಬಲೆಯಾದುದನ್ನೆಯೆ** ಅಲ್ಲವೇ? ಅದೇ ಕರ್ತವ್ಯದಕ್ಷವಾದ ನಮ್ಮ ಹಿಂದಿನ ಸಮಾಜವನ್ನು ನೋಡಿ! ಅಲ್ಲಿ **ಕರ್ತವ್ಯವು ವಿನಯದ ಮನೆ-ವಿವೇಕದ ತೆನೆ-ಶಾಂತಿಯ ಸೊನೆಯಾದುದು** ತೋರುವದಿಲ್ಲವೇ? ಹಕ್ಕಿಗಾಗಿ ಹೆಣಗುವವರು ಕಲಹದ ಕುಲಿಮೆಯೊಳಗಿಂದ ಹಾಯ್ದು ಸಂತಸದ ಮಂದಿರವನ್ನು ಕಾಣಬೇಕು. ಕರ್ತವ್ಯರತರಾದವರು ಪ್ರೀತಿಯ ಕುಂಜದೊಳಗಿಂದ ಹಾಯ್ದು ಶಾಂತಿಯ ಸದನವನ್ನು ಸೇರುವರು. ಒಬ್ಬ ರಿಗೆ ಸಂತಸವು ಅನಿಶ್ಚಿತ-ಇನ್ನೊಬ್ಬರಿಗೆ ಅದು ನಿಶ್ಚಿತ. ಒಂದು ರಾಜಸ ಕಾಲುದಾರಿ; ಇನ್ನೊಂದು ಸಾತ್ವಿಕ ರಾಜಪಥ. ಪ್ರತಿಯೊಬ್ಬರು ತಮ್ಮ ತಮ್ಮ ಪ್ರಕೃತಿಯಂತೆ ತಮಗೆ ಸರಿದೋರುವ ದಾರಿಯನ್ನು ಅರಸ ಬೇಕು.

೫ ಉಪಸಂಹಾರ:—ಆದರೂ ಒಂದು ದೃಷ್ಟಿಯಿಂದ ನೋಡಿದರೆ **ಮಾಡಿದವರಿಗೆನೇ ಬೇಡುವ ಹಕ್ಕು ಇದೆ-ಇರಬೇಕು.** ಕರ್ತವ್ಯವೇ ಹಕ್ಕನ್ನು ಪಡೆಯುವ ಸಾಧನವಾಗಬೇಕು. ಇವೆರಡರ ಮಧುರಮೀಲನ ದಿಂದಲೇ ನಮ್ಮ ಇಷ್ಟಾರ್ಥವು ಸಿದ್ಧವಾಗಬಹುದು.

೨ ಶಕ್ತಿಯೋ-ಯುಕ್ತಿಯೋ?

೧ ಉಪಕ್ರಮ:—ತುಲನೆಯ ಉದ್ದೇಶ-ನಮ್ಮ ಜೀವನದಲ್ಲಿ ಇವುಗಳ ಸ್ಥಾನ ನಿರ್ಣಯ! ಇವುಗಳ ಬಲಾಬಲ ನಿಶ್ಚಯ.

೨ **ಶಕ್ತಿಯುಕ್ತಿಗಳು:**--ಒಂದು **ಶಾರೀರಿಕ**-ಒಂದು **ಬೌದ್ಧಿಕ** ವಿಷಯ. ಒಂದು ಕೆಲಸದ ಗತಿಯನ್ನು ಹೆಚ್ಚಿಸುವದು; ಇನ್ನೊಂದು ಅದರ ರೀತಿಯನ್ನು ಸೂಚಿಸುವುದು ಸಾಮಾನ್ಯವಾಗಿ ಇವು ಕೂಡಿಯೆ ಇರುವವು. ಪರಸ್ಪರರಿಂದ ಅಗಲಿದಾಗ ಇವುಗಳ ಬಲವನ್ನರಿತು ಬೆಲೆ ಕಟ್ಟುವುದು.

೩ **ಯುಕ್ತಿಯಿಲ್ಲದ ಶಕ್ತಿ:**—ಕೋಣನ ಶಕ್ತಿಯಂತೆ-ಹುಂಬರ ಪಂಭದಂತೆ-ಟಗರಿನ ಇರಿತದಂತೆ-ಗುರಿಯನ್ನು ತಾಗಿದರೆ ತಾಗಿತು; ಇಲ್ಲದೆ ಹೋದರೆ ಇಲ್ಲ. ಚೈತನ್ಯದ ಅಪವ್ಯಯ.

೪ **ಶಕ್ತಿಯಿಲ್ಲದ ಯುಕ್ತಿ:**—ಬಂಜೆ-ಬಡವನ ಬಯಕೆಯಂತೆ-ಜೀವನ್ಮೃತ-ಹುಟ್ಟಿದೊಡನೆ ಸಾವು-ಒಮ್ಮೊಮ್ಮೆ ಯಶಸ್ಸು-ಅನೇಕ ಸಲ ಸೋಲು.

೫ **ಉಪಸಂಹಾರ:**— ಆದುದರಿಂದ **ಎರಡರ ಮಧುರಮೀಲನದಲ್ಲಿಯೇ ಕಾರ್ಯಸಿದ್ಧಿ.**

೩ ಹಿಂಸೆಯೊ-ಅಹಿಂಸೆಯೋ?

೧ **ಉಪಕ್ರಮ:**—ಮಹಾತ್ಮರ ಉದಯದಿಂದ ಈ ವಿಷಯಕ್ಕೆ ಚಾಲನೆ. 'ಅಹಿಂಸೆಯು' ಮರಳಿ **ಪರಮಧರ್ಮ**ವಾಗಬೇಕೆಂಬ ಅವರ ನವಸಂದೇಶವು

೨ **ಹಿಂಸೆಯ ರೀತಿ:**—**ದ್ವೇಷದ ಆಶ್ರಯ**-ಸಬಲರು ದುರ್ಬಲರನ್ನು ಹಿಂಸಿಸಿ ತಮ್ಮ ಕಾರ್ಯವನ್ನು ನೆರವೇರಿಸುವರು. ಕೊಲೆ, ಸುಲಿಗೆ, ಯುದ್ಧ, ಸಂಹಾರ, ಅಶಾಂತಿ.

೩ **ಅಹಿಂಸೆಯ ರೀತಿ:**—**ಪ್ರೇಮದ ಆಶ್ರಯ.** ಸಬಲರು ಆತ್ಮಾಹುತಿಯಿಂದ ತಮ್ಮ ಕಾರ್ಯವನ್ನು ಕೈಗೂಡಿಸಲೆಳಸುವರು ಸತ್ಯಾಗ್ರಹ-ಅನ್ಯರ ಸಂಹಾರವಿಲ್ಲ, ಯುದ್ಧವಿಲ್ಲ, ಶಾಂತಿನಿರ್ಮಿತಿ.

೪ **ಇವುಗಳ ಸ್ಥಾನ:**—(೧) **ವ್ಯಕ್ತಿಜೀವನದಲ್ಲಿ:**—**ಸಾಮಾನ್ಯ ಜೀವನ**ದಲ್ಲಿ ಹಿಂಸೆಗೆ ಪ್ರಾಧಾನ್ಯ. **ಉನ್ನತ ಜೀವನ**ದಲ್ಲಿ ಅಹಿಂಸೆಗೆ ಮೇಲಿನ ಸ್ಥಲ.

೨) **ರಾಷ್ಟ್ರಜೀವನದಲ್ಲಿ:**-ಹಿಂಸೆಗೆ ಪ್ರಾಧಾನ್ಯ ಅಹಿಂಸೆಯ ಪ್ರಭಾವವು ಪ್ರಯೋಗದಿಂದ ಸಿದ್ಧವಾಗಬೇಕು.

೫ **ಉಪಸಂಹಾರ:**—ಹಿಂಸೆಯು ಇಂದು ಅನಿವಾರ್ಯ ಆಪತ್ತಿಯು. ಅಹಿಂಸೆಯು ಅಪೇಕ್ಷಣೀಯವಾದ ಉಪಕಾರ.

೪ ಹಳ್ಳಿಗಳು? ಪಟ್ಟಣಗಳು?

೧ **ಉಪಕ್ರಮ:**—'Back to villages' '**ಹೊರಳಿ ಹಳ್ಳಿಗಳೆಡೆಗೆ**' ಎಂಬ ಕೂಗು ಅಲ್ಲಲ್ಲಿ. ಪಟ್ಟಣದ ಕಾಲವಳಿದು ಇಂದು ಹಳ್ಳಿಗಳ ಯುಗವು ಬರಲಿದೆ.

೨ **ಹಳ್ಳಿಯ ಜೀವನ:**—ಸಹಜಜೀವನ, ಸುಲಭಜೀವನ, ನಿರ್ಮಲ ಹವೆ, ಸೃಷ್ಟಿಯ ಸೊಬಗು.

೩ **ಪಟ್ಟಣದ ಜೀವನ:**—ಕೃತ್ರಿಮತೆ, ಶಿಕ್ಷಣದ ಅನುಕೂಲತೆ, ವಿಲಾಸ ಜೀವನ, ವೈವಿಧ್ಯ, ವೈಶಾಲ್ಯ.

೪ **ಇವುಗಳ ತುಲನೆ:**—ಒಂದು ಸಹಜ-ಒಂದು ಕೃತ್ರಿಮ. ಒಂದು ದೇವ ಕೃತ-ಒಂದು ಮಾನವಕೃತ. ಒಂದರಲ್ಲಿ ಮಾನವನಿರ್ಮಿತ ಗುಣದೋಷಗಳಿಲ್ಲ; ಇನ್ನೊಂದರಲ್ಲಿ ದೇವನಿರ್ಮಿತ ಗುಣದೋಷಗಳಿಲ್ಲ.

೫ **ಉಪಸಂಹಾರ:**—ನಮಗೆ ಎರಡರ ಗುಣಗಳು ಬೇಕು. ಅದಕ್ಕಾಗಿ ನಾವು ಚಿಕ್ಕ ಚಿಕ್ಕ ನಗರಗಳನ್ನು ನಿರ್ಮಿಸಿ ಎರಡರ ಗುಣಗಳ ಸಂಮೇಲನವನ್ನು ಮಾಡ ಬೇಕು.

೪ ಶಠಂಪ್ರತಿ ಶಾಠ್ಯಂ—ಶಠಂಪ್ರತಿ ಸತ್ಯಂ?

೧ **ಉಪಕ್ರಮ:**—ಜಗತ್ತಿನಲ್ಲಿ ಸಜ್ಜನರಂತೆ ದುರ್ಜನರು ಸಾಕಷ್ಟಿರುವರು. ಕಿಂಬಹುನಾ ಅವರೇ ಬಹುಸಂಖ್ಯಾಕರೆನ್ನಲು ಅಡ್ಡಿಯಿಲ್ಲ. ಅವರೊಡನೆ ವ್ಯವಹರಿ ಸುವ ರೀತಿಗಳೆರಡು ಅನಾದಿಕಾಲದಿಂದ ನಡೆದುಬಂದಿವೆ.

೨ **ಇವುಗಳ ವಿವರಣ:**—ಮುಯ್ಯಕ್ಕೆ ಮುಯ್ಯ. ದುರುಳನ್ನು ದುರುಳುತನ ದಿಂದಲೇ ಎದುರಿಸಬೇಕೆಂಬುದು ಒಂದು ರೀತಿ; ಅವರನ್ನು ಸತ್ಯದಿಂದಲೇ ಗೆಲ್ಲಬೇ ಕೆಂಬುದು ಎರಡನೆಯದು.

೩ **ಇವುಗಳ ತುಲನೆ:**—ಒಂದು ಸಾಮಾನ್ಯರಿಗೆ ಸಾಧ್ಯ; ಇನ್ನೊಂದು ಅಸಾ ಮಾನ್ಯರಿಗೆ ಸಾಧ್ಯ. **ದುರುಳರಿಗೆ ದಂಡ-ಸರಳರಿಗೆ ಸತ್ಯ ಇದು ಸಹಜ ರೀತಿ.** ದುರುಳರನ್ನು ಸತ್ಯದಿಂದ ಸತ್ಕರಿಸುವುದು ಕತ್ತೆಗೆ ಹೂರಣ ಮೇಯಿಸಿದಂತೆ; ಹಾವಿಗೆ ಹಾಲು ಎರೆದಂತೆ.

೪ **ಉಪಸಂಹಾರ:**—ಜಾಣನಿಗೆ ಮಾತಿನ ಪೆಟ್ಟು-ಕೋಣನಿಗೆ ಮೊಚ್ಚಿಯ ಪೆಟ್ಟು- ಇದೇ ಯೋಗ್ಯ.

೪ ಬೇರೆ ಕೆಲವು ನಿಬಂಧಗಳು:—

೧ ಇತಿಹಾಸ.

೧ ಉಪಕ್ರಮ:— 'ಆದರ್ಶವೇ ಕರ್ಮಜೀವನದ ಪಂಚಪ್ರಾಣ ....ಈಗ ನಾವು ಏನಾದರೂ ಆಗಿದ್ದರೆ ಅದು ಆದರ್ಶದಿಂದಲೆ. ಇನ್ನು ಏನಾದರೂ ಆಗುವೆವಾದರೆ ಅದೂ ಆದರ್ಶದಿಂದಲೆ. ನಮ್ಮ ಬಾಳುವೆಯು ಕಡಿವಾಣವೆ ಆದರ ಕೈಯ್ಯಲ್ಲಿದೆ.' ಎಂಬುದು **ವಿವೇಕಾನಂದರ** ವೀರ ವಾಣಿಯು.

೨ ಎಂದರೇನು?;— ಇತಿಹಾಸವೆಂದರೆ ರೂಪುಗೊಂಡ ಆದರ್ಶ. ಇತಿಹಾಸವೆಂದರೆ ವೇದಶಾಸ್ತ್ರಗಳ ಪ್ರತ್ಯಕ್ಷ ವ್ಯಾಖ್ಯಾನ. ಕರ್ಮಿಯಾದ ಮನುಜನು ಯಾವಾಗಲೂ ಮೇಲ್ಪಂಕ್ತಿಯ ಕಡೆಗೆ ಕಣ್ಣಿಟ್ಟು ಸಾಗುವನು. **ಮೇಲ್ಪಂಕ್ತಿ** (ಆದರ್ಶ) **ಇಲ್ಲದ ಕರ್ಮವು ಗುರಿಯಿಲ್ಲದ ಗುಂಡಿನಂತೆ** ಕರ್ಮದ ಗಾಳಿಯಲ್ಲಿ ಅಲೆದಾಡುತ್ತಿರುವ ಇತಿಹಾಸದ ಪತಾಕೆಯು ಬಗೆಬಗೆಯ ಬಣ್ಣದೋರಿ ಜೀವನದ ಗತಿಯನ್ನು ಹಿಗ್ಗಿಸಲೂ ಬಹುದು, ತಗ್ಗಿಸಲೂ ಬಹುದು.

ಇತಿಹಾಸವು ನೆನಪಿನ ಸರಪಳಿ. ಇದು ಒಂದು ಸ್ಮೃತಿ. **ಮನುಸ್ಮೃತಿಯು** ಅಂದಿನ ಧರ್ಮಗ್ರಂಥ. ಈ '**ಮನುಜ–ಸ್ಮೃತಿ**'ಯು ಇಂದಿನ ಧರ್ಮಗ್ರಂಥ. ಏಕೆಂದರೆ **ಅಂದಿನದು ಮನಯುಗ, ಇಂದಿನದು ಮನುಜಯುಗ**. 'ಯುಗವು ಬದಲಾಗಲೇಬೇಕು.' ಗುರು **ಅರವಿಂದರು** ಇದನ್ನೇ **ಯುಗಧರ್ಮ**ವೆಂದು ಹೇಳುವರು.

ನೆನಪಿಲ್ಲದೆ ನಾವು ಬಾಳಲೇ ಆರೆವು. ಹೆಜ್ಜೆಹೆಜ್ಜೆಗೂ **ನೆನಪಿನ** ಅಗತ್ಯ. **ನೆನಪು** ಧಾರೆಗಟ್ಟಿ **ನೆನವಾ**ಯಿತು. **ಕರ್ಮ** ಧಾರೆಗಟ್ಟಿ **ಧರ್ಮ**ವಾಯಿತು. ಕರ್ಮಕ್ಕೆ ನೆನಪೇ ಜೀವ. ಧರ್ಮಕ್ಕೆ ನೆನವೇ ಜೀವ. ಆದುದರಿಂದ ನೆನೆವಿನ ನೆಲೆಯಾದ ನೆನಪೇ ಧರ್ಮಕರ್ಮಗಳ ಸೆಲೆ.

೩ ಪುರಾಣ–ಇತಿಹಾಸಗಳು:— ನಮ್ಮ ಹಿಂದಿನವರಿಗೆ ಪುರಾಣವೇ ಇತಿಹಾಸವಾಗಿದ್ದಿತು. ಆದರೆ ಇಂದಿನವರಿಗೆ ಇತಿಹಾಸವೇ ಪುರಾಣವಾಗಿ

ಬಿಟ್ಟಿದೆ. **ಪುರಾಣಪುರುಷರು ಭಾವಲೋಕದ ಜೀವರೇ.** ಅಂತೆಯೆ ಇತಿಹಾಸವು **ಪೌರುಷ**ವನ್ನು ಬೋಧಿಸಿದರೆ ಪುರಾಣವು **ಅಪೌರುಷೇಯದ** ಕಡೆಗೆ ಎಳೆಯುತ್ತಿದೆ.

ಭವದಲ್ಲಿ ಮುಳುಗಿದ ಇಂದಿನ ಭವಿಯುಗವು ಭಾವಕ್ಕೆ ಎರವಾಗಿದೆ. ಅಂದಿನವರು ಮೌನವ್ಯಾಖ್ಯಾನದಿಂದ ಛಿನ್ನಸಂಶಯರಾಗುತ್ತಿದ್ದರು. ಇಂದಿನವರಿಗೆ ಮೇಜೂ, ಮನೆಯೂ ಕೂಡಿಯೆ ಗುಡುಗಿಡುವ ಲೆಕ್ಚರು ಬೇಕು. **ಇಂದಿನದು ಶಬ್ದಯುಗ, ಅಂದಿನದು ಭಾವಯುಗ.** ಶಬ್ದ ಬಂದು ಭಾವವನ್ನು ಕೊಂದಿತೆಂದು **ಬೈಬಲ್ಲಿನ**ಲ್ಲಿದೆ.

ಶಬ್ದದಾಚೆಗೆ ಭಾವರಾಜ್ಯವಿಹುದಯ್ಯ !
ಶಾಬ್ದಿಕರು ಬೇಗ ಭಾವಿಕರಾಗಲಯ್ಯ !

ಎಂದು ಈಗೀಗ ಬಾಯ್ಬಂದ ನವಯುಗದ ಕೋಗಿಲೆಗಳು **ಯುಗಧರ್ಮ**ದ '**ಪ್ರ-ಣವ**' ಮಂತ್ರವನ್ನು ಬಾಯ್ಬಿಟ್ಟು ಹಾಡುತ್ತಲಿವೆ. ಇಂದಿನ '**ಅನು-ಭವ**' ಗಾಮಿಯಾದ ಯುಗವು, ಅಂದಿನ '**ಅನು-ಭಾವ**' ಮಂಟಪ ಸೇರಲಿಕ್ಕೆ ಇತಿಹಾಸದ ಕಡೆಗೆ ಹೊರಳಿ ನೋಡಬೇಕಾದುದು ತೀರ ಅಗತ್ಯ.

೪ ಅದರ ಬೋಧೆ:—ಒಬ್ಬನ ಬಾಳ್ವೆ ಇನ್ನೊಬ್ಬನಿಗೆ ಕೈಗನ್ನಡಿ. (ಚೆಲ್ಲಿದ ರುಮಾಲದವನನ್ನು ನೋಡಿ ತನ್ನ ತಲೆಗೆ ಕೈ ಒಯ್ಯುವುದು ಮನುಷ್ಯ ಸ್ವಭಾವ.) ಹಿಂದಿನ ಬಾಳ್ವೆ ಮುಂದಿನ ಮುಂಗುರಿ. ಅದು ಮೇಲಾಗಿರಲುಬಹುದು, ಕೀಳಾಗಿರಲುಬಹುದು. ಮೇಲು ಬಾಳ್ವೆಯ ಎಳೆತದಲ್ಲಿ **ಸಾರೂಪ್ಯ.** ಕೀಳುಬಾಳ್ವೆಯ ಕಿಚ್ಚಿನಲ್ಲಿ **ಸಾಮರಸ್ಯ.** ಒಂದು ಪಡಿಯಚ್ಚಾದರೆ, ಇನ್ನೊಂದು ಅಗ್ನಿಸ್ಪಿಗೆ. ಎರಡರ ಮೇಳದಿಂದಲೇ ಮೂರ್ತಿನಿರ್ಮಾಣ. ಬಾಳ್ವೆಯನ್ನು ಕೆತ್ತಿ ಕೊರೆದು ಪಡಿಯಚ್ಚುಗೊಳಿಸಿದರು ಪುರಾಣ ಮುನಿಗಳು, ಇತಿಹಾಸಕಾರರು. ಅದರಲ್ಲಿ ಎರಕಹೊಯ್ದು ತಮ್ಮನ್ನೆ ಮೂರ್ತಿಗೊಳಿಸಿ ತೋರಿದರು ಶರಣರು ! ಮಹಾತ್ಮರು !!

೫ ಉಪಸಂಹಾರ:—ಹಿಂದಿನವರು ಮುಂದಿನವರನ್ನು ತಮ್ಮ ಹಿಂದೆ ಹಿಂದೆ ಹರಿಯಹಚ್ಚಿದರು. ಆದರೆ ತಾವು ಮಾತ್ರ ಯಾರ ಹಿಂದೆಯೂ

ಹರಿಯಲಿಲ್ಲ. ಅವರು ನಡೆದದ್ದೇ ಹಾದಿಯಾಯಿತು; ನುಡಿದದ್ದೇ ವೇದವಾಯಿತು! ಅವರಲ್ಲೇನಿತ್ತು? ನಮ್ಮಲ್ಲೇನಿಲ್ಲ? ಈ ಒಗಟನ್ನೊಡೆಯುವ ಕೀಲಿಯೋ ಇತಿಹಾಸ.

—ಮಧುರ ಚೆನ್ನ.

೨ ನಗೆ.

೧ ಉಪಕ್ರಮ:—ಮಾನವ ಸ್ವಭಾವವೊಂದು ನಗೆಯ ಹುತ್ತ. ಜ್ಞಾನಿ ಅಜ್ಞಾನಿಯ ಕಂಡು ನಗುವಂತೆ, ತನ್ನ ಹುಚ್ಚುತನದ ಅರಿವಾದಾಗ, ತಾನಾಗಿ ಚಿಮ್ಮಿ ಬರುವ ರಸನಗೆಯ ಊಟೆಯೊಂದು ಮಾನವನ ಹೃದಯಾಂತರಾಳದಲ್ಲಿದೆ. ಆ ರಸದಲ್ಲಿ ಜಳಕಹೊಂದಿ ಮಾಸಿದ ಮನವು ಮಡಿಯಾಗುವುದು.

೨ ನಗೆಯ ಬಗೆ:—ನಗೆ ಎರಡು ಬಗೆ. ಒಂದು ಕೊಲ್ಲುವದು, ಒಂದು ಕಾಯುವದು. ಮಾನವ ಹೃದಯಸಾಗರದಲ್ಲುಂಟಾದ ಈ ಎರಡು ನಗೆಗಳಲ್ಲಿ ಒಂದು ವಿಷ, ಒಂದು ಅಮೃತ. ಅಮೃತಮಯವಾದ ನಗೆಯು '**ನಕ್ಕು ನಗಿಸುವ ನಗೆ;' ಲೇಸುನಗೆ; ರಸನಗೆ.** ವಿಷಮಯವಾದ ನಗೆಯು **ಹೇಸಿನಗೆ, ರಸಾಭಾಸ.** ಮಂದಿಯ ಕೇಡಿನಲ್ಲಿ ಪಾಡು ಕಾಣುವ ಈ ನಗೆಯೆ ಇಂದಿನ ಬದುಕಿನ ಊಟದಲ್ಲಿ ಉಪ್ಪಿನಕಾಯಿ. ಊಟಕ್ಕೆ ತಕ್ಕ ಉಪ್ಪಿನಕಾಯಿ!

ನಗೆಯು ಸುಖದ ಕುರುಹು. ಸುಖದ ವಿವಿಧ ಬಗೆಗಳಂತೆ, ನಗೆಯ ವಿವಿಧ ಬಗೆಗಳೂ ಇವೆ. ತರಳತನದ ಹುಡುಗಾಟದಲ್ಲಿ ಹಬ್ಬಿ, ಹರೆಯ ಹುಮ್ಮಸದಲ್ಲಿ ಹೂತು, ವಯಸ್ಸು ಬೆಳೆದಂತೆ, ಕುಹಕ, ವ್ಯಂಗ್ಯ, ಸರಸ, ವಿನೋದಗಳಲ್ಲಿ ಬಣ್ಣಬಣ್ಣವಾಗಿ, ಇಳಿವಯಸ್ಸಿನಲ್ಲಿ ಮುಗುಳಾಗಿ, ಮುಪ್ಪಿನಲ್ಲಿ ಕಣ್ಣಲ್ಲಿ ಕರಗಿ, ಮುಕ್ತರ ಮುಖದಲ್ಲಿಯೇ ತನ್ನ ಮುದ್ರೆಯನ್ನೊತ್ತಿ, ದೇವದೇವತೆಗಳಲ್ಲಿಯೂ ಅದು ಮುಗಳದೆ ಬೆಳಗುವದು. ಬುದ್ಧನ ಸ್ಮಿತ, **ರಾಮನ** ಸರಸ, **ಕೃಷ್ಣನ** ಹಾಸ್ಯ, ಇವುಗಳು, **ಭಾಸನ** ಹಾಸ, **ಕಾಲಿದಾಸನ** ವಿನೋದ, **ಬೀರಬಲ್ಲನ ಚತುರೋಕ್ತಿ, ತೆನ್ನಾಲಿಯ**

ಕುಚೇಷ್ಟೆಗಳಷ್ಟೆ ಜನಜನಿತವಾಗಿವೆ. ನಗೆಯು ಬಡವಬಲ್ಲಿದನೆಂಬ ಭೇದವಿಲ್ಲದೆ ಎಲ್ಲರನ್ನೂ ಸಿಂಗರಿಸುವ ಒಡವೆ; ತಣಿಸುವ ವಸ್ತು.

೩ **ಪರಿಣಾಮ:**—ನಗೆಯಲ್ಲಿ ಮುಖ ಅಗಲವಾಗುವದು, ಕಣ್ಣು ಹಿಗ್ಗುವವು, ತುಟಿ ಮಿನುಗುವದು, ಹಲ್ಲು ಮಿಂಚುವವು, ಗಲ್ಲ ಬೆಳಗುವವು, ಎದೆ ಉಕ್ಕುವದು, ಪಕ್ಕಡಿ ನುಗ್ಗುವವು, ಹೊಟ್ಟೆ ತುಂಬುವದು, ಮೈ ಅಲಗುವದು, ನುಡಿ ನಡಗುವದು; ಕೈಮೀರಿ ಹೋದಾಗ ಕಣ್ಣು ನೀರಿಳಿಯುವದು, ಪಕ್ಕಡಿ ಬಿರಿಯುವಂತೆ, ಹೊಟ್ಟೆ ಹುಣ್ಣಾಗುವಂತೆ ನೊಯ್ಯುವದು, ಉಗುಳು ತುಂತುರಿಗೆಯ್ಯುವದು, ಅಟ್ಟಹಾಸದಿಂದ ಶಬ್ದ ಕೆಲೆದು ನೆಗೆಯುವದು.

೪ **ನಗೆಯ ವೈವಿಧ್ಯ**:—ಮುಗುಳು ನಗೆಯು ಹುಡುಗರ ಹುಟ್ಟುಗುಣ, ಹರೆಯದವರ ಸಿಂಗಾರ, ಮುಕ್ತನ ಸಿದ್ಧಿ, ರಸಿಕರ ಸಾಧನೆ, ದೇವನ ಕುರುಹು. ಹೂನಗೆಯು ಸರಸದ ಮುಗುಳು, ಸಾಹಿತ್ಯದ ಪ್ರಾಣ, ವಾದವಿನೋದದ ಜೀವಾಳ. ನಗೆಯಾಟವು ವೀರರ ಶಸ್ತ್ರ, ವಾದಿಗಳ ಅಸ್ತ್ರ, ಪ್ರತಿಷ್ಠಿತರ ಶಾಸ್ತ್ರ. ಬಿರುಸು ನಗೆಯು ಧೂರ್ತರ ಕೈದು, ಕುಹಕಿಗಳ ಕೊಂಡೆಯು, ಕಿವಿ ಕಚ್ಚುವವರ ಅನ್ನ. ಕೆಲೆವರ ನಗೆಯು ಹುಡುಗರ ಹುಡುಗಾಟ, ಹುಚ್ಚರ ಹಣೆಬರಹ. ಹುಚ್ಚುನಗೆಯು ಹುಂಬರ ವಿಲಾಸ, ನಗದೆ ನಗಿಸುವದು ಚದುರರ ರೀತಿ. ನಕ್ಕು ನಗಿಸುವದು ವಿದೂಷಕರ ಪರಿಪಾಠ. ನಗೆಗೀಡಾಗುವದು ಎಬಡರ ಹಾದಿ.

ಮೂರು ಸಲ ನಗುವ ಮಂದರ ಕತೆ ಗೊತ್ತಿರಬಹುದು ಒಮ್ಮೆ ಹತ್ತರ ಕೂಡ ಹನ್ನೊಂದೆಂದು ನಗುವವರ ಕೂಡ ನಗುವರು. ಕೆಲ ಹೊತ್ತಿನ ಮೇಲೆ ಮಂದಬುದ್ಧಿಯಲ್ಲಿ ಪ್ರಕಾಶಬಿದ್ದು, ಮಾತು ತಿಳಿದು ನಗುವದು; ಆ ಮೇಲೆ ಮೊದಲಿನ ನಗೆಯ ಮೌಢ್ಯವನ್ನು ನೆನಸಿ, ಆ ಮೇಲಿನ ತಿಳುವಳಿಕೆಯ ಅಧ್ಯತೆಯನ್ನು ತಿಳಿದು ತನಗೆ ತಾನೆ ನಗುವದು.

೫ **ಉಪಸಂಹಾರ:**—ನಗೆಯೊಂದು ಬೆಳಕು. ರಸಿಕರ ಹಾಸ್ಯ ವಿನೋದದಲ್ಲಿ ಮಿಂಚಿನ ಸಂಚಾರವಿರುವದು. ತಿಳಿಯುವವರಿಗೆ ಬುದ್ಧಿ ಸಂಸ್ಕಾರ ಮಾತ್ರ ಬೇಕು.

—ದ. ರಾ. ಬೇಂದ್ರೆ

ಅಭ್ಯಾಸ ೧೨.

೧ ಹಿಂದಿನ ಬೇರೆ ಬೇರೆ ಗುಂಪುಗಳಲ್ಲಿ ಕೆಲವು ವಿಷಯಗಳ ರೂಪ ರೇಖೆಯನ್ನಷ್ಟೆ ಬರೆಯಲಾಗಿದೆ ಅವುಗಳನ್ನುಪಯೋಗಿಸಿ ನಿಬಂಧಗಳನ್ನು ಬರೆಯಿರಿ.

೨ ಕೆಳಗಿನ ವಿಷಯಗಳನ್ನು ಕುರಿತು ನಿಬಂಧಗಳನ್ನು ಬರೆಯಿರಿ.

೧) ಸಹಿಷ್ಣುತೆ, ಶೌರ್ಯ, ಏಕಾಂತವಾಸ, ನೈರ್ಮಲ್ಯ, ಹೇಡಿತನ, ಆತ್ಮಪರೀಕ್ಷಣ, ಔದಾರ್ಯ, ಧೈರ್ಯ, ಶಾರೀರಿಕ ಶಿಕ್ಷಣ, ಅಹಂಕಾರ, ಆರೋಗ್ಯ, ಸಹ ಶಿಕ್ಷಣ, ಸಹಕಾರ, ಮೂರ್ತಿಪೂಜೆ, ಸ್ವದೇಶೀ ವ್ರತ, ಗೆಳೆತನ, ಧರ್ಮ-ಭ್ರಮ, ಸಂಘಶಕ್ತಿ.

೨) ನಮ್ಮ ವಿದ್ಯಾರ್ಥಿಗಳು, ನಮ್ಮ ಶಿಕ್ಷಕರು, ನಮ್ಮ ರೈತರು, ನಮ್ಮ ವರ್ತಕರು, ನಮ್ಮ ಕೂಲಿಕಾರರು, ನಮ್ಮ ಆದರ್ಶ, ನಮ್ಮ ಹರಿಜನರು, ನಾನು ಮೆಚ್ಚಿದ ಕವಿ. ನಮ್ಮ ಮುಂದಾಳುಗಳು.

೩) ಅಸ್ಪೃಶ್ಯತಾ ನಿವಾರಣ, ಕರ್ನಾಟಕ ಏಕೀಕರಣ, ವಿಧವಾವಿವಾಹ, ಕನ್ನಡದ ಮುನ್ನಡೆ, ಜಾತೀಯ ಐಕ್ಯ, ಶಿಕ್ಷಣದ ಗೊತ್ತುಗುರಿಗಳು, ಬಡತನದ ಬವಣೆ, ಮದ್ಯಪಾನ ಪ್ರತಿಬಂಧ, ಗ್ರಾಮಸುಧಾರಣೆ, ನಾವು ಬಿದ್ದುದೆಂತು ? ನಾವು ಏಳುವದೆಂತು ?

೪) ಗೆಳೆಯರ ಆಯ್ಕೆ, ಸಾಹಸದಲ್ಲಿ ಶ್ರೀಯು, ಗೆಲವಿನ ಗುಟ್ಟು, ಯೌವನದ ಸವಿಗನಸು, ಓದಿನ ಆನಂದ, ಜೀವನಕಲಹ, ಆನಂದದ ಆಡಿಗಲ್ಲು, ಜೀವನಕಲೆ, ಏಳ್ಗೆಯ ಹಿರಿದಾರಿ, ಹಿರಿತನದ ಕುರುಹು, ಮಹಾತ್ಮರ ಮಹದುಪಕಾರ, ಸಂಕಟಗಳ ಸೌಭಾಗ್ಯ, ಹುಚ್ಚುತನದ ಹೆಚ್ಚಳ.

೫) ನಾಳೆ ಎಂಬುವನ ಮನೆ ಹಾಳು. ತಾಗುವಾ ಮುನ್ನವೇ ಬಾಗು ! ನಾವೇ ನಮ್ಮ ದೈವದ ನಿರ್ಮಾತರು, ಶಾಂತಿಗಾಗಿ ಸಮರ.

೬ ಕಲ್ಪನಾಪರ.

೧ ಅಂದರೇನು?

೧) **ಕಲ್ಪನೆಯು** ನಮ್ಮೆಲ್ಲರಲ್ಲಿದ್ದ ಒಂದು ಶಕ್ತಿ. ಅದೊಂದು ಉತ್ಪಾದಕ ಶಕ್ತಿ. ‘ಇಲ್ಲದ’ ರೊಳಗಿಂದದು ‘ಎಲ್ಲವನ್ನು’ ಹುಟ್ಟಿಸುವುದು. ಅದು

ಅದರ ಬಲದಿಂದ ನಾವು ಕಂಗಳಿಲ್ಲದೆ ನೋಡುವೆವು. ಕಿವಿಗಳಿಲ್ಲದೆ ಕೇಳುವೆವು.—ಕೈಯಿಲ್ಲದೆ ಮಾಡುವೆವು-ಕಾಲಿಲ್ಲದೆ ಅಲೆದಾಡುವೆವು. ಅದು ತನ್ನ ರೆಕ್ಕೆಗಳ ಮೇಲೆ ನಮ್ಮನ್ನು ಕುಳ್ಳಿರಿಸಿಕೊಂಡು ವಿಶ್ವದಲ್ಲೆಲ್ಲ ನಮ್ಮನ್ನು ಒಯ್ದು, ನಮಗದರ ದರ್ಶನವನ್ನು ಮಾಡಿಕೊಡುವದುಂಟು. ಇದರ ನೆರವಿನಿಂದ ಕುಳಿತಲ್ಲಿಯೆ ಬರೆದವು **ಕಲ್ಪನಾಪರ ನಿಬಂಧಗಳು**.

೨) ಇದರಲ್ಲಿ ವರ್ಣನೆಯಿದೆ-ಕಥನವಿದೆ-ಚಿಂತನವಿದೆ-ಇದು ಅವೆಲ್ಲವುಗಳನ್ನು ಒಳಗೊಂಡಿದೆ-ಆದರೆ ಇದರ ರೀತಿಯು ಸ್ವಲ್ಪ ಬೇರೆ.

ಸಾಮಾನ್ಯ ವರ್ಣನೆಯಲ್ಲಿ ಕಂಡದ್ದನ್ನು ಚಿತ್ರಿಸುವೆವು.-ಇಲ್ಲಿ ಕಾಣದ್ದನ್ನು ಚಿತ್ರಿಸುವುದು. ಇಲ್ಲಿ ಕಲ್ಪನೆಯ ಕಂಗಳು ನಮಗೆ ನವದೃಶ್ಯಗಳನ್ನು ತೋರಿಸುವವು. ಅವನ್ನು ಈ ನಿಬಂಧಗಳಲ್ಲಿ ಸೇರಿಸುವದುಂಟು.

ಸಾಮಾನ್ಯಕಥನದಲ್ಲಿ ಕಂಡದ್ದನ್ನಾಗಲಿ, ಓದಿದ್ದನ್ನಾಗಲಿ ಉಸುರುವೆವು. ಇಲ್ಲಿ ಹೊಸ ಸಂಗತಿಗಳನ್ನು ಕಲ್ಪಿಸಿ ಅವನ್ನು ಹೇಳುವುದು. ಅದೇ ಮೇರೆಗೆ ಈ ನಿಬಂಧಗಳಲ್ಲಿ ವಿಚಾರಗಳಿಗೂ ಆಸ್ಪದವಿದೆ. ಆದರೆ ಅವು ಕಲ್ಪನೆಯ ರಾಜ್ಯಕ್ಕೆ ಸಂಬಂಧಿಸಿದವುಗಳು ಇರುವವು.

೩) ಹೀಗೆಂದ ಮಾತ್ರಕ್ಕೆ ಈ ನಿಬಂಧಗಳಲ್ಲಿ ಸತ್ಯದ ಆಶ್ರಯವಿರುವದಿಲ್ಲವೆಂದಲ್ಲ. ಆದರೆ ವರ್ಣಿಸಿದ ಇಲ್ಲವೆ ಹೇಳಿದ ಸಂಗತಿಯು ಪ್ರತ್ಯಕ್ಷ ಸೃಷ್ಟಿಯಲ್ಲಿ ಒದಗಿರುವದಿಲ್ಲ ಇಷ್ಟೇ! **ಇಲ್ಲಿಯದು ವಾಸ್ತವ ಸತ್ಯವಲ್ಲ; ಆದರ್ಶಸತ್ಯ**. (ideal truth)

೨ ಬಗೆಗಳು:—

ಕಲ್ಪನಾಪರ ನಿಬಂಧಗಳಲ್ಲಿ ಮೂರು-ನಾಲ್ಕು ಬಗೆಗಳನ್ನು ಕಲ್ಪಿಸಬಹುದು. ಅವುಗಳಲ್ಲೆಲ್ಲ ಕಲ್ಪನೆಯ ವಿಲಾಸಕ್ಕೆಯೆ ಪ್ರಾಧಾನ್ಯವಿರುವುದು. **ಕಾದಂಬರಿ**ಗಳು ಕಲ್ಪನೆಯ ನಿರ್ಮಿತಿಗಳು. ಅವು ನಿಜವಾಗಿ ಇದೇ ವರ್ಗಕ್ಕೆ ಸೇರಿದವುಗಳು. ಆದರೆ ಅವು ನಿಬಂಧಗಳಾಗಬರಿಯದುದರಿಂದ, ಅವನ್ನಿಲ್ಲಿ ವಿಚಾರಿಸುವ ಕಾರಣವಿಲ್ಲ.

∴ ೧) ಕಟ್ಟುಕತೆ, ಬಣ್ಣನೆ, ವೃತ್ತಾಂತಗಳು.
೨) ಕನಸುಗಳು, ಕಣಸುಗಳು.
೩) ಕಲ್ಪಿತ ವಸ್ತುಗಳ ಆತ್ಮಚರಿತೆಗಳು.
೪) ಕಲ್ಪಿತ ಕಾರ್ಯಪರಿಚಯ.

ಇವುಗಳನ್ನಷ್ಟು ಇಲ್ಲಿ ಚರ್ಚಿಸುವೆವು.

೧). ಕಲ್ಪಿತಕಥೆ, ಬಣ್ಣನೆಗಳು:—

ಕತೆಯ ವಿಚಾರವನ್ನು **ಎರಡನೆಯ ವಿಭಾಗದಲ್ಲಿಯೇ** ಮಾಡಲಾಗಿದೆ. ಅಲ್ಲಿ ಸಾಮಾನ್ಯ ಕತೆಗಳ ಜತೆಯಲ್ಲಿ ಕಟ್ಟು ಕತೆಗಳೂ ಬಂದಿರುವವು. ಅವನ್ನು ಪರೀಕ್ಷಿಸಿ ಅವುಗಳಲ್ಲಿ ಕಲ್ಪನೆಯ ಅಂಶವು ಹೆಚ್ಚಾಗಿರುವುದೆಂಬುದನ್ನು ಅರಿತುಕೊಳ್ಳಬೇಕು.

ಇಲ್ಲಿ ಕೆಲವು **ಕಾಲ್ಪನಿಕ ವರ್ಣನೆ**ಗಳನ್ನು ಕುರಿತು ವಿಚಾರಿಸುವ. ಮುಂದೆ ಕಾಣಿಸಿದ '**ಚಳಿರಾಯನ ಚೆಲ್ಲಾಟವು**' ಇದರ ಒಂದು ಮಾದರಿ ಶ್ರೀಮಾನ್ ಜಹಾಗಿರದಾರರು ಬರೆದ 'ಕಾಗೆ' 'ಬೆಕ್ಕು' ಇತ್ಯಾದಿ ವಿಡಂಬನಾತ್ಮಕ ನಿಬಂಧಗಳು ಇನ್ನೊಂದು ಮಾದರಿ. ಅವನ್ನೆಲ್ಲ ಪರಿಶೀಲಿಸಿಯೆ ಈ ಬಗೆಯ ನಿಬಂಧಗಳನ್ನು ಬರೆಯಲು ಕಲಿಯಬೇಕು.

೨) **ಕನಸುಗಳು:**—ಕನಸಿನ ಸಾಹಿತ್ಯವು ಇತ್ತೀಚಿಗೆ ಅನ್ಯಭಾಷೆಗಳಲ್ಲಿ ಬೆಳೆಯುತ್ತಲಿದೆ. ಕನಸು ಕಲ್ಪನೆಯ ನಿರ್ಮಿತಿಯೆ ಇದ್ದುದರಿಂದ ಆದರಲ್ಲಿ ಕಂಡ ವಿಷಯಗಳನ್ನು ಚಿತ್ರಿಸುವ ಬರಹವನ್ನು ಈ ವರ್ಗಕ್ಕೆ ಸೇರಿಸಿರುವೆವು. ನಾವು ಅನೇಕ ಕನಸುಗಳನ್ನು ಪ್ರತಿನಿತ್ಯ ಕಾಣುವೆವು. ಅವನ್ನೆಲ್ಲ ಸರಿಯಾಗಿ ಮರೆತುಬಿಡುವೆವು. ಆದರೆ ಅವುಗಳಲ್ಲಿಯ ಸುಂದರವಾದವುಗಳನ್ನೂ ಚಮತ್ಕೃತಿಯುತವಾದವುಗಳನ್ನೂ ಬರೆದಿಡುವದರಿಂದ ಅನೇಕ ದೃಷ್ಟಿಯಿಂದ ಒಂದು ಉಪಯುಕ್ತವಾದ ಕಾರ್ಯವನ್ನು ಮಾಡಿದಂತಾಗುವುದು. ಅದೊಂದು ಸುಂದರವಾದ ವಾಙ್ಮಯಪ್ರಭೇದವಾಗುವುದು.

ಇದಕ್ಕಾಗಿ ಕನಸಿನಿಂದ ಎಚ್ಚತ್ತ ಕೂಡಲೆ ಅದನ್ನು ನೆನಪಿದ್ದಷ್ಟು ಬರೆದಿಡಲು ಯತ್ನಿಸಬೇಕು. ಮರೆತ ಭಾಗಗಳನ್ನು ಹಿಂದಿನಿಂದ ಹೊಂದಿಸ-

ಬೇಕು. ಈ ಅಭ್ಯಾಸವು ಸ್ವಲ್ಪ ಬೆಳೆಯಿತೆಂದರೆ ಕನಸುಗಳನ್ನು ಕಂಡಂತೆ ಬರೆಯಲು ಬರುವದುಂಟು. ಆದರಿಂದ ನಮ್ಮ ಮನಸ್ಸಿನ ಅಜ್ಞಾತ ಪ್ರದೇಶವಲ್ಲಿಯ ಅಲೆದಾಟವು ಯಥಾರ್ಥವಾಗಿ ಚಿತ್ರಿತವಾಗುವ್ರದು.

೩) **ಕಲ್ಪಿತ ಆತ್ಮಚರಿತಗಳು:**—ಇದೊಂದು ರಂಜನಕ್ಕಾಗಿ ಹುಟ್ಟಿದ ರೀತಿ. ಇದರಿಂದ ಪ್ರಚಲಿತ ವಿಷಯಗಳನ್ನೆಲ್ಲ ವ್ಯಂಗ್ಯವಾಗಿ ಟೀಕಿಸಿ ಸಮಾಜದ ನಡೆನುಡಿಗಳಲ್ಲಿ ಸರಿಯಾದ ಬದಲಾವಣೆಯನ್ನು ಮಾಡಬಹುದು. ಆಂಗ್ಲಭಾಷೆಯಲ್ಲಿ ಪ್ರಸಿದ್ಧವಾದ '**ಶಿಲಿಂಗದ ಆತ್ಮವೃತ್ತ**'ವು ಆ ನಾಣ್ಯದ ನಿರ್ಮಿತಿಯ ವಿಷಯವನ್ನುಸುರುವದಲ್ಲದೆ ಅನೇಕ ಜನರ ರೀತಿನೀತಿಗಳನ್ನು ಬಯಲಿಗೆಳೆದಿರುವುದು. ಇದೇ ಮಾದರಿಯಿಂದ ಮುಂದಿನ ಮಹನೀಯರು ಕೆಲವು ವ್ಯಂಗ್ಯ '**ಚರಿತೆ**' ಗಳನ್ನು ಬರೆದು ಈ ರಂಜನೆಯ ಮುಖಾಂತರವಾಗಿ ಸಮಾಜದ ಕಣ್ಣಲ್ಲಿ ಅಂಜನವನ್ನು ಹಾಕಿದ್ದುಂಟು.

ಈ ರೀತಿಯೂ ಬಿಗಿಯಾದದ್ದು. ಇಲ್ಲಿಯೂ ಮಾದರಿಗಳ ಪರೀಕ್ಷಣ ಅನುಕರಣಗಳೇ ಸಾಧನಗಳು. ಇವನ್ನು ಬರೆಯುವ ಪೂರ್ವದಲ್ಲಿ ನಾವು ಟೀಕಿಸಬೇಕಾದ ವಿಷಯಗಳಾವು ಎಂಬುದನ್ನು ನಿಶ್ಚಯಿಸಿ ಅವಕ್ಕೆ ಹೊಂದಿಕೆಯಾಗುವ ವಸ್ತುವನ್ನೆ ಆರಿಸಬೇಕು. ವಸ್ತುಗಳನ್ನು ಕೊಟ್ಟಿದ್ದರೆ ಆಗ ಅದರ ಮುಖಾಂತರ ಯಾವ ಯಾವ ಮಾತುಗಳನ್ನು ಟೀಕಿಸಲು ಬರುವದು ಎಂಬುದನ್ನು ಕಂಡುಹಿಡಿಯಬೇಕು. ಟೀಕೆಯು ಸಾಧ್ಯವಿಲ್ಲದಿದ್ದರೆ ಬರೀ ರಂಜನೆಯಾಕಾಗಲೊಲ್ಲದು ಅದು ಚೆನ್ನಾಗಿ ಆಗುವಂತೆ '**ಚರಿತ**' ದಲ್ಲಿಯ ಸನ್ನಿವೇಶಗಳನ್ನು ಕಲ್ಪಿಸಬೇಕು.

೪) **ಕಾಲ್ಪನಿಕ ಕಾರ್ಯಪರಿಚಯ:**—ಇದು ಇನ್ನೊಂದು ರೀತಿ. ಇದರಲ್ಲಿ ನಾವು ಒಂದು ವಿಶೇಷವಾದ ಸ್ಥಾನದಲ್ಲಿದ್ದರೆ, ಏನು ಮಾಡಬಹುದೆಂಬುದರ ಪರಿಚಯವನ್ನು ಮಾಡಿಕೊಡಬೇಕಾಗುವದು. ಇದೊಂದು ಗಾಳಿಗೋಪುರದ ಮಾದರಿಯೇನೋ ನಿಜ. ಆದರೆ ಇವುಗಳಿಂದ ನಮಗೆ ಮುಂದಿನ ಕಾರ್ಯವನ್ನು ನಿಶ್ಚೈಸುವ ಶಕ್ತಿಯು ಬರುವುದು. ಪ್ರತಿಯೊಬ್ಬನು ತನ್ನ ಮುಂದಿನ ಕಾರ್ಯವನ್ನು ಮೊದಲು ಕಲ್ಪಿಸಿಯೆ

ತರುವಾಯ ಪ್ರತ್ಯಕ್ಷ ಕೆಲಸವನ್ನು ಆರಂಭಿಸುವದುಂಟು. ಅದಕ್ಕಾಗಿ ಈ ಬಗೆಯ ಅಭ್ಯಾಸವು ತೀರ ಆವಶ್ಯಕ.

೧ ಚಳಿರಾಯನ ಚಲ್ಲಾಟ.

೧ **ಉಪಕ್ರಮ:**—ಇದೀಗ ಚಳಿರಾಯನ ಆಗಮನವು, ಅದೂ ಅತಿ ನಿಗೂಢವಾಗಿ. ಜನರೆಲ್ಲ ಸುಖನಿದ್ರೆಯಲ್ಲಿ ಮೈಮರೆತಾಗ, ಇವನು ಜನರನ್ನು ಮುತ್ತುವದೆಂದರೆ ಅದೆಂಥ ಹೀನ ಕೆಲಸ? ಆದರೆ ಹೀನರು ಹೀನ ಕೆಲಸವನ್ನಲ್ಲದೆ ಮಾಡುವುದೇನನ್ನು? ತಿಳಿಯದೆ ನುಸುಳಿ ಹೊಳೆಯದೆ ಆಳತೊಡಗಿದ ನಮ್ಮ ಮಾರಾಯ.

೨ **ಇವನ ಪರಿವಾರ:**—ನಮ್ಮ ಚಳಿರಾಯನಿಗೆ ಇರುಳು ಪ್ರಿಯತಮೆ. ಹಗಲುಬೆಳಕಿನಲ್ಲಿ ಅವನ ಆಟವು ಅಷ್ಟು ಚನ್ನಾಗಿ ನಡೆಯುವಂತಿಲ್ಲ. ಈ ಅರ್ಥದಿಂದ ಅವನು **ನಿಶಾಪತಿ-ನಿಶಾಚರ**. ಜಗತ್ತಿಗೆಲ್ಲ ಜೀವನವನ್ನೀಯುವ ರವಿರಾಜನು ಇವನ ಹುಟ್ಟುಹಗೆ. ಜಗತ್ತಿನಲ್ಲೆಲ್ಲ ಮುಪ್ಪುಕವಿದಾಗ ಇವನಿಗೆ ಹುರುಪಿನ ಹಬ್ಬ.

೩ **ಇವನ ಕಾರ್ಯ:**—ಎಂತಹ ಕೈಚಳಕವು ಈ ಚಳಿರಾಯನದು! ಮಳೆಮಾರಾಯನ ಮಹಾಕಾರ್ಯವನ್ನು ಇವನು ಅರಗಳಿಗೆಯಲ್ಲಿ ಅಳಿಸಿಬಿಟ್ಟನು. ಧರೆ-ಯುವತಿಯ ಹಸನಾದ ಹಸಿರು ಸೀರೆಯನ್ನು ಸೆಳೆದು ಆಕೆಗೆ ಸನ್ಯಾಸಿನಿಯ ಅರಸಿಣ ಬಟ್ಟೆಯನ್ನು ಉಡಿಸಿದ. ಇವನ ಸ್ಪರ್ಶದಿಂದ ಮರಗಳ ಯೌವನವು ಮಾಯವಾಗಿ, ಅವುಗಳಲ್ಲಿ ಮುಪ್ಪು ಮೈದೋರಿತು. ಸ್ವೈರವಾಗಿ ಬಾನಿನಲ್ಲಿ ಆಡುವ, ಹಾಡುವ, ಹಕ್ಕಿಗಳು ತಮ್ಮ ಗೂಡಿನಲ್ಲಿಯೇ ನಡುಗಲಾರಂಭಿಸಿದವು. ಮೀನಗಳು ಹೆಪ್ಪುಗಟ್ಟಿದ ನೀರನಲ್ಲಿ ಮಿಡುಕತೊಡಗಿದವು. ಹುರುಪಿನ ಹುಲಿಗಳು ಇಲಿಗಳಂತೆ ಗವಿಗಳನ್ನು ಸೇರಿ ಈ ವೈರಿಭೈರವನ ಅಳಿಗಾಲನ್ನು ನಿರೀಕ್ಷಿಸುತ್ತ ಕುಳಿತವು. ಕೆಲವು ಕೃತಘ್ನ ಕರಡಿಗಳು ಮಾತ್ರ ಇವನ ಪ್ರೀತಿಯನ್ನು ಪಡೆದು, ಇವನ ಸಾಮ್ರಾಜ್ಯವನ್ನು ಹೊಗಳುತ್ತ ಅತ್ತಿತ್ತ ಉಲಿಯತೊಡಗಿದವು.

೪ **ಜನರ ಗೋಳು:**—ಚಳಿರಾಯನ ಈ ಹಾಳು ಆಳಿಕೆಯಲ್ಲಿಯ ಜನರ ಗೋಳನ್ನು ಬಣ್ಣಿಸಲು ಅಳವಲ್ಲ. ಮೈಯಲ್ಲಿ ನಡುಗು, ಮುಖ

ದಲ್ಲಿ ದೈನ್ಯ, ನುಡಿಯಲ್ಲಿ ಕಂಪ, ನಡೆಯಲ್ಲಿ ಕಾತರ. ಇವನ ಇರಿತದ ಕಾಟವಿಲ್ಲದ ಸ್ಥಲವಿರಲಿಲ್ಲ, ಕಾಲವಿರಲಿಲ್ಲ, ಆದುದರಿಂದ ಚಣಚಣಕ್ಕೆ ಅದರ ಅಸ್ತಿತ್ವದ ಅರಿವು ಇವರಿಗೆ. ಸ್ವಾತಂತ್ರ್ಯವು ಅವರು ಅರಿಯದ ಮಾತಾಗಿದ್ದಿತು. ಪ್ರೀತಿಯು ಕಾವು, ದೊರೆಯದ ಸರಕು. ಇಂಥ ಇಕ್ಕಟ್ಟಿ ನೊಳಗಿಂದ ತಮ್ಮನ್ನು ಬಿಡಿಸುವ ಕೈವಾರಿಯ ಬರವನ್ನೆಯೆ ಅವರು ಆತು ರರಾಗಿ ಕಾಯುತ್ತಿದ್ದರು; ಬರಬಹುದೇ ಬೇಗ ನಮ್ಮನ್ನು ಬಿಡಿಸುವ ಬಂಟ? ಕಾಪಿಡುವ ಕಾರಣಿಕ ಪುರುಷ! ಸಂತೈಸುವ ವಸಂತರಾಯ! ಇದೇ ಎಲ್ಲರ ಬಲವಾದ ಬಯಕೆ.

೬ ಉಪಸಂಹಾರ:—ಬಲಿತ ಬಯಕೆಯು ಫಲಿಸಲೇ ಬೇಕು. ಇದು ವಿಧಾತನ ವಿಧಿ, ಕಟ್ಟಳೆ. ಇದಕ್ಕೆ ಅವರೇ ಅಪವಾದವಾಗುವು ದುಂಟು? ಹಳೆಯದು ಹಾಳಾಗಿ ಹೊಸದು ಹೊಳೆಯಿತು.

೨ ವಿಜಯನಗರದ ವೈಭವ.

(ಒಂದು ಕನಸು.)

೧ ಉಪಕ್ರಮ:—ಛೇ! ಈ ಸ್ವಪ್ನಗಳು ಮುಗಿಯಲೇ ಮುಗಿಯವು. ಎಚ್ಚರಗೊಂಡು ಸ್ವಲ್ಪಹೊತ್ತು ಯೋಚನೆ ಮಾಡೋಣವೆಂದು ಕುಳಿತರೆ ಕಣ್ಣು ತೆರೆದಿದ್ದ ಹಾಗೆಯೇ ಇನ್ನೊಂದು ಸ್ವಪ್ನ! ಈಗ ಅಂತಃಪುರವಿಲ್ಲ; ರಮಣಿಯರ ವಿಲಾಸವಿಲ್ಲ; ನಗುವಿಲ್ಲ.

೨ ವಿಜಯದಶಮಿ ದಿಬ್ಬ:—ಇಂದು ವಿಜಯ ದಶಮಿಯ ಸಂಭ್ರಮ. ಮೇಲ್ಗಡೆ ವಿಜಯದಶಮಿ ದಿಬ್ಬದಲ್ಲಿ, ಮಹಾರಾಜನ ಆಗಮ ನವನ್ನು ನಿರೀಕ್ಷಿಸುತ್ತ ಕಿಕ್ಕಿರಿದು ಪಿಸುಪಿಸು ಮಾತನಾಡುತ್ತಿರುವ ಮಾನವ ಮಹಾಸಾಗರದಲ್ಲಿನ ಅಲೆಮಾಲೆಗಳ ಗಜಿಬಿಜಿ ನಡುನಡುವೆ ಅಧಿಕಾರ ದರ್ಪದಿಂದ ಉನ್ನತವಾದ ಉಚ್ಚಗಂಭೀರವಾದ '**ಸದ್ದು!**' ಎಂಬ ಕೂಗು. ಸ್ವಲ್ಪಹೊತ್ತು ಎಲ್ಲವೂ ನೀರವ. ಕರಿಯ ಕೆತ್ತನೆಗಳಿಂದ ಮಾಡಿದ ದಿಬ್ಬದ ಮೇಲಿನ ಸಭಾಮಂದಿರದಲ್ಲಿ ಒಂದು ಕೊನೆಯಲ್ಲಿ ಪೂರ್ವಾಭಿ ಮುಖವಾಗಿ ರಾಯನ ರತ್ನಸಿಂಹಾಸನ. ಸ್ವಲ್ಪ ಸರಿದು ಎಡಕ್ಕೆ ಬಲಕ್ಕೆ ಹಿಂದೆ ಸಿಮ್ಹಾಸನಗಳು. ಅಮೃತಶಿಲೆಯ ಕಾಲ್ಕಂಭಗಳಲ್ಲಿ ಕೆತ್ತನೆಯ

ಗಜ ಸಿಂಹಗಳು. ಆನೆಗಳ ಎತ್ತಿದ ಸೊಂಡಿಲುಗಳಲ್ಲಿ ಮುತ್ತಿನ ಸರ, ಹೂವಿನ ಹಾರಗಳು. ರಾಯನ ಸಿಂಹಾಸನಕ್ಕೆ ಹೋಗುವ ದಾರಿಯುದ್ದಕ್ಕೆ ಪರ್ಷಿಯಾ ದೇಶದ ರತ್ನಗಂಬಳಿ. ಅದರ ಮೇಲೆ ಕೆಂಪು ಮೊಖಮಲ್ಲಿನ ಸಿಡುಹಾಸು.

ಉತ್ತರಕ್ಷಣದಲ್ಲಿಯೆ ನೂರಾರು ವಾದ್ಯಗಳೂ, ಶಂಖಭೇರಿಗಳೂ ಮೊಳಗುವವು. ಲಕ್ಷಾಂತರ ಜನರ ಜಯಘೋಷ; ಹೊಗಳುಭಟರ ಬಿರುದಾವಳಿ ಪ್ರಶಂಸೆ. ವೈದಿಕರ ಮಂತ್ರಪೂತ ಸ್ವಾಗತವಚನ. ಪುನಃ ಎಲ್ಲವೂ ನಿಃಶಬ್ದ! ಈ ವರೆಗೆ ರಾಯನೂ, ಮಂತ್ರಿ ಪ್ರಧಾನರೂ ತಮ್ಮ ಆಸನಗಳ ಮೇಲೆ ಕುಳಿತುಕೊಳ್ಳುವರು. ಪಟ್ಟದ ಆನೆ, ಕುದುರೆ, ಹಸು, ಇವು ಮರ್ಯಾದೆಯಂತೆ ಮುಂದೆ ಬಂದು, ದೂರದಲ್ಲಿ ಬಾಗಿ ನಮಸ್ಕರಿಸುವವು. ಮಲ್ಲರ ದ್ವಂದ್ವಯುದ್ಧಗಳು ನಡೆಯುವವು. ಆ ಮೇಲೆ ಮೇಳತಾಳದಿಂದೊಡಗೂಡಿ ಪಲ್ಲಕ್ಕಿಯಲ್ಲಿ **ಚಂದ್ರಾಯುಧವು** ಬರುವುದು ಪುರೋಹಿತರೂ, ಜಗುಲಿಯ ಮೇಲಿದ್ದ ಮುಖ್ಯ ಸಭಿಕರೂ ರಾಯನೂ ಎದ್ದು ನಿಲ್ಲುವರು. ವೈದಿಕರು ಮಂತ್ರೋಚ್ಚಾರಣೆ ಮಾಡುತ್ತಿರಲು, **ರಾಯನು** ಭಕ್ತಿಯಿಂದ ಅದಕ್ಕೆ ಪೂಜೆಮಾಡಿ. ಮೊಳಕಾಲೂರಿ ಅದನ್ನು ಎರಡೂ ಕೈಗಳಿಂದ ಎತ್ತಿ ಹಿಡಿದು, ಹಣೆಗೆ ಹಚ್ಚಿ, ತಲೆಯ ಮೇಲಿಟ್ಟುಕೊಂಡು ಎದ್ದುನಿಂತು, ಅದನ್ನು ಬಲಹಿಡಿಯಿಂದ ಮೇಲೆತ್ತಿ ಝಳಪಿಸುವನು. 'ಜಯ ಜಯ! ಮಹಾರಾಜ!' 'ಜಯ ವಿಜಯನಗರಾಧೀಶ!!' 'ಜಯ ಶ್ರೀರಾಮರಾಜ!!!' ಎಂಬ ಜನರ ಕೂಗು....................

೩ ಒಂದು ಲೇಖವಾಚನ:—ಇವೆಲ್ಲವೂ ಮುಗಿಯಲು, ಮಹಾರಾಜನು ಸನ್ನೆ ಮಾಡಲು, ಪ್ರಧಾನಿಯು ಮುಂದೆ ಬಂದು ನಿಂತು ಒಂದು ಲೇಖವನ್ನೋದುವನು. ಈ ತೊಂಬತ್ತು ವರುಷದ ವಯಸ್ಸಿನಲ್ಲಿಯೂ, ಸುಲಕ್ಷಣವಾಗಿ ಸುಕ್ಕುಗಳಿಲ್ಲದೆ, ಗುಲಾಬಿಯ ರಂಗಿನಿಂದ ರಾಜಿಸುತ್ತಿದ್ದ **ರಾಮರಾಜನ** ಮುಖವು ಈಗ ವೀರ ಗಂಭೀರವಾಗಿದೆ. ಅದರ ಮೇಲೆ ತೆಳ್ಳನೆಯ ನೆಳಲು ಮುಸುಕಿದಂತಿದೆ. ಸ್ಥಿರ ಪ್ರತಿಜ್ಞೆಯ ಮುದ್ರೆಯಿದು ಎಂಬಂತಿರುವ ಆದವಡೆಯ ಮಾಟ. ಹುಬ್ಬುಗಳು ನಿಷ್ಠುರವಾಗಿವೆ; ಹುಬ್ಬುಗಳ ನಡುವೆ ಕುಂಕುಮ; ಕಣ್ಣುಗಳಿಂದ ಕಿಡಿ ಕಾರುವಂತಿದೆ; ನಿಮಿರಿ

ನಿಂತಿರುವ ಶ್ಮಶ್ರು; ಅಂಬಿನ ಅಲಗಿನಂತೆ ನೇರವಾದ ಕಾಯಭಂಗಿ; ಉತ್ಸವ ಕಾಲವಾಗಿದ್ದರೂ, ಬಹುಮಟ್ಟಿಗೆ ರಣಸಜ್ಜವಾದ ವೇಷ; ಕಾಠಿನ್ಯದ ಕಠಿನತೆಯನ್ನೆಯೆ ಕೀಳು ಮಾಡುವಂತಿದ್ದ ಆ ಮುಖದ ಅಚ್ಚು; ಇವುಗಳನ್ನು ನೋಡಿದವರ ವಿಸ್ಮಯ!

ಇದೇನಿರಬಹುದೆಂದು ಒಬ್ಬರ ಮುಖವನ್ನೊಬ್ಬರು ನೋಡುವರು. ಬಿಜಾಪುರ ಸುಲ್ತಾನ್ ಅದಿಲ್‌ಶಹ ಬರೆಸಿರುವ ಕೆಚ್ಚಿನ ಘೋರಣೆಯ ಪತ್ರವನ್ನು ಪ್ರಧಾನಿ ಓದುತ್ತಿರುವನು. ಮಧ್ಯೆ-ಮಧ್ಯೆ ಮಹಾರಾಜನು ತನ್ನ ಕಣ್ಣಿನ ಜ್ವಾಲೆಯನ್ನು ಸೈನಿಕರತ್ತ ತಿರುಗಿಸಿ ಖಡ್ಗದ ಹಿಡಿಯನ್ನು ಪ್ರಬಲತರವಾದ ಮುಷ್ಟಿಯಿಂದ ಹಿಡಿ-ಹಿಡಿಯುವ ಆವೇಶವೃತ್ತಿ!....

೪) **ರಾಯನ ವೀರವಾಣಿ:**— ಪತ್ರಪಠನ ಮುಗಿಯಿತು,ಕೂಡಲೆ ಕ್ರುದ್ಧನಾದ ಮಹಾರಾಜನು ವಜ್ರಕಂಪಿತ ಸ್ವರದಿಂದ 'ಕೇಳಿದಿರಾ! ಸರದಾರರೇ! ಪೌರರೆ! ಈ ವಾಕ್ಯಗಳನ್ನು! ವಿಜಯನಗರದ ದರ್ಪವೂ ಗೌರವವೂ ನಷ್ಟವಾಗಿ ಹೋಗಿರುವವೇನು? ನಮ್ಮ ತೋಳುಗಳಲ್ಲಿ ಬಲವಿಲ್ಲವೇನು! ಅಬ್ಬಾ! ಏನು ದುರಹಂಕಾರ? ಕಾಲ್ಕೆಳಗೆ ಹರಿದು ಹೋಗುವ ಹುಳಗಳು ಪ್ರಭುಕೇಸರಿಯನ್ನು ಧಿಕ್ಕರಿಸಿ ಮದೋನ್ಮತ್ತವಾಗಿರುವವೇ? ..ಆಗಲಿ, ಈ ಖಳಾಧಮರ ಸೊಕ್ಕು ಮುರಿಯಲು ರಾಮರಾಜನಿದ್ದಾನೆ! ವೀರಾಳುಗಳೇ! ಸೈನಿಕರೆ! ನಿಮ್ಮ ಪ್ರೇಮವನ್ನು ಇಂದು ರಣರಂಗದಲ್ಲಿ ತೋರಿಸಬೇಕಾಗುವುದು!... ಪ್ರಜೆಗಳೇ! ನಿಮ್ಮ ಅಬಲೆಯರಾದ ಸುತಾ-ಸತಿಯರ ಮಾನಕ್ಕೂ, ನಿಮ್ಮ ಧರ್ಮಕ್ಕೂ, ನಿಮ್ಮ ರಾಷ್ಟ್ರ ಕೀರ್ತಿಯ ಸ್ಥೈರ್ಯಕ್ಕೂ, ಬದ್ಧ ವೈರಿಗಳಿವರು! ಕೆಣಕಿ ಬಂದಿರುವರು! ಇವರ ಸೊಕ್ಕನ್ನು ಈಗಲೇ ಮುರಿಯಬೇಕು' ಎನ್ನುತ್ತಿರುವ ಆವೇಶದಿಂದೆದ್ದ ಸೈನಿಕರೆಲ್ಲರೂ ಖಡ್ಗಗಳನ್ನು ಒರೆಯಿಂದ ಹಿರಿದು ಮಹಾರಾಜನ ಪಾದದತ್ತ ನಿರ್ದೇಶಿಸಿ ತಲೆಬಾಗುತ್ತಾರೆ.

೫) **ಕೊನೆಯ ಪ್ರತಿಜ್ಞೆ:**—ಪ್ರಜೆಗಳಲ್ಲಿ ಯುವಕವೃದ್ಧರೆಲ್ಲರೂ ಏಕಕಂಠವಾಗಿ 'ನಾವೆಂದಿಗೂ ಹೇಡಿಗಳಾಗೆವು! ಮಹಾಸ್ವಾಮಿ! ಧಮನಿಯಲ್ಲಿ ಒಂದು ತೊಟ್ಟು ರಕ್ತ ಉಳಿದಿರುವವರೆಗೂ, ದೇಹದಲ್ಲಿ ಕಡೆಯ

ಉಸಿರು ಇರುವವರೆಗೂ, ತಮ್ಮ ಅನುಗಾಮಿಗಳಿದ್ದು ಜಯಸಾಧಿಸುವೆವು' ಎನ್ನುತ್ತಿರುವಾಗಲೆ ಸಭೆಯು ಮುಗಿಯಿತು-ಎಚ್ಚರವಾಯಿತು.

ವೀ. ಸಿ.

೩. ರೂಪಾಯಿಯ ಆತ್ಮಕಥನ

ನಾನು ಚಿಕ್ಕಮಕ್ಕಳ ಚಕ್ಕಂದದ ಆಟದ ಒಡವೆಯು. ನಾನು ಹರೆಯದ ಹುಡುಗರ ಜೀವಪ್ರಾಣನು; ಮದದ ಮೂರ್ತಿಯು. ನಾನು ಮುಪ್ಪಿನವರ ಮುಪ್ಪಿನ ಕಾಲದ ಕೈಗೋಲು; ಆಶ್ರಯದಾತನು, **ನಾನು ರೂಪಾಯಿ!**

ಮನುಷ್ಯನು ನನ್ನ ದಾಸಾನುದಾಸನು. ನಾನು ಅವನನ್ನು ಸಾವಿರಾರು ಸಲ ಕುಣಿಸಬಲ್ಲೆನು, ಕುಣಿಸಿದ್ದೇನೆ. ಪ್ರಪಂಚವು ನನ್ನಿಂದ ಪಾದಾಕ್ರಾಂತ ಮಾಡಲಾಗಿದೆ. ನಾನು ಅದನ್ನು ಬುಡಮೇಲು ಮಾಡಬಲ್ಲೆ,--ಮಾಡಿದ್ದೇನೆ-ಮಾಡುತ್ತಿದ್ದೇನೆ. ಪ್ರಕೃತಿಯು ನನ್ನ ವಶದಲ್ಲಿರುವಳು. ನಾನು ಅವಳನ್ನು ಸೃಜಿಸಬಲ್ಲೆ, ಕೆಡಿಸಬಲ್ಲೆ, ಮಣಿಸಬಲ್ಲೆ; **ನಾನು ರೂಪಾಯಿ!**

ನನ್ನ ಝುಂಕಾರದಲ್ಲಿರುವ ಅಲೌಕಿಕವಾದ ಇಂಪು ವೀಣಾಪಾಣಿಯು ಆ ವೀಣೆಯಲ್ಲಿ ಇದೆಯೆ? ಭಗವಾನ್ ಲಕ್ಷ್ಮೀಪತಿಯ ಪಾಂಚಜನ್ಯ ಶಂಖದಲ್ಲಿ ಇದೆಯೆ? ಮುರಲೀಧರನ ಮುರಲಿಯಲ್ಲಿ ಇದೆಯೆ? ಕೈಲಾಸಪತಿಯ ಡಮರುವಿನಲ್ಲಿ ಇದೆಯೆ? ಕಾಮಿನಿಯರ ಕೋಮಲ ಕಂಠಗಳಲ್ಲಿ ಇದೆಯೆ? ಅಲ್ಲಿ ಇದೆಯೆ ? ಇಲ್ಲಿ ಇದೆಯೆ? ನಾನು ಸಪ್ತಸ್ವರಗಳಿಗಿಂತ ಮೇಲಿನವನು; ಅಷ್ಟಮಸ್ವರನು; ಅತ್ಯಂತ ಮಧುರನು. **ನಾನು ರೂಪಾಯಿ!**

ದೇವರು ಮಾತಾಡುವದಿಲ್ಲ. ನಾನು ಮಾತನಾಡುತ್ತಿದ್ದೇನೆ. ಅವನಿಗಿಂತ ನಾನು ದೊಡ್ಡವನು. ದೇವರು ನಡೆಯುವದಿಲ್ಲ; ನಾನು ನಡೆಯುತ್ತೇನೆ. ನನ್ನಲ್ಲಿರುವ ತೇಜಸ್ಸು, ಶಕ್ತಿ ಪರಮಾತ್ಮನಲ್ಲಿಲ್ಲ ಈ ಯುಗವು ಭೌತಿಕ ಯುಗವು, ತರ್ಕದ ಯುಗವು. ನಾನು ಪ್ರತ್ಯಕ್ಷನು, ಫಲವನ್ನು ಕೊಡತಕ್ಕವನು; ಸ್ವಯಂಪ್ರಭುವು; ಆಕರ್ಷಕನು ಈಶ್ವರನು; ಈಶ್ವರನಿಗಿಂತಲೂ ದೊಡ್ಡವನು. **ನಾನು ರೂಪಾಯಿ.**

ನನ್ನಿಂದ ವರವನ್ನು ಬೇಡಿಕೊಂಡು ಪಾಪವನ್ನೇ ಮಾಡಿರಿ: ಎಂದರೆ ದೇವತೆಗಳಿಂದ ಪೂಜಿಸಲ್ಪಡುವಿರಿ. ನನ್ನಿಂದ ವರವನ್ನು ಪಡೆದುಕೊಂಡು ಹತ್ತೆಂಟು ಕೊಲೆಮಾಡಿರಿ. ಉಳಿದುಕೊಳ್ಳುವಿರಿ. ಸಾಮ್ರಾಜ್ಯದೊಡನೆ ಸಾಮ್ರಾಜ್ಯವನ್ನು ಕಾದಾಡಿಸಿರಿ. ಮನುಷ್ಯತ್ವದ ಬೆಳೆದ ಬೆಳೆಯನ್ನು ನಿರ್ದಯತನದಿಂದ ಕೊಯ್ದು ಬಿಡಿರಿ. ಸ್ತ್ರೀಯರ ಮರ್ಯಾದೆಯನ್ನು ತಾಸೆರಡು ತಾಸಿಗೆ ಒಂದು ಸೇರಿನಂತೆ, ದಿನದಲ್ಲಿ ಹತ್ತು ಸಾರೆ ಕೊಳ್ಳಿರಿ, ಹತ್ತು ಸಾರೆ ಮಾರಿರಿ. ಜಗತ್ತನ್ನು ವಿಧವೆಯರ, ಚಿಕ್ಕಮಕ್ಕಳ, ಮುದುಕರ ಅಂಗಹೀನರ ಹಾಹಾಕಾರದಿಂದ ತುಂಬಿಬಿಡಿರಿ. ಭೂಕಂಪವನ್ನೂ ಪ್ರಳಯವನ್ನೂ ಮಾಡಿಸಿರಿ. ಏನು ಬೇಕಾದ್ದನ್ನು ಮಾಡಿರಿ. ನಾನು ಸರ್ವಶಕ್ತ, ಸರ್ವಮುಕ್ತ. **ನಾನು ರೂಪಾಯಿ.**

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ!

ಶ್ರೀ. ದೇ. ಪಾ. ರವರಿಂದ
ಅನುವಾದಿತ.

೪ ನಾನು ಅರಸನಿದ್ದರೆ—

೧) **ಉಪಕ್ರಮ**; — ಶತಕಾನುಶತಕಗಳಾದವು. ನಮ್ಮ ಅರಸರು ನಿರಂಕುಶರಾಗಿ ಆಳುತ್ತ ಬಂದಿರುವರು. ಆದರೆ ಈಗ ಕಾಲಚಕ್ರವು ತಿರುಗಿದೆ. ಅರಸರು ಕಣ್ಣುತೆರೆದು ನೋಡುವ ಪ್ರಸಂಗವೊದಗಿದೆ. ಈ ದಿನಗಳಲ್ಲಿ ನಾನೊಬ್ಬ ಅರಸನಿದ್ದರೆ—

೨) **ಅಂತರ್ನಿರೀಕ್ಷಣ**:—ಮೊದಲು ನಾನು ಆತ್ಮನಿರೀಕ್ಷಣೆಮಾಡಿಕೊಳ್ಳುತ್ತಿದ್ದೆನು; ಆಗ ಅದಾವ ನೋಟವು ನನ್ನ ಒಳಗಣ್ಣಿನೆದುರು ನಿಲ್ಲುವುದು? ' ಇದೇನು? ಇಷ್ಟು ದಿನ ಪ್ರಜೆಗಳಲ್ಲಿ ಅದೆಷ್ಟೊಂದು ನನ್ನ ಬಗ್ಗೆ ಪ್ರೀತಿ? ಎಷ್ಟೊಂದು ವಿನಯ! ಎಷ್ಟೊಂದು ಅಭಿಮಾನ! ಆದರೆ ಕಾಲವು ಬದಲಾಯಿತು. ರಾಜಯುಗವು ಅಳಿದು ಪ್ರಜಾಯುಗವು ಪ್ರಾಪ್ತವಾಯಿತು. ಪ್ರಜೆಗಳ ದೃಷ್ಟಿಯಲ್ಲಿಯೂ ಬದಲಾಯಿತು. ಈಗ ನಾನೊಬ್ಬ ಸ್ವಾರ್ಥದ ತವರುಮನೆ, ವಿಷಯಲೋಲುಪತೆಯ ಪುತ್ತಳಿ ಅವರಿಗೆ. ಪ್ರಜೆಗಳು ಹೀಗೆ ಏರಿ ನಡೆಯುವದನ್ನು ನೋಡಿದರೆ ನನಗೆ ಒಮ್ಮೊಮ್ಮೆ ಬಹಳ ಸಿಟ್ಟು ಬರುವದು. ಇವರನ್ನು ಗುಂಡಿನೇಟಿನಿಂದ

ನಡುಗಿಸಿ ಬಿಡಲೋ, ಎಂದು ಒಮ್ಮೆ ಎನಿಸುವದು. ಮರುಕ್ಷಣದಲ್ಲಿ ಮತ್ತೆ ಬೇಡವೆನಿಸುವದು.

೩ ಎನೆಯ **ಕೋಲಾಹಲ:**— ಹೀಗೆ ವಿಚಾರ ಮಾಡಿ ಮಾಡಿ ದಣಿದು ನಿದ್ರೆ ಬರುವದು. ಆದರೂ ಪ್ರಜೆಗಳ ಕೋಲಾಹಲವು ದೂರಿನಿಂದ ಕೇಳಬಂದಂತೆ ಭಾಸವಾಗುವದು. ತಲೆದಿಂಬಿನಲ್ಲಿ ಏನೋ ಚುಚ್ಚಿದಂತಾಗಿ ರಾತ್ರಿ ಎಚ್ಚರವಾಗುವದು. ನನ್ನ ಪ್ರಜೆಗಳಿಗೆ ಮಲಗಲು ಒಂದು ಹರಕು ಚಾಪೆಯಾದರೂ ಸಿಕ್ಕುವದೋ ಎಂಬ ವಿಚಾರವು ಇರುಳು ತುಂಬ ಕಾಡುವುದು. ಉಣ್ಣುವಾಗ ತುತ್ತು ಕುತ್ತಿಗೆಯಲ್ಲಿ ಸಿಕ್ಕಂತಾಗಿ ಬಿಕ್ಕು ಬರುವದು. ನನ್ನ ಪ್ರಜೆಗಳಿಗೆ ಒಣ ರೊಟ್ಟಿಯಾದರೂ ಸಿಕ್ಕುವದೋ? ಎಣ್ಣೆ ಬೆಣ್ಣೆ ಒಣಿಗೆಯಿಲ್ಲದೆ ಆ ರೊಟ್ಟಿಯು ಕುತ್ತಿಗೆಯಲ್ಲಿ ಹೀಗೆಯೇ ಸಿಕ್ಕಲಿಲ್ಲವೇ? ಎಂದೆನಿಸುವುದು. ಚಿತ್ರವಿಚಿತ್ರವಾದ ಬಣ್ಣದ ದೀಪಗಳನ್ನು ಹಚ್ಚಿಕೊಂಡು ವಿಲಾಸಮಹಾಲಿನಲ್ಲಿರುವಾಗ, ತಮ್ಮ ಹರಕು ಗುಡಿಸಲಲ್ಲಿ ಹಚ್ಚಲು ಒಂದು ಮಿಣಿ ಮಿಣಿ ದೀಪವಾದರೂ ನನ್ನ ಪ್ರಜೆಗಳಿಗೆ ಸಿಕ್ಕುವದೋ ಎಂಬ ವಿಚಾರವು ಹೊಳೆದೊಡನೆ ಒಮ್ಮೆಲೆ ಕಣ್ಣಿಗೆ ಕತ್ತಲೆ ಕಟ್ಟಿದಂತಾಗುವದು.

ಈ ರೀತಿ ಒಂದಲ್ಲ, ಎರಡಲ್ಲ, ಬೇಕಾದಷ್ಟು ಅನುಕೂಲತೆಗಳಿದ್ದರೂ ನನ್ನ ಬಾಳೆ ಹಾಳಾದಂತೆ ನನಗೆ ಭಾಸವಾಗತೊಡಗಿತು. ಇನ್ನು ಜೀವನದಲ್ಲಿ ಹುರುಳಿಲ್ಲ ಹರ್ಷವಿಲ್ಲ ಎಂದೆನಿಸಿತು. ಏನು ಮಾಡಬೇಕು? ಹರ್ಷವಿಲ್ಲದ ಜೀವ, ವಾಸನೆಯಿಲ್ಲದ ಹೂವು, ರಸವಿಲ್ಲದ ಕಾವ್ಯ, ಇವು ತಿಪ್ಪೆಗೆ ಒಗೆಯತಕ್ಕವು; ಹಾಗೆ **ಪ್ರಜೆಗಳ ರಂಜನೆ ಇಲ್ಲದ ರಾಜನು ತ್ಯಾಜ್ಯನು,** ಕಸಕಡ್ಡಿಗಿಂತ ಕಡೆಯವನು.

೩) ಕ್ರಾಂತಿ:—ಹೀಗಿರುವಾಗ ಒಂದು ದಿನ ಕನೋಜದ ಅರಸನಾದ ಸಾಮ್ರಾಟ ವಿಷ್ಣುವರ್ಧನನ ಕಥೆಯೋದಿ ಮನಸ್ಸಿಗೆ ಅಲ್ಹಾದವೆನಿಸಿತು. ಅವನು ಐದು ವರ್ಷಕ್ಕೊಮ್ಮೆ ತನ್ನ ಬೊಕ್ಕಸವನ್ನೆಲ್ಲ ಖಾಲಿಮಾಡಿ ಎಲ್ಲ ಧನವನ್ನು ಪ್ರಜೆಗಳಿಗೆ ಹಂಚಿಬಿಡುತ್ತಿದ್ದನಂತೆ! ನಾನೂ ಒಬ್ಬ ಅರಸನು. ಇದು ನನ್ನ ಸೊತ್ತೆಂದು ತಿಳಿದು, ಇಷ್ಟು ದಿನ ಕಷ್ಟಪಟ್ಟೆನು.

ಇದು ಪ್ರಜೆಗಳದು, ಅವರದು ಅವರಿಗೆ ಒಪ್ಪಿಸಲು ನನಗೆ ಇಷ್ಟೇಕೆ ಸಂಕಟ? ಆಯ್ತು! ಮನಸ್ಸಿನ ನಿರ್ಧಾರವಾಯಿತು.

೪) **ನವಜನ್ಮ**:-ಮಾರನೆಯ ದಿನವೆ ದಸರೆಯಿತ್ತು. ಅಂದು ದೊಡ್ಡ ದರ್ಬಾರಾಗುವದೆಂದು ಸಂಸ್ಥಾನದ ಮೂಲೆ ಮೂಲೆಗಳಲ್ಲಿ ಸಾರಿದೆನು. ನಾನು ಆ ದಿನ ಏನು ಮಾಡಬಹುದೆಂಬುದು ಯಾರಿಗೂ ತಿಳಿದಿರಲಿಲ್ಲ. ವಾಡಿಕೆಯಂತೆ ನನ್ನ ಸಿಂಗರಿಸಿದ ಮೋಟಾರಿನಲ್ಲಿ ನಾನು ಬರುವೆನೆಂದು ಎಲ್ಲರೂ ತಿಳಿದಿದ್ದರು. ಆದರೆ ನಾನೊಂದು ಬಂಡಿಯಲ್ಲಿ ಕುಳಿತು ಬಂದೆನು. ಮುತ್ತುರತ್ನಗಳ ಮುಂಡಾಸವನ್ನೂ ಪಚ್ಚಹವಳಗಳ ಮಾಲೆಯನ್ನೂ ಧರಿಸದೆ, ಶುದ್ಧ ಖಾದೀವಸ್ತ್ರವನ್ನು ಧರಿಸಿ ನಾನು ಸಭಾಸ್ಥಾನಕ್ಕೆ ಬಂದೆನು. ಸಭಿಕರೆಲ್ಲ ಸ್ತಿಮಿತರಾದರು. ಹಲವರು ನನಗೆ ಹುಚ್ಚು ಹಿಡಿಯಿತೆಂದರು. 'ನಾನು ನಿಮ್ಮನ್ನಾಳಲು ಅಯೋಗ್ಯನು. ಇದೆಲ್ಲ ನಿಮ್ಮದು. ಈಗದನ್ನು ನಿಮಗೆ ಒಪ್ಪಿಸುವೆನು' ಎಂದು ಸಿಂಹಾಸನದಿಂದಿಳಿದು ಪ್ರಜೆಗಳೆದುರಿಗೆ ಕೈಜೋಡಿಸಿ ನಿಂತೆನು.

ಆ ದಿನ ನನ್ನ ಅರಸೊತ್ತಿಗೆಯು ತಿರುಗಿ ಬಂದಿತು. ಅಂದಿನಿಂದ ನಾನು ನಿಜವಾದ ರಾಜನಾದೆನು. ಪ್ರಜೆಗಳೆಲ್ಲರೂ ತಮ್ಮ ಪ್ರತಿನಿಧಿಗಳನ್ನಾರಿಸಿ ನನ್ನನ್ನು ಮುಖ್ಯ ಪ್ರತಿನಿಧಿಯನ್ನಾಗಿ ಮಾಡಿದರು. ಅಂದಿನಿಂದ **ಪ್ರಜಾಪಾಲಿತನೆಂಬ** ಬಿರುದು ನನಗೆ ಕೊಡಲಾಯಿತು.

೫) **ಉಪಸಂಹಾರ**:—ಕಾಲಚಕ್ರಕ್ಕೆ ತಲೆಬಾಗಿ ಸತ್ಯಪಕ್ಷವನ್ನು ಹಿಡಿದು ನಡೆಯುವುದೇ ವಿಹಿತಲ್ಲವೇ?

—ರಂಗರಾವ ದಿವಾಕರ.

ಅಭ್ಯಾಸ ೧೩

ಮುಂದಿನ ವಿಷಯುವನ್ನು ಕುರಿತು ನಿಬಂಧಗಳನ್ನು ಬರೆಯಿರಿ—

೧ ವಸಂತರಾಯನ ಆಗಮನ. ಕುರುಡು ಕಾಂಚಾಣದ ಕುಣಿತ. ಚಿಂತೆಯ ಸಂತೆ. ೨ ಇಂದಿನ ಕನ್ನಡಿಗರ ಸವಿಗನಸು. ಬಾಲವಿಧವೆಯ ಕನಸು. ನಿರ್ಗತಿಕ ತರುಣರ ಕನಸು. ೩ ಕತ್ತೆಯ ಆತ್ಮವೃತ್ತಾಂತ. ಗೋವಿನ ಜನ್ಮಕಥೆ. ಮೀಸೆಯ ಆತ್ಮವೃತ್ತ. ೪ ನಾನು ಶಿಕ್ಷಣಮಂತ್ರಿಯಾದರೆ, ನಾನು ಕನ್ನಡ ವೀರನಾದರೆ, ನಾನು ಕವಿಯಾದರೆ—

ಅಭ್ಯಾಸ ೧೪

ಕೆಳಗಿನ ವಿಷಯುಗಳನ್ನು ಕುರಿತು ನಿಬಂಧಗಳನ್ನು ಬರೆಯಿರಿ. ಮುಂಬಯಿ ವಿಶ್ವವಿದ್ಯಾನಿಲಯುದ ಮೆಟ್ರಿಕ್ ಪರೀಕ್ಷೆಯಲ್ಲಿಯ ಪ್ರಶ್ನೆ ಪತ್ರಿಕೆಗಳಿಂದ ಇವುಗಳನ್ನು ಆಯ್ದುಕೊಳ್ಳಲಾಗಿದೆ. ಮಗ್ಗುಲಿಗೆ ಕಾಣಿಸಿದ ಅಂಕಿಗಳು ವರ್ಷವನ್ನು ಸೂಚಿಸುವವು.

೧೯೨೭:—

೧ ಶರೀರ ವ್ಯಾಯಾಮದ ಮಹತ್ವ. ೨ ನೀನು ಕಂಡ ಅಂದವಾದ ಸ್ಥಲ. ೩ ಜನ ಸಂದಣಿಯಿಂದ ಕೂಡಿದ ರಾಜಪಥ. ೪ ಬಾಲವೀರ ಚಳವಳಿ.

೧೯೨೮:—

೧ ನೀನು ಅರಸನಾದರೆ ಜನತೆಯ ಕಲ್ಯಾಣವನ್ನು ಹೇಗೆ ಮಾಡುವಿ ? ೨ ನಿಮ್ಮ ಜನಾಂಗದ ವರ್ಷಾರಂಭದ ಹಬ್ಬ. ೩ ಮಿಂಚಿನ ಅದ್ಭುತ ಶಕ್ತಿ. ೪ ಶಾಲೆಯಲ್ಲಿಯ ಗೆಳೆತನ.

೧೯೨೯:—

೧ ಎಂಥ ಕ್ಷುದ್ರವಿದ್ದರು-ಮನೆಯಂಥ ಸ್ಥಲವಿಲ್ಲ. ೨ ಶಾಲೆಯ ವಿವಾದಮಂಡಲ. ೩ ನನ್ನ ಸಂತಸದ ಸಂಚಾರ.

೧೯೩೩:—

೧ 'ನನಗೆ ೧೦೦೦ ರೂಪಾಯಿ ದೊರೆತರೆ ನಾನು ಏನು ಮಾಡಬಹುದು ?' ೨ ವಿಶ್ರಾಂತಿಯನ್ನು ಸರಿಯಾಗಿ ಉಪಯೋಗಿಸುವ ರೀತಿ. ೩ ಮೆರವಣಿಗೆ. ೪ ಕಾಲ್ನಡಿಗೆಯ ಪ್ರವಾಸ. ೫ ಹುಟ್ಟಿಸುಳಿ ಸುಟ್ಟರು ಹೋಗದು. ೬ ಪುರುಷ-ಪ್ರಯತ್ನ-ದೈವಾಯತ್ತ. ೭ ಕನ್ನಡದಲ್ಲಿ ಅಭಿರುಚಿ ಹೆಚ್ಚಿಸುವ ಬಗೆ. ೮ ಕನ್ನಡ ನಾಡಿನಲ್ಲಿ ಒಕ್ಕಟ್ಟಿನ ಅವಶ್ಯಕತೆ.

೧೯೩೪:—

೧ ಸಜ್ಜನರ ಸಂಗವು ಹೆಜ್ಜೇನು ಸವಿದಂತೆ. ೨ ಹಳ್ಳಿಗಳ ಸುಧಾರಣೆ. ೩ ನನ್ನ ಮೋಟರದಲ್ಲಿಯ ಮೊದಲನೆಯ ಪ್ರವಾಸವು.

೧೯೩೫:—

೧ 'ಮಾತು ಬಲ್ಲವ ಮಾಣಿಕತಂದ' ೨ ಕನ್ನಡಿಗನ ವಾಚನಾಭಿರುಚಿಯೂ ಅದನ್ನು ಬೆಳಿಸುವ ಉಪಾಯವೂ. ೩ ಪ್ರೌಢವಿವಾಹವೂ ಅದರ ಗುಣದೋಷಗಳೂ. ೪ ಬರಗಾಲದಲ್ಲಿ ಕಾಣಬಹುದಾದ ನೋಟ.

೧೯೩೬:—

೧ ನೀವು ನೋಡಿದ ಐತಿಹಾಸಿಕ ಸ್ಥಳ. ೨ ಚಲನಚಿತ್ರಗಳಿಂದ ಸಮಾಜಕ್ಕಾಗುವ ಪ್ರಯೋಜನ. ೩ ಕನ್ನಡಿಯೊಳಗಿನ ಗಂಟಿಗಿಂತ ಕೈಯೊಳಗಿನ ದಂಟೇ ಲೇಸು. ೪ ಯುದ್ಧವು ದೇಶಹಿತಸಾಧಕವೊ ಬಾಧಕವೊ. ೫ ಮಕ್ಕಳ ಶಿಕ್ಷಣ ಮನೆಯಲ್ಲಿ. ೬ ದೀನನ ಸಿರಿಗಿಂತ ದಾಸಿಯ ಬಡತನವೇ ಲೇಸು.

೧೯೩೭:—

೧ ಇಂದಿನ ಜೀವನದ ಸುಖಸಾಧನಗಳು. ೨ ಆದರ್ಶ ವಿದ್ಯಾರ್ಥಿಯ ಜೀವನ. ೩ ಕನ್ನಡದ ಏಳ್ಗೆಯ ಬಗ್ಗೆ ತರುಣರ ಕರ್ತವ್ಯ. ೪ ದಯವೇ ಧರ್ಮದ ಮೂಲ.

೧೯೩೮:—

೧ ನಾನು ಮೆಚ್ಚಿದ ಕವಿ. ೨ 'ಲಾಟರಿಯಲ್ಲಿ ನನಗೆ ಒಂದು ಲಕ್ಷ ರೂಪಾಯಿಗಳು ದೊರೆತರೆ ಆ ಹಣವನ್ನು ನಾನು ಹೇಗೆ ವೆಚ್ಚ ಮಾಡುವೆನು.' ೩ ಇನ್ನು ಬರಬಹುದಾದ ಮಹಾಯುದ್ಧ. ೪ ನಾನು ನೋಡಿದ ಜಾತ್ರೆ ಇಲ್ಲವೆ ಪ್ರದರ್ಶನ.

ನಾಲ್ಕನೆಯ ಭಾಗ–ಬೇರೆ ಬರಹಗಳು

೧ ಪೀಠಿಕೆ

ವಿಷಯ ವಿವರ:—ಇಲ್ಲಿ ಬೇರೆ ಕೆಲವು ಮಹತ್ವದ ಲೇಖನ ಪ್ರಭೇದಗಳ ವಿಷಯವಾಗಿ ವಿಚಾರಿಸಬೇಕಾಗಿದೆ. ಅವೆಲ್ಲ ನಮ್ಮ ನವ ಜೀವನಕ್ಕೆ ಅವಶ್ಯಕವಾದವುಗಳು. ಅವನ್ನು ಪರಿಶ್ರಮಪೂರ್ವಕವಾಗಿ ಅಭ್ಯಸಿಸಿ, ಪ್ರತಿಯೊಬ್ಬರು ಕೈವಶಮಾಡಿಕೊಳ್ಳಬೇಕು. (೧) ಅವುಗಳಲ್ಲಿ **ಓಲೆಗಳಂತೂ** ನಮ್ಮ ದೈನಂದಿನ ಜೀವನದಲ್ಲಿಯ ಅತಿ ಅಗತ್ಯದ ವಿಷಯ. ಆದುದರಿಂದ ಅವರ ಬೇರೆ ಬೇರೆ ಬಗೆಗಳ ಪರಿಚಯವನ್ನು ಮೊದಲು ಮಾಡಿಕೊಡಲಾಗಿದೆ. (೨) ನಾವು ಪ್ರತಿದಿನ ನಮ್ಮ ಬಂಧುಗಳೊಡನೆಯೂ ಬೇರೆ ಜನರೊಡನೆಯೂ ನಡೆಯಿಸುವಂಥ **ಸಂವಾದವನ್ನು** ಬರೆದಿಡುವ ರೂಢಿಯಿಂದ ಅದರಲ್ಲಿಯ ಕೌಶಲ್ಯವು ಹೆಚ್ಚುವುದುಂಟು. ಮತ್ತು ಇದರಲ್ಲಿ ಪ್ರಗತಿಹೊಂದಿದವರಿಗೆ ನಾಟಕ ಬರೆಯುವ ಕೈವಾಡವೂ ಅವಗತವಾಗುವುದು. (೩) ನಮ್ಮ ವಿಶಾಲವಾಗಲಿರುವ ಜೀವನದಲ್ಲಿ ಪ್ರಪಂಚದಲ್ಲಿಯ ಎಲ್ಲ ಬುದ್ಧಿವಂತರ ಜ್ಞಾನದ ಅವಶ್ಯಕತೆಯು ಅಷ್ಟಿಷ್ಟಲ್ಲ. ಅದನ್ನೆಲ್ಲ ನಮ್ಮ ನುಡಿಯಲ್ಲಿ ತರಬೇಕಾದರೆ ನಮ್ಮಲ್ಲಿ

ಭಾಷಾಂತರ ನೈಪುಣ್ಯವು ಇರಲೇಬೇಕು. ಆದುದರಿಂದ ಅದನ್ನು ಮುಂದೆ ವಿವರಿಸಿರುವೆವು. ಕೊನೆಗೆ (೪) ಗದ್ಯವಾಗಲಿ, ಪದ್ಯವಾಗಲಿ ಯಾವುದೆ ಬರಹವಿರಲಿ, ಅದನ್ನು ಚನ್ನಾಗಿ ವಿಮರ್ಶಿಸಿ ಅದರ ರಸವನ್ನು ಸವಿಯುವ ಶಕ್ತಿಯೂ ಪ್ರತಿಯೊಬ್ಬರಿಗೆ ಬೇಕೇಬೇಕು. ಈ **ಗುಣಗ್ರಹಣವು** ಅಭ್ಯಾಸದಿಂದ ಬಲಿಯುವ ಶಕ್ತಿ. ಅದು ಸರಿಯಾಗಿ ಬಲಿಯಿತೆಂದರೆ ನಮಗೆ **ಕಸವಾವುದು ರಸವಾವುದು** ತಿಳಿಯುವದು. ಮತ್ತು ನಾವು ನಮ್ಮೆದುರಿಗಿದ್ದ ಸಾಹಿತ್ಯದ ಬೆಲೆಯನ್ನು ಕಟ್ಟಲು ಸಮರ್ಥರಾಗುವೆವು. ಅದಿಲ್ಲದಿದ್ದರೂ ಅದರ ರುಚಿಯನ್ನು ಸವಿಯಲಂತೂ ಕಲಿತೇ ತೀರುವೆವು. ಆದುದರಿಂದ ಅದರ ವಿಷಯವಾಗಿಯೂ ಸಾಧ್ಯವಿದ್ದಷ್ಟು ಸಂಕ್ಷೇಪದಿಂದ ಕೆಲಮಾತುಗಳನ್ನು ಹೇಳಿ ಈ ವಿಭಾಗವನ್ನು ಮುಗಿಸುವೆವು.

೨ ಓಲೆಗಳು

೧ **ಅಂದರೇನು ? :—ಓಲೆಗಳೆಂದರೆ** ಪತ್ರಗಳು, ಕಾಗದಗಳು. ನಿತ್ಯದ ವ್ಯವಹಾರದಲ್ಲಿ ನಾವು ಅವನ್ನು ಬರೆದು ದೂರದಲ್ಲಿದ್ದ ಸಂಬಂಧಿಕರಿಗೆ ನಮ್ಮ ವಾರ್ತೆಯನ್ನಾಗಲಿ ಅಭಿಪ್ರಾಯವನ್ನಾಗಲಿ ತಿಳಿಸುವೆವು. ಅದೇ ಮೇರೆಗೆ ಅವರಿಂದಲೂ ನಮಗೆ ಬೇಕಾದ ಅರಿಕೆಯನ್ನು ಕೇಳಿಕೊಳ್ಳುವೆವು. ಆದುದರಿಂದ ಅದೊಂದು ದೂರ ದೂರ ಅಗಲಿದ್ದ ಜನರಲ್ಲಿಯ ಸಂವಾದವೆಂದರೂ ಸಲ್ಲುವುದು. ಪ್ರತ್ಯಕ್ಷ ನಡೆದುದಲ್ಲ, ಕಾಗದದ ಮುಖಾಂತರ ಸಾಗಿದುದು ಇಷ್ಟೇ !

೨ ಬಗೆಗಳು: — ನಾವು ದಿನಾಲು ಅನೇಕ ಜನರೊಡನೆ ಸಂಭಾಷಣೆಯನ್ನು ಮಾಡುವಂತೆ ಅನೇಕರೊಡನೆ ಪತ್ರವ್ಯವಹಾರವನ್ನು ನಡೆಸುವೆವು. ಅವರಲ್ಲಿ ಹಿರಿಯರಿರಬಹುದು ಕಿರಿಯರಿರಬಹುದು; ಪರಿಚಿತರಿರಬಹುದು, ಅಪರಿಚಿತರಿರಬಹುದು; ವರ್ತಕರಿರಬಹುದು, ಅಧಿಕಾರಸ್ಥರಿರಬಹುದು; ಪುರುಷರಿರಬಹುದು, ಸ್ತ್ರೀಯರಿರಬಹುದು. ಅವರವರಿಗೆ ಬರೆಯಬೇಕಾದ ರೀತಿಯಲ್ಲಿಯೂ ಒಕ್ಕಣಿಕೆಯಲ್ಲಿಯೂ ಭೇದವಿರುವುದು. ಮಾತಿನಲ್ಲಿಯೂ ಹೀಗೆಯೇ ಆಗುವದಿಲ್ಲವೇ? ಕೆಲವರೊಡನೆ ನಾವು ಮನಬಿಚ್ಚಿ ನುಡಿಯುವೆವು, ಕೆಲವರೊಡನೆ ನಡೆದ ಮಾತು ತೀರ ಔಪ

ಚಾರಿಕ. ಮೇಲಾಗಿ ಆಯಾ ಜನರಿಗೆ ಆಯಾ ರೀತಿಯಿಂದ ಮರ್ಯಾದೆಯನ್ನು ತೋರಿಸುವುದು ಶಿಷ್ಟಾಚಾರ. ಆದುದರಿಂದ ಇವೆಲ್ಲ ಸಂಗತಿಗಳ ಮೂಲಕವೂ ವ್ಯವಹಾರದ ಸ್ವರೂಪ-ಭಿನ್ನತೆಯ ಮೂಲಕವೂ ನಮ್ಮ ಕಾಗದಗಳ ರೀತಿಯಲ್ಲಿ ಬದಲಾವಣೆಗಳಾಗುವುದು ಅಪರಿಹಾರ್ಯ. ಈ ರೀತಿಯನ್ನು ಅನುಲಕ್ಷಿಸಿ ಕಾಗದಗಳಲ್ಲಿ ಎರಡು ವರ್ಗಗಳನ್ನು ಕಲ್ಪಿಸಬಹುದು. (ಅ) **ಒಂದು ಪ್ರಾಪಂಚಿಕ;** (ಆ) **ಇನ್ನೊಂದು ವ್ಯಾವಹಾರಿಕ.**

ಅ) **ಪ್ರಾಪಂಚಿಕ** ಓಲೆಗಳು ನಮ್ಮ ಬಂಧುಬಳಗದವರಿಗೆ, ಆಪ್ತೇಷ್ಟರಿಗೆ ಬರೆದವುಗಳು. ಅವುಗಳಲ್ಲಿ ನಾವು ನಮ್ಮ ಪ್ರಾಪಂಚಿಕ ಸುಖದುಃಖಗಳನ್ನೂ, ಎಡೆ-ತಡೆಗಳನ್ನೂ ಮುಚ್ಚುಮರೆಯಿಲ್ಲದೆ ತೋಡಿಕೊಂಡಿರುವೆವು. ನಮ್ಮ ಸ್ವಂತ ಜೀವನದ ಎಲ್ಲ ವಿಷಯಗಳನ್ನು ಅವರಿಗರುಹಿ ಅವರ ವೃತ್ತಾಂತವನ್ನರಿತುಕೊಳ್ಳಲು ಹವಣಿಸುವೆವು. ಆದುದರಿಂದ ಅವುಗಳಲ್ಲಿ ಪ್ರತಿಸಾಲಿನಲ್ಲಿ **ಕಳಕಳಿಯು ಹೊರಸೂಸ**ಬೇಕು. ಅವು **ಬರೆದ ಮಾತು**ಗಳಂತಿರಬೇಕು. **ಮಾತಿನ ಸಹಜ ಸರಲತೆಯು** ಅಲ್ಲಿ ಕಂಗೊಳಿಸಬೇಕು. ಆದರೂ ಅದರಲ್ಲಿ ಒಂದು ಕ್ರಮ, ತರ್ಕಬದ್ಧತೆ ಇರಲು ಬೇಕು.

ಆ) **ವ್ಯಾವಹಾರಿಕ** ಒಲೆಗಳು ಅಪರಿಚಿತರೊಡನೆ ನಡೆಸಿದ, ನಡೆಯಿಸಬೇಕಾದ ವ್ಯವಹಾರದ ಒಂದು ಸಾಧನ. ವ್ಯವಹಾರವು ಸರಿಯಾಗಿ ಸಾಗಲು ಅವಶ್ಯಕವಾದ **ತಿಳಿವು ಅವುಗಳ**ಲ್ಲಿದ್ದರೆ ಸಾಕು. ನಮ್ಮ ಅಭಿಪ್ರಾಯವು ಅವರಿಗೆ ಚೆನ್ನಾಗಿ ಅರಿಕೆಯಾಯಿತೆಂದರೆ ತೀರಿತು. ಜತೆಯಲ್ಲಿ ಅವು ಕೆಲವು ಶಿಷ್ಟಾಚಾರದ ಸಂಕೇತಗಳನ್ನು ಒಳಗೊಂಡಿರಬೇಕು. ಇವು **ತೀರ ಔಪಚಾರಿಕವಾದ**ವುಗಳು. **ಸುಲಭತೆ, ಸಂಕ್ಷೇಪ, ಉಪಚಾರಗಳು** ಇವುಗಳಲ್ಲಿರಬೇಕಾದ ಪ್ರಧಾನ ಗುಣಗಳು. ಇವುಗಳಲ್ಲಿಯೂ ನಾಲ್ಕು ವಿಧಗಳಿವೆ. (೧) ವರ್ತಕರಿಗೆ ಬರೆಯುವ ಬೇಡಿಕೆಗಳು. (೨) ಅಧಿಕಾರಿಗಳಿಗೆ ಕಳುಹುವ ಅರ್ಜಿಗಳು. (೩) ಸಂಪಾದಕರಿಗೆ ಸಲ್ಲಿಸುವ ವರದಿಗಳು. (೪) ಔಪಚಾರಿಕ ಔತಣಗಳು. ಒಂದೊಂದಕ್ಕೆ ಒಂದೊಂದು ಮಾದರಿ. ಅದರ ಅನುಕರಣವು ಇವನ್ನು ಬರೆಯಲು ಕಲಿಸುವ ಸಾಧನ.

೨ ಬರೆವ ರೀತಿ:—

ನಿಬಂಧದಂತೆ ಓಲೆಗಳಲ್ಲಿಯೂ ಮೂರು ಅಂಗಗಳಿವೆ. ಅದಕ್ಕೊ ಒಂದು **ಆದಿಯಿದೆ,** ಒಂದು **ಮಧ್ಯವಿದೆ,** ಒಂದು **ಕೊನೆಯಿದೆ.** ಅನೆಲ್ಲ ಒಂದು ಬಗೆಯ ವಿಶೇಷ ರೀತಿಯವು ಇರಬೇಕೆಂದು ಸಂಪ್ರದಾಯ. ಈ ಸಂಪ್ರದಾಯದಲ್ಲಿ ಕಾಲಕಾಲಕ್ಕೆ ಹಲಕೆಲವು ಬದಲುಗಳು ಆಗುವುದುಂಟು. ಆ ಮೇರೆಗೆ ಹಿಂದಿನ ಇಂದಿನ ಪದ್ಧತಿಗಳಲ್ಲಿಯೂ ಕೆಲವು ಮಾರ್ಪಾಟುಗಳಾಗಿವೆ. ಅವಿನ್ನೂ ಗ್ರಂಥಗತವಾಗಿಲ್ಲವಾದರೂ ಪ್ರಚಾರದಲ್ಲಿವೆ. ಆದುದರಿಂದ ನಾವಿಲ್ಲಿ ಹೊಸಕಾಲಕ್ಕೆ ತಕ್ಕರೀತಿಯಲ್ಲಿ ಬದಲಾದ ಕೆಲವು ಪ್ರಚಲಿತ ಅಂಶಗಳನ್ನೂ ಕೆಳಗೆ ಕಾಣಿಸುವ ಸಾಹಸವನ್ನು ಮಾಡಿರುವೆವು. ವ್ಯವಹಾರಕ್ಷೇತ್ರದಲ್ಲಿ ಸ್ವೀಕೃತವಾದ ಪದ್ಧತಿಯು ಶಿಕ್ಷಣಕ್ಷೇತ್ರದಲ್ಲಿಯೂ ಮನ್ನಣೆಯನ್ನು ಪಡೆಯುವದೆಂಬ ಆಶೆ.

ಅ) ಪ್ರಾಪಂಚಿಕ ಓಲೆಗಳು

೧) ಪ್ರಾರಂಭ:—

೧) ಕುಶಲ ಅಥವಾ ಕ್ಷೇಮ:— ಸತ್ತ ಸುದ್ದಿಯನ್ನುಳಿದ ಬೇರೆ ಕಾಗದಗಳಲ್ಲೆಲ್ಲ ಇದನ್ನು ಬರೆಯಬೇಕು. ಕಾಗದದ ಎಡ ಮಗ್ಗುಲಿನ ಮೂಲೆಯಲ್ಲಿದನ್ನು ಬರೆವ ರೂಢಿ. ಇದೀಗ ಅದು ಅಳಿಯಲಿದೆ.

೨) ಶ್ರೀಕಾರ:— ಇದರ ಬದಲು **ಓಂ! ಶ್ರೀರಾಮ-ಶ್ರೀಗುರು ಪ್ರಸನ್ನ** ಇತ್ಯಾದಿಗಳನ್ನು ಬರೆಯುವ ಪದ್ಧತಿಯಿದೆ. ಅದನ್ನು ಕಾಗದದ ತೀರ ಮೇಲಕ್ಕೆ ಮಧ್ಯದಲ್ಲಿ ಬರೆವರು. ಖಿಲವಾಗುತ್ತಿದ್ದ ಈ ಪದ್ಧತಿಯನ್ನು ಪುನರುಜ್ಜೀವಿಸಬೇಕು.

೩) ಸ್ಥಲಕಾಲ:— ಕಾಗದವನ್ನು ಬರೆದ ಊರು-ತಾರೀಖುಗಳನ್ನು ಕಾಗದದ ಬಲಗಡೆಯ ಮೂಲೆಯಲ್ಲಿ ಬರೆಯಬೇಕು.

೪) ಒಕ್ಕಣೆ:— ಯಾರಿಗೆ ಕಾಗದವನ್ನು ಬರೆಯುವೆವೊ ಅವರ ಮರ್ಯಾದೆಗೆ ತಕ್ಕ ಮಾತುಗಳಿಗೆ ಈ ಹೆಸರು. ಒಕ್ಕಣೆಯಲ್ಲಿ ಸಾಕಷ್ಟು ವೈವಿಧ್ಯವಿದೆ. ಕೆಲವೊಂದನ್ನು ಕೆಳಗೆ ಕಾಣಿಸಿರುವೆವು.

ತಂದೆಯವರಿಗೆ:— ೧) ತೀರ್ಥರೂಪರ ಸನ್ನಿಧಿಗೆ, ಬಾಲಕನ ಬಿನ್ನಹ.

೨) ಪೂಜ್ಯತೀರ್ಥರೂಪರಿಗೆ, ಬಾಲಕನ ವಂದನೆಗಳು.

ತಾಯಿಯವರಿಗೆ:—೧) ಮಾತೃಶ್ರೀಯವರ ಸನ್ನಿಧಿಗೆ, ಬಾಲಕನ ಬಿನ್ನಹ. ೨) ಪೂಜ್ಯ ಮಾತೃಶ್ರೀಯವರಿಗೆ, ಬಾಲಕನ ವಂದನೆಗಳು.

ಬೇರೆ ಹಿರಿಯರಿಗೆ:— ಪೂಜ್ಯ ಹಿರಿಯರೇ! ವಂದನೆಗಳು.

ಅಪರಿಚಿತರಿಗೆ:—ಮಹನೀಯರೆ! ವಂದನೆಗಳು! ಲಿಂಗವಂತರಿದ್ದರೆ–ಶರಣುಶರಣಾರ್ಥಿ, ಜೈನರಿದ್ದರೆ–ಜಯಜಿನೇಂದ್ರ, ಗುಜ್ಜರಿದ್ದರೆ-ಜಯಗೋಪಾಲ, ಇತರ ಹಿಂದುಗಳಿದ್ದರೆ–ರಾಮರಾಮ! ಮುಸಲ್ಮಾನರಿದ್ದರೆ–ಸಲಾಮು.

ಕಿರಿಯರಿಗೆ:—ಪ್ರಿಯ ಮಗು, (ಹೆಸರು) ಒಲವು ಅಥವಾ ಆಶೀರ್ವಾದಗಳು!

ಗೆಳೆಯರಿಗೆ:—ಪ್ರಿಯನೇ!—ಗೆಳೆಯನೇ! ಒಲವಿನ ನಮನಗಳು.

ಹೆಂಗಳೆಯರಿಗೆ:— ಶ್ರೀಮತಿಯವರೆ (ಅಮ್ಮನವರೆ!) ವಂದನೆಗಳು!

೨) ಮಧ್ಯಭಾಗ:—

ಇದರಲ್ಲಿ ತಮಗೆ ಅರುಹಬೇಕಾದ ಸಂಗತಿಗಳನ್ನು ಬರೆಯಬೇಕು. ಅದನ್ನು ಪ್ರಾರಂಭಿಸುವ ಪೂರ್ವದಲ್ಲಿ 'ಸಾಂಪ್ರತ-ತರುವಾಯ' ಇವುಗಳಲ್ಲೊಂದನ್ನು ಬರೆವ ಪದ್ಧತಿಯಿತ್ತು; ಇತ್ತೀಚೆಗೆ ಅದು ಅಳಿಯುಲಿದೆ. ನಿಬಂಧದಂತೆ ಇದರಲ್ಲಿಯೂ ಬೇರೆಬೇರೆ ವಿಷಯಗಳನ್ನು ಬೇರೆ ಬೇರೆ ಪರಿಚ್ಛೇದಗಳಲ್ಲಿ ಬರೆಯಬೇಕು. ಭಾಷೆಯು ತಿಳಿಯಾಗಿರಲಿ! ಸಾಧ್ಯವಿದ್ದಮಟ್ಟಿಗೆ ಅದು ನಾವಾಡುವ ಮಾತನ್ನು ಹೋಲಲಿ!

೩) ಕೊನೆ

ಪ್ರಾರಂಭದಂತೆ ಕೊನೆಗೂ ಕೆಲವು ಮರ್ಯಾದೆಯನ್ನು ಸೂಚಿಸುವ ಒಕ್ಕಣೆಗಳನ್ನು ಬರೆವ ಪದ್ಧತಿಯಿದೆ. ಅದನ್ನು ಬರೆದು ತರುವಾಯ ಬರೆದವರ ರುಜು-ಸಹಿ ಇರಬೇಕು. ಅವುಗಳಲ್ಲಿ ಕೆಲವನ್ನು ಕೆಳಗೆ ಕೊಟ್ಟಿದೆ.

ಹಿರಿಯರಿಗೆ:— ಇತಿ (ಇಂತೀ) ಬಿನ್ನಹ (ವಿಜ್ಞಾಪನೆಗಳು).

ನಿಮ್ಮೊಲವಿನ,

ಶ್ಯಾಮಸುಂದರ

ಕಿರಿಯರಿಗೆ:—ಇತಿ (ಇಂತೀ) ಆಶೀರ್ವಾದಗಳು.

ನಿನ್ನನ್ನು ಹರಸುವ,

ಶ್ಯಾಮಸುಂದರ.

ಸರಿಕರಿಗೆ:—ಇತಿ (ಇಂತೀ) ಒಲವು

ನಿನ್ನವನೇ

ಶಾಮಸುಂದರ.

೪) ವಿಳಾಸವು:—

ಅ) ಕಾಗದವನ್ನು ಯಾರಿಗೆ ಬರೆದಿದೆಯೋ ಅವರ ಊರು, ಕೇರಿ ಮುಂತಾದ ವಿವರಗಳಿಗೆ '**ವಿಳಾಸ**' (Address) ಎಂಬ ಅಭಿಧಾನ. ವಿಳಾಸವನ್ನು ಬರೆಯುವಾಗಲೂ ಹೆಸರುಗಳ ಹಿಂದೆ ಕೆಲವೊಂದು ಒಕ್ಕಣೆಗಳನ್ನು ಬರೆಯುವದುಂಟು.

ಹಿರಿಯರಿದ್ದರೆ: - **ತೀರ್ಥರೂಪ ಮಹಾರಾಜೇಶ್ರೀ—ಬ್ರಹ್ಮಶ್ರೀ** (ವೈದಿಕರಿಗೆ) **ಶ್ರೀಮಾನ್** ಇವುಗಳಲ್ಲೊಂದನ್ನು ಔಚಿತ್ಯವನ್ನರಿತು ಉಪಯೋಗಿಸಿರಿ. **ಪ್ರೋಫೇಸರ್, ಡಾಕ್ಟರ್, ಸರ್** ಇತ್ಯಾದಿ ಆಂಗ್ಲ ಉಪಪದಗಳನ್ನು ಹಾಗೆಯೆ ಇಡಬೇಕು. ಆಗ ಮೇಲಿನ ಒಕ್ಕಣಿಕೆಗಳನ್ನುಪಯೋಗಿಸಬಾರದು.

ಕಿರಿಯರಿದ್ದರೆ:— ಚಿರಂಜೀವ ಶ್ರೀಯುತ.

ಸರಿಕರಿಗೆ:—ಶ್ರೀಯುತ, ರಾಜಮಾನ್ಯರಾಜಶ್ರೀ.

ಹೆಂಗಸರಿಗೆ:—**ಶ್ರೀಮತಿ-ಸೌಭಾಗ್ಯವತಿ** (ಸುಮಂಗಲೆಯರಿಗೆ). **ಗಂಗಾಭಾಗೀರಥಿ** (ವಿಧವೆಯರಿಗೆ).

ಆ) ಆಗಾಗ ಇವುಗಳ ಸಂಕ್ಷೇಪರೂಪಗಳನ್ನು ಉಪಯೋಗಿಸುವರು. ಕಾರ್ಡುಗಳಲ್ಲಿ ಬರೆಯುವಾಗ ಅವುಗಳ ಉಪಯೋಗ ವಿಶೇಷವಾಗಿ ಆಗುವುದು. ಅವು ಯಾವುವೆಂದರೆ—

ತೀ.	(ತೀರ್ಥರೂಪ)	**ಚಿ.**	(ಚಿರಂಜೀವ)
ಮ. ರಾ.	(ಮಹಾರಾಜಶ್ರೀ)	**ಸೌ.**	(ಸೌಭಾಗ್ಯವತಿ)
ಡಾ.	(ಡಾಕ್ಟರ)	**ಶ್ರೀ.**	(ಶ್ರೀಮಾನ್-ಶ್ರೀಯುತ)
ಪ್ರೋ.	(ಪ್ರೋಫೇಸರ)	**ರಾ. ರಾ.**	(ರಾಜಮಾನ್ಯರಾಜಶ್ರೀ)
ರಾ. ಬ.	(ರಾವಬಹಾದ್ದುರ)	**ಗಂ. ಭಾ.**	(ಗಂಗಾಭಾಗೀರಥಿ)
ರಾ. ಸಾ.	(ರಾವಸಾಹೇಬ)		

ಇ) ಬಿರುದುಗಳಲ್ಲಿ **ರಾವಸಾಹೇಬ-ರಾಜಸಭಾಭೂಷಣ** ಇತ್ಯಾದಿಗಳನ್ನು, ಅವನ್ನು ಪಡೆದ ಮಹನೀಯರ ಹೆಸರುಗಳ ಹಿಂದೆಯೂ–**ಬಿ. ಎ., ಎಮ್. ಎ.** ಇತ್ಯಾದಿಗಳನ್ನು ಅವುಗಳ ಮುಂದೆಯೂ ಇಡಬೇಕು.

ಈ) ವಿಳಾಸಗಳ ಮಾದರಿ:—

೧ನೆಯ ಮಾದರಿ

	ತಿಕೀಟು
ಶ್ರೀಮಾನ್	
ದೇಸಾಯಿ ಗೋವಿಂದರಾಯರು	
ಎಮ್. ಎ. ಇವರಿಗೆ	
ಹನುಮಾನ ಬೀದಿ	
ಬೆಳಗಾಂವಿ.	

೨ನೆಯ ಮಾದರಿ

	ತಿಕೀಟು
ಮ. ರಾ.	
ಕುಲಕರ್ಣಿ ಶ್ರೀನಿವಾಸರಾಯರು	
ಎಲ್ಎಲ್. ಬಿ. ಇವರಿಗೆ	
ಸ. ಹಾ. ಸಾವುಕಾರ ಶಿಕ್ಷಕರು **ಅಥಣಿ**	೧೫೦ ಶನಿವಾರಪೇಟೆ **ಪುಣೆ**

ಸೂಚನೆ:—

೧) ವಿಳಾಸದ ಎರಡನೆಯ ಮಾದರಿಯಲ್ಲಿ ಓಲೆ ಬರೆದವರ ವಿಳಾಸವನ್ನು ಎಡಬದಿಯ ಕೆಳಗಿನ ಮೂಲೆಯಲ್ಲಿ ಬರೆಯಲಾಗಿದೆ. ಇದೊಂದು

ಸರಿಯಾದ ರೀತಿ. ಇದರಿಂದ ಕೆಲಕಾರಣಗಳ ಮೂಲಕ ಓಲೆಯು ಬರೆಯಲ್ಪಟ್ಟವರಿಗೆ ತಲುಪದಿದ್ದರೆ, ಅದನ್ನು ಬರೆದವರಿಗೆ ತಿರುಗಿ ಕಳುಹಲು ಅಂಚೆಯವರಿಗೆ ಅನುಕೂಲ ಆಗುವುದು.

೨) ವಿಳಾಸವನ್ನು **ಸುವಾಚ್ಯವಾಗಿ ಬರೆಯಬೇಕು.** ಮನೆಯ **ನಂಬರು-ಓಣಿಯ ಹೆಸರು-ಪೋಸ್ಟು** ಇತ್ಯಾದಿಗಳನ್ನು ಸರಿಯಾಗಿ ಬರೆಯಬೇಕು.

ಆ) ವ್ಯಾವಹಾರಿಕ ಓಲೆಗಳು

೧) ವರ್ತಕರಿಗೆ:—

೧) ವಿಷಯವು ಔಪಚಾರಿಕವಿರುವದು. ಅದನ್ನು ಸ್ವಲ್ಪದರಲ್ಲಿ ತಿಳಿಯಾಗಿಯೂ ಅಚ್ಚುಕಟ್ಟಾಗಿಯೂ ಬರೆಯಬೇಕು. ಅದಕ್ಕಾಗಿ ಕೆಳಗೆ ಕಾಣಿಸಿದಂತಹ ಔಪಚಾರಿಕ ವಿಷಯವನ್ನು ಸೂಚಿಸುವ ಕೆಲವು ಬರಹದ ರೀತಿಗಳನ್ನರಿತುಕೊಳ್ಳಬೇಕು. ಉ:—**ದಯವಿಟ್ಟು ಕೆಳಗಿನ ವಸ್ತುಗಳನ್ನು ಕಳುಹುವಿರಾ? ಸಾಧ್ಯವಿದ್ದಷ್ಟುಬೇಗ ಕಳುಹಿದರೆ ಉಪಕಾರ.**

೨) ಸರಕುಗಳನ್ನು ತರಿಸುವದಿದ್ದರೆ, ಅವುಗಳ ಹೆಸರುಗಳನ್ನೂ ಕ್ರಯವನ್ನೂ ಸುವಾಚ್ಯವಾಗಿ ಬರೆಯಬೇಕು.

೩) ಒಕ್ಕಣಿಕೆಯನ್ನೂ ವಿಳಾಸವನ್ನೂ ಅಪರಿಚಿತರಿಗೆ ಬರೆಯುವ ಓಲೆಯಲ್ಲಿ ಬರೆವಂತೆ ಬರೆಯಿರಿ.

೨) ಅಧಿಕಾರಿಗಳಿಗೆ:—

ಸರಕಾರದವರ ಅಧಿಕಾರಿಗಳಿಗೆ ಬರೆಯುವ ಅರ್ಜಿಗಳ ಪದ್ಧತಿಯು ಸಾಮಾನ್ಯ ಓಲೆಗಿಂತ ಸ್ವಲ್ಪ ಬೇರೆಯಿರುವುದು. ಅದನ್ನು ಮುಂದೆ ಕಾಣಬಹುದು.

೧) ಪ್ರಾರಂಭ:—

ಅ) ಒಕ್ಕಣೆ:—ಆಂಗ್ಲ ಅಧಿಕಾರಿಗಳಿಗೆ **ಮೆಹರ್ಬಾನ್** ಎಂತಲೂ, ಹಿಂದೂ ಅಧಿಕಾರಿಗಳಿಗೆ **ರಾವಸಾಹೇಬ** ಎಂತಲೂ, ಮುಸಲ್ಮಾನ ಅಧಿ

ಕಾರಿಗಳಿಗೆ **ಖಾನಸಾಹೇಬ** ಎಂತಲೂ ಬರೆಯಬೇಕು. ಅದನ್ನು ಬರೆಯು ವುದು ಕೆಳಗಿನಂತೆ:—

ಮೆಹೇರಬಾನ್,

ಕಲೆಕ್ಟರ್ ಸಾಹೇಬ, ಜಿಲ್ಲಾ ಬೆಳಗಾಂವಿ ಇವರ ಸನ್ನಿಧಿಗೆ—

ಆ) **ಬಿನ್ನಹ:**—ತರುವಾಯ ಅರ್ಜಿಯನ್ನು ಕೆಳಗಿನಂತೆ ಪ್ರಾರಂಭಿ ಸಬೇಕು.

ಅರ್ಜದಾರ ——— ——— (ಹೆಸರು) ——————— (ಊರು) ———————, ತಾಲೂಕು) ಇವರ ವಿನಂತಿ ಅರ್ಜಿ ಏನೆಂದರೆ;

೨) **ಮಧ್ಯ:**—ಅ) ಅರ್ಜಿಯಲ್ಲಿಯ ವಿಷಯಗಳನ್ನು ಬೇರೆ ಬೇರೆ ಪರಿಚ್ಛೇದಗಳಲ್ಲಿ ಬರೆಯಬೇಕು. ಪ್ರತಿಪರಿಚ್ಛೇದದ ಹಿಂದೆ ೧-೨ ಇತ್ಯಾದಿ ಅಂಕಿಗಳನ್ನು ಬರೆಯಬೇಕು.

ಆ) ಮೊದಲು ತಮ್ಮ ದೂರುಗಳನ್ನು ಅರುಹಿ, ಕೊನೆಗೆ ಅವುಗಳ ಪರಿಹಾರವನ್ನು ಸೂಚಿಸಬೇಕು. ಭಾಷೆಯು ಅಸಂದಿಗ್ಧವಾದುದೂ, ಸರ ಲವಾದುದೂ, ವಿನಯಯುತವಾದುದೂ ಇರಲಿ.

೩) **ಕೊನೆ:—ಇತಿ ತಮ್ಮ ವಿಧೇಯ** ಎಂದು ಬರೆದು ತಮ್ಮ ಅಂಕಿ ತವನ್ನು ಈಯಬೇಕು. ಎಡಗಡೆಯ ಕೆಳಗಿನ ಮೂಲೆಯಲ್ಲಿ ಅರ್ಜಿಯನ್ನು ಬರೆದ ತಾರೀಖನ್ನೂ ತಮ್ಮ ವಿಳಾಸವನ್ನೂ ಬರೆಯಬೇಕು.

೩ ಸಂಪಾದಕರಿಗೆ:—

ಒಕ್ಕಣಿಕೆಯು ಬೇರೆ ಸನ್ಮಾನ್ಯ ಗೃಹಸ್ಥರಿಗೆ ಬರೆವಂತೆ ಇರಬೇಕು. ವರದಿಯಲ್ಲಿ ಮಾತ್ರ ಬರೆದವರ ಸೂಕ್ಷ್ಮ ನಿರೀಕ್ಷಣವೂ ವಿಷಯದ ವಾಸ್ತ ವಿಕತೆಯೂ ಕಂಡುಬರಬೇಕು. ಕೆಲವು ಸಾರ್ವಜನಿಕ ದೂರುಗಳನ್ನು ಪ್ರಕಟಿಸುವಾಗ ಅವುಗಳ ಯಥಾರ್ಥ ಸ್ವರೂಪವನ್ನು ಸರಿಯಾಗಿ ಚಿತ್ರಿಸ ಬೇಕು. ಅವು ಓದುಗರ ಮನಸ್ಸನ್ನು ಮುಟ್ಟಿ ಎದೆಯನ್ನು ಅಲ್ಲಾಡಿಸುವಂತೆ ಆಕರ್ಷಕವಾಗಿಯೂ ಪರಿಣಾಮಕರವಾಗಿಯೂ ಬರೆಯಬೇಕು.

೪) ಔತಣಗಳು:—

ಮದುವೆ-ಉಪನಯನ ಇತ್ಯಾದಿ ಅನೇಕ ಸಮಾರಂಭಗಳ ಕಾಲಕ್ಕೆ ನಾವು ನಮ್ಮ ಆಪ್ತ-ಇಷ್ಟರನ್ನು ಆಮಂತ್ರಿಸುವದುಂಟು. ಅದಕ್ಕಾಗಿ ಓಲಿಗಳನ್ನು ಬರೆಯುವುದುಂಟು. ಎಷ್ಟೋ ಸಲ ಇಂಥ ಓಲಿಗಳು ಔಪಚಾರಿಕ ಸ್ವರೂಪವನ್ನು ತಾಳುವವು. ಆಗ ನಾವು ಬರೆಯಬೇಕಾದ ಪದ್ಧತಿಯನ್ನು ಮುಂದೆ ಕಾಣಿಸಿದ ಮಾದರಿಗಳಲ್ಲಿ ಕಂಡುನಿರ್ಧರಿಸಬೇಕು.

ಕೆಲವು ಮಾದರಿಯ ಓಲೆಗಳು:—

(೧)

ಓಂ

ಕುಶಲ !

ಅಥಣಿ

೨೦-೬-೩೮

ಪ್ರಿಯ ಮಗು !

ಅನೇಕ ಆಶೀರ್ವಾದಗಳು !

ನೀನಲ್ಲಿ ತಲುಪಿದ ಕೂಡಲೆ ಕಾಗದವನ್ನು ಬರೆಯಲು ಹೇಳಿದ್ದೆ. ಇಷ್ಟರಲ್ಲಿ ಮರೆತೆಯೇನು? ನೀನು ಹೋಗಿ ನಾಲ್ಕು ದಿನಗಳಾದವು ಇನ್ನೂ ನಿನ್ನ ಕುಶಲವಾರ್ತೆಯು ತಿಳಿಯಲಿಲ್ಲ. ನಾವೆಲ್ಲ ಚಿಂತೆಯಲ್ಲಿರುವೆವು. ಕೂಡಲೆ ಕಾಗದವನ್ನು ಬರೆ!

ನೀನಲ್ಲಿ ಇನ್ನೂ ಹೊಸಬ. ಯಾರ ಪರಿಚಯವೂ ನಿನಗಿಲ್ಲ. ಆದುದರಿಂದ ನನ್ನ ಗೆಳೆಯರಾದ ಶ್ರೀಮಾನ್ ರಂಗರಾಯರನ್ನು ಕಂಡು ಅವರ ಸಲಹೆಯ ಮೇರೆಗೆ ವರ್ತಿಸು ಸಲ್ಲದ ಜನರ ಸಹವಾಸದಲ್ಲಿರಬೇಡ. ಒಳ್ಳೆಯ ಗೆಳೆಯರನ್ನಾಯ್ದು ಅವರ ಸನ್ನಿಧಿಯಲ್ಲಿಯೇ ನಿನ್ನ ಅಭ್ಯಾಸ ಸಾಗಲಿ! ನಾನಿಲ್ಲಿ ಆರುಹಿದ ಹಿರಿಯ ಆದರ್ಶವನ್ನು ಮರೆಯದಿರು! ಸದೈವ ಅದು ನಿನ್ನ ಕಂಗಳೆದುರು ಹೊಳೆಯುತ್ತಿರಲಿ. ಹಾಳುಕೀಳು ಹುಳಗಳಂತೆ ಕೊಳೆಯಲು ನೀನು ಹುಟ್ಟಿಲ್ಲವೆಂಬುದನ್ನು ಕಣ್ಮರೆಯಾಗಗೊಡಬೇಡ. ನಮ್ಮ ನಾಡಿಗೆ ನೀನೊಂದು ದಿವ್ಯ ಸಂದೇಶವನ್ನು ಕೊಡು.

ವವನಿರುವಿ. ನಿನ್ನ ಈವರೆಗಿನ ವೃತ್ತಿಯೂ ಪ್ರಗತಿಯೂ, ನನಗೆ ಆ ಕನಸನ್ನು ತೋರಿಸುತ್ತಲಿದೆ. ಆ ಕನಸು ಕಣಸಾಗಬೇಕು.

ಪರಮಾತ್ಮನು ನಿನಗೆ ಸರಿಯಾದ ಬುದ್ಧಿಯನ್ನೂ, ಬಲವನ್ನೂ ದಯಪಾಲಿಸಲಿ. ಪ್ರಗತಿಪಥವನ್ನು ತುಳಿಯುವಾಗ ನಿನಗೆ ಸದೈವ ನೆರವಾಗಲೆಂದೇ ನನ್ನ ಹಾರ್ದಿಕ ಪ್ರಾರ್ಥನೆ! ನಿನ್ನ ಓಲೆಯನ್ನೆಯೆ ಕಾಯುತ್ತಿರುವೆ! ಇತಿ.

ನಿನ್ನವನೇ
'ಕಾಕಾ'

(೨)
ಉತ್ತರ
ಓಂ

ಕುಶಲ ! ಪುಣೆ
೨೧-೬-೩೮

ಪೂಜ್ಯ ತೀರ್ಥರೂಪರ ಸನ್ನಿಧಿಯಲ್ಲಿ,

ಬಾಲಕನ ಅನಂತ ವಂದನೆಗಳು.

ತಮ್ಮ ಕೃಪಾಪ್ರಸಾದವು ತಲುಪಿತು. ನಾನಿಲ್ಲಿ ಬಂದ ಕೂಡಲೆ ತಮಗೆ ಕಾಗದವನ್ನು ಬರೆಯುವವನಿದ್ದೆ. ಆದರೆ ಕೋಣೆಯು ಬೇಗ ದೊರೆಯದ್ದರಿಂದ, ಅದನ್ನು ಹುಡುಕುವ ಗೊಂದಲದಲ್ಲಿ ಕಾಗದವನ್ನು ಬರೆಯುವದಾಗಲಿಲ್ಲ. ದಯವಿಟ್ಟು ಕ್ಷಮಿಸುವಿರೆಂದು ನಂಬಿಗೆ. ಪೂಜ್ಯ ರಂಗರಾಯರ ಮನೆಯ ಹತ್ತರವೇ ಒಂದು ಕೋಣೆ ನಿನ್ನೆ ತೆರವಾಯಿತು. ಅದನ್ನವರು ನನಗಾಗಿ ಅತಿಪ್ರಯಾಸದಿಂದ ದೊರಕಿಸಿದರು. ಈಗ ನಾನು ಅಲ್ಲಿಯೇ ಇರುವೆ. ಪ್ರಕೃತಿಯು ಚೆನ್ನಾಗಿದೆ. ಚಿಂತಿಸಬೇಡಿರಿ ಎಂದು ತಾಯಿಗೆ ತಿಳಿಸಿರಿ.

ತಾವು ಎಳೆತನದಲ್ಲಿಯೆ ನನ್ನ ಮನಸ್ಸಿನಲ್ಲಿ ನೆಟ್ಟ ದಿವ್ಯ ಆದರ್ಶದ ಸಸಿಯು ಇನ್ನು ಅಳಿಯುವುದು ಸಾಧ್ಯವಿಲ್ಲ. ಅದು ಬೆಳೆಯಲೇಬೇಕು. ಬೆಳೆಯುವುದು, ಎಂಬುದು ನನ್ನ ದೃಢವಾದ ನಂಬಿಗೆ. ಇಲ್ಲಿಯೂ ಪೂಜ್ಯ ರಂಗರಾಯರ ಆದರ್ಶವು ನನ್ನೆದುರು ಇದೆ. ತಮ್ಮ ಹೇಳಿಕೆಯಂತೆ ನಾನು ಗೆಳೆಯರನ್ನು ಎಚ್ಚರದಿಂದ ಆರಿಸುವೆ. ಗುರಿಯನ್ನು ಮರೆಯದಿರಲು

ಯತ್ನಿಸುವೆ. ತಮ್ಮ ಆಶೀರ್ವಾದದ ಬಲವಿದ್ದಾಗ ನನಗೆ ಏತರ ಹೆದರಿಕೆಯೂ ಇಲ್ಲ.

ಚಿ. ಚನ್ನಮ್ಮ ಈಗ ನಡೆಯಲು ಹತ್ತಿದಳೇನು? ನಮ್ಮ ಆಕಳು ಹೇಗಿದೆ? ಪೂಜ್ಯ ಮಾತೃಶ್ರೀಯವರಿಗೆ ಪ್ರಣಾಮಗಳು, ಎಳೆಯರಿಗೆ ಆಶೀರ್ವಾದಗಳು. ಇತಿ.

ತಮ್ಮ ಒಲವಿನ,
ಬಲವಂತ.

(೩)

ಶ್ರೀರಾಮ

ಬಾಗಿಲುಕೋಟೆ
೪-೧-೩೭

ಮಹನೀಯರೇ,

ವಿಜ್ಞಾಪನೆಗಳು.

ತಮ್ಮಲ್ಲಿ ಕೆಳಗೆ ಕಾಣಿಸಿದ ಪುಸ್ತಕಗಳು ದೊರೆಯುವವೆಂದು ತಮ್ಮ ಪುಸ್ತಕಗಳ ಪಟ್ಟಿಯ ಮೇಲಿಂದ ತಿಳಿಯಿತು. ಅವು ನನಗೀಗ ಅತ್ಯಗತ್ಯವಾಗಿ ಬೇಕಾಗಿವೆ. ಅವನ್ನು ದಯವಿಟ್ಟು ಕೂಡಲೆ ಕಳುಹುವದಾದರೆ ಉಪಕಾರ. ಪುಸ್ತಕಗಳನ್ನು ರೈಲಿನಿಂದ ಕಳುಹಿ ರಸೀದನ್ನು ವ್ಹಿ. ಪಿ. ಮಾಡಿ ಕಳುಹಿರಿ. ವಿಳಾಸವನ್ನು ಕೆಳಗೆ ಬರೆದಿರುವೆ.

೧	ಕರ್ನಾಟಕ ದರ್ಶನ	೧-೦-೦
೨	ಬುದ್ಧಿಯೋಗ	೧-೮-೦
೩	ವಚನಶಾಸ್ತ್ರರಹಸ್ಯ	೩-೦-೦
೪	ಗೀತೆಯಗುಟ್ಟು	೧-೦-೦
೫	ಉಪನಿಷದ್ರಹಸ್ಯ	೩-೦-೦
		೯-೮-೦

ಬೇಗ ಕಳುಹುವಿರಲ್ಲವೇ ದಯವಿಟ್ಟು! ಇತಿ.

ವಿಳಾಸ:—

ರಾ. ರ. ಕುಲಕರ್ಣಿ, ಎಮ್. ಎ.
ಅಧ್ಯಾಪಕ ಹಾಯಸ್ಕೂಲ, ಬಾಗಿಲುಕೋಟೆ

ನಿಮ್ಮ,
ರಾ. ರ. ಕುಲಕರ್ಣಿ

(೪)

ಉತ್ತರ

ಶ್ರೀಗುರು ಪ್ರಸನ್ನ !

ಹುಬ್ಬಳ್ಳಿ
೬-೧-೩೭

ಮಹನೀಯರೆ !

ವಂದನೆಗಳು !

ತಮ್ಮ ಕಾಗದವು ತಲುಪಿತು. ತಮ್ಮ ಸೂಚನೆಯ ಮೇರೆಗೆ ಪುಸ್ತಕಗಳನ್ನೆಲ್ಲ ರೈಲಿನಿಂದ ಇಂದೇ ಕಳುಹಿರುವೆ. ರಸೀದಿಯನ್ನು ವ್ಹಿ. ಪಿ. ಯ ಮೂಲಕ ಕಳುಹಿರುವೆ. ಅದನ್ನು ದಯವಿಟ್ಟು ಸ್ವೀಕರಿಸುವಿರೆಂದು ನಂಬುವೆ, ಇತಿ.

ನಿಮ್ಮ
ಶಿ. ಶ. ಹಿರೇಮಠ,
ಮ್ಯಾನೇಜರ.

(೫)

ಮೇಹಬಾನ್ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ದಕ್ಷಿಣ ಭಾಗ ಇವರ ಹುಜೂರಿಗೆ—

ಅರ್ಜದಾರ, ಕಾರ್ಯದರ್ಶಿ ವಿಕ್ರಮ-ವ್ಯಾಯಾಮಮಂಡಲ, ಅಥಣಿ ಇವರ ವಿನಂತಿ ಅರ್ಜಿ ಏನಂದರೆ:—

೧) ನಾವಿಲ್ಲಿ ಒಂದು **ವ್ಯಾಯಾಮ ಮಂದಿರವನ್ನು** ಹೊರಡಿಸಿ, ಇಂದಿಗೆ ನಾಲ್ಕು ವರುಷಗಳಾದವು. ಊರಲ್ಲಿಯ ಮಹನೀಯರ ನೆರವಿನಿಂದ ಅದಕ್ಕೊಂದು ತಾತ್ಪೂರ್ತಿಕ ಕಟ್ಟಡವೂ ಒಂದು ಚಿಕ್ಕ ಆಟದ ಬಯಲೂ ದೊರೆತಿವೆ.

೨) ಇಪಲು ದಿನಾಲು ಸು. ೪೦ ಹುಡುಗರು ಬರುವರು. ಹುಡುಗರು ಎಲ್ಲ ಜಾತಿಯವರಿರುವರು. ಜಾತಿ-ಪಂಥಗಳ ವೈಷಮ್ಯಕ್ಕೆ ಎಡೆಗೊಡದೆ ಇಲ್ಲಿಯ ವ್ಯಾಯಾಮಶಿಕ್ಷಕರು ಎಲ್ಲರಿಗೆ ಸಮನಾಗಿ ಕಲಿಸುತ್ತಿರುವರು. ಕುಸ್ತಿ, ಮಲಖಂಬ, ಲಾಠಿ, ಲೇಝಿಮ್, ಪ್ರೋಲಜಂಪ, ಹುತುತು, ಕುಂಟಾಟ ಇತ್ಯಾದಿ ಆಟಗಳಲ್ಲಿ ಹುಡುಗರು ಸರಿಯಾದ ಪ್ರಗತಿಯನ್ನು ಹೊಂದಿರುವರು.

೩) ಇತ್ತೀಚಿಗೆ ವ್ಯಾಯಾಮ ಶಾಲೆಗಳಿಗೆ ಸರಕಾರದವರು ಗ್ರ್ಯಾಂಟನ್ನು ಕೊಡುವ ಏರ್ಪಾಟನ್ನು ಮಾಡಿರುವರು. ನಮ್ಮ ಸಂಘವು ಯಥಾಶಕ್ತಿ ಲೋಕಸೇವೆಯನ್ನು ಕಳೆದ ನಾಲ್ಕು ವರುಷಗಳಿಂದ ಮಾಡುತ್ತ ಬಂದಿದೆ. ಅದಕ್ಕೆ ಹಣದ ಪ್ರೋತ್ಸಾಹವು ದೊರೆತರೆ ಅದರಿಂದ ಇನ್ನೂ ಹೆಚ್ಚಾಗಿ ಕಾರ್ಯವಾಗುವದರಲ್ಲಿ ಸಂದೇಹವಿಲ್ಲ.

೪) ಆದುದರಿಂದ ತಾವು ನಮ್ಮ ಮಂಡಲಕ್ಕೆ ಒಮ್ಮೆ ಸಂದರ್ಶನವನ್ನು ಇತ್ತು, ಅದರ ಪ್ರಗತಿಯನ್ನು ಕಂಡು ಅದಕ್ಕೆ ಸರಿಯಾದ ಗ್ರ್ಯಾಂಟನ್ನು ಕೊಡಿಸುವಿರೆಂದು ನಂಬಗೆ. ಈ ತಮ್ಮ ಸೇವಿಗಾಗಿ ಸಂಸ್ಥೆಯು ತಮಗೆ ಸದೈವ ಋಣಿಯಾಗದಿರದು. ಇತಿ ವಿಜ್ಞಾಪನೆ—

ಅಥಣಿ,
ತಾ. ೫-೧೦-೩೮

ತಮ್ಮ,
ತ. ಅ. ಮುತಾಲೀಕ,
ಗೌ. ಕಾರ್ಯದರ್ಶಿ.

ವಿ. ಸೂಚನೆ:—

ಉತ್ತರವನ್ನು ಕೆಳಗಿನ ವಿಳಾಸಕ್ಕೆ ಕಳುಹಬೇಕಾಗಿ ಪ್ರಾರ್ಥನೆ.

ವಿಳಾಸ:—

ಶ್ರೀ. ತ. ಅ. ಮುತಾಲೀಕ, ಎಲ್‌ಎಲ್. ಬಿ.,
ಗೌ. ಕಾರ್ಯದರ್ಶಿ, ವಿಕ್ರಮ ವ್ಯಾ. ಮಂಡಲ.
ವಿಕ್ರಮಪೂರ ಅಥಣಿ **ಪೋ. ಅಥಣಿ.**

(೬)

ಜಂಬುಕಿ
೧೦-೪-೩೬

ಸಂಪಾದಕ ಮಹನೀಯರೆ,

ಕೆಳಗಿನ ನಾಲ್ಕು ಸಾಲುಗಳಿಗೆ ತಮ್ಮ ಸನ್ಮಾನ್ಯ ಪತ್ರಿಕೆಯಲ್ಲಿ ಎಡೆ ಕೊಡುವಿರೆಂದು ನಂಬಿ, ತಮಗೀ ಕಾಗದವನ್ನು ಬರೆದಿರುವೆ. ಕೊಡುವಿರಲ್ಲಾ ಸ್ಥಲವನ್ನವಕ್ಕೆ ?

ಪ್ರತಿವರುಷ....ಲ್ಲಿಯ ಬಸವಣ್ಣನ ಯಾತ್ರೆಗಾಗಿ ಸಾವಿರಾರು ಭಕ್ತರು ತೆರಳುವರು. ದಾರಿಯು ನಮ್ಮೂರ ಮೇಲಿಂದ ಹಾದು ಹೋಗುವುದು. ದಾರಿಯುದ್ಧಕ್ಕೆ ಅಲ್ಲಲ್ಲಿ ಹಳ್ಳಗಳು ಹರಿದು ದೊಡ್ಡ ದೊಡ್ಡ ಕೊರಕಲುಗಳು ಬಿದ್ದಿವೆ. ಮಳೆಗಾಲದಲ್ಲಂತೂ ಅಲ್ಲಿಂದ ಹಾದು ಹೋಗುವುದು ತೀರ ದುರ್ಲಭ. ಆ ಕಾಲಕ್ಕೆ ಪಯಣಬೆಳೆಸುವ ಯಾತ್ರಿಕರ ಗೋಳನ್ನು ಬಣ್ಣಿಸಲುಬಾರದು. ಹುದಲಲ್ಲಿ ಬಂಡೆಗಳು ಸಿಲುಕಿದ್ದರಿಂದ ಒದ್ದಾಡುವ ಜನರು ಈ ದಾರಿಯನ್ನೂ ಅದನ್ನು ಇಂಥ ಒಳಿತಾದ (?) ಸ್ಥಿತಿಯಲ್ಲಿಟ್ಟ **'ಸ್ಥಾನಿಕಸ್ವರಾಜ್ಯ'** ಸಂಸ್ಥೆಯನ್ನೂ ತುಂಬಾ ತೆಗಳಿದ್ದುಂಟು. ಬೇಸಿಗೆಯಲ್ಲಿ ಬಂಡಿಗಳೂ ಒಗ್ಗಾಲಿಯಾಗಿ ಬೀಳದಿರುವುದು ಅಪರೂಪ. ಇದನ್ನೆಲ್ಲ ನಾನು ಅನೇಕ ಸಲ ಕಣ್ಣಾರೆ ಕಂಡಿರುವೆ.

ಸ್ಥಾನಿಕ-ಸ್ವರಾಜ್ಯ-ಸಂಸ್ಥೆಯ ಅಧ್ಯಕ್ಷರ ಸನ್ನಿಧಾನಕ್ಕೆ ಅನಂತ ಅರ್ಜಿಗಳನ್ನು ಕಳುಹಿದರೂ ಅವರ ಕಂಗಳು ಇತ್ತ ಹೊರಳಲೊಲ್ಲವು. ಅವರು ತಮ್ಮ ಬೇರೆ ಮಹತ್ಕಾರ್ಯಗಳಲ್ಲಿಯೆ ತೊಡಗಿರುವರು. ಅದಕ್ಕಾಗಿ ನಮ್ಮ ದೂರನ್ನು ನಿಮ್ಮ ಅಗಸೆಯ ಬಾಗಿಲಿಗಾದರೂ ಒಯ್ಯುವಾ, ಏನಾದರೂ ಉಪಯೋಗವಾಗುವುದೇನು ನೋಡೋಣ, ಎಂದು ಬಯಸಿ ಬರೆದಿರುವೆ. ಇನ್ನಾದರೂ ಅಧ್ಯಕ್ಷಸಾಹೇಬರೂ ಇತ್ತ ಹೊರಳಿ ನೋಡಿ, ದಾರಿಯನ್ನು ಚೆನ್ನಾಗಿರಿಸಿ ಬಡ ಯಾತ್ರಿಕರ ಗೋಳನ್ನು ಕಡಿಮೆ ಮಾಡುವ ಶ್ರೇಯಸ್ಸನ್ನು ಪಡೆಯುವರೋ ?

ತಮಗೆ ತೊಂದರೆ ಕೊಟ್ಟದ್ದಕ್ಕಾಗಿ ಕ್ಷಮಿಸಿರಿ, ಇತಿ.

ನಿಮ್ಮ,
ಗೊ. ಗೊ. ಚವ್ಹಾಣ.

(೭)

ಶ್ರೀ

ಮಹಸೀಯರಿಗೆ ವಂದನೆಗಳು !

ಶ್ರೀಹರಿಯ ಕೃಪೆಯಿಂದ ನಮ್ಮ ಮೊಮ್ಮಗಳಾದ

ಚಿ. ಸೌ. ಕಾಂ. **ಚೆನ್ನಮ್ಮ** ಇವಳ

ಮಂಗಲಮಹೋತ್ಸವವನ್ನು

ಶ್ರೀಯುತ **ದೇಸಾಯಿ ಅನಂತರಾಯರ** ಮಕ್ಕಳಾದ

ಶ್ರೀ. **ವೆಂಕಟರಾಯರೊಂದಿಗೆ**

ಇದೇ ಜ್ಯೇಷ್ಠ ಶು. ನವಮಿ ಸೋಮವಾರ ತಾ. ೬-೬-೩೮ ಸಾಯಂಕಾಲದ ೪-೩೭ ಗಂಟೆಯ ಸುಮುಹೂರ್ತದಲ್ಲಿ ಧಾರವಾಡದಲ್ಲಿಯ ನಮ್ಮ ಮನೆಯಲ್ಲಿ '**ಲಕ್ಷ್ಮೀನಿವಾಸದಲ್ಲಿ**' ಮಾಡುವುದನ್ನು ಗೊತ್ತುಪಡಿಸಿರುತ್ತದೆ. ತಾವು ತಮ್ಮ ಆಪ್ತಮಿತ್ರರೊಂದಿಗೆ ದಯಮಾಡಿಸಿ, ವಧೂವರರನ್ನು ಆಶೀರ್ವದಿಸಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡುವಿರೆಂದು ಪ್ರಾರ್ಥಿಸುವ,

ಲಕ್ಷ್ಮೀನಿವಾಸ, ಮಾಳಮಡ್ಡಿ
ಧಾರವಾಡ
೧—೬—೩೮

ತಮ್ಮವನಾದ,
ಹಣಮಂತರಾವ ಬುರ್ಲಿ,

ಭೀಮರಾವ ಬುರ್ಲಿ, ಮೋಹನರಾವ ನರಗುಂದ, ಇವರ ವಂದನೆಗಳು.

ಅಭ್ಯಾಸ ೧೫

ಕೆಳಗಿನ ಸ್ಥಲಕ್ಕೆ ಅರ್ಜಿಯನ್ನು ಬರೆಯಬೇಕು

ಕಾರಕೂನರು ಬೇಕು-ಹಿಂದಿಯಿಂದ ಇಂಗ್ಲೀಷಿನಲ್ಲಿಯೂ ಇಂಗ್ಲೀಷಿನಿಂದ ಹಿಂದಿಯಲ್ಲಿಯೂ ಕಾಗದಗಳನ್ನು ಭಾಷಾಂತರಿಸಲು ಬರಬೇಕು. ಸಂಬಳ ೬೦-೫-೧೬೦. ಅರ್ಜಿಯನ್ನು ಕೆಳಗಿನ ವಿಳಾಸಕ್ಕೆ ಕಳುಹಬೇಕು. ಅರ್ಜಿದಾರನು ತನ್ನ ವಿಳಾಸವನ್ನೂ, ಜನ್ಮತಾರೀಖನ್ನೂ, ವಾಸಸ್ಥಲವನ್ನೂ, ಶಿಕ್ಷಣವನ್ನೂ ಬರೆಯತಕ್ಕದ್ದು.

'ಸಂಪಾದಕ—ಮುಂಬಯಿ ಸ್ಟೆಂಡರ್ಡ' ಇವರಿಗೆ

(೧೯೩೪)

೧೫ **ನಿನ್ನ ಸಾಲೆಯ ಪ್ರಿನ್ಸಿಪಾಲರಿಗೆ**-ನಿನಗೆ ದೊರತ ನೋಕರಿಯ ಸುದ್ದಿಯನ್ನು ತಿಳಿಸಿ-ಸಾಲೆಯು ನಿನಗೆ ಮಾಡಿದ ಉಪಕೃತಿಗಾಗಿ ಆವರಿಗೆ; ಕೃತಜ್ಞತೆಯನ್ನು ಸಲ್ಲಿಸಲು ಒಂದು ಪತ್ರವನ್ನು ಬರೆ.

(೧೯೩೫)

೧೬ **ನಿನ್ನ ತಮ್ಮನಿಗೆ**-ಅದೇ ಜರುಗಿದ ಕಾಯದೇ ಮಂಡಲದ ಚುಣಾವಣೆಯನ್ನು ಬಣ್ಣಿಸಲು ಒಂದು ಪತ್ರವನ್ನು ಬರೆ.

(೧೯೩೬)

೧೭ **ನಿನ್ನ ಗೆಳೆಯನೋರ್ವನ ತಮ್ಮನು** ತುಂಟನು. ಆತನನ್ನು ನಿನ್ನ ಸಾಲೆಗೆ ಕಳುಹಬೇಕೆಂದು ಗೆಳೆಯನು ಬಯಸಿ ನಿನ್ನ ಅಭಿಪ್ರಾಯವನ್ನು ಕೇಳಲು ಅವನೊಂದು ಓಲೆಯನ್ನು ಬರೆದಿರುವ. ಅದಕ್ಕೆ ಉತ್ತರವನ್ನು ಬರೆ.

೧೮ **ಕೆಳಗಿನ ಪ್ರಕಟನೆಗೆ** ಉತ್ತರವನ್ನು ಬರೆ. ಕಾರಕೂನನು ಬೇಕು. ಪತ್ರವ್ಯವಹಾರದಲ್ಲಿಯೂ-ಲೆಕ್ಕವನ್ನಿಡುವದರಲ್ಲಿಯೂ-ಕುಶಲನಿರಬೇಕು. ತನ್ನ ಶಿಕ್ಷಣ-ಅನುಭವ ವಯಸ್ಸನ್ನೊಳಗೊಂಡ ಅರ್ಜಿಯನ್ನು ಮನೆ ನಂಬರ ೫೫ ಈ ವಿಳಾಸಕ್ಕೆ ಕಳುಹಬೇಕು.

(೧೯೩೭)

೩. ಸಂವಾದಗಳು.

೧ ಅಂದರೇನು ? :—

ಸಂವಾದವೆಂದರೆ ಇಬ್ಬರಲ್ಲಿ ನಡೆದ ಮಾತು; ಒಂದು ವಿಷಯವನ್ನು ಕುರಿತು ಎರಡು ವ್ಯಕ್ತಿಗಳಲ್ಲಿ ನಡೆದ ಚರ್ಚೆ. ಇದರಲ್ಲಿ ಪ್ರಶ್ನೋತ್ತರಗಳೂ, ಈರ್ವರು ತಮ್ಮ ತಮ್ಮ ಪಕ್ಷವನ್ನು ಸಮರ್ಥಿಸಲು ಮುಂದೊಡ್ಡಿದ ಯುಕ್ತಿವಾದಗಳೂ (Arguments) ಅಡಕವಾಗುವವು.

೨ ಬರೆವುದೇತಕ್ಕೆ ? :—

ಇದನ್ನು ಬರೆಯುವ ಕೌಶಲವು ಬರಬೇಕಾದರೆ ನಮಗೆ, ಚರ್ಚೆ ಮಾಡಲಿರುವ ವ್ಯಕ್ತಿಗಳ ಭೂಮಿಕೆಯನ್ನು ವಹಿಸಲು ಬರಬೇಕಾಗುವುದು. ಆವರ ಮನಸ್ಥಿತಿಯ ಪರಿಚಯವಿರಬೇಕಾಗುವುದು. ಆದುದರಿಂದ **ಸಂವಾದ-ಬರಹವು,** ನಮಗೆ ಅನ್ಯರ ಮನಸ್ಸಿನಲ್ಲಿ ಸೇರಿ ಅವರ ಅಭಿಪ್ರಾಯವನ್ನು ಅವರ ರೀತಿಯಿಂದ ಉಸುರಲು ಕಲಿಸುವುದು.

ಇದರ ಜತೆಯಲ್ಲಿ **ಸಂವಾದ-ಬರಹವು** ನಮಗೆ ಸಂಭಾಷಣೆಯ ಕೌಶಲವನ್ನು ನೀಡುವುದುಂಟು. ಸಾಧಕ-ಬಾಧಕ ಪ್ರಮಾಣಗಳನ್ನು ಪರಿಶೀಲಿಸಿ ಸರಿಯಾಗಿ ಆಲೋಚನೆಯನ್ನು ಮಾಡಲು ಕಲಿಸುವುದು

ಇದರಿಂದ ಮಾತಿನ ಶೈಲಿಯು ಅವಗತವಾಗಿ ಕಾದಂಬರಿ-ನಾಟಕಗಳಲ್ಲಿಯ ಸಂವಾದಗಳನ್ನು ಬರೆಯುವ ಸಾಮರ್ಥ್ಯವು ಕೂಡ ಬರುವುದು.

೩ ಹೇಗೆ?:—

ಅ) ಪೂರ್ವಸಿದ್ಧತೆ:—೧) ನಿಮ್ಮ ಸುತ್ತಲಿನ ಜನರು ಮಾತನಾಡುವದನ್ನೂ ಅನೇಕ ವಿಷಯುಗಳನ್ನು ಚರ್ಚಿಸುವುದನ್ನೂ ಸೂಕ್ಷ್ಮರೀತಿಯಿಂದ ಅವಲೋಕಿಸಿರಿ. ಸಾಧ್ಯವಾದಾಗ ಅವರ ಸಂಭಾಷಣೆಯ ವರದಿಯನ್ನು ಬರೆದಿಡಲು ಯತ್ನಿಸಿರಿ.

೨) ಕಥೆಗಳನ್ನೂ-ಕಾದಂಬರಿಗಳನ್ನೂ-ನಾಟಕಗಳನ್ನೂ ಎಚ್ಚರದಿಂದ ಓದಿ ಅವುಗಳಲ್ಲಿಯ ಪಾತ್ರಗಳ ಸಂವಾದದ ರೀತಿಯನ್ನು ನಿರೀಕ್ಷಿಸಿರಿ. ಅದನ್ನು ಅನುಕರಿಸಲು ಯತ್ನಿಸಿರಿ.

೩) ಸಂವಾದ ಮಾಡಲಿರುವ ಕಲ್ಪಿತ ವ್ಯಕ್ತಿಗಳ ಸ್ವಭಾವಪರಿಚಯುವನ್ನು ಮಾಡಿಕೊಳ್ಳಬೇಕು. ಅವರ ಮನಸ್ಥಿತಿಯೊಡನೆ ಒಂದಾಗಲು ಅವರಲ್ಲಿ ಬೆರೆಯುಲು ಕಲಿಯುಬೇಕು. ಅವರು ವಿಶೇಷ ಪ್ರಸಂಗದಲ್ಲಿ ಹೇಗೆ ಮಾತನಾಡಬಹುದೆಂಬದನ್ನು ಅರಿಯುಲು ಯತ್ನಿಸಬೇಕು.

೪) ಸಂವಾದಕ್ಕಾಗಿ ನಿಯುಮಿಸಿದ ವಿಷಯದ ಎರಡೂ ಪಕ್ಷಗಳಿಗೆ ಸಾಧಕ ಹಾಗೂ ಬಾಧಕವಾದ ಯುಕ್ತಿವಾದಗಳನ್ನು ಬೇರೆಬೇರೆಯಾಗಿ ಬರೆದಿಡಬೇಕು. ಮುಂದೆ ಅವನ್ನು ಕ್ರಮವರಿತು ಉಪಯೋಗಿಸಿ ಸಂವಾದವನ್ನು ಅರಳಿಸಬೇಕು.

ಆ) ಪ್ರತ್ಯಕ್ಷಬರಹ:—ಇಷ್ಟು ಸಿದ್ಧತೆಯಾದ ಮೇಲೆ ಪ್ರತ್ಯಕ್ಷವಾಗಿ ಸಂವಾದವನ್ನು ಬರೆಯುಲು ಪ್ರಾರಂಭಿಸಬೇಕು. ಆಗ ಮುಂದಿನ ಕೆಲವು ಸೂಚನೆಗಳನ್ನು ಗಮನಿಸಬೇಕು. ಅಂದರೆ ಸಂವಾದವು ಸಹಜವಾದದ್ದೂ ಅಂದವಾದದ್ದೂ ಆಗಬಹುದು.

೧) ಸಂವಾದದಲ್ಲಿ ಒಂದೇ ವ್ಯಕ್ತಿಯು ಬಹಳ ಮಾತನಾಡಬಾರದು. ಇಬ್ಬರಿಗೂ ಸಮನಾದ ಸಂಧಿಯು ದೊರೆಯುಲಿ. ಸಂವಾದವು ಶಿಥಿಲವಾಗಿ ಸಾಗಬಾರದು. ಅದರಲ್ಲಿ ಒಂದು ಓಟವು ಬೇಕು.

೨) ನಿಜವಾದ ಸಂವಾದದಲ್ಲಿ ಜನರು ನಡುವೆಯೆ ಒಬ್ಬರನ್ನೊಬ್ಬರು ತಡೆಯುವರು. ನಿಮ್ಮ ಈ ಕಲ್ಪಿತ ವ್ಯಕ್ತಿಗಳು ಕೂಡ ಈ ಮೇರೆಗೆ ತಡೆಯಲಿ. ಅದರಿಂದ ಸಂವಾದವು ಸ್ವಾಭಾವಿಕವಾಗಿ ಕಾಣುವುದು.

ಉ —**ಭೀಮ:**—ಮೊನ್ನೆ ನಿನ್ನ ತಮ್ಮನ ಕಾಗದವೊಂದು ಬಂದಿದೆ. ಅದರಲ್ಲವನು ಬರೆಯುವುದೇನೆಂದರೆ –

ಶಾಮ:—ಸಾಕು ! ರೂಪಾಯಿ ಬೇಡಿದ್ದಾನು ! ಆಯ್ತು ಮತ್ತೇನು ಬರೆಯುವವ ಅವ ?

೩) ಒಮ್ಮೊಮ್ಮೆ ಪ್ರಶ್ನೆಗೆ ಉತ್ತರವನ್ನು ಇನ್ನೊಂದು ಪ್ರಶ್ನೆಯಿಂದ ಕೊಡಲಾಗುವುದು. ಕೆಲವು ಸಲ ಪ್ರಶ್ನೆಯನ್ನು ಕೇಳುವ ಪೂರ್ವದಲ್ಲಿ ಅದಕ್ಕೆ ಉತ್ತರವು ದೊರೆಯುವುದು. ಪ್ರತ್ಯಕ್ಷ ಜೀವನದಲ್ಲಿ ಕಂಡು ಬರುವ ಈ ರೀತಿಯನ್ನು ನಿಮ್ಮ ಸಂವಾದದಲ್ಲಿ ಸೇರಿಸಬಹುದು.

ಉ: -

೧ **ರಾಮ:**—ಇಂಥ ಇಕ್ಕಟ್ಟಿನಲ್ಲಿ ನೀನೇನು ಮಾಡುವಿ ?

ಕೃಷ್ಣ:—ನೀನೇನು ಮಾಡಬಹುದಾಗಿತ್ತು ?

೨ **ಅವನು**:—ನಾನು ನಿನಗೊಂದು ಮಾತನ್ನು ಕೇಳಲೇನು ?

ಅವಳು: – ನನಗೆ ಗೊತ್ತು ನೀವು ಕೇಳುವುದೆಲ್ಲ? ನಾನಂದು ನಗಲಿಲ್ಲೇಕೆಂಬುದನ್ನೇ ಅಲ್ಲವೆ?

೪) ಅವೇ ಮೇರೆಗೆ ಅಲ್ಲಲ್ಲಿ ಕೆಲವು ಉದ್ಗಾರಗಳನ್ನು ಕೂಡ ಮಿತಿಯಿಂದ ಉಪಯೋಗಿಸಿರಿ. ನಿಜವಾದ ಸಂವಾದದಲ್ಲಿಯೂ ಬೇರೆ ಬೇರೆ ಭಾವನೆಗಳ ಉದ್ರೇಕಕ್ಕೆ ಸಿಲುಕಿ ಜನರು ಉದ್ಗಾರಗಳನ್ನು ಉಸುರುವುದುಂಟು. ಅದರ ಪ್ರತಿಬಿಂಬವು ನಿಮ್ಮ ಸಂವಾದದಲ್ಲಿಯೂ ಕಾಣಲಿ.

ಉ: – ಅಯ್ಯೋ ಪಾಪ! ಅಬ್ಬಾ ! ಸರಿ ! ಇತ್ಯಾದಿ.

೫) ಒಟ್ಟಿನಲ್ಲಿ ಸಂವಾದವು ಸ್ವಾಭಾವಿಕವಾಗಲಿ. ಸಹಜವಾದುದಾಗಲಿ. ಕೃತ್ರಿಮತೆಯು ಅಲ್ಲಿ ತಲೆದೋರದಿರಲಿ. ಶೈಲಿಯಲ್ಲಿ ಇವೇ ಗುಣಗಳಿರಲಿ. ವಾಸ್ತವ ಜಗತ್ತಿನಲ್ಲಿಯ ಜನದಂತೆಯೆ ನಿಮ್ಮ ಕಲ್ಪಿತ ಸೃಷ್ಟಿಯಲ್ಲಿಯ ಜನರು ನುಡಿಯಬೇಕು.

ಕೆಲವು ಮಾದರಿಯ ಸಂವಾದಗಳು:—

i) ಅಸ್ಪೃಶ್ಯತೆ.

೧ ವಿಚಾರಾಂಶಗಳು:—

ಅನುಕೂಲ	ಪ್ರತಿಕೂಲ
೧) ಇದು ಅತಿ ಪ್ರಾಚೀನ ರೂಢಿ,	೧) ಪುರಾಣಮಿತ್ಯೇವ ನ ಸಾಧು ಸರ್ವಂ.
೨) ಅಸ್ಪೃಶ್ಯರು ಕ್ರೂರಕರ್ಮಿಗಳು. ಲೋಕಬಾಹಿರರು.	೨) ಅವರು ಹಿಂದೆ ಕ್ರೂರರಿರಬಹುದು. ಇಂದು ಇಲ್ಲ ಇವರಿಗಿಂತ ಹೆಚ್ಚು ಕ್ರೂರರನ್ನು ನಾವು ಮುಟ್ಟುವೆವು.
೩) ಅವರು ಅಸ್ವಚ್ಛರು. ಅಪವಿತ್ರರು.	೩) ಸ್ವಚ್ಛತೆಯ ಪಾಠಗಳನ್ನು ಇವರಿಗೆ ಕಲಿಸಬಹುದು.
೪) ಅವರ ಸಂಪರ್ಕದಿಂದ ಸಮಾಜವು ಅಪವಿತ್ರವಾಗುವುದು.	೪) ಇವರ ಸಂಸರ್ಗವೇನೂ ಸಾಂಕರೋಗವಲ್ಲ.
೫) ಇದು ದೈವಕೃತ.	೫) ಇದು ಮಾನವಕೃತ.

೨ ಸನ್ನಿವೇಶ:—

[ಓರ್ವ ಶಿಷ್ಟ ಆಚಾರ್ಯರ ಚಿಕ್ಕ ಮಗು ನೀರಡಿಸಿದ ಒಬ್ಬ ಹರಿಜನ ಬಾಲಕನಿಗೆ ನೀರನ್ನು ಹಣಿಸುವುದು. ಅದನ್ನು ಕಂಡ ಆಚಾರ್ಯರು ಮಗುವಿನ ಕೆನ್ನೆಯನ್ನು ಚೆನ್ನಾಗಿ ಕಾಸುವರು. ಅಷ್ಟರಲ್ಲಿ ಅವರ ಸುಧಾರಕ ಯಜಮಾನರು—ಅವರಿಗೆ ಔತಣವನ್ನು ಕೊಡಲು ಅಲ್ಲಿಗೆ ಬರುವರು. ಅಳುತಲಿರುವ ಮಗುವನ್ನು ಸಂತೈಸಲೆತ್ನಿಸುವರು. ಆಗ—]

ಆಚಾರ್ಯ:—(ಸಿಟ್ಟಿನಿಂದ) ಬಿಡರಿ ರಾಯರ! ಮುಟ್ಟಬೇಡಿರಿ. ಆ ಹೇಸಿ ಮುಂಡೆಮಗನನ್ನು! ಅವನಿಂದು ನಮ್ಮ ಕುಲವನ್ನೆಯೆ ಕೆಡಿಸಿರುವ!

ರಾಯರು:—ಅದೇನಾಯಿತು ಸ್ವಾಮಿ! ಅದಾವ ಮಹಾಪಾತಕವನ್ನು ಮಾಡಿರುವ ಮಾಧವ?

ಆಚಾರ್ಯ:—ಯಾವ ಪಾತಕ ಅಂತೀರಿ? ಕೇಳರಿ ಅವನನ್ನೆ! ಆ ಹೊಲೇರ ಹುಡುಗನಿಗೆ ಮಡಿ ನೀರು ಹಾಕಬೇಕೆ? ಮೂರ್ಖ?

ರಾಯರು:—ಇಷ್ಟ್ಯಾಕನ? ಅಲ್ಲ! ಆಚಾರ್ಯರೆ, ನೀರಡಿಸಿದವರಿಗೆ ನೀರನ್ನು ಹಣಿಸುವುದು ಪಾಪವೋ ಪುಣ್ಯವೋ?

ಆಚಾರ್ಯ:—ಯಾರ ದರ್ಶನದಿಂದ ಪಾಪದ ಪರಿಚಯ, ಯಾರ ನೆರಳು ಕೂಡ ಪಾತಕದ ಮನೆ, ಇಂಥವರಿಗೆ ಪ್ರತ್ಯಕ್ಷ ನೀರನ್ನು ನೀಡುವು ದೆಂದರೇನು? ನಿಮಗಿದು ಪುಣ್ಯಕರ್ಮವೆನಿಸುವದೇ?

ರಾಯರು:—ಇದೊಂದು ಗೊಡ್ಡು ರೂಢಿಯ ಮೂಢವಿಚಾರ. ಅವರ ದರ್ಶನ-ಸ್ಪರ್ಶನಗಳಲ್ಲಿಯೂ ಅಪವಿತ್ರತೆ ಇದೆ ಎಂದು ತಿಳಿಯುವುದು ಕುರುಡು ನಂಬಿಗೆಯ ಪರಮಾವಧಿ!

ಆಚಾರ್ಯ:—ಹು.! ಸಾವಿರಾರು ವರುಷಗಳಿಂದ ನಡೆಯುತ್ತ ಬಂದ ನಂಬಿಕೆಯು ಕುರುಡೇನು? ಅದನ್ನು ತಳೆದ ಹಿರಿಯರೆಲ್ಲ ಕುರುಡ ರೇನು?—ಹೊಸಬರಾದ ನೀವಷ್ಟೇ ಜಾಣರೆನ್ನಿ?

ರಾಯರು:—ಹಾಗಲ್ಲ ಆಚಾರ್ಯರೇ! ಹಿಂದೆ ಎಂದೋ ಒಮ್ಮೆ ಇವರ ಪೂರ್ವಜರು ಪಾತಕಗಳನ್ನು ಮಾಡಿರಬಹುದು. ಅದಕ್ಕಾಗಿ ಎಷ್ಟು ತಲೆಗಳವರೆಗೆ ನಿಮ್ಮ ಶಿಕ್ಷೆಯು ಸಾಗತಕ್ಕದ್ದು?

ಆಚಾರ್ಯ:—ಇಂದಾದರೂ ಅವರ ಸ್ಥಿತಿ ಏನಿದೆ? ಅವರ ಹೊಲಸು ನಡೆಯೇನು? ನುಡಿಯೇನು? ಹೊಲಸು ಪದಾರ್ಥಗಳನ್ನು ತಿನ್ನುವುದು; ಹೊಲಸು ಕೆಲಸಗಳನ್ನು ಮಾಡುವುದು; ಒಂದಾದರೂ ಒಳ್ಳೆಯ ಸಂಸ್ಕಾರ ವಿರಬೇಕು? ಮತ್ತೆ ಅವರ ಕೈವಾರಿಗಳಾಗಬಯಸುವಿರಿ!

ರಾಯರು:—ಅಹುದು! ಆಚಾರ್ಯ! ಅವರು ಹೊಲಸು ಇರುವ ರೆಂಬುದು. ನಿಜವು. ಆದರೆ ಅದರ ಹೊಣೆಯು ನಮ್ಮ ಮೇಲೆಯೂ ಇಲ್ಲದಿಲ್ಲ. ಅವರನ್ನು ಸಮಾಜಬಾಹಿರರನ್ನಾಗಿ ಮಾಡಿ ನಾವೇ ಅವರನ್ನು ಹೊಲಸಿನ ಕೊಳೆಯಲ್ಲಿ ಕೊಳೆಯಹಚ್ಚಿರುವೆವು! ಇಂದು ಹೊಲಸಿದ್ದ ವರು ನಾಳೆ ನಿರ್ಮಲರಾಗಲರಿಯರೇ?

ಆಚಾರ್ಯರು:- ಅದು ಹೇಗೆ ಸಾಧ್ಯ ರಾಯರೇ? ತೊಳೆದರೆ ಮೈಯ ಮೈಲಿಗೆಯು ಹೋಗಬಹುದು? ಮನಸ್ಸಿನದು ಅದೆಂತು ಹೋಗಬೇಕು? ಇಂಥವರ ಸಂಸರ್ಗದಿಂದ ಸಮಾಜವು ಹಾಳಾಗದಿರದೇ?

ರಾಯರು:—ಮನಸ್ಸಿನ ಮೈಲಿಗೆಯ ವಿಷಯವನ್ನು ಪರಿಕಿಸುವುದು ಅಷ್ಟೇನು ಸುಲಭವಿಲ್ಲ ಆಚಾರ್ಯರೆ! ಹಾಗೇ ನೋಡಿದರೆ ಅದಾರ ಮನಸ್ಸು ಮಡಿಯಾದುದಿದೆ? ನಿಮ್ಮದಿದೆಯೋ? ನನ್ನದಿದೆಯೋ? ನೀವು ಪ್ರಮಾಣಪಟ್ಟು ಹೇಳಬಲ್ಲಿರಾ ನಿಮ್ಮ ಮನಸ್ಸಿನಲ್ಲಿ ಹೊಲಸು ಕಲ್ಪನೆಗಳು ಬರುವದಿಲ್ಲೆಂದು? ಹೊಲೆಯರ ಸಂಸರ್ಗದಿಂದ ನಮ್ಮ ಸಮಾಜವು ಹಾಳಾಗಬೇಕಾದರೆ, ಅದೇನು ಸಂಕುರೋಗವೇ? ಯಾಕೆ ಸುಮ್ಮನೆ ಸಲ್ಲದ ಕಲ್ಪನೆಗಳನ್ನು ಅಪ್ಪಿಕೊಳ್ಳುವಿರಿ!

ಆಚಾರ್ಯರ:—ನೀವು ಏನೇ ಹೇಳಿರಿ ರಾಯರೇ! ಬುದ್ಧಿಯು ನಿಮ್ಮ ಕೆಲಮಾತುಗಳನ್ನು ಒಪ್ಪಿಕೊಂಡರೂ-ಹೃದಯವು ಅದನ್ನು ಸ್ವೀಕರಿಸಲು ಸಿದ್ಧವಾಗುವದಿಲ್ಲ.

ರಾಯರು:—ಆಗಲಿ-ಇಂದಾಗದ ಮಾತು, ನಾಳೆ ಆಗಬಹುದು. ವ್ಯರ್ಥ ವಾದವನನ್ನು ಮಾತ್ರ ಬಿಂಸಿಸಬೇಡಿ.

ಕರ್ನಾಟಕ ಏಕೀಕರಣ.

ಪೀಠಿಕೆ.

[ಅದೇ ಮಾನ್ಯ ಮುಂದಾಳುಗಳ ಉಪನ್ಯಾಸವಾಗಿತ್ತು. ಕನ್ನಡಿಗರ ಎದೆಯಲ್ಲೆಲ್ಲ ಅದರಿಂದ ಅಲ್ಲೋಲಕಲ್ಲೋಲ; ತರುಣರ ತಲೆಯು ವಿಪರೀತವಾಗಿ ತಿರುಗಿತ್ತು. ಇಂಥ ಸಮಯದಲ್ಲಿ ಗೆಳೆಯರೀರ್ವರು ಇದನ್ನು ಕುರಿತು ಚರ್ಚಿಸುತ್ತಲಿರುವರು.]

ವೀರಣ್ಣ:-ಕೇಳಿದಿಯಾ ಪಾರಿಸಾ ಇಂದಿನ ನಮ್ಮ ಉಪನ್ಯಾಸವನ್ನು.

ಪಾರ್ಶ್ವನಾಥ:—ಅಹುದು! ಯಾಕೆ? ಅಂಥದೇನಿದೆ ಅದರಲ್ಲಿ?

ವೀರಣ್ಣ:—ಮತ್ತೇನಿರಬೇಕು? ನಮ್ಮ ಏಕೀಕರಣದ ಕೆಲಸವು ಇದೇ ಹದಕ್ಕೆ ಬರುವ ಸಮಯ. ಇಂಥ ಸಮಯದಲ್ಲಿ ನಮ್ಮವರೇ ಈ ಬಗೆಯಾಗಿ ಕಾಲ್ತೊಡಕಾಗಬೇಕೆ?

ಪಾರ್ಶ್ವನಾಥ:—ಹಾಗಾದರೆ ತನಗೆ ಅನಿಸಿದ್ದನ್ನು ಆಡಲೇ ಬಾರದೆ? ಈ **ನವಯುಗದಲ್ಲಿ** ಇಷ್ಟೂ ಸ್ವಾತಂತ್ರ್ಯಬೇಡವೆ?

ವೀರಣ್ಣ:—ಇಲ್ಲಿ ಸ್ವಾತಂತ್ರ್ಯದ ಪ್ರಶ್ನೆಯಿಲ್ಲ. ಇಂಥ ಸೂಜ್ಞರಿಗೆ ಹೀಗೇಕೆನಿಸಬೇಕು? ಎಂಬುದೇ ನನಗೆ ತಿಳಿಯದಾಗಿದೆ. ಇವರಿಗಿನ್ನೂ ಕನ್ನಡ ನಾಡಿನ ರೋಗದ ನಿದಾನವೇ ಆಗಿಲ್ಲೆನ್ನಬೇಕಾಗುವದು.

ಪಾರ್ಶ್ವನಾಥ:—ಅದು ಹೇಗೆ? ಅವರೆನ್ನುವದರಲ್ಲಾದರೂ ತಪ್ಪೇನಿದೆ? ಅವರುಸುರಿದ ಒಂದೊಂದೇ ಮಾತನ್ನೆತ್ತೋಣ. ಇದು ನೋಡು! ಏಕೀಕೃತ ಕರ್ನಾಟಕವು **ಆರ್ಥಿಕದೃಷ್ಟಿಯಿಂದ ಸ್ವಂಯಪೂರ್ಣ** ಇರಲು ಬೇಕಲ್ಲವೇ? ಅದಿರದ ಹೊರತು ನಮ್ಮ ಉನ್ನತಿಯಾಗುವುದೆಂತು?

ವೀರಣ್ಣ:—ಹಂಗಿನರಮನೆಗಿಂತ ಅಂಬಲಿಯ ತಿಳಿ ಲೇಸು ಕಾಣಾ! ನಾವು ನಮ್ಮ ಪ್ರಾಂತಿಕ ಸಂಸಾರವನ್ನು ಇದ್ದ ಹಣದಲ್ಲಿ ಸಾಗಿಸುವೆವು! **ಪರತಂತ್ರ ಸಿರಿವಂತಿಕೆಗಿಂತ ಸ್ವತಂತ್ರ ಬಡತನವು ಮೇಲು!** ನಮಗಿಂತ ಕಡಿಮೆ ಉತ್ಪನ್ನವಿದ್ದ ಸ್ವತಂತ್ರ ದೇಶಗಳು ತಮ್ಮ ಆಡಳಿತವನ್ನು ಸರಿಯಾಗಿ ಸಾಗಿಸುತ್ತಿರುವಾಗ ನಮಗೇ ಅದು ಅಸಾಧ್ಯವೇಕಾಗಬೇಕು ತಿಳಿಯದು.

ಪಾರ್ಶ್ವನಾಥ:—ಇದು ನೋಡು! ತಾತ್ವಿಕ ಧ್ಯೇಯವಾದವು ವ್ಯವಹಾರದಲ್ಲಿ ಸರಿಬರುವದಿಲ್ಲ-ಸಮಾಜದ ವ್ಯವಹಾರದಲ್ಲಂತೂ—

ವೀರಣ್ಣ:—ತಡೆಯಯ್ಯಾ! ನಾನು ಬರೀ ಧ್ಯೇಯವಾದವನ್ನು ಹೇಳುವದಿಲ್ಲ! ಪ್ರತ್ಯಕ್ಷ ವ್ಯವಹಾರವನ್ನೆಯೆ-ಬೇರೆ ಬೇರೆ ದೇಶಗಳ ವ್ಯವಹಾರಗಳನ್ನೆಯೆ-ನಿರ್ದೇಶಿಸಿರುವೆನಲ್ಲ? ಮೇಲಾಗಿ ಇಂದಿನ ವ್ಯವಹಾರವು ನಮಗೆ ಏನನ್ನು ತೋರಿಸುವದು? ನಮ್ಮ ಹಣವನ್ನೆಯೆ ಬಳಸಿ ಬಲಶಾಲಿಗಳಾದ ಅನ್ಯರು, ನಮ್ಮದನ್ನು ನಮಗೆ ಕೊಡಲು ಒಲ್ಲರು,

ತಮ್ಮದನ್ನೇನು ಮಣ್ಣುಕೊಡುವರು? ಇಂಥವರ ನೆರವು ಕೊರಳಲ್ಲಿಯ ಬಂಡೆಗಲ್ಲು. ಅದೊಂದು ಮರಣಕ್ಕೆ ಕೊಟ್ಟ ಔತಣ.

ಪಾರ್ಶ್ವನಾಥ:—ಇದು ಹಿಂದಿನ ಆಡಳಿತದ ಮಾತು. ಇಂದಿನ ಕಾಂಗ್ರೆಸ ರಾಜ್ಯದಲ್ಲಿ—

ವೀರಣ್ಣ:—ಸಾಕು ನಿನ್ನ ಕಾಂಗ್ರೆಸ್ಸಿನ ಬಡಿವಾರ! ಅದು ಆಳುವವರ ಆಳು; ಆಳುವವರನ್ನು ಅದು ಅಳಿಸಿಯೇ ಬಿಡುವದು. ನಾವು ಬಲವಂತರಾಗದೇ ಕಾಂಗ್ರೆಸ್ಸು ನಮಗೆ ನೆರವನ್ನೀಯುವುದು ಸಾಧ್ಯವಿಲ್ಲ. **ಏಕೀಕರಣವೇ ಈಸಾಮರ್ಥ್ಯದ ಸೆಲೆ.**

ಪಾರ್ಶ್ವನಾಥ:–ಇರಲಿ! ಆರ್ಥಿಕ ಮಾತನ್ನು ಬಿಟ್ಟರೂ **ಉಳಿದ ಸಿದ್ಧತೆ**ಯಾದರೂ ಇದೆಯೋ ನಮ್ಮಲ್ಲಿ?

ವೀರಣ್ಣ:—ಅದಾವುದಿಲ್ಲ?

ಪಾರ್ಶ್ವನಾಥ:—ಯಾವುದಿದೆ? ಹೇಳು ನೋಡೋಣ!

ವೀರಣ್ಣ:—ನಿಮಗೆ ಬೇಕು ಯಾವುದು? ನಮ್ಮಲ್ಲಿ ಎಲ್ಲವೂ ಇದೆ.

ಪಾರ್ಶ್ವನಾಥ:–ಮುಖ್ಯಮಾತನ್ನೆಯೆ ಎತ್ತುವೆ. ದಯವಿಟ್ಟು ತಪ್ಪು ತಿಳುವಳಿಕೆಯನ್ನು ಮಾತ್ರ ಮಾಡಿಕೊಳ್ಳಬೇಡ! ಇದು ನೋಡು! ಏಕೀಕರಣವೆನ್ನುವಿ! ನಮ್ಮ **ಮನಸ್ಸಿನ ಏಕೀಕರಣವಾಗಿ**ದೆಯೋ ನಮ್ಮಲ್ಲಿ ಸಾವಿರ ಪಂಗಡಗಳು! ಬಹುಸಂಖ್ಯಾಕರಾದ ನಾವು ಅಲ್ಪಸಂಖ್ಯಾಕರನ್ನು ಸಿಕ್ಕಲ್ಲಿ ಅರೆಯುತ್ತಲಿರುವೆವು! ಅವರನ್ನು ಪ್ರೀತಿಯಿಂದ ನಡೆಯಿಸಿಕೊಳ್ಳುವ ಔದಾರ್ಯವು ಇದೆಯೋ ನಮ್ಮಲ್ಲಿ? ಸುಮ್ಮನೆ ದೊಡ್ಡ ದೊಡ್ಡ ಮಾತುಗಳನ್ನಾಡಿ ಪ್ರಯೋಜನವೇನು?

ವೀರಣ್ಣ:—ಅಹುದು! ನೀನೆನ್ನುವುದರಲ್ಲಿ ವಿಪುಲವಾದ ಅರ್ಥವಿದೆ! ನಿಜ. ಆದರೆ ಇವೆಲ್ಲ ನಮ್ಮನರಲ್ಲಿ ಈ ಪರಿಗೆ ಮೂಡದಿರುವದಕ್ಕೂ ಏಕೀಕರಣದ ಅಭಾವವೇ ಕಾರಣ! ನಾಳೆ ಆಡಳಿತವನ್ನು ವಹಿಸುವ ಹೊಣೆ ಬೀಳಲಿ! ಮೇಲಿನ ಗುಣಗಳೆಲ್ಲ ತಾವಾಗಿಯೆ ಅರಳುವವು! ಹೆರವರ ತುಳಿತವು ನಮ್ಮಲ್ಲಿಯ ಗುಣಗಳನ್ನೆಲ್ಲ ಮಣ್ಣುಪಾಲು ಮಾಡಿದೆ.

ಪಾರ್ಶ್ವನಾಥ:—ಇಂದಿನ ಅನುಭವವಂತೂ ವಿಪರೀತವಿದೆ. ಮುಂದೇನಾಗುವದು ನೋಡಬೇಕು!

ಅಭ್ಯಾಸ ೧೬.

ಕೆಳಗೆ ಕಾಣಿಸಿದ ರೀತಿಯಲ್ಲಿ ಸಂವಾದಗಳನ್ನು ಬರೆಯಿರಿ—

೧ **ತಂದೆಮಕ್ಕಳಲ್ಲಿ**—ಮಗನು ಉದ್ಯೋಗ ಮಾಡಬೇಕೆಂದು ತಂದೆಯು ಅನ್ನುವನು. ಮಗನು ಅಭ್ಯಾಸವನ್ನು ಮುಂದುವರಿಸಬೇಕೆನ್ನುವನು.

೨ **ಹುಡುಗಿಯರೀರ್ವರಲ್ಲಿ**-ಹೆಂಗಸರಿಗೆ ವ್ಯಾಯಾಮದ ಅವಶ್ಯಕತೆ-ಅನವಶ್ಯ ಕತೆಯನ್ನು ಕುರಿತು.

(೧೯೩೪)

೩ **ಸೈನಿಕ-ನಾವಿಕರಲ್ಲಿ**-ತಮ್ಮ ತಮ್ಮ ವ್ಯವಸಾಯದ ಸುಖ-ದುಃಖಗಳನ್ನು ಕುರಿತು.

(೧೯೩೫)

೪ **ಗೆಳೆಯರಿಬ್ಬರಲ್ಲಿ**-ಸಿನೇಮಾದ ಹಿತಾಹಿತಗಳನ್ನು ಕುರಿತು.

(೧೯೩೬)

೫ **ಮ್ಯಾಟ್ರಿಕ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳೀರ್ವರಲ್ಲಿ**,—ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಸಂಭವದ ಬಗ್ಗೆ.

(೧೯೩೭)

೬ **ಡಾಕ್ಟರ— ರೋಗಿ (Patient) ಇವರಲ್ಲಿ**-ತನಗೊಂದು ದೊಡ್ಡ ರೋಗ ವಾಗಿದೆ. ಎಂಬ ರೋಗಿಯ ಕಲ್ಪನೆಯನ್ನು ಕುರಿತು.

೭ **ಮೋಟಾರ-ಡ್ರಾಯವ್ಹರ-ಮತ್ತು ಸಾಯುಕಲವನ್ನು ಹತ್ತಿದಮನುಷ್ಯನು ಇವರಲ್ಲಿ**:- ಮೋಟಾರದ ಧಕ್ಕೆಯಿಂದ ಸಾಯುಕ್ಲಿಸ್ಟನು ಬಿದ್ದಿರುವ.

(೧೯೩೮)

೪. ಭಾಷಾಂತರಗಳು.

೧ ಅಂದರೇನು ?:—

ಒಂದು ಭಾಷೆಯಲ್ಲಿಯ ವಿಚಾರಗಳನ್ನು ಎರಡನೆಯ ಭಾಷೆಗೆ ಪರಿವರ್ತಿಸುವುದೇ **ಭಾಷಾಂತರದ** ಕೆಲಸ. ನಾವಿಲ್ಲಿ ಆಂಗ್ಲಭಾಷೆಯಲ್ಲಿಯ ವಿಚಾರಗಳನ್ನು ಕನ್ನಡಿಸುವ ವಿಷಯವನ್ನಷ್ಟೇ ವಿವರಿಸುವೆವಾದರೂ, ನಾವೀಗ ಹೇಳಲಿರುವ ಭಾಷಾಂತರದ ಸಾಮಾನ್ಯ ನಿಯಮಗಳು ಎಲ್ಲ ಭಾಷೆಗಳಿಗೂ ಅನ್ವಯಿಸುವವು.

೨ ಮಾಡುವುದೇತಕ್ಕೆ ?:—

ನಮ್ಮ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಮಾಡುವ ಅನೇಕ

ಸಾಧನಗಳಲ್ಲಿ ಇದೊಂದು. ನಾವೀಗ ನಮ್ಮ ಕೂಪ-ಮಂಡೂಕ ವೃತ್ತಿಯನ್ನು ತೊರೆದು ಜಗತ್ತಿನಲ್ಲಿಯ **ನವವಿಚಾರ-ಪ್ರವಾಹಗಳ** ಪರಿಚಯವನ್ನು ಮಾಡಿಕೊಳ್ಳಬೇಕು. ಅವನ್ನು ನಮ್ಮ ನಾಡಿನಲ್ಲಿ ಹರಿಯಿಸಿ ನಮ್ಮವರಲ್ಲಿ ನವಚೈತನ್ಯವನ್ನು ಬೀರಬೇಕು.

ಅದಕ್ಕಾಗಿ ಕೆಲವೊಂದು ವಿಷಯಗಳನ್ನು ಪೂರ್ತಿಯಾಗಿ ಜೀರ್ಣಿಸಿಕೊಂಡು ನಮ್ಮವರಿಗೆ ಸರಿಹೋಗುವ ರೀತಿಯಲ್ಲಿ ಹೇಳಬೇಕು. ಬೇರೆ ಕೆಲವನ್ನು ಭಾಷಾಂತರಿಸಿ ಜನರೆದುರು ಇದ್ದಕ್ಕಿದ್ದಂತೆ ಇಡಬೇಕು.

ಜಗತ್ತಿನ ಸಾಹಿತ್ಯಗಳಲ್ಲೆಲ್ಲ ಆಂಗ್ಲ ಸಾಹಿತ್ಯವು ಸಮೃದ್ಧವಾದುದು. ಪ್ರಪಂಚದ ಯಾವದೇ ಭಾಷೆಯಲ್ಲಿ ಪ್ರಸಿದ್ಧವಾದ ಅತ್ಯುತ್ತಮ ಗ್ರಂಥವು ಪ್ರಕಟವಾದ ಕೆಲವು ತಿಂಗಳಲ್ಲಿ ಆಂಗ್ಲ ಭಾಷೆಯಲ್ಲಿ ಅನುವಾದಿತವಾಗುವುದು. ಇಷ್ಟು ದಕ್ಷತೆ ಆಂಗ್ಲೇಯರದು. ಆದುದರಿಂದ ಅದರಲ್ಲಿಯ ಉತ್ತಮ ಗ್ರಂಥಗಳ ಪರಿವರ್ತನದಿಂದ ನಮ್ಮ ನುಡಿಗೆ ಮಹದುಪಕಾರವಾಗುವುದರಲ್ಲಿ ಸಂದೇಹವಿಲ್ಲ.

೩ ಹೇಗೆ?:—

೧) ಮೂಲ ಅವತರಣವನ್ನು ಅನೇಕಸಲ ಓದಿ, ಅದರ ಅರ್ಥವನ್ನು ಪೂರ್ತಿಯಾಗಿ ಅರಿತುಕೊಳ್ಳಬೇಕು. ಅದರಲ್ಲಿಯ ಮುಖ್ಯ ಭಾವವನ್ನೂ ಅದಕ್ಕೆ ಪೋಷಕವಾದ ವಿಚಾರಸರಣಿಯನ್ನೂ ಚೆನ್ನಾಗಿ ತಿಳಿದುಕೊಳ್ಳಬೇಕು. ಅದಕ್ಕೆ ಆಂಗ್ಲಭಾಷೆಯ ಪರಿಚಯವೂ ಸಾಕಷ್ಟಿರಲು ಬೇಕು.

೨) **ಭಾಷಾಂತರವೆಂದರೆ ಶಬ್ದಕ್ಕೆ ಪ್ರತಿಶಬ್ದವನ್ನಿಡುವುದಲ್ಲ.** ಮೂಲದಲ್ಲಿಯ **ಭಾವವು** ಭಾಷಾಂತರದಲ್ಲಿ ಸವಿವರವಾಗಿ ಇಳಿಯಬೇಕು. ಇದು ಮುಖ್ಯ. ಒಂದರ್ಧ ಶಬ್ದವು ಅನುವಾದಿತವಾಗದೆ ಉಳಿದರೆ ಅದೇನು ದೊಡ್ಡ ದೋಷವಲ್ಲ.

೩) ಮೂಲದಲ್ಲಿಯ **ಪಡೆನುಡಿಗಳಿಗೆ** ರಚನಾ-ವಿಶೇಷಗಳಿಗೆ (Idioms) ಸಮಾನವಾದ ಕನ್ನಡ ಪಡೆನುಡಿಗಳನ್ನು ಉಪಯೋಗಿಸಬೇಕು. ಆಂಗ್ಲ ಭಾಷೆಯಲ್ಲಿಯ ವಿಚಾರವ್ಯಕ್ತಿಯ ರೀತಿಯು ನಮ್ಮದರಿಂದ ತೀರ ಭಿನ್ನವಿರುವ ಸಂಭವವುಂಟು. ಅಂಥ ಸಂದರ್ಭದಲ್ಲಿ ಆ ರೀತಿ-ಭಿನ್ನತೆಯು

ಪರಿಚಯವಿರಲು ಬೇಕು. ಒಟ್ಟಾರೆ ಮೂಲದಲ್ಲಿಯ **ಕಸುವು** ಭಾಷಾಂತರದಲ್ಲಿ ಬರಬೇಕು.

೪ ಕೆಲವು ಮಾದರಿಗಳು:—

ಮುಂದೆ ನಮ್ಮ ನಾಡಿನಲ್ಲಿಯ ಮಹನೀಯರು ಭಾಷಾಂತರಿಸಿದ ಕೆಲವು ಮಾದರಿಗಳನ್ನು ಕೊಟ್ಟಿರುವೆವು. ವಿದ್ಯಾರ್ಥಿಗಳು ಅವನ್ನು ಪರಿಶೀಲಿಸಿ ಅನುಕರಿಸಲು ಯತ್ನಿಸುವರೆಂದು ನಂಬಿಗೆ.

೧

Is it God that is born in you? Have you realized that you are an instrument of God? That your bodies are not your own? If you have realized that, then you are a true nationalist; then alone will you be able to restore this great Nation. Darkness will hem you round; disappointments will cross your path; slander will pursue you from behind; but you are to depend on yourself and yourself alone.

—***Shri Aurobindo.***

ನಿಮ್ಮೆದೆಯಲ್ಲಿ ಪರಮಾತ್ಮನು ಅವತರಿಸಿರುವನೇ? ನಿಮ್ಮ ಶರೀರಗಳ ಒಡೆಯರು ನೀವಲ್ಲ; ಅವು ದೇವರ ಕೈಯಲ್ಲಿಯ ಆಯುಧಗಳೆಂಬುದನ್ನು ನೀವು ಅರಿತಿರುವಿರಾ? ಹಾಗಾದರೇನೇ ನೀವು ನಿಜವಾದ ರಾಷ್ಟ್ರಪುರುಷರು; ಅಂದೇ ನಿಮ್ಮಿಂದ ಈ ವಿಶಾಲವಾದ ರಾಷ್ಟ್ರವು ಉದ್ಧಾರವಾಗುವುದು. ಕಗ್ಗತ್ತಲೆಯು ಎಲ್ಲೆಡೆಯಿಂದ ನಿಮ್ಮನ್ನು ಮುತ್ತಬಹುದು; ನಿರಾಶೆಯು ದಾರಿಯಲ್ಲಿಯೇ ನಿಮ್ಮನ್ನು ತಡೆಯಬಹುದು; ನಿಂದೆಯು ಹಿಂದಿನಿಂದ ನಿಮ್ಮನ್ನು ಬೆನ್ನಟ್ಟಬಹುದು; ಆದರೆ ನೀವು ನಿಮ್ಮನ್ನುಳಿದು ಇನ್ನಾರನ್ನೂ ನೆಮ್ಮಕೂಡದು.

—ಚಿಜ್ಞಕೋರ.

೨

I wish to second the vote of thanks. I rise to do this due to a feeling of purely personal admiration and to the feeling that, if I did not express myself here, I would have to spend a sleepless night. I remember a few lines from the poetry of a distinguished poet Mr. **Laurence Binyon:**

Overbrim and overflow
Thine own heart if thou wouldst know.
For the spirit, born to bless
Lives but in its own excess"

—***Prof. Gokak***.

ಉಪನ್ಯಾಸಕರ ಬಗ್ಗೆ ಉಪಕಾರಸ್ಮರಣೆಯನ್ನು ನಾನು ಅನುಮೋದಿಸಬೇಕೆನ್ನುವೆ. ನಾನು ಈಗ ಎದ್ದಿರುವುದು ಕೇವಲ ಒಂದು ವ್ಯಕ್ತಿ ವಿಷಯಕ ನನ್ನ ಗೌರವದಿಂದ; ಮತ್ತು ನಾನಿಲ್ಲಿ ನನ್ನ ಮನಸ್ಸನ್ನು ಬಿಚ್ಚದೆ ಹೋದರೆ, ನಿದ್ರೆಯಿಲ್ಲದೆ ರಾತ್ರಿಯನ್ನು ಕಳೆಯಬೇಕಾದೀತೆಂಬ ಭಾವನೆಯಿಂದ. ಮಿ. **ಲಾರೆನ್ಸ ಬಿನಿಯನ**ರೆಂಬ ಪ್ರಖ್ಯಾತ ಕವಿಗಳ ಕೆಲವು ಸಾಲುಗಳು ನನ್ನ ಲಕ್ಷ್ಯದಲ್ಲೀಗ ಬರಲಿವೆ.

ಅರಿವು ಬೇಕೇ ನಿನಗೆ ? ಕೇಳಿದನು
ನಿನ್ನೆದೆಯನೇ ತುಂಬಿ ಹೊರಸೂಸು.
ಲೇಸಬಯಸಲು ಬಂದ ಆತುಮವು
ತನ್ನ ವೆಗ್ಗಳದಿ ತಾ ಬಾಳುವುದು.

ಮಿ ಬಿನಿಯರನು ಈ ರಾತ್ರಿ ತುಂಬಿ ಹೊರಸೂಸಿದ್ದಾರೆ. ಅವರು ತಮ್ಮ ಹೃದಯವನ್ನು ಮಾತ್ರವಲ್ಲ, ಭಾರತದ ಹೃದಯವನ್ನೂ ಅರಿತಿದ್ದಾರೆ.

—ರಂ. ಶ್ರೀ. ಮುಗಳಿ

ಅಭ್ಯಾಸ ೧೭.

ಕೆಳಗಿನ ಅವತರಣಗಳನ್ನು ಕನ್ನಡಕ್ಕೆ ಪರಿವರ್ತಿಸಿರಿ—

೧

March on !

It is not the work of a day and the path is full of the most deadly thorns. But Partha-Sarathi is ready to be our Sarathi; we know that; and in His name and with eternal faith in Him set fire to the mountain of misery that has been heaped upon India for ages—and it shall be burned down. Come then, look it in the face, brethren, it is a grand task and we are so low. But we are the sons of Light and children of God. Glory unto the Lord ! we will succeed. Hundreds will fall into the struggle; hundreds will be ready to take it up. I may die here unsuccessful; another will take up the task. You know the disease; you know the remedy: only have faith. Don't look up to the so called rich and great; do not care for the heartless intellectual writers and their cold-blooded newspaper articles. Faith, fiery faith, and fiery sympathy ! Life is nothing; death is nothing–hunger nothing –cold nothing ! **Glory unto the Lord !** march on! The Lord is our General. Do not look back to see who falls—forward —onward ! Thus and thus, we shall go on ! brethren ! One falls and another shall take up the task.

—*Swami Vivekanand.*

೨

Hope of Dawn

The night is dark over our land, the people's mind is obscured, spreading blindness of unreason, that leads to general disruption and disaster. In a dense atmosphere of mutual distrust whatever we try to raise as our shelter comes down with a crash upon our heads, and all our endeavours even those that are for public good, hurt the cause that is our own. A suicidal insanity prevents us from realizing the utter heinousness of striking those whose destiny is one with ourselves.........This evil, which like a night-mare is stifling the life-breath of our country, belongs to an irrational era of senility whose time, I hope, is near to its end.

Let the morning break in the East in a majesty of the new-born light ! Let the youth of the country, heroically overcome the barriers of difference in opinions and customs, in religion and interests and combine in welcoming a **New age at** the call of brother's love It is the weak who have not the power to forgive. Let the vigorous generosity of the young manifest itself by silencing all the bickerings and building a **Commonwealth of Comradeship** upon an unshakeable foundation of perfect spirit of co-operation.

—***Rabindrnath***

The Two Paths

The choice before our youths today lies between the **way of self-restraint** and the **way of self-indulgence** and ease, the one leading to salvation and freedom, the other to utter destruction. They are at the parting of ways. Literature

full of the virus of self-indulgence, served out in attractive forms is flooding the country from the West and there is the greatest need for our youth to be on their guard. The present is for them an age of transition of ideals and of ordeals and the one thing needed for them in this crisis is the progressive self-restraint, for it alone can lead to true freedom for themselves, their country and the world. The test for the youth lies before them and that is to win their diploma from the University of Life, with snares, pitfalls and ordeals, without which their academic degree will be in vain.

—***Mahatma Gandhi***

೫ ಗುಣಗ್ರಹಣ

೧ ಅಂದರೇನು ?:—

ಕಾವ್ಯವು ಗದ್ಯವಿರಲಿ-ಪದ್ಯವಿರಲಿ, ಅದರ ಗುಣದೋಷಗಳ ವಿಮರ್ಶೆಯನ್ನು ಮಾಡಿ ಗುಣಗಳ ರುಚಿಯನ್ನು ಸವಿಯುವುದೇ '**ಗುಣಗ್ರಹಣ**' ದ ಕೆಲಸ. ಇದೊಂದು ಕಾವ್ಯದಲ್ಲಿಯ **ಕಸವನ್ನೆಸೆದು ರಸವನ್ನು ಸೇವಿಸುವ** ರೀತಿ. ಈ ಬಗೆಯಿಂದ ಪರೀಕ್ಷಣ ಮಾಡುವ ವಿಮರ್ಶಕನು ಕಾವ್ಯಕ್ಕೆ ಸರಿಯಾದ ಬೆಲೆಯನ್ನು ಕಟ್ಟಿ, ವರಕವಿಗಳನ್ನು ನರಕವಿಗಳಿಂದ ಬೇರ್ಪಡಿಸಿ, ಜನತೆಯ ಅಭಿರುಚಿಗೆ ಸರಿಯಾದ ಪಲನವನ್ನು ಕೊಡುವನು.

೨ ಬೇಕೆತಕ್ಕೆ ?:—

೧) ಇದರಿಂದ ನಮಗೆ ಕವಿಯ ಭಾವದೊಡನೆ ಸಮರಸರಾಗಲು ಬರುವದರಿಂದ ಅವನ ಕೃತಿಯಿಂದ ಹೆಚ್ಚಿನ ಆನಂದವನ್ನು ಪಡೆಯುವ ಪಾತ್ರತೆಯು ಬೆಳೆಯುವುದು. ಸ್ವಲ್ಪದರಲ್ಲಿ ಹೇಳಬೇಕಾದರೆ ನಾವು ಕಾವ್ಯ-ರಸವನ್ನು ಸವಿಯುವ ರಸಿಕರಾಗುವೆವು.

೨) ಇದರಲ್ಲಿ ಕಾವ್ಯದ ವಿವಿಧಾಂಗಗಳ ಪರಿಶೀಲನವು ಚೆನ್ನಾಗಿ ಆಗ ಬೇಕಾಗುವದರಿಂದ ನಮಗೂ ಕಾವ್ಯ ಬರೆಯಲು ಪಾತ್ರತೆಯು ಬರವುದು.

೩) ಈ ವಿಮರ್ಶೆಯಿಲ್ಲದ್ದರಿಂದಲೇ ಸಾಹಿತ್ಯ ಜೀವನದಂತೆ ಸಾಮಾನ್ಯ ಜೀವನದಲ್ಲಿಯೂ ಗೊಂದಲ ಉಂಟಾಗಿದೆ. ಮೇಲು-ಕೀಳನ್ನು ತಿಳಿ ಯುವ ವಿವೇಕವು ಅಳಿದು ಇಲ್ಲದ ಕೃತಿಗೆ ಸಲ್ಲದ ಮಹತ್ವವು ಬಂದು ಸಮಾಜದ ಶಾಂತಿಯು ಹಾಳಾಗಲಿದೆ. ಇದನ್ನೆಲ್ಲ ತಪ್ಪಿಸಲು ವಿಮರ್ಶನ ಬೇಕು, **ಗುಣಗ್ರಹಣ** ಬೇಕು.

೩ ಮಾಡುವುದೆಂತು ? ಅ) ಪೂರ್ವಸಿದ್ಧತೆ:—

ಕಾವ್ಯದ ವಿಮರ್ಶೆಯನ್ನು ಚನ್ನಾಗಿ ಮಾಡಬಯಸುವವನಿಗೆ ಅದರ ವಿವಿಧಾಂಗಗಳ ಪರಿಚಯವಿರಲೇಬೇಕೆಂದು ಹೇಳುವುದು ಅನವಶ್ಯಕ. ಅದನ್ನೆಲ್ಲ ವಿವರವಾಗಿ ಇಲ್ಲಿ ಕೊಡುವುದು ಸಾಧ್ಯವಿಲ್ಲದ್ದರಿಂದ ಸಾಮಾನ್ಯ '**ಸವಿ**' ಗೆ ಬೇಕಾದ ಮುಖ್ಯಾಂಗಗಳ ವಿಚಾರವನ್ನಷ್ಟು ಇಲ್ಲಿ ಮಾಡಿ ರುವೆವು.

೧) **ಕವಿಯ ಮೂರು ಗುಣಗಳು**:—ಪ್ರತಿಯೊಬ್ಬ ನಿಜವಾದ ಕವಿಯಲ್ಲಿ **ಪ್ರತಿಭೆಯೆಂ**ಬುದೊಂದು ಶಕ್ತಿಯು ಇದ್ದೇ ಇರುವುದು- ಇದ್ದೇ ತೀರಬೇಕು. ಅದಿಲ್ಲದವನು ಕವಿಯಾಗಲಾರನು, ಅದಿಲ್ಲದ ಬರಡು ಕವಿಯು ಬರೆವ ಕರಡು ಕವಿತೆಗಳು ಎಂದಿನಿಂದಲೂ ಬಲ್ಲವರ ಹೀಯಾಳಿ ಕೆಗೆ ಗುರಿಯಾಗಿವೆ, ಆಗಲಿವೆ. ಆದರೆ ದಿವ್ಯ ಪ್ರತಿಭೆಯುಳ್ಳ ಕವಿಶ್ರೇಷ್ಠನು ಸದೈವ ಸಮಾಜದಿಂದ ಗೌರವಿಸಲ್ಪಟ್ಟಿರುವನು.

'**ನವ ನವ ಉನ್ಮೇಷಗಳಿಂದ**' **ಮಿಂಚಿನಿಂದ** ಕೂಡಿದ ಈ **ಪ್ರತಿ ಭೆಯು**, ಒಂದು ಕವನವನ್ನು ರಚಿಸುವ ಪೂರ್ವದಲ್ಲಿ ಮುಂದಿನ ಮೂರು ಕೆಲಸಗಳನ್ನು ಮಾಡುವುದು. ಆ ಕೆಲಸಗಳನ್ನನನುಲಕ್ಷಿಸಿ ಅದಕ್ಕೆ ಕೆಳಗಿನ ಮೂರು ಭಿನ್ನಭಿನ್ನ ಹೆಸರುಗಳು ಬಂದಿವೆ:—

(೧) **ದರ್ಶನ**, (೨) **ಭಾವನೆ**, (೩) **ಕಲ್ಪನೆ**. ಕೆಲವರ ಅಭಿಪ್ರಾ ಯದ ಮೇರೆಗೆ ಈ ಮೂರೂ ಕೆಲಸಗಳನ್ನು ಮಾಡುವ ಶಕ್ತಿಗಳು ಸ್ವತಂತ್ರ

ವಾದವುಗಳು, ಪರಸ್ಪರ ಭಿನ್ನವಾದವುಗಳು. ನಮಗೆ ಅವು ಒಂದೇ ಶಕ್ತಿಯ ಮೂರು ಅವಿರ್ಭಾವಗಳು ಎಂದೆನಿಸುವುದು.

೧) **ದರ್ಶನ** (Vision):—ಈ ಶಕ್ತಿಯು ಕವಿಗೆ ವಿಶ್ವದಲ್ಲಿಯ ಪ್ರತಿಯೊಂದು ಒಡವೆಯ ಅಂತರಂಗವನ್ನೂ, ರಹಸ್ಯವನ್ನೂ, ತೋರಿಸುವುದು. ವಿಶ್ವದ ರಹಸ್ಯವನ್ನರಿತ ಹಿರಿಯರು ಅದೊಂದು ಆಳವಾದ ಸೌಂದರ್ಯಸಾಗರದಲ್ಲಿ ತೇಲುವ ವಸ್ತುವೆಂದು ಹೇಳಿರುವರು. '**ಆಳವಾಗಿ ಆಲೋಚಿಸುವಲ್ಲಿ ನಿಮಗೆ ಸೌಂದರ್ಯವು ತೋರುವುದು. ವಸ್ತುಗಳ ಆಳವಾದ ಅಂತರಾಳದಲ್ಲೆಲ್ಲ ಸಂಗೀತವದೆ**' ಎಂದು **ಕಾರ್ಲಾಯಿಲ್** ಮಹನೀಯರು ಉಸುರಿರುವರು. ಕವಿಯ '**ದಿವ್ಯದರ್ಶನವು**' ಅವನಿಗೆ ಈ ಅಂದವನ್ನು ತೋರಿಸುವುದು. ಅದನ್ನು ಕಂಡ ಮಹನೀಯರು ಜಗದೆಡೆಗೆ ಬೇರೆ ದೃಷ್ಟಿಯಿಂದಲೇ ನೋಡುವರು. ಅದು ಅವರಿಗೆ ತನ್ನ ಅನೇಕ ಗೂಢಗಳನ್ನು ಅರುಹುವುದುಂಟು.

೨) **ಭಾವನೆ** (Emotion):—ಕವಿಯ ಹೃದಯವು ತೀರಕೋಮಲವಾದುದು, ಅತಿಯಾಗಿ ವಿಶಾಲವಾದುದು. ಅದರಿಂದವನಿಗೆ ಪರಮಾತ್ಮನ ಸಾಮ್ರಾಜ್ಯಗಲ್ಲಿಯ ಪ್ರತಿಯೊಂದು ವಸ್ತುವಿನೊಡನೆ ಬೆರೆಯಲು, ಸಮರಸನಾಗಲು ಬರುವುದು. ಹೊರಗಣ ದೃಶ್ಯಗಳೂ ಧ್ವನಿಗಳೂ ಅವರ ಅಂತರಂಗದಲ್ಲಿ ಭಾವನೆಯ ಪ್ರಬಲವಾದ ಅಲೆಗಳನ್ನೆಬ್ಬಿಸಿ ಅವನಲ್ಲೊಂದು ಬಗೆಯ **ದೈವೀ ಅಸಂತೋಷವನ್ನು** ಜನಿಸುವದು! ಅದನ್ನು ಶಾಂತಗೊಳಿಸಲು— ಕಾವ್ಯರೂಪದಲ್ಲದನ್ನು ತೋಡಿಕೊಳ್ಳುವುದೊಂದೆ ಸಾಧನ. ಹೀಗಾಗಿ ಆಯಾ ಪ್ರಬಲ ಭಾವನೆಯು ಕಾವ್ಯರೂಪವನ್ನು ತಳೆಯುವುದು.

ಭಾವವು ರಸದ ಜನನಿ. ಇದರಂದಲೇ ಕಾವ್ಯದಲ್ಲಿ ರಸದ ಉತ್ಪತ್ತಿ. **'ದರ್ಶನ' ವು ಒಂದು ಹೊಸ ದೃಷ್ಟಿಯನ್ನು ನೀಡುವುದು. ಭಾವವು ಅದರಲ್ಲಿ ರಸವನ್ನು ತುಂಬುವುದು.**

೩) **ಕಲ್ಪನೆ** (Imagination):—ಇದರ ಕೆಲಸವು ದ್ವಿವಿಧ. ಇದು **ನವ ನೋಟಗಳನ್ನು ಕಾಣುವುದು- ನವ ನಾದಗಳನ್ನು ಕೇಳುವುದು.**

ದರ್ಶನಕ್ಕೆ ಬಂದ **ಕಾಣ್ಕೆ** ಅಮೂರ್ತವಾದುದು, **ಭಾವವು** ಹುಟ್ಟಿಸಿದ ರಸವು ಅಮೂರ್ತವಾದುದು. ಅವಕ್ಕೆ ಒಂದು ಮೂರ್ತಸ್ವರೂಪವನ್ನು ಕೊಡುವ ಕೆಲಸವು **ಕಲ್ಪನೆಯದು.** **ಶೇಕ್ಸಪಿಯರ** ಮಹಾಕವಿಯು ಉಸುರಿದ ಮೇರೆಗೆ

It gives to airy nothing
A habitation and a name.

ಇದು ಅಭಾವಕ್ಕೆ ಸ್ಥಲವನ್ನೂ ಹೆಸರನ್ನೂ ಕಲ್ಪಿಸಿಕೊಡುವುದು. ಇದರ **ನೆರವಿನಿಂದಲೇ ಆ ಅಮೂರ್ತ ಸೌಂದರ್ಯ-ಭಾವನೆಗಳು ಅವುಗಳ ಚೆಲುವಿಗೆ ಸರಿಯಾದ ನಾಮ-ರೂಪಗಳನ್ನು ಪಡೆದು ಅವು** ಗಳ ಜನಕರಾದ ಕವಿಗಳನ್ನೂ ಸವಿಯುವವರಾದ ರಸಿಕರನ್ನೂ ಆನಂದ ಸಾಗರದಲ್ಲಿ ತೇಲಿಸುತ್ತವೆ.

ಈ ರೂಪ (Image)-**ನಾಮ** (Sound) ಗಳೇ ಕ್ರಮವಾಗಿ **ಈ ದರ್ಶನ-ಭಾವಗಳ ಸೂಕ್ಷ್ಮ-ಸ್ಥೂಲ** ದೇಹಗಳು. ಇವನ್ನು ತಾಳಿಯೇ ಅವು ಜನರಿಗೆ ಪ್ರತೀತವಾಗುವವು.

೨) ಕವಿತೆಯಲ್ಲವನ್ನು ಕಾಣುವುದೆಂತು ?:—

ಪ್ರತಿಯೊಂದು ಕವಿತೆಯಲ್ಲಿ ಕೆಲವಂಶದಿಂದ ಮೂಡಿದ ಈ ಗುಣ ಗಳನ್ನರಿಯಲು ಕೊನೆಯಿಂದ ಮೂಲದ ಕಡೆಗೆ ಸಾಗಲು ಬೇಕು. ಮತ್ತು ಇವೆಲ್ಲ ಯಾವ ಯಾವ ಪ್ರಮಾಣದಲ್ಲಿ ಕವನದಲ್ಲಿಳಿದಿವೆ ಎಂಬುದನ್ನು ಕಂಡು ಹಿಡಿಯಲು ಯತ್ನಿಸಬೇಕು. ಯಾಕಂದರೆ ಕವನದ ಬೆಲೆಯು ಇವುಗಳ ಅಸ್ತಿತ್ವವನ್ನವಲಂಬಿಸಿದೆ. ಅ) **ನಾದ ಮಾಧುರ್ಯ**- ಆ) **ರೂಪ-ಚಮತ್ಕೃತಿ**-ಇ) **ಭಾವಪೂರ್ಣತೆ**-ಈ) **ದಿವ್ಯದರ್ಶನ**-ಇವು ಒಂದರಿಂದೊಂದು ಮಿಗಿಲಾಗಿ ಇದ್ದಂತೆ ಕಾವ್ಯದ ಮೇಲ್ಮೆಯು ಹೆಚ್ಚು ವುದು. ಕಡಿಮೆ ಇದ್ದಂತೆ ಕಡಿಮೆಯಾಗುವುದು. ಇವುಗಳಲ್ಲಿ ಪ್ರತಿಯೊಂದರ ಮೇಲ್ಮೆಯು ಯಾವ ಯಾವ ಸಂಗತಿಗಳನ್ನು ಅವಲಂಬಿಸಿರುವುದು ಎಂಬುದನ್ನು ವಿಚಾರಿಸುವಾ !

ಅ) **ನಾದಮಾಧುರ್ಯ:—ನಾದವು** ಕವನದ **ಸ್ಥೂಲಶರೀರ.** ನಮ್ಮ ಮನಸ್ಸನ್ನು ಕವಿತೆಯೆಡೆಗೆ ಮೊದಲು ಸೆಳೆಯುವುದು ಅದರಲ್ಲಿಯ **ಸಂಗೀತ** ಈ ಮಾಧುರ್ಯವು ಕೇಳುವವರನ್ನು ಮುಗ್ಧರನ್ನಾಗಿ ಮಾಡುವುದು.--ತಲ್ಲೀನರನ್ನಾಗಿ ಮಾಡುವುದು.

ಸಂಗೀತದಲ್ಲಿಯ ಈ ಶಕ್ತಿಯು **ಸ್ವತಃಸಿದ್ಧ.** ಅದು ಅದರಲ್ಲಿ ಉಂಟಾಗುವದೆಂತೆಂಬುದು ಸೃಷ್ಟಿಯ ಅಜ್ಞಾತ ಗೂಢಗಳಲ್ಲೊಂದು. ಕವಿಯು ಈ ರಹಸ್ಯಮಯವಾದ ಶಕ್ತಿಯನ್ನು ಅಷ್ಟೇ ರಹಸ್ಯಮಯವಾದ ರೀತಿಯಿಂದ ತನ್ನ ಕವನದಲ್ಲಿ ತರುವನು. ಈ ಸಂಗೀತವು ಕವನದ ಅಂಗ-ಅಂಗಗಳಲ್ಲಿ ತುಂಬಿತುಳುಕುತ್ತಿರುವದರಿಂದ ಪೃಥಕ್ಕರಣ ಪದ್ಧತಿಯಿಂದ ಅದರ ಪರಿಚಯವನ್ನು ಮಾಡಿಕೊಡುವುದು ಅಸಾಧ್ಯವಲ್ಲದಿದ್ದರೂ ದುಃಸಾಧ್ಯ. ಆದರೂ ಸಾಧ್ಯವಿದ್ದಮಟ್ಟಿಗೆ ಅದನ್ನರಿತುಕೊಳ್ಳುವಾ ! ಕವಿತೆಯ **ನಾದ-ಮಾಧುರ್ಯವು** ಮುಖ್ಯವಾಗಿ ಕೆಳಗಿನ ಮಾತುಗಳನ್ನಾಶ್ರಯಿಸಿರುವುದು –

i) **ಶಬ್ದಸಂಗೀತ:**—ಕವಿಯಲ್ಲಿ **ಭಾವಕ್ಕೆ ತಕ್ಕ ಶಬ್ದಗಳನ್ನಾರಿಸುವ** ಸಹಜವಾದ ಕೌಶಲವಿರುವುದು. ಅವನ್ನೋದಿದೊಡನೆ ಕವಿತೆಯಲ್ಲಿಯ ಭಾವವು ತನ್ನಿಂದ ತಾನೇ ಹೊಳೆಯುವುದು. ಅವು ಕವಿಯ ಭಾವದಂತೆ ಮಣಿಯುವವು. ಕವಿಯು ನಗುವಾಗ ಅವು ಕುಣಿಯುವವು. ಅಳುವಾದ ಬಾಡಿ ನಿಟ್ಟುಸುರು ಬಿಡುವವು. ಅವನು ಸಿಟ್ಟಿಗೆ ಬಂದಾಗ ಅವು ರೌದ್ರರೂಪವನ್ನು ತಾಳುವವು, ಶಾಂತನಾದಾಗ ಅವು ಶಾಂತಿಯಕುಂಜಗಳಾಗುವವು. ಅವನು ಚೇತರಗೊಂಡಾಗ ಅವು ಜನರನ್ನು ಹುರಿಗೊಳಿಸುವುವು. ತಾತ್ಪರ್ಯವೇನೆಂದರೆ ಕವಿಗಳು ‘ **ಶಬ್ದ ಸೃಷ್ಟಿಯ ಅರಸರಿ** ’ದ್ದುದರಿಂದ ಅವು ಪೂರ್ತಿಯಾಗಿ ಇವರ ಆಧೀನವಾಗಿರುವವು. ಇವುಗಳ ಶಕ್ತಿಯನ್ನು ಕೆಳಗಿನ ಸಾಲುಗಳು ಕೆಲಮಟ್ಟಿಗೆ ತೋರಿಸಬಹುದು.

ಉದಾ:—

೧ ಗರಿಗರಿ, ಗಿರಿಗಿರಿ, ಹಿಗ್ಗಿಹಿಗ್ಗಿ, ಹಿರಿಹಿರಿ !
ಸೈಸೈ ಸರಿಸರಿ ಕುಣಿಯೋಣು ಬಾ !

೨ ನೀರಮಣಿಯು ಹಾರವಾಗೆ
ಬೆವರ ಹಸಿಯು ಭಾರವಾಗೆ
ಬಾಗಿಸಿತ್ತು ಮೊಗವನು.

೩ ನೆಲವನ್ನೆಲ್ಲಾ ತುತ್ತುವೆನೆಂದು
ಗದುರುತ್ತಿಹುದು ಗರ್ಜಿಸುತಿಹುದು.
ಬಡವರ ಬಗ್ಗರ ತುತ್ತಿನಚೀಲದ
ಒಳಗಿನ ಒಳಗಿನ ಒಳದನಿಯೊಂದು.

೪ ನಿನಗೆ ರಸವೊಂದೆ ಶಾಂತಮೆ ಜಿನೇಂದ್ರ!

೫ ಗರಿಗೆದರಿ ಹಾರು! ಗುರುಡಾತ್ಮ! ಗಗನದೊಳೇರು
ಆರೆ ಬೆದರಿ ಕುಳಿತಲ್ಲೆ ಕೂಡಬಹುದೆ?

ಈ ಮಾದರಿಯ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ನಮ್ಮ ಕನ್ನಡ ಕಾವ್ಯಕಣಿಯು ಇಂಥ ಸಾವಿರಾರು ರತ್ನಗಳನ್ನು ಪಡೆದುದುಂಟು. ಕಾಣುವ ಕಣ್ಣು ಬೇಕು, ಆರಿಸುವ ಬುದ್ಧಿ ಬೇಕು.

ii) **ತಾಲಬದ್ಧತೆ:—ತಾಲವು ಧ್ವನಿಯ ಇಂಪು-ಪೆಂಪುಗಳನ್ನು ಹುಟ್ಟಿಸುವ-ಹೆಚ್ಚಿಸುವ ಇನ್ನೊಂದು ಪ್ರಮುಖ ಸಾಧನ.** ತಾಲದ ರಹಸ್ಯವನ್ನರಿಯಲು, **ಛಂದಃಶಾಸ್ತ್ರದ** ಅಭ್ಯಾಸವನ್ನು ಮಾಡಲು ಬೇಕು. ಜಿಜ್ಞಾಸುಗಳು ಅದನ್ನು ಅಗತ್ಯವಾಗಿ ಮಾಡಿಯೇ ತೀರಬೇಕು. ಅದನ್ನೆಲ್ಲ ಈ ಗ್ರಂಥದಲ್ಲಿ ಉಸುರುವುದು ಶಕ್ಯವಿಲ್ಲ. ಸಾಮಾನ್ಯ ಓದುಗರಿಗಾಗಿ ಕಾವ್ಯದ ಸವಿಯು ತಿಳಿಯಲು ತೀರ ಅವಶ್ಯವಾದ ಕೆಲವು ಮಾತುಗಳನ್ನು ಈ ಮುಂದೆ ವಿವರಿಸುವೆವು.

ಅ) **ಮಾತ್ರೆಗಳು:**—ಒಂದು **ಕವಿತೆಯ ತಾಲವು** (Rhythum) ಅದರಲ್ಲಿಯ ಪ್ರತಿಯೊಂದು ಸಾಲಿನಲ್ಲಿಯ **ಮಾತ್ರೆಗಳ ಸಂಖ್ಯೆ**ಯನ್ನವಲಂಬಿಸಿರುವುದು. ಒಂದು ಅಕ್ಷರವನ್ನು ನುಡಿಯುವಷ್ಟು ಕಾಲಕ್ಕೆ **'ಮಾತ್ರೆ'** ಎನ್ನುವರು. **ಲಘು ಅಕ್ಷರಕ್ಕೆ ಒಂದು ಮಾತ್ರೆಯೂ ಗುರು ಅಕ್ಷರಕ್ಕೆ ಎರಡು ಮಾತ್ರೆಗಳೂ ಪ್ಲುತಕ್ಕೆ ಮೂರು ಮಾತ್ರೆಗಳೂ** ಆಗುವವು

ಸೂಚನೆ:—**ಗುರು**-ದೀರ್ಘಾಕ್ಷರ-ಒತ್ತಕ್ಷರದ ಹಿಂದಿನ ಅಕ್ಷರ-ವಿಸರ್ಗ ಅನುಸ್ವಾರಗಳಿಂದ ಕೂಡಿದ ಅಕ್ಷರ, ಪಾದಾಂತ್ಯದಲ್ಲಿರುವ ಅಕ್ಷರ-ಇವುಗುರು.

ಲಘು:—ಉಳಿದವು ಲಘು.

ಪ್ಲುತ:—ಗುರ್ವಕ್ಷರವನ್ನು ಒಂದು ಮಾತ್ರೆಯಷ್ಟು ಎಳೆದರೆ ಅಥವಾ ಲಘು ಅಕ್ಷರವನ್ನು ಎರಡು ಮಾತ್ರೆಗಳಷ್ಟು ಎಳೆದರೆ ಅದು '**ಪ್ಲುತ**'ವು.

ಉದಾ:—

ಲಘು: ಕಮಲ, ರಮಣ.
ಗುರು: ಬಾ, ರಕ್ಷ, ಕಂ, ಯಶಃ
ಪ್ಲುತ: ಹಾ ! ರಾಮಾS, ಕುಕ್ಕೂS,

ಆ) **ಗಣ:**—ಗುರು-ಲಘು-ಮಿಶ್ರಿತ ಮೂರು ಅಕ್ಷರಗಳ ಗುಂಪಿಗೂ ಮೂರು-ನಾಲ್ಕು-ಐದು ಮಾತ್ರೆಗಳ ಗುಂಪಿಗೂ **ಗಣ**ವೆಂದು ಹೆಸರು. ಕನ್ನಡದಲ್ಲಿ **ಅಕ್ಷರ**ಗಣಕ್ಕಿಂತ **ಮಾತ್ರಾಗಣಗಳಿಗೇ** ಹೆಚ್ಚು ಪ್ರಾಶಸ್ತ್ಯವು ಬಂದಿರುವುದು.

ಇ) **ವೃತ್ತ:**—**ಅಕ್ಷರ ಗಣಗಳಿಂದ** ಕೂಡಿದವುಗಳು '**ಅಕ್ಷರವೃತ್ತ**ಗಳು. **ಮಾತ್ರಾಗಣಗಳಿಂದ** ಕೂಡಿದವುಗಳು **ಮಾತ್ರಾವೃತ್ತ**ಗಳು. ಮೊದಲನೆಯವು ಸಂಸ್ಕೃತದಿಂದ ಕನ್ನಡದಲ್ಲಿ ಬಂದವು. ಎರಡನೆಯವು ಕನ್ನಡದ ಸ್ವತಂತ್ರ ವೃತ್ತಗಳು.

ಇತ್ತೀಚೆಗೆ ಎರಡನೆಯ ವರ್ಗದ ವೃತ್ತಗಳಿಗೆ ಪ್ರಾಶಸ್ತ್ಯವು ಬಂದ ಕಾರಣ ಅವುಗಳಲ್ಲಿಯ ಕೆಲವು **ಅಂಶಗಳನ್ನು** ಇಲ್ಲಿ ವಿವರಿಸುವೆವು.

ಈ ಮೊದಲೆ ತಿಳಿಸಿದಂತೆ ಇವುಗಳಲ್ಲಿಯ ಸಾಲುಗಳು ೩-೪-೫ ಮಾತ್ರಾಗಣಗಳಿಂದ ಕೂಡಿದವುಗಳು. ಈ ಗಣಗಳ ರಚನೆಯು ಕವಿಗಳ ಇಚ್ಛೆಯನ್ನವಲಂಬಿಸಿರುವುದು. ಈವರೆಗೆ ಕವಿಗಳು **ದ್ವಿಪದಿ-ತ್ರಿಪದಿ-ಚೌಪದಿ-ಷಟ್ಪದಿ-ಸಾಂಗತ್ಯ-ರಗಳೆ** ಇತ್ಯಾದಿ ಪ್ರಕಾರಗಳನ್ನು ನಿರ್ಮಿಸಿರುವರು.

ಇಂದಿನವರು ಇವುಗಳಲ್ಲಿಯ ಕೆಲವನ್ನು ಬಳಸಿ ಕೆಲ ಹೊಸವೃತ್ತಗಳನ್ನು ನಿರ್ಮಿಸತೊಡಗಿರುವರು. ಆಂಗ್ಲ ಭಾಷೆಯಿಂದ **ಸರಳ ರಗಳೆಯೂ** (Blank verse) **ಅಷ್ಟಷಟ್ಪದಿಯೂ** (Sonnet) ಪ್ರಚಾರದಲ್ಲಿ

ಬರಲಿದೆ. ಮತ್ತು ಬೇರೆ ವೃತ್ತಗಳೂ ಇಲ್ಲಿಯೆ ಹುಟ್ಟಲಿವೆ. ಅವುಗಳ ಇಂಪು ಪೆಂಪುಗಳನ್ನು ಪ್ರತ್ಯಕ್ಷ ಕೇಳಿಯೇ ಅರಿತುಕೊಳ್ಳಬೇಕು.

ಈ ವೃತ್ತಗಳಲ್ಲಿ **ಮೂರು, ನಾಲ್ಕು ಮಾತ್ರೆ**ಗಳ ಗಣಗಳಿಂದ ಗತಿಯು ತೀವ್ರವಾಗಿ, ಅದರಿಂದ **ಲಾಲಿತ್ಯ**ವೂ ಸಂತಸವೂ ವ್ಯಕ್ತವಾಗಲು ಅನುಕೂಲವಾಗುವುದು. ಇಂಥ ಲಲಿತ ಭಾವಗಳನ್ನು ಉಸುರಲು ಕವಿಗಳು ಇಂಥ ಗಣಗಳಿಂದ ಕೂಡಿದ ಚಿಕ್ಕ ಚಿಕ್ಕ ಸಾಲುಗಳನ್ನು ಬರೆವರು. ಅದೇ ಗಂಭೀರ ವಿಚಾರಗಳನ್ನರುಹಲು ಅವರು **ಐದು ಮಾತ್ರೆ**ಗಳ ಗಣಗಳಿಂದ ಕೂಡಿದ ದೀರ್ಘ ಸಾಲುಗಳನ್ನು ಬರೆಯುವರು.

ಉದಾ:—

೧ ರಸವೆ ಜನನ
ವಿರಸ ಮರಣ
ಸಮರಸವೇ ಜೀವನ.

೨ ತಾರೆಗಳ ಮೇಳವಿಸಿ ಬೀಡುಬಿಟ್ಟಹನಾಡು ಈ ಕನ್ನಡದ ನಾಡು.

ಸೂಚನೆ:—ಇದಾಯಿತು ಸಾಮಾನ್ಯ ವಿಚಾರ. ಇಲ್ಲಿ ವೈವಿಧ್ಯಕ್ಕೆ ಸಾಕಷ್ಟು ಎಡೆ ಇದೆ. ನುರಿತ ಕವಿಗಳು ಇವನ್ನು ಬೇರೆ ಬೇರೆ ರೀತಿಯಿಂದ ಹೇಗೆ ಕೂಡಿಸಿ ಉಪಯೋಗಿಸುವರೆಂಬುವನ್ನು ಅವರ ಕವಿತೆಗಳನ್ನೋದಿ ತಿಳಿದುಕೊಳ್ಳಬೇಕು.

ತಾಲವು ಕವಿತೆಯ ಜೀವಾಳ. ಅವೆರಡರಲ್ಲಿ ಅಷ್ಟು ತಾದಾತ್ಮ್ಯವಿದೆ. **ಭಾವಪೂರ್ಣಭಾಷೆಯು ತಾಲಬದ್ಧವಿರಬೇಕೆಂಬುದು ನಿಸರ್ಗದ ನಿಯಮ.** ನಾವು ಯಾವುದಾದರೊಂದು ಪ್ರಬಲವಾದ ಭಾವನೆಗೆ ಒಳಗಾದೆವೆಂದರೆ ನಮ್ಮ ಉಸಿರು ತಾಲಬದ್ಧವಾಗುವುದು. ಆದುದರಿಂದ ಅಂಥ ಅವಸ್ಥೆಯಲ್ಲಿ ನಾವು ಉಸುರಿದ ಮಾತಿನಲ್ಲಿಯೂ ತಾಲವು ತಿಳಿಯದೆ ಹೊರಹೊಮ್ಮುವುದುಂಟು. ಅತ್ಯಾನಂದದಿಂದ ಮೈಮರೆತು ಕುಣಿದಾಡುವ ಮಗು 'ನನಗೊಂದ್ಗೊಂಬೆ ಸಿಕ್ಕಿತು! ನನಗೊಂದ್ಗೊಂಬೆ ಸಿಕ್ಕಿತು.' ಎಂದು ತಾಲದಲ್ಲಿ ಹೆಜ್ಜೆ ಹಾಕುತ್ತ ತನ್ನ ಹಿಗ್ಗನ್ನು ತೋರಿಸುವುದು. ಆದುದರಿಂದ ತಾಲವು ಭಾವಪೂರ್ಣ ಕವಿತೆಯ ಸಹಜವಾದ ನಿರ್ಮಿತಿಯು.

ತಾಲ-ಭಾವಗಳ ಸಂಬಂಧವನ್ನೂ ಭಾವಕ್ಕೆ ಸರಿಯಾದ ತಾಲದ ರೀತಿಯನ್ನೂ ಅರಿತರೆ ಸಹೃದಯರ ಕೆಲಸ ತೀರಿತು. ಅಷ್ಟರಿಂದವರಿಗೆ ಕಾವ್ಯದ ಮಾಧುರ್ಯವನ್ನು ಸವಿಯಲು ಬರುವುದು. ಅದರ ವಿವರದ ಅಭ್ಯಾಸವು ಕವಿಗಳ ಕೆಲಸ. ಆದ್ದರಿಂದ ಇದರ ವಿವೇಚನೆಯು ಇಷ್ಟೇ ಸಾಕು.

iii) **ಪ್ರಾಸ-ಅನುಪ್ರಾಸಾದಿಗಳು:**—ಇವುಗಳಿಂದಲೂ ಕವಿಯು ತನ್ನ ಕವಿತೆಯ ಇಂಪನ್ನು ಹೆಚ್ಚಿಸುವನು. ಕನ್ನಡ ಕೈಪಿಡಿಯ ಮಾನ್ಯ ಸಂಪಾದಕರು ಇದನ್ನು ಈ ಮೇರೆಗೆ ಬಣ್ಣಿಸಿರುವರು !

೧) **ಪ್ರಾಸ:**—ಪದ್ಯದ ಪ್ರತಿಪಾದದಲ್ಲಿಯೂ ಆದಿಯಲ್ಲಿ ಒಂದೆರಡನೆಯ ಸ್ವರಗಳ ನಡುವೆ ಒಂದೇ ವಿಧವಾದ ವ್ಯಂಜನವಿರುವುದು ಪ್ರಾಸದ ಸಾಮಾನ್ಯ ಲಕ್ಷಣವು.

ಉದಾ:—

ಏ**ನ**ನರಿಯುವೆ ದೇವ
ಹೀ**ನ**ನಾಗಿಹೆ ನಾನು !

೨) **ಅನುಪ್ರಾಸ:**—ಅಕ್ಷರಗಳ ‘ **ಆವೃತ್ತಿ** ’ಯೆ ಅನುಪ್ರಾಸ. ಅವು ಒಂದೊಂದಾಗಿಯೂ-ಎರಡೆರಡಾಗಿಯೂ ಮತ್ತೆ ಮತ್ತೆ ಬರಬಹುದು.

ಉದಾ:—

ತಿಳಿವೆಳಗಿನ ತೀರ್ಥರೂಪನೆ
ತಿಂಗಳ ಬೆಳಗಿನೊಳಾದ ಪುತ್ತಳಿಯೆ.
ಕೊಡು ಕೊಡು ಬೇಗನೆ, **ಕಡು**ಗವನೊಂದನು
ನಡೆಯುವೆ ನಾನೀಕಾಳಗಕೆ ?

ಈ ಬಗೆಯಾಗಿ ಆದ ಅಕ್ಷರಗಳ ಪುನರಾವೃತ್ತಿಯಿಂದ ಕಿವಿಗೆ ಒಂದು ಅವಿದಿತವಾದ ಸಂತೋಷವಾಗುವುದು. ಇವೆಲ್ಲ ಸಾಧನೆಗಳು ಕವಿತೆಯಲ್ಲಿ ಸಂಗೀತವನ್ನೂ ಉಂಟುಮಾಡುವವು.

ಆ) ರೂಪಚಮತ್ಕೃತಿ.—ರೂಪ ಇಲ್ಲವೆ ಚಿತ್ರಚಮತ್ಕೃತಿಯು ಕವಿತೆಯ ಕಮನೀಯತೆಯನ್ನು ಹೆಚ್ಚಿಸುವ ಇನ್ನೊಂದು ಉಪಕರಣ. ಇದು ಕವಿತೆಯ **ಸೂಕ್ಷ್ಮಶರೀರ. ಭಾವಪೂರ್ಣ ಭಾಷೆಯು ಸಹಜವಾಗಿ**

ನಾದ-ಮಧುರವಾಗುವಂತೆ, ಭಾವಪೂರ್ಣ ಕಲ್ಪನೆಯು ಚಿತ್ರಮಯ ವಾಗುವುದು. ಚಿತ್ರವು ಭಾವವನ್ನರುಹುವ ಸಹಜ ಸಾಧನ. ಎಷ್ಟೋ ಸಲ ನಮ್ಮ ದಿನದ ಭಾಷೆಯಲ್ಲಿಯೂ ನಾವು ಚಿತ್ರಗಳನ್ನುಪಯೋಗಿಸುವು ದುಂಟು. ಅವು ತೀರ ರೂಢವಾದುದರಿಂದ ಅವುಗಳಲ್ಲಿಯ ಚಮತ್ಕೃತಿಯು ನಮಗೆ ಮರೆಯಾಗಿರುವುದು. '**ಅವನ ಮುಖವು ಅರಳಿತು**' ಎಂಬಲ್ಲಿ ನಾವು ಅರಳುವ ಹೂವೊಂದನ್ನು ಒಳಗಣ್ಣಿನೆದುರು ಚಿತ್ರಿಸುವೆವು. ಅದು ಅರಳುವಂತೆ ಮುಖವರಳಿತೆಂದು ಸೂಚಿಸುವೆವು.

ಚಿತ್ರವು ಅನೇಕ ಕಲ್ಪನೆಗಳ ಪ್ರತಿಮೆಯಾಗಿರುವುದರಿಂದ ಅದನ್ನು ಕಂಡು ನಾವು ಎಷ್ಟೋ ಸಂಗತಿಗಳನ್ನು ಸಹಜವಾಗಿ ತಿಳಿದುಕೊಳ್ಳುವೆವು. ಅವನ್ನೆಲ್ಲ ಬೇರೆ ಬೇರೆ ಶಬ್ದಗಳಿಂದ ಉಸುರುವದೆಂದರೆ ಅದೊಂದು ದೊಡ್ಡ ಹೊತ್ತಿಗೆಯೆ ಆಗಬಹುದು. ಕಿರಿದರಲ್ಲಿ ಪಿರಿದನ್ನು ಉಸುರಲು ಕವಿಯು ಯೋಚಿಸುವ ಯುಕ್ತಿಗಳಲ್ಲಿ ಇದೊಂದು.

ಈ ಚಿತ್ರವು **ತಿಳಿಯಾದುದಾಗಲೂ ಹೊಳಪುಳ್ಳದಾಗಲೂ ಪರಿಣಾಮಕರವಾಗಲೂ** ಕವಿಯು ಬೇರೆ ಬೇರೆ **ಅರ್ಥಪೂರ್ಣಶಬ್ದಗಳನ್ನೂ** ಅಂದವಾದ **ಅಲಂಕಾರಗಳನ್ನೂ** ಉಪಯೋಗಿಸುವನು. ಉಪಮಾದಿ ಕೆಲವು ಅಲಂಕಾರಗಳ ಪರಿಚಯವನ್ನು ಈ ಮೊದಲೇ ಮಾಡಿಕೊಟ್ಟಿರುವೆವು. ಅವನ್ನು ಈ ಸಂದರ್ಭದಲ್ಲಿ ಓದಿಕೊಳ್ಳುವುದು ಒಳಿತು.

ಉದಾ:—

ಎನಿತು ಇನಿದು ಈ ಕನ್ನಡ ನುಡಿಯು
ಮನವನು ತಣಿಸುವ ಮೋಹನ ಸುಧೆಯು.
ಹೊಸ ಜೀವವನು ತುಂಬು ಕಸವ ರಸಗೈವ ದೊರೆಯೆ !
ಹಸಿನೆಲದ ಹುಳವಾಗಿ ಹೊಸೆಯುವುದು ಸಾಕಿನ್ನು!
ಚಿಗರ್ಯಾಗಿ, ತಿಗರ್ಯಾಗಿ, ಸಿದ್ದೀಯ ಭಗರ್ಯಾಗಿ
ಗಾಳೀಗೂ ಹಗುರಾಗಿ **ಕುಣಿಯುಣು ಬಾ**

ಸೂಚನೆ:—ಮೇಲಿನ ಉದಾಹರಣೆಗಳಲ್ಲಿ ಕವಿಯ **ಚಿತ್ರಕ ಶಕ್ತಿಯು** ಚನ್ನಾಗಿ ಒಡಮೂಡಿದೆ. ರೇಖಾಂಕಿತ ಶಬ್ದಗಳನ್ನು ಸ್ವಲ್ಪ ಹೆಚ್ಚು ದಿಟ್ಟಿಸಿ ನೋಡಿದರೆ ಅವು ತಮ್ಮಲ್ಲಡಗಿದ ಸೊಗಸಾದ ಚಿತ್ರಗಳನ್ನು ತೋರಿಸದೆ ಇರವು.

ಇ) **ಭಾವಪೂರ್ಣತೆ:—ಭಾವವು ಕವಿತೆಯ ಪ್ರಾಣ.** ಭಾವವಿಲ್ಲದೆ ಗೀತವಿಲ್ಲ. '**ವಿಶ್ರಾಂತಿಯಲ್ಲಿ ನೆನದ ಭಾವವೇ ಕವಿತೆಯ ಸೆಲೆ**' ಎಂದು **ವರ್ಡ್ಸ್‌ವರ್ಥ** ಕವಿಯ ಮತ. ಹಿಂದೆ ಹೇಳಿದ ಮೇರೆಗೆ ಕವಿಯು ಕಂಡ ದಿವ್ಯ ಕಾಣ್ಕೆಯು, ಅವನ ಭಾವವನ್ನು ಕೆರಳಿಸುವುದು. **ಕೆಲಕಾಲ ಕಳೆದ ಮೇಲೆ,** ಈ ಕೆರಳಿಕೆಯನ್ನುನೆನೆದು, ಕವಿಯು ತನ್ನ ಕವಿತೆಯನ್ನು ಬರೆಯುತೊಡಗುವನು. ಅದರಿಂದ ಕವಿತೆಯಲ್ಲಿ ರಸವು ತುಂಬುವದು. ಭಾವವು ದುಃಖಮಯವಿರಬಹುದು, ಸುಖಮಯವಿರಬಹುದು. ಅದು ಸರಿಯಾಗಿ ಹೊರಹೊಮ್ಮಿತೆಂದರೆ ಅದರಿಂದುಟಾಗುವುದು ಆನಂದವೇ-ಇನ್ನಾವುದಿಲ್ಲ.

ಉದಾ:—

ಎಂಥ ನಾಡಿದು ಎಂಥ **ಕಾಡಾಯಿತು** ।
ಹುಲುಸಾದ ಬೆಳೆಹೋಗಿ ಹುಲ್ಲು**ಕೊಳೆ** ತುಂಬಿಹು**ದೋ** ! ॥

ಈ ಭಾವವು ಎಲ್ಲಿದೆ? ಇದರ ಸ್ವರೂಪವೇನು? ಇತ್ಯಾದಿಗಳನ್ನು ಕಂಡು ಹಿಡಿಯದೆ ಕವಿತೆಯ ರಸವೆ ತಿಳಿಯದು.

ಈ) ದಿವ್ಯದರ್ಶನ:— 'ರವಿಯು ಕಾಣದ್ದನ್ನು ಕವಿಯು ಕಾಣುವ' ನೆಂಬ ನಾಣ್ನುಡಿಯು ಕವಿಯ ಈ ಶಕ್ತಿಯನ್ನನುಲಕ್ಷಿಸಿಯೆ ಪ್ರಚುರಗೊಂಡಿದೆ. ವಿಶ್ವದ ಒಳತಿರುಳಿನ ಅಂಶಗಳನ್ನು ಕಂಡು ಕವಿಯು ಅವನ್ನು ತನ್ನ ಕವನದಲ್ಲಿ ಜನರೆದುರು ಇಡುವನು ಇದನ್ನು ಕಾಣುವ '**ಕ್ರಾಂತದರ್ಶಿ**' ಗಳ ಕವಿತೆಗಳೇ ನಿಜವಾದ ಕವಿತೆಗಳು. ಇದಿಲ್ಲದ ಕವಿತೆಯು ಕೆಳಗಿನ ತರಗತಿಯದೆಂದು ನಿರ್ವಿವಾದವಾಗಿ ಹೇಳಬಹುದು. ಯಾಕಂದರೆ ಇದೇ **ಕವಿತೆಯ ಆತ್ಮ.**

೩ ಕವಿಯೊಬ್ಬನ ಸೂಚನೆಗಳು:—

ಕೊನೆಗೆ ಕವಿಯೊಬ್ಬನು ಕವಿತೆಯ ಗುಣಗ್ರಹಣದ ಬಗ್ಗೆ ಮಾಡಿದ ಕೆಲವು ಸೂಚನೆಗಳನ್ನು ಇಲ್ಲಿ ಕೊಡಬಯಸುವೆವು. ಪ್ರತ್ಯಕ್ಷ ಕವಿಯ

ಅನುಭವದ ವಾಣಿಯು ಇದರಲ್ಲಿರುವುದರಿಂದ ಅದು ಸವಿವರೆಗೆ ಸರಿಯಾದ ದಾರಿಯನ್ನು ತೋರಿಸದಿರದೆಂದು ನಂಬುವೆವು. ಅವರು ಹೇಳುವು ದೇನಂದರೆ:—

೧) ಪದ್ಯಕಾವ್ಯದ ಉದ್ದೇಶವು **ಅರ್ಥವ್ಯಕ್ತಿ** ಯಾಗಿರದೆ **ಹೃದ್ಯತೆ** ಯಾಗಿದ್ದರೂ, ಪ್ರತಿಯೊಂದು ಕವನಕ್ಕೆ ಏನಾದರೂ ಒಂದು ಅರ್ಥವಿದ್ದೇ ಇರುವದು. ಆ ಸ್ವಾಭಾವಿಕ ಅರ್ಥವನ್ನು ಮೊದಲು ಗ್ರಹಣಮಾಡಬೇಕು. ಅದೇ **ವಾಚ್ಯಾರ್ಥ**. ಯಾವುದೋ ಒಂದು ವಸ್ತುವನ್ನು ಕುರಿತು ಏನೋ ಕೆಲವು ಮಾತು ಹೇಳಿರುವರು. ಆ ಮಾತಿನ ಅರ್ಥವನ್ನು ತಿಳಿದು ಕೊಳ್ಳಬೇಕು.

೨) ಆ ಮಾತುಗಳಿಂದ ಆ ವಿಷಯದ ಬಗ್ಗೆ ಮಾತಾಡುವವನ ಅಭಿ ಪ್ರಾಯ-ಭಾವನೆಗಳೇನು ಸೂಚಿತವಾಗುವವೋ ಅವುಗಳಿಂದ ಮೂಲಾ ರ್ಥಕ್ಕೆ ಯಾವ ಸ್ವರೂಪ ಬರುವದೋ ಅದನ್ನು **ಲಕ್ಷಿಸಬೇಕು.**

೩) ಸ್ವಂತಭಾವದ ಹೊರತು ಅವನಿಗೊಂದು **ಆವೇಶ-ಅಧಿಕಾರ** ವಿರುವದು. ಅದರಿಂದ ಆ ಸ್ವರೂಪಕ್ಕೆ ಯಾವ ಬಣ್ಣವೇರುವದೋ ಅದನ್ನು **ಗಮನಿ**ಸಬೇಕು.

೪) ಇಷ್ಟೆಲ್ಲ ಆಗಿಯೂ ಕವಿಯ ಆಕಾಂಕ್ಷೆಯೇನು ಎಂಬುದನ್ನರಿತು, ತಮ್ಮ ಸಹೃದಯತೆಯ ಭಾಂಡಾರದಿಂದ ಅವನ ಕೊರತೆಯನ್ನು ತುಂಬಿ ಅದರ ಪ್ರಾಣಶಕ್ತಿಯನ್ನು ಹೆಚ್ಚಿಸಿ ಅದರ ಚೈತನ್ಯವನ್ನು ಅನುಭವಿಸ ಬೇಕು.

೫) ಹೀಗೆ ಮಾಡಬೇಕಾದರೆ ಕವಿಯ ಪದಪದಕ್ಕೂ ಅಕ್ಷರ-ಅಕ್ಷ ರಕ್ಕೂ ಏನು **ಧ್ವನಿಸಾಮರ್ಥ್ಯವಿದೆಯೋ** ಅದನ್ನು ಒಪ್ಪಿಸಬೇಕು.

೬) **ಹೃದಯದಿಂದ** ಬಂದ ಕವಿತೆ **ಹೃದಯಕ್ಕೆ** ಸೇರಬೇಕಾದರೆ, **ಭಾವುಕನ ಹೃದಯಶಕ್ತಿಗಳು** ಕಾರ್ಯಮಾಡಬೇಕು. ನಮ್ಮ ಜೀವವು **ಹೊಸದೊಂದು** ಕಾಣ್ಕೆಯನ್ನು ಕಾಣಬೇಕಾದರೆ, **ನವರಸವನ್ನು** ರುಚಿಸ ಬೇಕಾದರೆ, **ನವೋನವ ನಾದವನ್ನು** ಕೇಳಬೇಕಾದರೆ, ಅಮೃತ **ಜೀವನದ ಉಸಿರನ್ನು** ಆಡಿಸಬೇಕಾದರೆ, ಇದನ್ನು ಮಾಡಲೇಬೇಕು.

೭) ಈ ಮೇರೆಗೆ ಎದೆ ತೆರೆದು ಕೇಳಿದರೆ, ಇಂಪಿಗೆ ಕಿವಿ ಸೋಲುವುದು; ಬಣ್ಣನೆಗೆ ಕಣ್ಣರಳುವವು; ತಾಳಲಯಕ್ಕೆ ಪ್ರಾಣ ಕುಣಿಯುವದು; ಅದರ ಕೊಂಕಿಗೆ, ವ್ಯಂಜನೆಗೆ, ಧ್ವನಿಗೆ ಮೈಮರೆಯುವುದು; ಮನವು ಉನ್ಮನವಾಗುವದು, ಜೀವ ನೀರ ಕುಡಿಯುವದು. ಭಾವಸಮಾಧಿಯಲ್ಲಿ ಮೈಮರೆತು ಮಾನವನು **ಅಮೃತಾನುಭವ** ಹೊಂದುವನು.

ಸವಿಯ ಮಾದರಿಗಳು:—

ಕೂಗು–ಹುಡುಕು.

ಬಂದೆನೊ! ಮನೆಗೆ ' ಅಮ್ಮಾ ' ಎಂದು ಕೂಗುತಲಿ
' ಕಂದ! ನಾನಿಲ್ಲಿ ಕುಳಿತಿಹೆನು ಬಾ ' ಎನ್ನುತಲಿ
ನೀನು ಮೆಲು ಮಾತಿನೊಳು ನುಡಿದ ದನಿಗೇಳಿ
ನಾನು ಬಂದೆನು ಒಳಗೆ ಓಡುತೋಡುತಲಿ

ಓಡುತೋಡುತಲಿ ಆತುರದಿ ಬಂದೆನು ಇಲ್ಲಿ
ನೋಡಿಡೆನು ನೀ ಕಾಣಲೊಲ್ಲೆ! ಇರುತಿಹೆ ಎಲ್ಲಿ ?

ಕುರುಳ ಸರಿಮಾಡಿಕೊಳ್ಳುವ ಹಣಿಗೆಯಿಲ್ಲಿಹುದು
ಮಿರುಗು ಮೊಗ ನೋಡಿಕೊಳ್ಳುವ ಕನ್ನಡಿಯು ಇಹುದು
ತುರುಬಿನಲಿ ಮುಡಿದ ಅರಳುಗಳು ಸುರಿದಿಹವು
ಕೊರಳ ಸರ ಬೆರಳುಂಗರಗಳು ಬಿದ್ದಿಹವು

ಅರಿಸಿಣದ ಕುಂಕುಮದ ಕರಡಿಗೆಗಳಿಹವಿಲ್ಲಿ
ಅರಿಯೆನೇ! ಎಲ್ಲವೂ ನಿನ್ನವಿವು ನೀನೆಲ್ಲಿ?

ಅಡಿಗುರುಹು ಮೂಡಿಹುದು ಇಲ್ಲಿ ಎಡೆಯಾಡಿದೊಲು
ಹುಡುಗಾಟ ಮಾಡಬೇಕೆಂದು ನೀ ನಾ ಬರಲು
ಅಡಗಿರುವೆಯೆಲ್ಲಿಯೋ! ಎಂದು ಕಾಣುವುದು
ಹುಡುಕದೆಯೆ ಬಿಡುವೆನೇ ನಿನ್ನ ನಾನಿಂದು ?

ಎಲ್ಲಿಯಡಗಿದ್ದರೂ ಹುಡುಕಿ ನಾ ಹಿಡಿಯುವೆನು
ಬಲ್ಲೆನೊ ಚೆನ್ನಾಗಿ ಕಣ್ಣು ಮುಚ್ಚಾಟವನು
ಇನ್ನೊಮ್ಮೆ ಮುನ್ನಿನೊಲು ನನ್ನ ಕರೆ ನೀನು
ನಿನ್ನ ದನಿ ಬರುವ ದೆಸೆಯಲ್ಲಿ ಹುಡುಕುವೆನು.

—ಆನಂದಕಂದ

ಸವಿ:—

ಕವಿಭೂಷಣರ 'ಮುದ್ದನಮಾತು' ಗಳ ಒಂದು ವೈಲಕ್ಷಣ್ಯವೆಂದರೆ ಭಾವದ ಮುದ್ದುತನ ಮತ್ತು ಮಾತಿನ ಚಾತುರಿಯಷ್ಟೊ ಅಷ್ಟೇ ಅವುಗಳಲ್ಲಿ **ಅರ್ಥದ ಪ್ರಸಾದಗುಣವಿದೆ.** ಚದುರ ಮಾತಿನೊಳಗಿಂದ ಕಡೆದಂತೆ, ಒಡೆದೊಡೆದು ತೇಲಿ ಮೇಲೆ ಬಾಯಿಗೆ ಬರುವ ಬೆಣ್ಣೆಯ ಮುದ್ದೆಯಂತೆ, ನುಣ್ಣನ್ನ ಅರ್ಥವೂ ಮುದ್ದಾದ ಭಾವವೂ ಒಂದನ್ನೊಂದು ಅಪ್ಪಿಕೊಂಡು ಮನದ ಮನೆಯನ್ನು ಸೇರುವವು.

ಈ ಕವಿತೆಯಲ್ಲಿ **ವಾತ್ಸಲ್ಯವು** ಸ್ಥಾಯಿರಸವಾಗಿದೆ. ಹೊರಗಣ್ಣಿಗೆ-ವಾಚ್ಯವಾಗಿ, ಮಗುವು ಮಾತೆಗೆ ಆಡಿದ ಮಾತೆಂದು ತೋರಿದರೂ, ಆ ಅರ್ಥದಿಂದ ಕೂಡ ಭಾವವು ರಮ್ಯವಾಗಿದ್ದರೂ, ಈ ಕವಿತೆಯೆಂದರೆ ಭಗವಂತನಿಗೆ **ಭಕ್ತನು** 'ತಾಯಿ-ಮಕ್ಕಳ ಆಟದಲ್ಲಿ ತನ್ನ ಭಕ್ತಿಲೀಲಾನಂದವನ್ನು **ಸೂಸು**ತ್ತಿರುವುದು ಸೂಚ್ಯವಾಗುವಂತಿದೆ. ಈ ಭಾವವು ರಮ್ಯವಾಗಿದೆ.

ಜೀವ-ಪುರುಷೊತ್ತಮರ ಅಗಲಿಕೆಯು ಆಡುವಿಕೆಗೆ ಅವಲಂಬನ. ಅವರ ಪರಸ್ಪರಾಕರ್ಷಣವು ಕೂಡುವಿಕೆಗೆ ಉದ್ದೀಪನ; ಆ ಕೂಗು-ಆ ಹಣಿಗೆ-ಆ ಕನ್ನಡಿ-ಆ ಹೂವು-ಇವೆಲ್ಲವುಗಳು ' ಇದ್ದಾಳೆ-ಇಲ್ಲಿಯೇ ಅಡಗಿದ್ದಾಳೆ; ಹುಡುಕು-ಸಿಗುವಳು ಹುಡುಕು ' ಎಂದು ಪ್ರಚೋದಿಸುವ ಕುರುಹುಗಳು. ಹುಡುಗನು ಈ ಕಾಣದ ಕಾಟವನ್ನು ಹುಡುಕುವ ಆಟವೆಂದು ತಿಳಿದಿದ್ದರಲ್ಲಿ ಆನಂದದ ವಿಲಾಸವಿದೆ.

ಇಂಥ ಕವಿತೆಗಳನ್ನು ಮನವನ್ನೆಲ್ಲ ಮೌನವನ್ನಾಗಿಸಿ, ಜೀವವನ್ನೆಲ್ಲ ಕಿವಿಯಾಗಿಸಿ, ಆಡಿಕೊಳ್ಳಬೇಕು-ಹಾಡಿಕೊಳ್ಳಬೇಕು. ಅಂದರೆ

ಗಾಢನಿದ್ರೆಯಿಂದೆದ್ದ ಮೇಲೆ ಶಾಂತಿಯು ಸ್ಫುರಣೆಯೂ ಆನಂದದ ಅನುಭವವೂ ಆಗುವಂತೆ ಇವುಗಳ ಏಕಾಗ್ರಶ್ರವಣದಿಂದ ಯಾವುದೋ ಒಂದು ನೆನಪಾಗಿ ಏನೋ ಒಂದು ಆನಂದವಾಗುವುದು.

-ಬೇಂದ್ರೆ.

೨.

ಆಯಾಸ.

ತನ್ನ ಪಳಪೆ ತನಗೆ ಭಾರ
ಕತ್ತನೆತ್ತಿ ನೋಡಲಾರ—
ದಾಗಲು ಹೂ ಬಿಸಿಲಿನಲ್ಲೆ
ಬೆಂದು ಬೆಂಡುಗೊಂಡು ಜಾರಿ
ತೊಟ್ಟು ಬಿಟ್ಟು ಕಳಚಿ ಕೆಳಗೆ
ಬೀಳುವಂತೆ ಬಾಯಿಬಿಟ್ಟು
ನೀರ ಮಣಿಯು ಹಾರವಾಗೆ
ಜೀವರ ಹನಿಯು ಭಾರವಾಗೆ
ಬಾಗಿಸಿತ್ತು
ಮೊಗವನು.
ಉಸಿರ ಬಿಡಲು ಉಸಿರೆ ಇಲ್ಲ
ಎದೆಯು ಎಸರು ಉಕ್ಕಲಿಲ್ಲ;
ಬಿಕ್ಕು ಮೀರೆ ಮಿಕ್ಕಲಿಲ್ಲ
ತನಗೆ ತಾನೆ ನಕ್ಕಿತಲ್ಲ?
ಆಳ ದುಗುಡ ಮೂಡಲೇಕೆ
ದುಗುಡವಿರಲು ಅಳಲೆ ಬೇಕೆ?
ಆಸೆ ಹಿಂಗಿ ಆರಲಿಲ್ಲ;
ತಾನೆ ಇಂಗಿ ಆರಿತಿಲ್ಲಿ;
ಬೆಳಕು ಹೊತ್ತಿ ಹಾರಲಿಲ್ಲ
ಬತ್ತಿ ಬತ್ತಿ ಆರಿತಿಲ್ಲಿ;

ಇತ್ತು ಎಲ್ಲಿ ಮತ್ತೆ ಹಾದಿ
    ಇಷ್ಟಕಿಷ್ಟ ಒಲು ಸಮಾಧಿ:
    ಕ್ಷಣ ಮೀರಿತು
    ಯುಗವನು
ಅತ್ತ ಇತ್ತ ನೋಡಲೇಕೆ ?
ಸುತ್ತ ಗಾಳಿ ಆಳ ನೀರು,
    ಬಾಳ ಕಾಡು ಜಿಟುಕುಜೀರು;
ಬದುಕಿನ ನಡುಕಟ್ಟಿನಲ್ಲಿ
ಕಟ್ಟೆ ಮೈಯ ಕಲ್ಲುಜಲ್ಲಿ
ರಸವು ಆರೆ, ಗಾಳಿ ಹಾರೆ, ತೊಟ್ಟುಜಾರೆ
ಮುಳುಗಿ ಮುಳು ಮುಳುಂಗಿತು.
ಮೃತ್ಯು, ಮೃತ್ಯು ಎಲ್ಲಿ ಇತ್ತು ?
ಜೀವ ಸಾವ ಬೆನ್ನನಟ್ಟಿ ತಾನೆ ಬಂದಿತು
ಸಾವು ಅದರ ಬೆನ್ನತಟ್ಟಿ ಹಿಂದೆ ನಿಂದಿತು.
ಮುಳುಗಿತೆಂದು ಮೊಗವದು
ಮುಗಿಯಿತೆಂದು ಯುಗವದು,

ಕತ್ತಿನಿಂದ ತಾನೆ ಬಿತ್ತು ಜಿಗಿದ ಜಗದ ನೊಗವದು.

—ಬೇಂದ್ರೆ.

ಸವಿ:—

೧) **ವಿಷಯ:**—ಈ ಕವಿಯ ವಿಷಯವು ಒಂದು ‘ **ಹೂ** .’ ಅದು ಒಂದು ಕಾಡಿನಲ್ಲಿ ಅರಳಿದೆ. ‘ ಸುತ್ತು ಮುತ್ತು ಗಾಳಿ-ನೀರು ’. ಹೂಬಿಸಿಲಿನಲ್ಲಿಯೂ ಅದು ಬೆಂದು ಬೆಂಡಾಗಿದೆ. ಅದರ ದಳಗಳೇ ಅದಕ್ಕೆ ಭಾರವಾಗಿವೆ. ನೀರ ಹನಿಯ ಹಾರವನ್ನೂ ಕೂಡ ಧರಿಸಲು ಅದಕ್ಕೆ ಶಕ್ತಿ ಸಾಲದು. ಕೆಳಗೆ ಬಾಗಿ ಒಂದರಗಳಿಗೆಯೊ ಅದು ಅಲ್ಲಿ ನಿಂತಿತು. ಅನಿತರಲ್ಲಿ ‘ ರಸವು ಆರೆ, ಗಾಳಿ ಹಾರೆ, ತೊಟ್ಟು ಜಾರೆ ’ ಅದು ಕೆಳಗಿನ ನೀರಿನಲ್ಲಿ ಮುಳು–ಮುಳು–ಮುಳುಂಗಿತು. ’

೨) ಧ್ವನಿ:—ಇದಾಯಿತು ಕವಿತೆಯ ಸ್ವಾಭಾವಿಕ ಅರ್ಥ. ಆದರೆ ಕವಿಯು ಬರೀ ಇಷ್ಟೇ ಸಂಗತಿಗಳನ್ನುಸುರಲು ಈ ಕವನವನ್ನು ಬರೆದಿಲ್ಲ. ಈ ಬೆಂದ ಹೂವನ್ನು ಕಂಡ ಕೂಡಲೆ ನಮ್ಮ ಸಮಾಜದಲ್ಲಿಯ ಇಂಥ ನಿರ್ಗತಿಕ ವ್ಯಕ್ತಿಗಳ ಚಿತ್ರವು ಕವಿಯ ಕಂಗಳೆದುರು ನಿಂತು, ಅವರ ಕರುಳನ್ನು ಕರಗಿಸಿತು. ಅವರ ಗೋಳನ್ನು ಈ ಹೂವಿನ ಮುಖಾಂತರ ಚಿತ್ರಿಸಲು ಅವನು ಮುಂದರಿದನು. ಆದುದರಿಂದ ಈ ಕವಿತೆಯ ಪ್ರತಿ ಸಾಲಿನಲ್ಲಿ ಇವರ ಧ್ವನಿಯು ಓದುಗರನ್ನು ಎದುರಿಸುವುದು. ಆದುದರಿಂದಲೇ ಇಲ್ಲಿಯ ಹೂವು 'ಕತ್ತನೆತ್ತಿ ನೋಡುವದಿಲ್ಲ-ಮೊಗವನ್ನು ಬಾಗಿಸುವದು-ತನಗೆ ತಾನೆ ನಗುವದು; ಅದರ ಆಳಿ ಇಂಗಿ ಆರುವದು'. ಕೊನೆಗೆ ಅದರ 'ಕತ್ತಿನಿಂದ ಜಗದ ನೊಗವು ಜಗಿಯುವದು.' ಇವೆಲ್ಲ ಮಾತುಗಳು ಓರ್ವ ಮಾನವಪ್ರಾಣಿಯ ಚಿತ್ರವನ್ನು ಸೂಚಿಸುವದಿಲ್ಲವೇ? 'ದುಗುಡು ವಿರಲು ಆಳಲೇಬೇಕೆ?' ಎಂದು ಕೇಳುವಾಗಲು ಕವಿಯು ಇದೇ ಮಾತನ್ನು ಸಮರ್ಥಿಸುವದಿಲ್ಲವೇ? ನಮ್ಮ ಸಮಾಜದಲ್ಲಿ ಈ ಬಗೆಯಾಗಿ ಗೋಳಾಡಿ ಅನನ್ಯಗತಿಕರಾಗಿ, 'ಇದ್ದಕಿದ್ದಂತೆ ಸಮಾಧಿಯನ್ನು' ವಹಿಸಿ-ಮೃತ್ಯುವನ್ನಪ್ಪಿ, ಇಲ್ಲಿಯ ಬಾಳಿನ ಹೊಣೆಯಿಂದ ಪಾರಾದವರು ಅದೆಷ್ಟೋ ಜನರಿಲ್ಲವೇ? ಅವರ ವಿಷಮ-ವಿಷಮಯ ಪರಿಸ್ಥಿತಿಯು ನಮ್ಮಂಥ ಸಾಮಾನ್ಯರನ್ನೂ, ಮರುಗಿಸುವುದು; ಕವಿಯ ಕೋಮಲ ಹೃದಯವನ್ನು ಕರಗಿಸುವದರಲ್ಲಿ ಏನಾಶ್ಚರ್ಯ? ಈ ಬಗೆಯಾಗಿ ಕರಗಿದ 'ಎದೆಯ ಎಸರು' ಇಲ್ಲಿ ಉಕ್ಕಿದೆ

೩ ಚಿತ್ರಚಮತ್ಕೃತಿ:—ಇಲ್ಲಿ ಮೂರು ಚಿತ್ರಗಳನ್ನು ಬರೆಯಲಾಗಿದೆ.

ಹೂವು

೧) ಬೆಂದು ಬಾಗಿದ ಚಿತ್ರ.

೨) ಬತ್ತಿಬಾಡಿದ ಚಿತ್ರ.

೩) ಜಾರಿ ಮುಳುಗಿದ ಚಿತ್ರ.

ಈ ಮೂರೂ ಚಿತ್ರಗಳಲ್ಲಿ ಕವಿಯ ಚಿತ್ರಕ ಶಕ್ತಿಯು ಚನ್ನಾಗಿ

ವ್ಯಕ್ತವಾಗಿದೆ. ಪ್ರತಿಯೊಂದು ಚಿತ್ರದಲ್ಲಿ ಸೂಕ್ಷ್ಮ ಅವಸ್ಥಾಂತರದ ವರ್ಣನೆಯು ಅವರ್ಣನೀಯವಾಗಿದೆ. ಮೊದಲಿನ ಚಿತ್ರವನ್ನು ನೋಡಿ! ತನ್ನ ದಳದ ಭಾರದಿಂದ ಹೂವಿಗೆ ಕತ್ತನೆತ್ತುವದಾಗಲಿಲ್ಲ. ಹೂಬಿಸಲು ಕೂಡ ಅದನ್ನು ಹಣ್ಣು ಮಾಡಿತು. ಅದು ಕೆಳಗೆ ಬೀಳುವಂತೆ ಬಾಯಿ ಬಿಟ್ಟಿತು... ಮಣ್ಣಿನಲ್ಲಿ ಕಣ್ಣನೆಟ್ಟಿತು. ಕೊನೆಗೆ ನೀರ ಮಣಿಯು ಅದರ ಮೊಗವನ್ನು ಬಾಗಿಸಿತು.

ಎರಡನೆಯದರಲ್ಲಿ ಅದು ಬಾಡಿದ ರೀತಿ....ರಸವು ಆರಿದ ರೀತಿ. ವಿಶೇಷವಾಗಿ ಅದರಿಂದ ಉಂಟಾಗುವ ಧ್ವನಿಯು ಸರಿಯಾಗಿ ಚಿತ್ರಿಸಲಾಗಿದೆ. ಅದರಲ್ಲಿಯ ದುಗುಡವು ಯಾರಿಗೂ ತಿಳಿಯದಂತೆ ಇದ್ದಲ್ಲಿಯೆ ಇಂಗಿತು—ಬತ್ತಿಯು ಬತ್ತಿ ದೀಪವು ಆರುವಂತೆ ಇದರಲ್ಲಿಯ ರಸವು ಅಳಿಯಿತು. ಅದು ಉಕ್ಕಿ-ವ್ಯಕ್ತವಾಗಿ ಇಲ್ಲದಂತಾಗಲಿಲ್ಲ. ಉಕ್ಕಲಿಕ್ಕೆ ಅವಸರವೇ ದೊರಕಲಿಲ್ಲ. ಈ ಮೇರೆಗೆ ಧ್ವನಿಯನ್ನು ಉಸುರುವಲ್ಲಿ ಎಷ್ಟು ಸೂಕ್ಷ್ಮತೆ ?

ಮೂರನೆಯ ಮರಣದ ಚಿತ್ರವಂತೂ ಅತ್ಯದ್ಭುತವಾದುದು. 'ಗಾಳಿ-ನೀರು-ಕಾಡು' ಇವುಗಳ ಮಧ್ಯದಲ್ಲಿ ನಡದಲ್ಲಿ ಒಂದು ಕಲ್ಲನ್ನು ಕಟ್ಟಿಕೊಂಡು ಇದು ಒಮ್ಮೆಲೆ ಕಳಚಿಬಿದ್ದು ಮುಳುಗಿತು. ಇದರ ಜೀವವು ಸಾವನ್ನುಬೆನ್ನಟ್ಟಿತು. ಮತ್ತು ಸಾವು ಕೂಡ ಅದರ ಬೆಂಬಲಿಗನಾಗಿ ಅಲ್ಲಿಯೆ ನಿಂತಿತಂತೆ. ಹೌದು! ಜಗದ ನೊಗದ ನೋವನ್ನು ಜಗಿಸುವ ಸಾವು ಬೆಂಬಲಿಗನಲ್ಲದೆ ಮತ್ತೇನು? ಎಷ್ಟು ಅರ್ಥಪೂರ್ಣ ಶಬ್ದಗಳು? ಎಂಥ ಎದೆಯನ್ನು ಸೀಳುವ ಕರುಣ ಚಿತ್ರವಿದು ?

೫ **ನಾದ-ಮಾಧುರ್ಯ:**— ಶಬ್ದಗಳ ಅರ್ಥಪೂರ್ಣತೆಯಿಂದ ಸ್ಪಷ್ಟವಾದ ಚಿತ್ರಗಳನ್ನು ಬರೆದು ಕವಿಯು ತನ್ನ ಭಾವವನ್ನು ತೋಡಿಕೊಳ್ಳುವಂತೆ, ಭಾವಕ್ಕೆ ತಕ್ಕ ಶಬ್ದಸಮೂಹಗಳನ್ನು ಉಪಯೋಗಿಸಿ ಅದೇ ಕಾರ್ಯವನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಯತ್ನಿಸಿರುವನು.

ಇಲ್ಲಿ ಮೂರು ಮಾತ್ರೆಯ ನಾಲ್ಕುಗಣಗಳಿಂದ ಕೂಡಿದ ಚಿಕ್ಕ

ಚಿಕ್ಕ ಸಾಲುಗಳಿಂದಲೂ ಕರುಣರಸವನ್ನು ಚಿತ್ರಿಸಿದುದು ವಿಶೇಷ ಕೌಶಲ್ಯದ ಕುರುಹು. ಸಾಮಾನ್ಯವಾಗಿ ಇಂಥ ಗಂಭೀರ ಭಾವಗಳನ್ನುಸುರಲು ಐದೈದು ಮಾತ್ರೆಗಳ ಗಣಗಳನ್ನುಪಯೋಗಿಸುವುದು ವಾಡಿಕೆ. ಅಲ್ಲಲ್ಲಿ ಅನುಪ್ರಾಸವು ತನ್ನ ಕೆಲಸವನ್ನು ಅತ್ಯುತ್ತಮವಾಗಿ ನೆರವೇರಿಸಿದೆ.

ರಸವು ಆರೆ, ಗಾಳಿ ಹಾರೆ, ತೊಟ್ಟು ಜಾರೆ
ಮುಳು–ಮುಳು-ಮುಳುಂಗಿತು.

ಇಲ್ಲಿಯು ಅನುಪ್ರಾಸದ ಹಾಗೂ ಪುನರುಕ್ತಿಕಿಯ ಚಾತುರ್ಯವು ಅವರ್ಣನೀಯವು. ಅದು ಕೊನೆಗೆ—

ಮುಳುಗಿತೆಂದು ಮೊಗವದು
ಮುಗಿಯಿತೆಂದು ಯುಗವದು.

ಎಂಬಲ್ಲಿಯೂ ಕಂಡು ಬರುತ್ತದೆ

ಈ ಬಗೆಯಾಗಿ 'ಆಯಾಸದ' ವಾತಾವರಣವು ಸಹಜವಾಗಿ-ಅನಾಯಾಸವಾಗಿ ಕವಿತೆಯುದ್ದಕ್ಕೂ ಪಸರಿಸಿರುವುದು.

೧೮ ಅಭ್ಯಾಸ.

ಮುಂದಿನ ಕವನಗಳನ್ನು ಚೆನ್ನಾಗಿ ಓದಿ ಅವುಗಳ ಕೊನೆಗೆ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಬರೆಯಿರಿ!

ಉದಯರಾಗ.

ಮೂಡುವನು ರವಿ ಮೂಡುವನು
ಕತ್ತಲೊಡನೆ ಜಗಳಾಡುವನು.
ಮೂಡಣ ರಂಗಸ್ಥಲದಲಿ ನೆತ್ತರು
ಮಾಡುವನು ಕುಣಿದಾಡುವನು. ೧
ಬೆಳಕಿನ ಕಣ್ಣುಗಳಿಂದಾ ಸೂರ್ಯನು
ನೋಡುವನು ಬಿಸಿಲೂಡುವನು.
ಚಿಳಿಪಿಳಿ ಹಾಡನು ಹಾಡಿಸಿ ಹಕ್ಕಿಯು,
ಗೂಡಿನ ಹೊರಹೊರದೂಡುವನು. ೨

ಬಂಗಾರದ ಚೆಲು ಬಿಸಿಲ ಕಿರೀಟದ
ಶೃಂಗಾರದ ತಲೆ ಎತ್ತುವನು
ತೆಂಗಿನ ಕಂಗಿನ ತಾಳೆಯ ಬಾಳೆಯ
ಅಂಗಕೆ ರಂಗನು ಮೆತ್ತುವನು ೩
ಮಾಡಿನ ಹುಲ್ಲಲಿ ಚಿನ್ನದ ಗೆರೆಯನು
ಎಳೆಯುವನು ರವಿ ಎಳೆಯುವನು.
ಕೂಡಲೆ ಕೋಣೆಯ ಕತ್ತಲೆ ಕೊಳೆಯನು
ತೊಳೆಯುವನು ರವಿ ಹೊಳೆಯುವನು. ೪
ಮಲಗಿದ ಕೂಸಿನ ನಿದ್ದೆಯ ಕಸವನು
ಗುಡಿಸುವನು ಕಣ್ ಬಿಡಿಸುವನು.
ಮುಲುಗಿಡ ಹೂವಿಗೆ ಪರಿಪರಿ ಬಣ್ಣದ
ಉಡಿಸುವನು, ಹಸಿ ತೊಡಿಸುವನು ೫
ಏರುವನು ರವಿ ಏರುವನು!
ಬಾನೊಳು ಸಣ್ಣಗೆ ತೋರುವನು.
'ಏರಿದವನು ಚಿಕ್ಕವನಿರಬೇಕೆಲೆ,'
ಎಂಬಾ ಮಾತನು ಸಾರುವನು. ೬

—ಕವಿಶಿಷ್ಯ.

೧ ಸೂರ್ಯನು ಯಾರ ಸಂಗಡ ಜಗಳಾಡುವನು! ಅದರ ಪರಿಣಾಮವೇನಾಗುವುದು?
೨ ಅವನು ಮತ್ತೆ ಏನೇನನ್ನು ಮಾಡುವನು?
೩ ಅವನ ಕಂಗಳಾವು? ಕಿರೀಟವೆಂತಹದು?
೪ ಅವನು ಮಕ್ಕಳಿಗೆ ಯಾವ ಪಾಠವನ್ನು ಕಲಿಸುವನು?

ತಡಸಲು!

ತಡಸಲು ತಡಸಲು ಅಗೊ ಅಲ್ಲಿ
ದಡದಡ ಎನುವದು ಎದೆ ಇಲ್ಲಿ
ದಿಡುಗದೊ ಗುಡುಗುಡು ಗುಡುಗುತಿದೆ
ಗಿಡ ಮರ ಜನ ಮನ ನಡುಗುತಿದೆ.

ಗುಡುಗೇ ನೀರಾಗಿಹುದಿಲ್ಲಿ
ಮೋಡ ಹುಟ್ಟುತಿದೆ ಮಳೆಯಲ್ಲಿ,
ತುಂತುರ ಮಳಿ ಹೊಳಿಯಂಚಿಗಿದೆ
ಸೀರೇ ಮಿರಿ ಮಿರಿ ಮಿಂಚುತಿದೆ.
ಮುತ್ತಿನ ಸರಗಳು ಹರಿಯುತಿವೆ.
ಗಾಜುಗಂಬಗಳು ಮುರಿಯುತಿವೆ.
ಕಾಮನ ಬಿಲ್ ಮುನಿದಾಡುತಿದೆ.
ನೀರಿನ ಹೂ ಕುಣಿದಾಡುತಿವೆ.
ನೆಲ ಮುಗಿಲುಗಳ ನಡುವಿನ ಬೆಡಗು,
ರಮ್ಯ ಭಯಂಕರವೀ ದಿಡುಗು.
ಅಸ್ಫುಟ ಕರೆವುದು 'ಬಾಯಿಲ್ಲಿ.'
ಭಯ ಗದರಿಸುತಿದೆ, 'ಇಲ್ಲಿಲ್ಲಿ'
ಮನ ಘುಮುಕುತ್ತಿದೆ ಹೊಳೆಯಂತೆ.
ಸ್ತಂಭಿತ ಮೈ ತಪಸಲಿನಂತೆ,
ನಿಂತಲ್ಲಿಯೆ ಕಾಲಂಟಿತ್ತು
ಊಹೆ ದಿಗಂತಕೆ ಹೊರಟಿತ್ತು.

—ದ. ರಾ. ಬೇಂದ್ರೆ

೧ ತಡಸಲು ಕವಿಗೆ ಹೇಗೆ ಕಾಣಿಸಿತು ?

೨ ಅವನ ಮೈಮನಸ್ಸಿನ ಮೇಲೆ ಅದರ ನೋಟದಿಂದ ಯಾವ ಪರಿಣಾಮವು ಉಂಟಾಯಿತು ?

೩ 'ಗುಡುಗೇ ನೀರಾಗಿಹುದು'—'ಮಳೆಯಲ್ಲಿ ಮೋಡ ಹುಟ್ಟುತಿದೆ' ಈ ಮಾತುಗಳ ಸ್ವಾರಸ್ಯವೇನು ?

೪ ದಿಡುಗದು ಗುಡುಗುದು ಗುಡುಗುತಿದೆ. ಸೀರೆ ಮಿರಿಮಿರಿ ಮಿಂಚುತಿದೆ. ಈ ಸಾಲುಗಳ ಧ್ವನಿಯಲ್ಲಿ ಸೊಬಗೆಲ್ಲಿದೆ ?

೫ 'ಊಹೆ ದಿಗಂತಕೆ ಹೊರಟಿತ್ತು' ಎಂದರೇನು ?

ದೀನನಿಗಿಂತ ದೇವ ಬಡವ!

ಹರಿಗೆ ಎಂದು ಗುಡಿಯನೊಂದು
ಕಟ್ಟುತಿರುವೆಯಾ?
ಹರಿಯ ಒಲುಮೆ ಪಡೆದು ಪುಣ್ಯ
ಗಳಿಸುತಿರುವೆಯಾ?
ಮರುಳ ನೀನು ಹಳ್ಳಿಗೋಡು
ದೀನ ಜನರ ಪಾಡ ನೋಡು,
ಇರಲು ಗುಡಿಯು ಇಲ್ಲವಲ್ಲ!
ಹೊಟ್ಟೆತುಂಬ ಅನ್ನವಿಲ್ಲ.
ಹರಿಗೆ ಎಂದು ಗುಡಿಯನೊಂದು
ಕಟ್ಟುತಿರುವೆಯಾ?
ಹರಿಯ ವಿಶ್ವರೂಪವನ್ನು
ಮರೆತುಬಿಟ್ಟೆಯಾ?
ಜಗಕೆ ಗೋಡೆ ಹಾಕಿ ಗುಡಿಯ
ಕಟ್ಟಬಲ್ಲೆಯಾ?
ದೀನಗೊಂದು ಗೂಡು ಸಾಕು
ದೇವಗೊಂದು ವಿಶ್ವಬೇಕು.
ಮಣ್ಣು, ಹುಲ್ಲು, ಸಣ್ಣ ಓಡು,
ಬಡವಗದುವೆ ಚೆನ್ನಗೂಡು.
ಹರಿಗೆ ಎಂದು ಗುಡಿಯನೊಂದು
ಕಟ್ಟುತಿರುವೆಯಾ?
ದೀನಗಿಂತ ದೇವ ಬಡವ-
ನೆಂದು ಬಗೆದೆಯಾ

—ದಿನಕರ ದೇಸಾಯಿ

೧ ಕವಿತೆಯು ಯಾರನ್ನುದ್ದೇಶಿಸಿ ಬರೆಯಲ್ಪಟ್ಟಿದೆ?

೨ ಇದರಲ್ಲಿ ಕವಿಯು ಒರೆದ ಮುಖ್ಯ ಸಂದೇಶವಾವುದು?

೩ ಇದರ ತಲೆಬರಹವು ಸರಿಯಾದುದಿದೆಯೊ? ಇನ್ನಾವುದನ್ನಾದರೂ ಸೂಚಿಸಬಹುದೇ?

೪ ಗುಡಿಯು ಎಂತಹದಿರಬೇಕು?

ಮೊರೆ !

ಆಸುಗೋಲೆ ಇಲ್ಲದಾ
ಹೆಳವ ಸಾಗಿದಂತೆಯೆ
ಶರಧಿಯಲ್ಲಿ ಬಿಸುಟದಾ
ಬಳ್ಳಿ ತೇಲುವಂತೆಯೆ
ಭಾಸುಗೋಲವಿಲ್ಲದಾ
ಜಗವು ಬದುಕುವಂತೆಯೆ
ಸಾಗುತಿಹುದು, ತೇಲುತಿಹುದು, ಬದುಕುತಿಹುದು, ಜೀವನ!
ಎಂದು ಬರುವಿ? ಎಂದಿಗಹುದು? ನನ್ನ ಬಾಳು ಪಾವನ?

— ವಿನಾಯಕ

೧ ಕವಿಯ ಜೀವನವು ಹೇಗೆ ಸಾಗಿದೆ?
೨ ಹೇಗೆ ಸಾಗಬೇಕೆಂದು ಅವನು ಆಶಿಸುವ?
೩ ಅವನು ಯಾರನ್ನು ಕರೆಯುವ? ಏಕೆ?

ಐದನೆಯ ಭಾಗ — ಅನುಬಂಧಗಳು

೧ ಪೀಠಿಕೆ

೧) **ಉದ್ದೇಶ:**—ಈ ವರೆಗೆ ನಾವು ಪ್ರಬಂಧ-ಬರಹದ ಪರಿಚಯವನ್ನು ಮಾಡಿಕೊಡಲು ಯಥಾಮತಿ ಯತ್ನಿಸಿರುವೆವು. ಪ್ರಬಂಧದ ವಿವಿಧಾಂಗಗಳಲ್ಲಿ ಪ್ರಾವೀಣ್ಯವು ಬರಬೇಕಾದರೆ ಕನ್ನಡ ನುಡಿಯ ಅಭ್ಯಾಸವು ಕೂಲಂಕಷವಾಗಿ ಆಗಲುಬೇಕು. ಕನ್ನಡದ ವೈಭವದ ಪರಿಚಯವು ಚೆನ್ನಾಗಿ ಆಗಲುಬೇಕು. ಕನ್ನಡ ಸಾಹಿತ್ಯದ ಹಿರಿಕಡಲನ್ನು ಕಡೆದು ಕೆಲ ಮಹನೀಯರು ಇದೀಗ ಅದರಲ್ಲಿಯ ಹೊಳಪುಳ್ಳ ಮಣಿಗಳನ್ನು ಹೊರದೆಗೆದಿರುವರು ಕೊನೆಗೆ ಅವನ್ನಾದರೂ ಕಂಡುಕೊಳ್ಳುವದು ಅತ್ಯಗತ್ಯ. ಅವನ್ನುಪಯೋಗಿಸಿ ತಮ್ಮ ಬರಹಕ್ಕೆ ಕಳೆಯನ್ನು ಕಟ್ಟಬೇಕು.

'ಅಡಿಗೆಯ ಮನೆಯ ಮತ್ತು ಓಣಿಯ ಮಾತಿನಲ್ಲಿಯೇ ಎಲ್ಲ ವಾಙ್ಮಯವು ಅಡಕವಾಗಬೇಕೆಂದು, ಕೆಲವು ಮೈಗಳ್ಳ ಕನ್ನಡಿಗರು ಹೊಸಗನ್ನಡದ ಹೊಳೆಗೆ ತಮ್ಮ ಬಾಯಿಂದ ಒಡ್ಡನ್ನು ಹಾಕಲು ಬಯಸುವರು ಆದರೆ ಹೊಳೆಯು ಹೊಂದವಾಗದೆ ತನ್ನ ಸೆಳವಿನಲ್ಲಿ ಈ ಮೈಗಳ್ಳರನ್ನು ಸೆಳೆದುಕೊಂಡುಹೋಗಿ, ಅವರಿಗೆ ಮೈಮುರವುಂಟಾಗುವಂತೆ ಮಾಡಲಿಕ್ಕೆಬೇಕು. ನಮ್ಮ ನುಡಿಯು ಒಡನೆ ಒಡನೆಯ ಜೀವದ ನೆರಳನ್ನು ತೋರಿಸುವ ನೀರಾಗಬೇಕು ನಮ್ಮ ನುಡಿಯು ಜೀವ ಜೀವದ ಜೀವಾಳವನ್ನು ತೋರಿಸುವ ಕನ್ನಡಿಯು ದರಳಾಗಬೇಕು. ಕನ್ನಡವನ್ನು ಕನ್ನಡಿಯಾಗಿ ಮಾಡಬೇಕು.... ಚಿತ್ತದ ಚಿತ್ರಗಳನ್ನೂ, ಅಹಂಕಾರದ ಉದ್ಗಾರಗಳನ್ನೂ, ಬುದ್ಧಿಯ ಭೇದಗಳನ್ನೂ ಅಂತಃಕರಣದ ಕಿರಣಗಳನ್ನೂ, ಮನಸ್ಸಿನ ಹೊಯ್ದಾಟಗಳನ್ನೂ ಪ್ರತಿಬಿಂಬಿಸಲು ನಮ್ಮ ಭಾಷೆಯು ಸಮರ್ಥವಾಗಲುಬೇಕು. ನಮ್ಮ ನುಡಿಯು ಜಗತ್ತಿನ ತಿರುಳನ್ನೂ, ಜಗದೀಶನ ಹುರುಳನ್ನೂ ತೋರಿಸುವ ಕನ್ನಡಿಯಾಗಬೇಕು. ಜಗತ್ತಿನ ಸೊಬಗನ್ನೂ, ಜಗದೀಶನ ಸೊಗಸನ್ನೂ ನವಿನವಿದು ನಲಿಯುವ ನಾಲಿಗೆಯಾಗಬೇಕು.' ಎಂದು ನಮ್ಮ ನಾಡಿನ ಕವಿವರರೋರ್ವರು ಹಲವರುಷಗಳ ಪೂರ್ವದಲ್ಲಿಯೆ ಸಾರಿರುವರು.

ಇದಾಗಬೇಕಾದರೆ ಸಾಹಿತ್ಯದ ಆಳವಾದ ಅಭ್ಯಾಸವೇ ಹಿರಿದಾದ ಸಾಧನವೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಆದರೂ ಹೊಸಬರಲ್ಲಿ ಅಭಿರುಚಿ ಹುಟ್ಟಬೇಕೆಂದು ಮುಂದಿನ ಅನುಬಂಧಗಳನ್ನು ಕೊಟ್ಟಿರುವೆವು. ಈ ಮೊದಲು ಬಂದ ಉಜ್ವಲ ಅವತರಣಗಳು ಕನ್ನಡದ ಸೊಬಗನ್ನು ಕೆಲ ಮಟ್ಟಿಗೆ ತೋರಿಸಿ ವಿದ್ಯಾರ್ಥಿಗಳ ಅಭಿರುಚಿಯನ್ನು ಹುಟ್ಟಿಸಿರಲಿಕ್ಕೆ ಸಾಕು. ಮುಂದಿನ ಅನುಬಂಧಗಳನ್ನು ಸರಿಯಾಗಿ ಉಪಯೋಗಿಸಿದರೆ ರಸದ ಜೊತೆಯಲ್ಲಿ ಬರಹದ ಕಸುವೂ ಬರದೆ ಇರದೆಂಬ ನಂಬಿಗೆಯಿದೆ.

೨) **ವಿವರ**:— ಮುಂದೆ ಕಾಣಿಸಿದ **ಅನುಬಂಧ**ಗಳು ನಾಲ್ಕು. ಅವುಗಳ ಹೆಸರುಗಳನ್ನು ಈ ಮೊದಲೆ ತಿಳಿಸಿರುವೆವು. ಅವನ್ನು ರಚಿಸುವಾಗ **ಶ್ರೀಮಾನ್ ಶಂ. ಬಾ. ಜೋಶಿಯವರ 'ಕನ್ನಡ ನುಡಿಯ ಹುಟ್ಟು'** ಎಂಬ ಹೊತ್ತಿಗೆಯ ನೆರವು ಬಹಳವಾಗಿದೆ. ಜಿಜ್ಞಾಸುಗಳು ಮೂಲ ಗ್ರಂಥವನ್ನೆಯೆ ಪರಿಶೀಲಿಸಿ ತಮ್ಮ ಹೆಚ್ಚಿದ ಹಸಿವನ್ನು ತಣಿಸಿಕೊಳ್ಳಬೇಕು.

ಇನ್ನು ಪ್ರತಿಯೊಂದು ಅನುಬಂಧದಲ್ಲಿಯ ವಿಷಯವನ್ನು ಕುರಿತು ಸ್ವಲ್ಪ ವಿವರಣವನ್ನು ಮಾಡುವದು ಅವುಗಳ ತಿಳುವಳಿಕೆಯ ದೃಷ್ಟಿಯಿಂದ ಆಗತ್ಯ.

ಅ) **ಮೇಳನುಡಿ**:—ಅರ್ಥದಲ್ಲಿ **ಮೇಳ**ವಿರುವಂತಹವೆ **ಮೇಳ ನುಡಿಗಳು**. ಅವುಗಳಲ್ಲಿ ಅರ್ಥ-ಸಾಮ್ಯವಿರುವುದು. ಆದರೂ ರೂಢಿಯ ಮೂಲಕವಾಗಿ ಹಲವು ನುಡಿಗಳಲ್ಲಿ ಕೆಲವೊಂದು ಅರ್ಥಸಾಮ್ಯವು ತೋರಿದರೂ ಒಂದು ನುಡಿಯು ಮತ್ತೊಂದರ ಬದಲು ಎಲ್ಲೆಡೆಯಲ್ಲಿಯೂ ನಡೆಯಲಾರದು. ಸೂಕ್ಷ್ಮವಾದ ಅರ್ಥಭೇದವುಳ್ಳ ಮೇಳದ ನುಡಿಗಳು ವಿಪುಲವಾದ ಭಾಷೆಯೇ ಶ್ರೇಷ್ಠವೆನಿಸುವದು. ಇಂಥ ಕೆಲ **ಮೇಳ-ನುಡಿಗಳನ್ನು** ಮುಂದೆ ಕೊಟ್ಟಿರುವೆವು. ಅವುಗಳಲ್ಲಿಯ ಅರ್ಥಭೇದವು, ಧಾತ್ವರ್ಥದ ಸಹಾಯದಿಂದಲೂ, ರೂಢಿಯಿಂದಲೂ ಇನ್ನೂ ನಿಶ್ಚಿತವಾಗಬೇಕಾಗಿದೆ. ಅಧಿಕಾರವುಳ್ಳ ಪಂಡಿತರು ಅದನ್ನು ಮಾಡುವರೆಂಬಾಶೆ.

ಆ) **ದೇಸಿ-ನುಡಿ**:—'**ದೇಶಿಯು ಭಾಷೆಯ ಜೀವಾಳ**.' ಅದರ ಲಕ್ಷಣವನ್ನು ಹೇಳುವದು ದುಸ್ತರ. ಅದನ್ನು ಪರಭಾಷೆಗೆ ಶಬ್ದಶಃ

ಪರಿವರ್ತಿಸಲಿಕ್ಕೆ ಬರುವದಿಲ್ಲ; ಇದೇ **ದೇಸಿನುಡಿಯು** ಹೆಗ್ಗುರುತು. ಒಂದು ಭಾಷೆಯಲ್ಲಿಯ ವೈಚಿತ್ರ್ಯಗಳೆಲ್ಲ ಸೇರಿ, ಸಾಧಾರಣವಾಗಿ ಅದುವೆ **ದೇಸಿ** ಯೆನಿಸುತ್ತದೆ ಅದರ ಮುಂದೆ ವ್ಯಾಕರಣ—ತರ್ಕಶಾಸ್ತ್ರಗಳ ಆಟವೆ ನಡೆಯುವದಿಲ್ಲ.

ದೇಸಿಯಲ್ಲಿ ನುಡಿನುಡಿಗೂ ಹೊಸತನ ತುಂಬಿಕೊಂಡಿರುವದು; **ದೇಸಿಯೆಂದರೆ ಸಜೀವ ಭಾಷೆ; ಸಜೀವರ ಭಾಷೆ**. ದೇಶಿಯು ಒಂದೊಂದು ನುಡಿಯಲ್ಲಿಯೂ ಕಣ್ಣಮುಂದೆ ಸುಸ್ಪಷ್ಟವಾದ ಚಿತ್ರಗಳನ್ನು ತಂದು ನಿಲ್ಲಿಸುವ ಸಾಮರ್ಥ್ಯವಿದೆ. ಅದು ಮಾತಿನ ಸವಿಯನ್ನು ಹೆಚ್ಚಿಸುವದು; ಅದರಲ್ಲಿಯ ಆವೇಶವು ಬಿಚ್ಚುಮಾತಿನಲ್ಲಿಲ್ಲ. ಆದುದರಿಂದ ಇದಕ್ಕೆ ' **ನಾಡ ನುಡಿ** ' ಎಂದು ಹೇಳುವುದೂ ಉಚಿತವಾಗಿದೆ. ಇಲ್ಲಿ ಕೆಲವು **ಜೋಡ ನುಡಿಗಳನ್ನೂ-ಕಿರುನುಡಿಗಳನ್ನೂ** ಕೊಟ್ಟಿರುವೆವು. ಇದರ ಅಂಶಗಳೇ ಆದ **ಪಡೆನುಡಿ—ನಾಣ್ಣುಡಿಗಳನ್ನು** ಮುಂದಿನ ಅನುಬಂಧದಲ್ಲಿ ಸೇರಿಸಿರುವೆವು.

ಇ) **ಪಡೆನುಡಿ:**—ಕನ್ನಡ ದೇಸಿಯು ಎಲ್ಲ ಪ್ರಕಾರಗಳಲ್ಲಿ **ಪಡೆನುಡಿ**ಯು ಬಹಳ ಮಹತ್ವದ್ದಾಗಿದೆ ನಮ್ಮ ನುಡಿಯ ತಿರುಳು ಇದರಲ್ಲಿಯೆ ಅಡಕವಾಗಿದೆ ಇದನ್ನು ಬಿಟ್ಟರೆ ಕನ್ನಡವನ್ನಾಡುವದೇ ಅಸಾಧ್ಯ ಈ ಪಡೆನುಡಿಗಳ ಪರಂಪರೆಯು ಇಂದು ನಿನ್ನೆಯದಲ್ಲ. ಸಾವಿರಾರು ವರುಷಗಳ ಹಿಂದೆ ಉಪಯೋಗಿಸುತ್ತಲಿದ್ದ ಪಡೆನುಡಿಗಳು, ಈಗಲೂ ದಿನದ ಮಾತಿನಲ್ಲಿ ಕಿವಿಗೆ ಬೀಳುತ್ತಿರುವದನ್ನು ನೋಡಿ ಮನಸ್ಸು ಹಿಗ್ಗುವದು. ಇವುಗಳ ಅಭ್ಯಾಸದಿಂದ ಹೊಸಗನ್ನಡಕ್ಕೊಂದು ಹೊಚ್ಚ ಹೊಸ ಬಣ್ಣವೇರದೆ ಇರಲಾರದು.

ಈ) ನಾಣ್ಣುಡಿ:—ಪ್ರಚಲಿತವಿದ್ದ ಪ್ರಾಸಬದ್ಧ ನಾಲುಗಳೇ **ನಾಣ್ಣುಡಿಗಳು.** ಅವುಗಳಲ್ಲಿಯ ಕುಸುರಿನ ಜಾಣ್ಮೆಯ ರೀತಿಯೆ ಅವುಗಳ ಲೋಕಪ್ರಿಯತೆಗೆ ಕಾರಣವಾಗಿದೆ. ಅವುಗಳ ಅಭ್ಯಾಸದಿಂದಲೂ ಕನ್ನಡದ ಬೆಳವಣಿಗೆಗೆ ತುಂಬಾ ಸಹಾಯವಾಗದಿರದು.

ಉ) ಜಾಣ್ಣುಡಿ:—ಜಾಣ್ಣುಡಿಗಳು ಅಂದಿನ-ಇಂದಿನ ಹಿರಿಯರ ಸುಭಾಷಿತಗಳು. ನಮ್ಮ ಕರು—ನಾಡು, ಹಿರಿ—ನಾಡು, ಹಿರಿಯರ—ನಾಡು.

ಅವರ ಮುತ್ತಿನಂತಹ ಮಾತುಗಳನ್ನು ಆಯ್ದು ಅವನ್ನು ನಮ್ಮ ಬರಹದಲ್ಲಿ ಆಗಾಗ ಮಿತಿಯನ್ನರಿತು ಬಳಸಿದರೆ, ಅದಕ್ಕೆ ರತ್ನ-ಮಾಲೆಯ ಸೊಬಗು ಬರದಿರದು. ಆದುದರಿಂದ ನಮ್ಮ ಹಳೆಯ ಹೊಸ ಕವಿಪುಂಗವರ ಹಾಗೂ ಸಾಹಿತ್ಯ ಶಾರ್ದೂಲರ ಹಿರಿ-ನುಡಿಗಳಲ್ಲಿ ಕೆಲವೊಂದನ್ನು ಕೊಡಲು ಉಪಕ್ರಮಿಸಿದ್ದು. ಅವನ್ನು ಕೂಡ ವಿದ್ಯಾರ್ಥಿಗಳು ಪ್ರಯತ್ನಪೂರ್ವಕವಾಗಿ ಉಪಯೋಗಿಸುವರೆಂಬ ಆಶೆ.

ಅನುಬಂಧ ೧.

ಮೇಳ-ನುಡಿಗಳು.

ಅಡಗು—ಹುದುಗು, ಮರೆಯಾಗು, ಮೈಗರೆ, ಕಾಣದಾಗು, ಅವಿತುಕೊಳ್ಳು, ತಲೆಗರೆ.

ಅಡೆ—ತಡೆ, ಎಡರು, ತೊಡರು, ತೊಂದರೆ, ಅಡ್ಡಿ, ಕಾಟ, ಪೀಡೆ.

ಅಂಚು—ತುದಿ, ದಂಡೆ, ದಡ, ಕಡೆ, ಕರೆ, ತಡಿ.

ಅಂಜು—ಅಳುಕು, ಅದಿರು, ನಡಗು.

ಅಪ್ಪು—ತಬ್ಬು, ಅಮರು, ತಳ್ಕೆಯ್ಸು, ಮುಂಡಾಡು, ಬೋಳೈಸು.

ಅರಸು—ಅರಿಸು, ಆಯ್, ಆಯ್ದುಕೊಳ್ಳು, ಹುಡುಕು.

ಅರಿವು—ಎಚ್ಚರ, ಪರವೆ, ನೆನಪು.

ಅಳತೆ—ತೂಕ, ಕಟ್ಟು, ಮಾರು, ಮಾನ, ಮಾಪು.

ಆಟ—ಕೇಳಿ, ಚಿಣ್ಣಾಟ, ಹುಡುಗಾಟ, ನಲ್ಲಾಟ.

ಇಂಪು—ಸೊಂಪು, ಕಂಪು, ಸೌಸವ, ಅಲಂಪು, ನರುಗು, ಸೊವಡು, ಮುಗಮುಗ.

ಇಂಬು—ಎಡೆ, ಬಿಡುವು, ತೆರವು, ಅನುವು, ತೆರಪು, ಗೊತ್ತು.

ಉಡುಗು—ಒಣಗು, ಮುದುಡು, ಬಾಡು, ಸುರುಟು, ಸುರುಳ್ಗು, ಸೇದು, ಮುರು (ಂ) ಟು.

ಊರು—ಕೇರಿ, ಬೀಡು, ಬಾದ,—ಬಾಳು, ವಾಡ, ವಾಡಿ, ಹಟ್ಟಿ, ಪಟ್ಟಿ, ಪಾಳ್ಯ, ಪಟ್ಟಣ, ಪೊಳಲು, ಹಳ್ಳಿ, ಕಟ್ಟಿ, ಕೊಪ್ಪ (ಲು, ಳು) ಕೌಂಡ, ಕುಂಪ, ಕುಡಿ, ಕೋಟೆ.

ಎಗ್ಗ—ಹುಂಬ, ಹುಂಡ, ಕೆಂಚ, ಗಾಂಪ, ಗಾವಿಲ, ಹೆಡ್ಡ (ಪೆದ್ದ), ಪೆಚ್ಚ.

ಎನ್ನು—ಅನ್ನು, ಆಡು, ಹೇಳು, ಉಸಿರು, ಒರೆ.

ಎಳ್ಗೆ—(ಏಳಿಗೆ)-ಮೇಲ್ಮೆ, ಪೆಂಪು, ಹೆಗ್ಗಳಿಕೆ, ಹೆಚ್ಚಳ.

ಒಡೆಯ-ದೊರೆ, ಆಳ್ದ, ಆಣ್ಮ, ಎರೆಯ, ಅರಸು, ಯಜಮಾನ.

ಒದರು—ಚೀರು, ಕೂಗು, ಬೊಬ್ಬಿರಿ, ಅರಚು, ಕಿರಿಚು, ಮೊರೆ, ಹುಯ್ಯಲಿಡು.

ಒಪ್ಪು—ಅಮರು, ಎಸೆ, ಕಂಗೊಳಿಸು, ಒಡಂಬಡು, ಚಂದಕಾಣು, ಸೊಗಸು.

ಒಲವು—ನಲವು, ಒಲುಮೆ, ನಲುಮೆ, ಕೂರ್ಪು, ಕೂರ್ಮೆ, ಒರಲು, ಎರಕು, ಅಳ್ಕರು (ಅಕ್ಕರು), ಅಕ್ಕರತೆ, ಕರುಳು, ಕಕ್ಕುಲತೆ, ಮುದ್ದು, ಲಲ್ಲೆ.

ಕರು—ಕುನ್ನಿ, ಮರಿ, ಚಿಳ್ಳೆ, ಚಿಣ್ಣ, ಪಿಳ್ಳೆ. ಕಂದ, ಕೂಸು, ಹಸುಳೆ, ಮಗ, ಹುಡುಗ.

ಕಸಬು—ಕೆಲಸ, ಹೋರೆ, ಬೇಸಾಯ, ಕಾಯಕ, ವ್ಯಾಪಾರ, ಉದ್ಯೋಗ, ಉದ್ದಿಮೆ, (ಉದ್ಯಮ), ಊಳಿಗ, ಗೆಯ್ಮೆ, ಮಾಡಿಮೆ.

ಕಸುವು—ಅಣ್ಮು, ಅರ್ಪು, ಅಪಟು, ಉರ್ಕು, ಆಳವು, ಆಳ್ತನ, ಬಲ, ಗಂಡು, ಜಿಗಟು, ಗಟ್ಟಿಗತನ, ಆಕೆವಾಳತನ, ಬಂಟತನ.

ಕಿಚ್ಚು—ಕೆಂಡ, ಬೆಂಕಿ, ಬೇಗೆ, ಉರಿ.

ಕೆರೆ—ತುರಿಸು, ತಿಕ್ಕು. ಚಿವಿ, ಚಿವುಟು, ಚಿವುರು, ಜಿಗಟು.

ಕೊನರು—ಚಿಗುರು, ತಳಿರು, ಮುಗುಳು.

ಕೊಳ್ಳಿ—ಸುಲಿಗೆ, ಸೂರೆ, ದಾಳಿ. ಲಗ್ಗೆ.

ಕೋರಿಕೆ—ಹಾರೈಕೆ, ಬಯಕೆ, ಬೇಡಿಕೆ.

ಗಳಿಕೆ—ಆಯ, ಉತ್ಪನ್ನ, ಹುಟ್ಟುವಳಿ, ಆದಾಯ, ಲಾಭ.

ಗುಂಪು—ದೊಂದುಳಿ, ಬಂಬಲು. ಸಂದಣಿ, ಜಂಗುಳಿ, ತಿಂತಿಣಿ, ಹಿಂಡು. ಬಿಂಪ, ಗಡಣ. ಒಟ್ಟಜೆ, ತಟ್ಟು, ಗೊಂಪಣ.

ಚದುರು—ಜಾಣ್ಮೆ. ಜಾಣು, ಕುಸುರು.

ಚಿಗಿ—ಮೊಳೆ, ಹಬ್ಬು. ಪಡಲುವಡೆ, ಕೊನರು, ಕುಡಿಬಿಡು ಚಿಗುರು.

ಚುಚ್ಚುಮಾತು—ಕಚ್ಚುಮಾತು, ಬಿಚ್ಚುಮಾತು, ಮೂದಲಿಕೆ, ಕವಡು, ಕಟುಕಿ ಕಡುನುಡಿ. ಬಿರುನುಡಿ ಅಣಕ.

ಚೆಂದ—ಚೆಲುವು, ಸೊಗಸು. ಸೊಬಗು, ಸೊಂಪು, ದೇಸೆ. ಗಾಡಿ, ಅಂದ, ಲೇಸು, ಒಳ್ಪು.

ಜಳ್ಳು—ಟೊಳ್ಳು, ಪೊಳ್ಳು, ಪಣಜು. ಬರಡು.

ಜೋಡಿಸು—ಕೂಡಿಸು, ಕಟ್ಟು. ಹೊಂದಿಸು, ಬೆಸೆ. ಸಮೆ, ಹೆಣೆ; ಹಮ್ಮು. ಕೆಚ್ಚುಕೋ. ಹೊಲಿ.

ತಣಿ—ದಣಿ, ಚಳಿ, ಸಾಕಾಗು, ಆಸರು, ಬೇಸರು.

ತಲ್ಲಣ (ಳ)—ತಳಮಳ. ತಡಂಬಡ. ಕಳವಳ, ಸಿಡಿಮಿಡಿ, ಕಸಿವಿಸಿ, ಬೇಗುದಿ, ಅಳಲು, ತೊಳಲು.

ತೀರ—ಪೂರ, ತುಂಬ, ಕಡು ಬಹಳ ಒಳ್ಳೆ. ಸಲೆ ಮಿಗೆ, ನಾಡೆ, ಉರೆ ತವೆ.

ತುಡುಕು—ದುಡುಕು, ಎರಗು. ಬೀಳು. ಹಾಯು, ತಾಗು, ತಳ್ತಿರಿ.

ತುಂಟ—ಪೋರ, ಪೋಲಿ, ಪೋಕರಿ, ಅಗಡ, ಟೊಣಪ, ದಿಂಡೆಯ, ದಿಂಡೆಗಾರ, ದಿಂಡುಕೆ, ನಾಡಾಡಿ, ಉಡಾಳ, ಊಡಕ, ಉಂಡಾಡಿ, ಕೂಳ, ಗೂಳಿ.

ತೊಡೆ—ಅಳಿಸು, ಒರಸು, ತೊಳೆ, ಉಜ್ಜು, ತಿಕ್ಕು.

ತೊಂದರೆ—ಕಷ್ಟ, ಕಾಟ, ಕೇಡು, ಕೋಟಲೆ, ಉಪಟಳ, ಗಸಣೆ, ದೈವ, ಹಣೇಬರಹ, ಇದಿ, (ವಿಧಿ).

ತೊಳಗು—ಬೆಳಗು, ಹೊಳೆ, ತೆರಂಬೊಳೆ. ತಳ್‌ಪೊಯ್.

ನನ್ನಿ—ನಿಕ್ಕುವ, ನನಸು, ದಿಟ, ಸತ್ಯ ಸಾಜ, ನಿಜ.

ನಲ್ಲ—ಇನಿಯ, ಗಂಡ, ಓಪ, ಮನದನ್ನ, ಕಾದಲ, ಕೂರ್ಪ.

ನವೆ—ಸವೆ, ತವಿ (ತವು), ಸೊರಗು, ಕೊರಗು, ನೆಳ್ಗು (ನೆಗ್ಗು).

ನುರಿತ—ಪಳಗಿದ, ಹಣ್ಣಾದ, ಹದಕ್ಕೆ ಬಂದ, ಪಾಡಾದ.

ನೆವ—ನೆಪ, ನಿಮಿತ್ತ, ಕಾರಣ, ಕತೆ, ಪೂಸರು, ದೆಸೆ, ಸಲುವಾಗಿ, ಓಸ್ಕರ.

ಪೊರೆ—ಸಾಕು, ಸಲಹು, ಕಾಯು, ಕಾಪಾಡು, ಓವು, ನಡಪು, ಜೋಕೆಮಾಡು, ಜೋಪಾನ ಮಾಡು.

ಫಕ್ಕನೆ-ಭೋಂಕನೆ, ಒಮ್ಮೆಲೆ, ತೊಟ್ಟಗೆ, ತಟ್ಟನೆ, ಚಟ್ಟನೆ, ಗಮ್ಮನೆ, ಗಕ್ಕನೆ, ಬುದಿಂಗನೆ, ಫುಸಿಕೆನೆ.

ಬಗೆ—ತೆರ, ಅಂದ, ಪಾಂಗು, ಮಾಳ್ಕೆ, ಹೊಲಬು.

ಬಯಸು—ಬೇಡು, ಕೇಳು, ಕೋರು, ಹಾರೈಸು, ಪಾರು.

ಬರು—ಸಾರು, ಎಯ್ದು, ಐತರು, ಎಳ್ತರು.

ಬಾಗು—ಬೀಳು, ಮಣಿ, ಎರಗು, ಪೊಡಮಡು, ವಂದಿಸು, ಕೈಮುಗಿ.

ಬೆಯ್—ಹಳಿ, ಜರಿ, ಮೂದಲಿಸು, ತರಿ, ತುಶುರು, ತೆಗಳು.

ಭಾವುಕ—ರಸಿಕ, ಚದುರ, ಬಗೆಗಾರ, ಜಾಣ, ಅರಿಗ.

ಮಗ್ಗುಲು—ಬದಿ, ಹೊರೆ, ನೆರೆ, ಒತ್ತು ಬಳಿ, ಹತ್ತಿರ, ಕೆಲ.

ಮಳೆ—ಸರಿ, ಸುರುವು, ಸೆಳಕು, ಸೋನೆ, ಹನಿ, ಸಿಡಿಕಲು, ಸಿಟಿಸಿಟಿ, (ಜಿಟಿಜಿಟಿ), ಜಡಿ, ಒದ್ದೆ, ತಂಪಲು.

ಮಿರುಗು—ಮಿನುಗು, ಮಿಸಗು, ಮಿಂಚು.

ಮುಳಿಸು—ಸಿಟ್ಟು, ಸಿಡುಕು, ರೊಚ್ಚು ಕಿಚ್ಚು.

ಮೂಡು—ಕಾಣು, ಒಗೆ, ಉಣ್ಮು, ಪೊಣ್ಮು, ತಲೆಯೆತ್ತು, ತಲೆದೋರು, ಹುಟ್ಟು.

ಮೋಡಿ—ಬಗೆ. ಹದ, ಕೀಲ, ಪಿಡಿತ, ರೀತಿ.

ಸರತಿ—ಬಾರಿ (ವಾರಿ), ಪಾಳಿ, ಸೂಳು, ಪರಿವಿಡಿ.

ಸರಿ—ದೊರೆ, ಸಾಟಿ, ಪಾಸಟಿ, ಪಾಟಿ, ಗೆಡೆ, ಎಣೆ, ಜೋಡು. ತೋಡು, ಈಡು, ಒರೆ, ಹೋಲುವೆ, ಹೋಲಿಕೆ.

ಸಾರು—ಬರು, ಎಯ್ತರು. ಎಳ್ತರು.

ಸೊಟ್ಟ—ಅಂಕು, ಡೊಂಕು, ಒಂಕು, ಕೊಂಕು, ಕುಡು, ಅಡ್ಡ, ತಿಡ್ಡ.

ಸೋಜಿಗ—ಬೆರಗು, ಬೆಕ್ಕಸ, ಅಕ್ಕಜ, ಅಚ್ಚರಿ, ಚೋದ್ಯ.

ಸೋಲು—ಜೋಲು, ಹಿಂಜರಿ, ಹಿಂದೆಗೆ, ಮೈದೆಗೆ, ಓಡು, ಚೆದರು, ಬೆನ್ನು ತೋರು.

ಹಿಗ್ಗು—ಉಬ್ಬು, ಗುಡಿಗಟ್ಟು, ನವಿರೇರು, ಜುಮ್ಮೆನ್ನು.

ಹೀಚು— ಮಿಡಿ, ಕಸಕು, ಒಗರು, ಕಾಯಿ, ಕಗ್ಗ.
ಹುಡುಕು— ಬೆದಕು, ಅರಸು, ಆರಿಸು.
ಹೊಗು— ಹೋಗು, ಸೇರು, ನುಸುಳು ನುಗ್ಗು.
ಹೊಡೆ— ಬಡಿ, ಜಡಿ, ಕಡಿ, ಇಕ್ಕು.
ಹೊಸ— ಮೀಸಲು, ಬಳಸದ.
ಹೊಳಪು–ಹೊಗರು, ಪೊಡರ್ಪು, ತಳಕು, (ಥಳಕು), ಬೆಳಕು, ಬೆಡಗು, ಮಿಂಚು, ಮಿರಗು, ಮೆರಗು.

ಅನುಬಂಧ (೨)

ದೇಶಿ—ನುಡಿಗಳು.

೧) ಜೋಡುನುಡಿ – (ಸಾಮ್ಯ)

ಅಚ್ಚು–ಮೆಚ್ಚು; ತಿಂಡಿ–ತೀರ್ಥ
ಅಷ್ಟ–ತಿಷ್ಟ; ದನ–ಕರ
ಅರವು–ಮರವು; ನಡೆ–ನುಡಿ
ಅಲ್ಪ–ಸ್ವಲ್ಪ; ನಯ–ಭಯ
ಆಟ–ನೋಟ; ನೀರು–ನಿಡಿ
ಉಡಿಗೆ–ತೊಡಿಗೆ; ನುಚ್ಚು–ನುರಿ
ಎಣ್ಣೆ–ಬೆಣ್ಣೆ; ನೆರೆ–ಹೊರೆ
ಕಪ್ಪ–ಕಾಣಿಕೆ; ಬಂಧು–ಬಳಗ
ಕಾಳು–ಕಡಿ; ಬಡವರು–ಬಗ್ಗರು
ಕೆಲಸ–ಬೊಗಸೆ; ಮಳೆ–ಬೆಳೆ
ಕೈ–ಬಾಯಿ; ಮುಚ್ಚು–ಮರೆ
ಗುಡಿ–ಗುಂಡಾರ; ಯಂತ್ರ–ಮಂತ್ರ
ಗೊತ್ತು–ಗುರಿ; ಸಂದಿ–ಗೊಂದಿ
ಟೊಳ್ಳು–ಗಟ್ಟಿ; ಹಬ್ಬ–ಹುಣ್ಣಿವೆ
ತಪ್ಪು–ತಡೆ; ಹಳ್ಳ–ಕೊಳ್ಳ
ತಾರಗ–ಬೀರಗ; ಹಾಸು–ಹೊಕ್ಕು
ತಾಳ–ಮೇಳ; ಹೋಳಿಗೆ–ತುಪ್ಪ
ಆಗು–ಹೋಗು; ತಿಪ್ಪೆ–ಉಪ್ಪರಿಗೆ
ಆಳು–ಅರಸು; ತೇಲು–ಮುಳುಗು
ಇಲಿ–ಹುಲಿ; ನಗೆ–ಹೊಗೆ
ಎಗ್ಗ–ಅರಿಗ; ನಚ್ಚು–ಮೆಚ್ಚು
ಏರು–ಇಳಿ; ನಾಡು–ಕಾಡು
ಏಳು–ಬೀಳು; ಪೆದ್ದ–ಪಂಡಿತ
ಒಳ–ಹೊರ; ಬಿತ್ತು–ಕಿತ್ತು
ಕನಸು–ನನಸು; ಬೆಳಗು–ಬೈಗು
ಕಾಗೆ–ಕೋಗಿಲ; ಬೇವು–ಬೆಲ್ಲ
ಕಾಯು–ಕೊಲ್ಲು; ಮೆಚ್ಚು–ಕಚ್ಚು
ಕೊಡು–ಕೊಳ್ಳು; ಸಾವು–ಉಳಿವು
ಕೊನರು–ಕಮರು; ಹಿಗ್ಗು–ಕುಗ್ಗು, ತಗ್ಗು
ಗಳಿಸು–ಬಳಿಸು; ಹಿರಿ–ಕಿರಿ
ಜಾಣ–ಕೋಣ; ಹೊಗಳು–ತೆಗಳು
ತಗ್ಗು–ದಿನ್ನೆ; –ಬೊಗಳು

೨) ಜೋಡುನುಡಿ—(ವಿರೋಧ)

ಅಡಿ–ಮುಡಿ; ತಣಿ–ದಣಿ
ಅಳಿ–ಉಳಿ; ತಪ್ಪು–ಒಪ್ಪು

೩) ಕಿರುನುಡಿ– ಅ) ಅನುಕರಣ

ಕತಕತ ಕುದಿ,
ಕರಕರ ಕಡಿ,
ಕಿಕ್ಕಿರಿದು ತುಂಬು,
ಕಿಡಿಕಿಡಿ ಆಗು.

ಗಟಗಟ ಕುಡಿ
ಗಪಗಪ ತಿನ್ನು
ಗಳಗಳ ಅಳು
ಗುಣುಗುಣು ಮಾತಾಡು.
ಚಕ್ಕನೆ ಮಿಂಚು
ಚರಚರ ಹೆಚ್ಚು-ಹರಿ.
ಜುಳುಜುಳು ಹರಿ.
ಝಪಝಪ ನಡೆ
ತಳತಳ ತೊಳಗು, ಹೊಳೆ.
ಥಕಥಕ ಕುಣಿ
ದುರು ದುರು ಓಡು
ಧಗಧಗನೆ ಉರಿ
ಪಳ-ಪಳ ಉದಿರು-ಬೀಳು
ಫಡಾಫಡಾ ಹೊಡೆ.
ಬಟ್ಟ ಬಯಲು.
ಬರಸಿಡಿಲು
ಬೆಳ್ಳಗೆ ಬೆಳಗಾಗು.
ಭೋರ್ಗರೆ
ಮಿಕಿಮಿಕಿ ನೋಡು.
ಮಿರಿಮಿರಿ ಮಿಂಚು.

(ಅ) ಉಪಮಾನಗಳು.

ಎಳೆ-ಕರು, ಮದರಂಗಿ
ಕಹಿ-ವಿಷ.
ಕಾಗೆ-ಬೆಂಕೆ;
ಜಡ-ಕಲ್ಲು.
ಬಲೆತ-ಬದನೇಕಾಯಿ.
ಮುದಿ-ಹದ್ದು-ಗೂಗೆ-ಕೋಣ.
ಹಗುರು-ಹುಲ್ಲು.
ಹರೆಯ-ಹೋರಿ.
ಅರಳು ಹುರಿದಂತೆ ಮಾತು.
ಮುತ್ತಿನಂತಹ ಮಾತು.
ಮಾತಿನ ಮಾಲೆ

(ಇ) ತತ್ವಗಳು.

ಅಂದಣವನೇರಿದ ಸೊಣಗ-ಪಂಜರದೊಳ
ಗಣ ಕಾಗೆ, ಶಿಖರದ ಮೇಲಣ ಕಾಗೆ.
ಅಳಲಿ ಭಕ್ತಿ—ಅಳಿಲು ಸೇವೆ, ತುಳಸಿ
ಪತ್ರ, ಹೂವಿನ ಏಸಳು.
ಉಂಡ ಉಪವಾಸಿ—ಬಳಸಿ ಬಹ್ಮಚಾರಿ.
ಉರಿಯ ನೆಳಲು—ಹಾವಿನ ಹೆಡೆಯ
ನೆಳಲು, ಹುಲಿಯ ಒಲವು, ಮಂಜಿನ
ಮಳೆ, ಬಿಸಿಲ ಕುದುರೆ.
ಒಡಲೆರಡು ಜೀವೊಂದು—ಅವಳಿಜವಳಿ
ಒಲಿದುದು ಓಸರಿಸದು-ನಂಬಿದುದು
ಸಂದೇಹಿಸದು, ತುಂಬಿದುದು ತುಳು
ಕದು, ನೆರೆಯರಿದುದು ಮರೆಯದು,
ಸಚ್ಚು ಬಿಚ್ಚದು.
ಕಟ್ಟಿದಬುತ್ತಿ--ಹಿಂತ ನೀರು, ಕಲಿತಬುದ್ಧಿ.
ಕತ್ತುರಿ ಬಿಟ್ಟು ಕೆಸರು ಕೊಳ್ಳು-ಅನ್ಯ
ಜರಿದು ಕೋಣವನೇರು, ಹಾಲು
ಬಿಟ್ಟು ಹೆಂಡಬೇಡು.
ಕೊಟ್ಟುದನೆ ಕೊಂಡಿರು-ಕೊಟ್ಟುದನೆ
ಪ್ರಸಾದವೆಂದಿರು, ಹಾಕಿದಷ್ಟು
ತಿಂದಿರು, ಹೇಳಿದ್ದಕ್ಕೆ ಅಹುದೆನ್ನು,
ಎಂದುದನ್ನೆ ಎಂದು ಬಾಳು, ಇತ್ತುಂ
ತೆತ್ತುಂ ಬಾಳು.
ಕೊರಡು ಕೊನರು-ಒನಕೆ ಕೊನರು,
ಅತ್ತಿಯ ಹೂ, ಬರಡು ಹಯನಾಗು,
ಬಂಜೆಯು ಬಸಿರು
ತೊರೆಗೆ ನೀರೆರೆ-ಗುಡ್ಡಕ್ಕೆ ಕಲ್ಲು ಹೊರು,
ಸೂರ್ಯನಿಗೆ ಸೊಡರಿಡು, ಕೆರೆಯ
ಮುಂದಣ ಅರವಟ್ಟಿಗೆ.
ನಾಯಿ ಬಾಲ,—ಗಾಳಿ ಮೊಟ್ಟೆ, ನೆಲ್ಲಿಯ
ಮೂಟೆ, ನೀರ ಮೇಲಣ ಬರಹ,
ನೀರ ಮೇಲಣ ಗುಳ್ಳೆ.

ನೆಲವೆದ್ದು ಬಡಿ,-ಬೇಲಿಯೆದ್ದು ಮೇಯ್ದು, ಕಡಲು ಕರೆ ಮೀರು. ಹಗ್ಗವೆ ಹಾವಾಗು, ಹೊನ್ನು ಮಣ್ಣಾಗು.

ಬಳ್ಳಿಗುರುಡರು ಹಳ್ಳಕ್ಕೆ ಬಿದ್ದಂತೆ.

ಬಿಸಿಲು ಬೆಳದಿಂಗಳಾಗು-ಬೆಳದಿಂಗಳು ಬಿಸಿಲಾಗು.

ಮನೆಯೇನು ಮಠವೇನು ?—ಮನೆಯೇನು ವನವೇನು? ಹಾಲೇಂ ಕವನ್ನ ಮಣಿಸೇಂ ? ಹಟ್ಟಿಯೇನು ಪಟ್ಟಣವೇನು ?

ಮಾತಿನ ಮುಂಡಿಗೆ—ತಿರುಕನ ಕನಸು, ಮಾತಿನ ಮಾಲೆ, ಗಾಳಿಗೋಪುರ, ಚಿನ್ನದ ಚೂರಿ ಬಕಧ್ಯಾನ, ಕತ್ತಿಗೆ ಮುತ್ತಿನ ಜೇನು, ನಂಜಿನ ಸವಿ.

ಮೂಕನಿಗೆ ರಾಗ—ಕುರುಡನಿಗೆ ಕನ್ನಡಿ, ಕತ್ತೆಗೆ ಹೂರಣ, ಕತ್ತೆಗೆ ಕಸ್ತೂರಿ.

ಹಂದಿಗೆ ಚಂದನ—ನಾಯಿಗೆ ಕಜ್ಜಾಯ ಬೂದಿಯಲ್ಲಿ ಯಾಗ, ನೀರಿನಲ್ಲಿ ಹೋಮ, ಮಳಲಲ್ಲಿ ಹಾಲು ಹೊಯ್ದು, ಮಂಗನ ಕೈ ಮಾಣಿಕ ಬೋರ್ಗಲ್ಲ ಮೇಲೆ ಮಳೆ, ಕೋಣನ ಮುಂದೆ ಕೊಳಲು.

ಹಾಲುನೋಡಿ ಹೊಡೆತವ ಮರೆತ ಬೆಕ್ಕು—ತುಪ್ಪದ ಸವಿಗೆ ಅಲಗವ ನೆಕ್ಕುವ ಸೊಣಗ.

ಹಾವಿನ ಹೆಡೆಯಿಂದ ಕೆನ್ನೆತುರಿಸು—ಸುಣ್ಣದ ಕಲ್ಲು ಮಡಲಲ್ಲಿ ಕಟ್ಟು.

ಅನುಬಂಧ (೩)

ಪಡೆನುಡಿಗಳು

ಅ) ಕೈ–ಮೈಗಳಿಂದ ಬಂದುವು.

ಕೈಯೆತ್ತಿಕೊಡು—(ಮನಸ್ಸಿನಿಂದ ಕೊಡು)-ಕೈಯೆತ್ತಿ ಕೊಡಲಿಲ್ಲ- -ಸರ್ವಜ್ಞ.

ಕೈಯಾಸೆ—(ಲಂಚದ ಆಸೆ)—ಕೈಯಾಸೆಯಂ ಮಾಡದ ಮಂತ್ರೀಶ್ವರರ್. –ಸೋಮೇಶ್ವರ.

ಕೈಮಿಗೆ—ಕೈಗಳೆ—(ಕೈಮೀರು)—ಕಾಯ್ದು ಕೈಮಿಗೆ-**ಪಂಪ.** ಕೈಗಳೆದ ಮನವಾಳ್ತೆ-**ಸರ್ವಜ್ಞ.** ನಿಮಗೆ ನಾವು ಕೈಮೀರಿ ನಡೆಯೆವು. —ಕು. ವ್ಯಾಸ.

ಕೈಗನ್ನಡಿ—(ಸರಿಯಾಗಿ ತೋರಿಸುವಂತಹ ಮಾತು):—ಮೂರು ಲೋಕದ ಕೈಗನ್ನಡಿ-ಜನ್ನ.

ಕೈವಾರ—(ಪಕ್ಷಪಾತ-ಸಹಾಯ):—ಆರವನು? ಹಿರಿದಾಗಿ ನೀ ಕೈವಾರಿಸುವೆ ? —ಕು. ವ್ಯಾಸ

ಕೈತೋರಿಸು-(ಶಾಸನ ಮಾಡು):—ಕೈತೋರಿಸರು ನಿನ್ನಯ ರಾಯರೈವರು. —ಕು. ವ್ಯಾಸ.

ಕೈವಿಡಿ! -೧ (ಮದುವೆಯಾಗು)ಕೈವಿಡಿದ ರಾಣಿಯರ ಸೊಬಗು. ೨ (ನೆರವಾಗು):—ಕೃಷ್ಣ ಕೈಪಿಡಿವನು... ಭಕ್ತಿಯಿಂ ಭಜಿಸಿದರೆ ೩ (ತಡೆ-ನಿರೋಧಿಸು) ಅವನ ಕೈ ಪಿಡಿಯುವವರಾರು ?

ಕೈಕಾಯು-೧ (ಕಾಪಾಡು) ಕರುಣಾಜಲನಿಧಿಯೆ ಕೈಗಾಯಬೇಕೆಂದು ಒರಲಿದಳು ತರಳೆ. —ಕು. ವ್ಯಾಸ.

೨ (ತಡೆದು, ಬಿಗಿಹಿಡಿದು)— ಆಂ ಇನ್ನೆವರಂ ಕೈಗಾಯ್ದು ಯುದ್ಧಮಂ ರಚಿಸಿದೆ. —ಕೆ. ನೃ.ವಿ.

ಕೈಗೆಬರು: (ಪೂರ್ಣವಾಗು, – ಪಕ್ವವಾಗು) ಕೋಗಿಲೆ ಕೈಗೆವಂದ ಮಾಮರ ಸಾರ್ವರಂತೆ. —ಆಂಡಯ್ಯ

ಕಾಲ್ಪಿಡಿ : (ನಮುಸ್ಕರಿಸು) : ಲೋಕ ವಿಖ್ಯಾತರಾಗಿ ಕೈದುವಿಡಿವಲ್ಲಿಯು ಕಾಲ್ಪಿಡಿಯಲ್ಕೆ ತಕ್ಕುದೇ ?— ಪಂಪ

ಕಾಲೇಳದಿರು : (ಹೋಗಲು ಇಚ್ಚೆ–ಆಗದಿರು) : ನಿನ್ನ ಬಿಟ್ಟು ಕಾಲೆದ್ದು ಪೋಪವೇ ? —ಕನಕ

ಮೈಗಲಿ : (ಶೂರ) :

ಮೈಗೊಳ್ಳು:(ಅವತರಿಸು) : ಧರಣಿಯಲಿ ಮೈಗೊಂಡು ದೈತ್ಯರನು ಒರಸಿದನು. —ಕು. ವ್ಯಾಸ

ಮೈಮರೆ : (ತಲ್ಲೀನವಾಗು) : ಭಾಗ್ಯ ಯೌವನಗಳ ಮುಬ್ಬಿನಲಿ ಮೈಮರೆತರೆ ಲಭ್ಯವಾಗದು ಹರಿಪದಾಬ್ಜ. —ದಾಸರು

ತಲೆಗೆಏರು : ೧ (ಸಿಟ್ಟಿನಲ್ಲಿ) ಇದುವೆ ಪಿತ್ತದ ವಿಕಳತೆಯೋ ಭಂಗಿ ತಲೆಗೇರಿದುದೋ ?

೨ (ಹಿಗ್ಗಿನಲ್ಲಿ) : ಸಂಗೀತದಾ ಲಹರಿ ತಲೆಗೇರಿ ನಲಿದು.

ತಲೆದೂಗು: ೧ (ಹಿಗ್ಗಿನಿಂದ) : ತಾನದ––ನುಂಡು ತಲೆದೂಗಿದನು, ತೇಗಿದನು. —ಕು. ವ್ಯಾಸ

೨ (ಒಪ್ಪಿ) : ಚಿತ್ತಕೆ ಸೊಗಸಿ ತಲೆ ದೂಗಿದನು. —ಕು. ವಾಸ

೩ (ದುಃಖದಿಂದ) : ಕೇಳಿ ತಲೆ ದೂಗಿ ದನು–ಹುದಿದ ಭಾವದೆ ಲಾಲಿಸಿದ ನಸುರಾರಿ —ಕು. ವ್ಯಾಸ

ಬಾಯಿತೆರೆ : ೧ **ನಾಮ** (ತುಟಿ) ಪವಳದ ಬಾಯ್ದೆರೆಯುಂ–ಪಂಪ ೨ **ಧಾತು** (ಸೋಜಿಗಗೊಳ್ಳು): ಮೇನಕೆ ಸರಸ್ವತಿ ಬಾಯ್ದೆರೆವಂತೆ ಪಾಡಿದಳ್.

—ಪಂಪ

೩ (ಬೇಡು) : ಕಂಡ ಕಂಡವರಿಗೆ ಬಾಯ್ದೆರೆಯದಿರು.

ಬಾಯಿಬಿಡು: ೧ (ಗಳಹು) : ಮ ತಿಗೆಟ್ಟು ಬಾಯಬಿದದಿರು —ಪುರಂದರ

೨ (ತಿರಿ, ಯ್ಯಾಚಿಸು) : ಭ್ರಷ್ಟದೈವಕೆ ಬಾಯಿಬಿಟ್ಟಲ್ಲಿ ಫಲವಿಲ್ಲ.

೩ (ಕಾಮಿಸು): ಮುಂಡೆಯರ ಕಂಡು ಬಾಯ್ಬಿಡುವವ —ಸರ್ವಜ್ಞ.

೪ (ಬಳಲು): ಕೆಸರಿನಲ್ಲಿ ಬಿದ್ದ ಪಶುವಿನಂತೆ ನಾನು ದೆಸೆದೆಸೆಗೆ ಬಾಯ್ಬಿಡುತಿರ್ಪೆನಯ್ಯ —ಬಸವಣ್ಣ.

೫ (ಬೆರಗಾಗು): ಒಟ್ಟಿರ್ದ ಪೊನ್ನ ಬೆಟ್ಟಂಗಳ ಇತ್ತುದರ್ಕೆ ಬಾಯ್ಬಿಟ್ಟರೆ ವಿಪ್ರಕೋಟಿ, —ಪಂಪ

ಕಣ್ಸೋಲು : (ಮೋಹಿಸು) : ಆಂದು ಆರ್ಜುನನು ಕಣ್ಸೋಲ್ತು ಕಂಡಳ್ —ಪಂಪ.

ಮೂಗು:(ಇಕ್ಕಟ್ಟಿನ ಮಹತ್ವದ ಸ್ಥಾನ): ಮೂಗು ಹಿಡಿದರೆ ಬಾಯಿ ತೆರೆವುದು.

ಕಿವಿಹಿಡಿ:(ತಿದ್ದು, ಒತ್ತಾಯಪಡಿಸು): ಆಶೆಯೆಂಬ ಶ್ರೀ ಶರಣರಲ್ಲದವರ ಕಿವಿಯ ಹಿಡಿದು ಕುಣಿಸಿದಳು.

—ವಚನ

ಹಲ್ಲುಮುರಿ: (ಫಜೀತಿ ಮಾಡು): ಪಾತಾಳಮಂ ಪೊಕ್ಕೊಡೆ ಶೇಷಾಹಿಯ ಪಲ್ಗಳಂ ಮುರಿದಪೆಂ

—ರನ್ನ

ಎದೆ : (ಅಂತಃಕರಣ) : ಎದೆಯುರಿತು ಕೂಡಿದಳು.

—ರತ್ನಾಕರ

ಅಳ್ಳೆದೆ: (ಪುಕ್ಕಮನಸ್ಸು): ಅರಿಗಂಡರ ಅಳ್ಳೆರ್ದೆಗಳಂ ತುಳಿವವೋಲ್.

—ಪಂಪ.

•

ಎಂಟೆರ್ದೆ:(ಅತುಲ ಧೈರ್ಯ): ರನ್ನ ಕೃತಿರತ್ನಮುಮಂ ಪೇಳ್ ಪರೀಕ್ಷಿಪಂಗೆ ಎಂಟೆರ್ದೆಯೆ ?

—ರನ್ನ

ಹೊಟ್ಟೆನೋವು: (ಅಸೂಯೆ):೧ ಕೌರವ ಕುಲವ ಕೆಟ್ಟದರೇನು ಜಠರದ ಶೂಲ ಸಿನಗೆಂದ

—ಕು. ವ್ಯಾಸ

೨ (ಮಾನಸಿಕ ವ್ಯಥೆ) : ಅತ್ತೆ ಸುಭದ್ರೆಗೆ ಒಡಲುನೋವ.

ನೆತ್ತರ ಕುದಿ: (ಅತ್ಯಂತ ಕೇಡು—ವುಂಟಾಗು): ನಿನ್ನ ಮೆಯ್ಯ ನೆತ್ತರ್ ಕುದಿಸುವೆ. —ಪಂಪ.

ಆ) ಬೇರೆ ಬಗೆಯಿಂದ ಬಂದವು

ಬೆಲ್ಲವಾಗಿರು-(ಪ್ರಿಯವಾಗಿರು): ಬೆಲ್ಲವಾಗಿರಬೇಕು ಸಕಲ ಸಜ್ಜನರೊಳಗೆ

—ದಾಸರು.

ಉಗುಳು ದಾಟು: (ಮಾತು ಮೀರು): ಕೆಲರು, ಮಾತೆಯುರಿಕ್ಕಿದ ಉಗುಳ ದಾಟದಿಹರು. —ಕನಕ.

ಔಷಧಕ್ಕೆ ಇಲ್ಲ: (ಬೇಕಿದ್ದರೂ ಇಲ್ಲದಾಗಿರು): ತಲೆಯಲ್ಲಿ ಕರಿದು ಕೂದಲುಗಳೌಷಧಿಗಿಲ್ಲ.

ಬಣ್ಣವೇರು:(ಹೆಚ್ಚಾಗು): ಸತಿಯರು ಈ ಕೃತಿಯನಾಲಿಸಿದರೆ ಪತಿಭಕ್ತಿ ಬಣ್ಣವೇರುವುದು. —ಹೊನ್ನಮ್ಮ.

ಬದನೆಕಾಯಿ ಆಗು:(ಹಾಳಾಗು): ಸಕಲ ಲಕ್ಷಣಕಾಗಿ ಬಿರುಸು ಮಾಡಿದರೆ, ಪುಸ್ತಕದ ಬದನೆಕಾಯಿಯಹುದು

—ರತ್ನಾಕರ

ಗಂಡುಗೆಡಿಸು: (ನಿರ್ವೀರ್ಯ ಮಾಡು): ಗಂಡುಗೆಡಿಸದೇ ವಿಧಿ ?

— ಕುಮಾರ ವ್ಯಾಸ

ಪಾತ್ರಮಾಡಿಸು: (ಕುಣಿಸು) : ಪಾತ್ರಮಾಡಿಸದೆ ಮಾಣಂ ಅನಂಗಂ

— ಜನ್ನ

ಎರಡು: (ಭೇದ): ಉಂಡ ಮನೆಗೆ ಎರಡು ಬಗೆಯಬಾರದು —ಗಾದೆ,

ಗುಡಿಕಟ್ಟು: (ಹಿಗ್ಗು): ಬಗೆಯೊಳೆ ಗುಡಿಗಟ್ಟಿ ಇಂತೆಂದಳ್ —ಪಂಪ

ಅನುಬಂಧ (೪)

ನಾಣ್ಣುಡಿಗಳು.

೧ ದುಡ್ಡೇ ದೊಡ್ಡಪ್ಪ, ರೊಕ್ಕವೇ ಚಿಕ್ಕಪ್ಪ.
೨ ಮರದ ಲಕ್ಷಣ ಮೊಳಿಕೆಯಲ್ಲಿ ತಿಳಿಯುವದು.
೩ ಕುಲಕ್ಕೆ ಕುಲ ವೈರಿ.
೪ ಸತ್ತ ಎಮ್ಮೆಗೆ ಹತ್ತು ಸೇರು ಹಾಲು.
೫ ಅಜ್ಜ ನೆಟ್ಟುದು ಆಲದ ಮರ.
೬ ಬಿತ್ತಿದ್ದನ್ನು ಬೆಳಿದು ಕೊ.
೭ ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ!
೮ ಹಾಯ್ದಾಡದೆ ಹಾದಿಯಲ್ಲ.
೯ ಭಾವಿ ತೋಡಲು ಹೊರಟರೆ ಬೇತಾಳ ಹೊರಟಿತು.
೧೦ ಎಲ್ಲಿ ದೇವತೆಗಳು ಹೆಜ್ಜೆಯಿಡಲು ಹೆದರುತ್ತಾರೋ ಅಲ್ಲಿ ಹುಚ್ಚರು ನುಗ್ಗುತ್ತಾರೆ
೧೧ ವನ ಹಣ್ಣಾಯಿತು, ಗಿಣಿಯ ಬಾಯಿಗೆ ಹುಣ್ಣಾಯಿತು.
೧೨ ಉರಿಯುವಗಾಯದ ಮೇಲೆ ಉಪ್ಪು ನೀರೆರೆದಂತೆ.
೧೩ ತುಂಬಿದ ಬಂಡಿಗೆ ಮೊರವು ಭಾರವೆ!
೧೪ ಬೇರನ್ನು ಬಲ್ಲವನಿಗೆ ಎಲೆಯನ್ನು ಹೇಳುವದೇಕೆ.
೧೫ ಹಸಿದ ಹುಲಿಯ ಮೀಸೆಯನ್ನು ಹಿಡಿದು ಅಲ್ಲಾಡಿಸುತ್ತಿರುವ.
೧೬ ಮೂಗವನ್ನು ಕೊಯಿದು ಕನ್ನಡಿಯನ್ನು ತೋರಿಸುವಂತೆ.
೧೭ ಆಕಾಶ ಹರಿದು ಬೀಳುವಾಗ ಅಂಗೈ ಒಡ್ಡಿದರೆ ನಿಂತೀತೇ?
೧೮ ಹಿಗ್ಗಿದವನು ಮುಗ್ಗ್ಯಾನು, ತಗ್ಗಿದವನು ಜಯಿಸ್ಯಾನು.
೧೯ ಬಂಗಾರದ ಸೂಜಿಯೆಂದು ಹಿಂಗದೆ ಕಣ್ಣು ಕುಕ್ಕಿಕೊಳ್ಳಬಹುದೇ?
೨೦ ಬಂಗು ಕುಡಿಯುವವನಿಗೆ ಹಂಗು ಯಾರದು?
೨೧ ಹಗ್ಗ ಸುಟ್ಟರೆ ಹುರಿ ಹೋದೀತೇ!
೨೨ ನೆಚ್ಚಿದ ಎಮ್ಮೆ ಕೋಣನೀಯಿತು.

೨೩ ನಕ್ಕರೂ ಠಕ್ಕರಿಗೆ ನಂಬಬಾರದು.

೨೪ ನಡೆಯೋದು ಕಾಲ್ನಡೆ, ಮಾತು ಪಲ್ಲಕ್ಕಿಯ ಮೇಲೆ.

೨೫ ನಂಬಿದವಗೆ ಇಂಬು, ನಂಬದವಗೆ ಅಂಬು.

೨೬ ಇತ್ತ ಬಾ! ಎಂದರೆ ಇದ್ದ ಮನೆಯ ಕಿತ್ತುಕೊಂಡ.

೨೭ ಇದ್ದ ಮಕ್ಕಳಿಗೆ ಕೂಳಿಲ್ಲ! ಮತ್ತೊಂದು ಕೊಡೋ ಶಿವರಾಯಾ!

೨೮ ಚಿಂತೆಯೆ ಮುಪ್ಪು, ಸಂತೋಷವೇ ಜವ್ವನ

೨೯ ಸುಖದ ಬಾಳು ಬಾಳು, ದುಃಖದ ಬಾಳು ಹಾಳು.

೩೦ ಅರಿಯೆನೆಂಬುದು ಅರಸುಗುಣ.

೩೧ ಆಳಾಗ ಬಲ್ಲವ ಅರಸಾಗ ಬಲ್ಲ.

೩೨ ಒಲಿದರೆ ನಾರಿ, ಮುನಿದರೆ ಮಾರಿ.

೩೩ ಇಬ್ಬರ ನ್ಯಾಯ ಒಬ್ಬನಿಗೆ ಆಯ

೩೪ ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

೩೫ ತುಂಬಿದ ಕೊಡ ತುಳುಕುವದಿಲ್ಲ

೩೬ ಸಾದು ಎತ್ತಿಗೆ ಜೋಡು ಮುಟ್ಟು.

೩೭ ವಿಷಯಾತುರತೆಗೆ ವಿವೇಕವಿಲ್ಲ.

೩೮ ಕಂಡದ್ದನ್ನಾಡಿದರೆ ಕೆಂಡದಂತಹ ಕೋಪ.

೩೯ ಕತ್ತೆಯೇನು ಬಲ್ಲದು ಕಸ್ತೂರಿಯ ಪರಿಮಳ!

೪೦ ಕತ್ತೆಯ ಸಂಟಸ್ತನಕ್ಕೆ ಲತ್ತೆಯೇ ಫಲ.

೪೧ ಗುಣ ತಿಳಿದು ಗೆಳೆತನ ಮಾಡು.

೪೨ ಗೋಡೆ ಕಟ್ಟಿ ತಟ್ಟಿ ಒಡೆ.

೪೩ ಹೊತ್ತಿರುವಾಗ ಗೊತ್ತು ಸೇರು.

೪೪ ಹೊತ್ತು ಬಂದತ್ತ ಕೊಡೆ ಹಿಡಿ.

೪೫ ಅಂತೂ ಇಂತು ಕುಂತೀಮಕ್ಕಳಿಗೆ ರಾಜ್ಯವಿಲ್ಲ.

೪೬ ಜಾಣನ ಗೋಣಿ ಬರಿದು.

೪೭ ತಾನೊಲಿದ ಮಂಕೆ ಮಾಣಿಕ.

೪೮ ಆಡದೇ ಮಾಡುವನು ರೂಢಿಯೊಳಗುತ್ತಮನು.

೪೯ ಬಲಹೋದ ಕಾಲಕ್ಕೆ ನೆಲವೆಷ್ಟು ಬಡಿಯುವದು.

೫೦ ಅಪಮಾನದೂಟದಿಂದುಪವಾಸವಿರಲೇಸು.

೫೧ ಅಡಿಯ ಮುಂಬಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ.

೫೨ ತನ್ನಂತೆ ಪರರ ಬಗೆದಡೆ ಕೈಲಾಸಬಿನ್ನಣವಕ್ಕು.

೫೩ ಹರನೀವ ಕಾಲಕ್ಕೆ ಸಿರಿಯು ಬೆನ್ನಲಿ ಬಕ್ಕು.

೫೪ ಉಡಿಯಲ್ಲಿ ಕೆಂಡ ಕಟ್ಟಿಕೊಂಡರೆ ಸುಡದೆ ಬಿಡುವದೆ!

೫೫ ಆದರಿಲ್ಲದ ಅಮ್ಮ ತಾನ್ನವೇಕೆ!

೫೬ ಕಬ್ಬುಡೊಂಕಾದರೆ ಸೀ ಡೊಂಕೆ?

೫೭ ಅಗುಳಿನ ಮೇಲೆ ಅನ್ನದ ಪರೀಕ್ಷೆ.

೫೮ ಹುಣಸೆ ಮುಪ್ಪಾದರೂ ಹುಳಿ ಮುಪ್ಪಾಗುವದೇ?

೫೯ ಕಳ್ಳನ ಹೆಜ್ಜೆ ಕಳ್ಳನೇ ಬಲ್ಲ.

೬೦ ಹಾಸಿಗಿದ್ದಷ್ಟು ಕಾಲು ಚಾಚು,

೬೧ ಮನ್ನೋಡಿ ಉಣ್ಣೋ ಮೋಳಾ, ಎಂದರೆ ಯಾವ ಹೊಲದ ಜೋಳಾ ಎಂದ

೬೨ ಪರಮೇಶನ ಹೆಸರು ಮಾಡಿ ಪಾಯಸ ಉಂಡರು.

೬೩ ಮನಸಿನಲ್ಲಿ ಮಂಡಿಗೆಯ ಮಾಡಿದರೆ, ದೋಸೆಯ ಲೆಕ್ಕ ಕೊಡುವವರಾರು?

೬೪ ಹಂಗಿನ ಹಾಲಿಂದ ಅಂಬಲಿಯು ತಿಳಿ ಲೇಸು.

೬೫ ಕಿಚ್ಚು ನುಂಗುವವ ನುಚ್ಚು ಬಿಟ್ಟಾನೆ?

೬೬ ಗಾಣಿಗನ ಮೇಲೆ ಸಿಟ್ಟು ಮಾಡಿ ಒಣರೊಟ್ಟಿ ತಿಂದರು.

೬೭ ಅಜ್ಜಿ ನೂತದ್ದೆಲ್ಲ ಮೊಮ್ಮಗನ ಉಡದಾರ.

೬೮ ಹಳ್ಳಿಯ ದೇವರ ತಲೆ ಹೊಡೆದು ಡಿಳ್ಳಿಯದೇವರ ಡೊಳ್ಳ ಬೆಳೆಸಿದರು

೬೯ ಸಾವಿರ ಕುದುರೆಯ ಸರದಾರ, ಮನೆ ಹೆಂಡತಿಯ ಪಿಂಜಾರ.

೭೦ ಬುಕ್ಕರಾಯ ಮೆಚ್ಚಿ ಬೆಕ್ಕಿನ ಮರಿ ಕೊಟ್ಟ.

೭೧ ಸಮಗಾರ ದೇವರಿಗೆ ಮೊಚ್ಚೆಯ ಪೆಟ್ಟು.

೭೨ ಅಳಿಯನ ಹಿಂದೆ ತೋಳ.

೭೩ ನಾಲಗೆಯು ಕುಲವನರಹುವುದು.

೭೪ ಜಾತಿಹೀನರಮನೆಯ ಜ್ಯೋತಿ ತಾ ಹೀನವೇ?

ಅನುಬಂಧ (೫)

ಜಾಣ್ಣುಡಿಗಳು.

೧ ತನ್ನ ತಾನರಿದರೆ ತನ್ನರಿವೆ ಗುರು.

೨ ಹೆಂಗಸರ ಮಾನಕ್ಕೆ ಅವರ ಮೈಯಲ್ಲಿಯ ಕಸುವೂ ಕೈಯಲ್ಲಿಯ ಕಠಾರಿಯೂ ರಕ್ಷಾ ಯಂತ್ರಗಳಾಗಲಿ.

೩ ಉತ್ಸಾಹದ ಬೀಜವನ್ನು ಪ್ರೋತ್ಸಾಹದ ನೀರುಣಿಸಿ-ಸ್ವಪ್ರಯಾಸದ ಆಹಾರದಿಂದ ಅಂಕುರಿಸುವಂತೆ ಮಾಡಬೇಕು.

೪ ತಾತ್ವಿಕ ಧರ್ಮದ ಅಭಾವವೇ ನಮ್ಮ ಅಧೋಗತಿಗೆ ಕಾರಣ.

೫ ಸದ್ಗುಣಗಳೇ ಸಾಯುಜ್ಯದ ಸೋಪಾನಗಳು.

೬ ನಿನ್ನ ಕೋಮಲ ಅಂತಃಕರಣದ ಸೂಕ್ಷ್ಮಕೋಶದಿಂದ ಹೊರಹೊರಟ ಕೊನೆಯ ಕೂಗು ನನ್ನ ಅಂತಃಕರಣವನ್ನು ಕರಗಿಸಿ ಕದಲಿಸಿ ಬಿಟ್ಟಿದೆ.

೭ ತಿಳುವಳಿಕೆಯು ತಪ್ಪನ್ನು ಕಂಡರೆ ತಿದ್ದಲೆತ್ನಿಸುತ್ತಿದೆ. ಬುದ್ಧಿಯ ಬೆಳಕಿಗೆ ಅಜ್ಞಾನದ ಅಂಧಕಾರವು ಸೇರುವದಿಲ್ಲ.

೮ ದುರ್ವತನದಿಂದ ದೊರಕಿಸಿದ ನಮ್ಮ ಅನುಭವವು ಸುತ್ತು—ಮುತ್ತಲಿರುವ ಸಾವಿರಾರು ಜನರ ಸೇವೆಯಲ್ಲಿ ಸಮರ್ಪಿತವಾಗಬೇಕು.

೯ ಸ್ಥಾನಕ್ಕೆ ತಕ್ಕ ಸಾಮರ್ಥ್ಯವು ಬೇಕು. ಇಲ್ಲವಾದರೆ ಮಂಗನ ಕೈಯಲ್ಲಿ ಮಾಣಿಕವಿತ್ತಂತೆ; ಅಥವಾ ಕಾಗೆಗೆ ಕಚೇರಿಯ ಅಧಿಕಾರ ಕೊಟ್ಟಂತೆ ಆಗುತ್ತದೆ.

೧೦ ತನ್ನ ರೂಪ ಲಾವಣ್ಯ ರಕ್ಷಣೆಗಾಗಿ ಕೂಸುಗಳನ್ನು ಕಾಪಾಡಲು

ಹೇಸುವ ಹೆಣ್ಣಿನ ಸೌಂದರ್ಯವನ್ನು ತೆಗೆದುಕೊಂಡು ಮಾಡುವದೇನು? ಪ್ರೀತಿಯ ಪೀಠವೇ ಸೌಂದರ್ಯದ ಸಿಂಹಾಸನವಾಗಬೇಕು. ಇಲ್ಲವಾದರೆ ಸೌಂದರ್ಯವೊಂದು ಬೇವು, ಸಾವು.

೧೧ ಹುಳಿತುದರ ಅಳಿಯುವಿಕೆಗೂ, ಒಳಿತುದರ ಬೆಳೆಯುವಿಕೆಗೂ **ಜೀವನ**ವೆಂಬ ಹೆಸರು.

೧೨ ನಮ್ಮಲ್ಲಿಯ ದಾನವ್ಯವನ್ನು ದಬ್ಬಿ, ಮಾನವ್ಯವನ್ನು ಎಬ್ಬಿಸುವದೇ ನಿಜವಾದ **ಧರ್ಮಜೀವನ**.

೧೩ ಪರಾವಲಂಬನ ಬುದ್ಧಿಯಿದ್ದವರಿಗೆ ಪ್ರಗತಿಯೆಲ್ಲಿಂದ?

೧೪ ಓದು ಕಲಿ, ಕಲಿಯಲಿಕ್ಕೆ ಓದು; ಓದು ಕಲಿತು ಕಲಿಸು.

೧೫ ಕೋಪಬಂದಾಗ ಮನುಷ್ಯನು ಬಾಯಿ ಬಿಚ್ಚುತ್ತಾನೆ, ಕಣ್ಣು ಮುಚ್ಚುತ್ತಾನೆ.

೧೬ ಸುಖಕ್ಕೆ ಸರಳತೆಯೇ ಸುಲಭ ಮಾರ್ಗ.

೧೭ ಈ ಜಗತ್ತಿನಲ್ಲಿ ಮಾತಿನ ಮಲ್ಲರಾದ ಮಿಥ್ಯಾಚಾರಿಗಳು ಮಹಾತ್ಮರೆನಿಸಿಕೊಳ್ಳುತ್ತಾರೆ.

೧೮ ತನು ಮನಗಳ ಆರೋಗ್ಯಭರದಿಂದ ಅಂಗಾಂಗಗಳಿಂದಲೂ ಹೊಳೆಯುವ ಅನಿರ್ವಾಚ್ಯ ಚೇತನ ಸ್ವರೂಪಕ್ಕೇ **ಸೌಂದರ್ಯ**ವೆನ್ನಬೇಕು.

೧೯ ಪ್ರಜಾಸುಖದಲ್ಲಿಯೇ ವ್ಯಕ್ತಿಯ ಹಿತವಿದೆ ಎಂಬುದನ್ನು ಮರೆಯಬೇಡಿರಿ.

೨೦ ಮೂಢಭಕ್ತಿಯ ಮೋಡವನ್ನು ಒಡೆದು ಆದರೊಳಗಣ ಶಕ್ತಿಯನ್ನು ಹೊರಪಡಿಸಿ ತಮಸ್ಸನ್ನು ನಾಶಪಡಿಸಲಿಕ್ಕೆ ಯೋಗ್ಯವಾದ ಗುಡುಗಿನಂತಹ ಗಂಭೀರವಾದ ವಾಗ್ಘೋರಣೆಯಲ್ಲಿ ಈತನಿಗೆ ಸರಿಯಾದವನ್ಯಾರೂ ಎಲ್ಲಿಯೂ ಇರಲಿಲ್ಲ

೨೧ ನಮ್ಮ ದುಸ್ಥಿತಿಯು ನಮ್ಮ ಬುದ್ಧಿಯ ದೌರ್ಬಲ್ಯ, ದುರುಪಯೋಗದಿಂದಲೇ ಬಂದಿದೆ.

೨೨ ಮೋಹನಿರೋಧಕ್ಕೆ ಬ್ರಹ್ಮಚರ್ಯವೇ ಸಾಧನ, ಹೊರತು ಮೋಹಿಸುವ ಪದಾರ್ಥದ ಪಾರತಂತ್ರ್ಯವಲ್ಲ.

೨೩ ತ್ಯಾಗದಲ್ಲಿಯೇ ಆಗಲಿ ಭೋಗದಲ್ಲಿಯೆ ಆಗಲಿ ತನಗಿಂತಲೂ ಸಂಘದ ಹಿತವನ್ನು ಪ್ರಧಾನವಾಗಿ ಇಟ್ಟುಕೊಳ್ಳತಕ್ಕದ್ದು.

೨೪ ವಿಧೇಯತೆ ಇಲ್ಲದವನು ವಿಭುವಾಗುವದು ಒಳಿತಲ್ಲ.

೨೫ ಉದ್ದೇಶವಿಲ್ಲದ ಜೀವನ ಚುಕ್ಕಾಣಿಯಿಲ್ಲದ ಹಡಗ.

೨೬ ಬುದ್ಧಿವಿಕಾಸವೇ ಮಾನವನ ಆದರ್ಶ; ಅದಕ್ಕಾಗಿ ನಿಗ್ರಹವೇ ಸಾಧನ.

೨೭ ಜೀವಿತದ ಲಕ್ಷಣ ಅಭಿವೃದ್ಧಿ-ಬೆಳವಣಿಗೆ. ಸೃಷ್ಟಿಯಲ್ಲೆಲ್ಲಿಯೂ ಪ್ರಗತಿರಹಿತವಾದ ಜೀವನವೇ ಇಲ್ಲ.

೨೮ ತತ್ತ್ವವು ಮಾಯವಾಗುತ್ತಲೆ ಹೆಣ ಪೂಜೆಯೂ ಹಣ ಪೂಜೆಯೂ ಪ್ರಬಲವಾಗುತ್ತವೆ.

೨೯ ಸಂಸ್ಕೃತಿಯ ಮುಖ್ಯ ಲಕ್ಷಣ ಪ್ರಗತಿ, ಹಿರಿಯರ ಪ್ರತಿಭೆಯನ್ನು ಕಿರಿಯರ ನಡೆನುಡಿಗಳಲ್ಲಿ ಸೇರುವಂತೆ ಮಾಡುವದು ಸಂಸ್ಕೃತಿಯ ಧರ್ಮ.

೩೦ ಜನತೆಯ ಘನತೆಗೆ ಸಂಸ್ಕೃತಿಯ ವ್ಯಾಪಕತ್ವವೇ ಸಾಕ್ಷಿ.

೩೧ ಕಟ್ಟಿದ ಬುತ್ತಿಯು ಬಹುಕಾಲ ಬಾಳದು.

೩೨ ಕೆಲವರನ್ನು ಚಿರಕಾಲ ಮೋಸಗೊಳಿಸಬಹುದು; ಎಲ್ಲರನ್ನು ಕೆಲ ಕಾಲ ಮೋಸಗೊಳಿಸಬಹುದು; ಆದರೆ ಎಲ್ಲರನ್ನೂ ನಿರಂತರವಾಗಿಯೂ ಮೋಸಗೊಳಿಸುವದು ಸಾಧ್ಯವಿಲ್ಲ. —ಲಿಂಕನ್

೩೩ ಪುರುಷನ ಸಹಕಾರದಿಂದ ಪ್ರಕೃತಿಯನ್ನಾಳುವದೇ ಮಾನವನ ಗುರಿ-ಅದೆ ಪೌರುಷ.

೩೪ ಸಮಾಜವನ್ನು ವಂಚಿಸುವದರಿಂದ ವ್ಯಕ್ತಿಯೂ, ವ್ಯಕ್ತಿಯನ್ನು ದುರ್ಲಕ್ಷಿಸುವದರಿಂದ ಸಮಾಜವೂ ಹಾಳಾಗುತ್ತದೆ.

೩೫ ಸಾಹಿತ್ಯವು ಕಣ್ಣು ಕೊಟ್ಟದ್ದೂ ಉಂಟು, ಕಟ್ಟಿದ್ದೂ ಉಂಟು.

೩೬ ಜನ-ಜಂಗುಳಿಯು ಒಮ್ಮೊಮ್ಮೆ ದನದ ಮಂದೆಯಿದ್ದಂತೆ.

೩೭ 'ಬೇಸಾಯದವ ಬೇಗ ತಾ ಸಾಯ'

೩೮ ಹುತ್ತ ಬಡಿದರೆ ಹಾವ ಸಾಯಬಲ್ಲುದೇನಯ್ಯ? ಅಘೋರ ತಪವ ಮಾಡಿದರೇನು ಆತ್ಮ ಶುದ್ಧವಿಲ್ಲದನಕ?

೩೯ ಹುಟ್ಟಿಸಿದ ದೇವ ತಾನೂಟ ಇಕ್ಕುವ ಎನುತ, ಕಷ್ಟ ಮಾಡದೆ ಬಾಯು ಬಿಟ್ಟರೇನಹುದು ?

೪೦ ಜ್ಞಾನೇಂದ್ರಿಯಗಳಿಂದ ಬಿಚ್ಚಿ ಬೆಳೆಯುವವರು ಜಾಣರು. ಕರ್ಮೇಂದ್ರಿಯಗಳಿಂದ ಮುಚ್ಚಿ ಕೊಳೆಯುವವರು ಕೋಣರು ಮುಚ್ಚುವ ಇಚ್ಛೆಯಿಲ್ಲದೆ, ಬಿಚ್ಚುವ ಧೈರ್ಯವಿಲ್ಲದೆ ಪೆಚ್ಚಾಗಿ ಉಳಿಯುವವರು ಮೋಣರು.

—ಆರ್. ವ್ಹಿ. ಜೆ.

೪೧ ಚೆಲುವ ಬಲ್ಲುದು ಮನವ ಗೆಲವುದನು. ಬಹಳವೇಳೆ ಎದೆಯು ತುಂಬುವುದು ಭಕ್ತಿಭಾವದಿಂದ.

—ಶ್ರೀನಿವಾಸ.

೪೨ ದಿಟವ ನುಡಿವುದು, ನುಡಿದಂತೆ ನಡೆಯುವುದು. ಇದುವೆ ಶೀಲ.

—ವಚನ.

೪೩ ಮತದ ಜಾಳಿಗೆಯಲ್ಲಿ ಬೀಳದೆ ಮತಿಯ ಏಣಿಗೆಯಲ್ಲಿ ಮೆರೆಯಿರಿ.

—ಮ. ಹರ್ಡೀಕರ.

೪೪ ಕಾಲೋಚಿತಕೆ ಐದಿದ ತೃಣವೇ ಪರ್ವತವಲ್ಲವೇ?

—ಸೋಮೇಶ್ವರ.

೪೫ ಸರಿಯೇ ಸೂರ್ಯಗೆ ಕೋಟಿ ಮಿಂಚು ಪುಳಗಳ್ ?

೪೬ ಬಲುಗರ್ವಂ ಕೊಲದಿರ್ಪುದೇ ?

೪೭ ಮಡಿಯೇ ನಿರ್ಮಲಚಿತ್ತಮೈ ?

೪೮ ಇರಿಯಲ್ಬಲ್ಲೊಡೆ ವೀರನಾಗು!

— ಸೋಮೇಶ್ವರ

೪೯ ಕುಲಂ ಕುಲಮಲ್ತು, ಛಲಂ ಕುಲಂ !

— ಪಂಪ.

೫೦ ಮಾಡಿ ಅಭ್ಯಾಸವನು ಮೂಡುವುದು ಜಗದಲ್ಲಿ.

—ರಾಮದಾಸ.

೫೧ ಕಮಲಿನಿಯು ಅರಿಯುವಳೆ ವಿಮಲ ಪರಿಮಳವನ್ನು ?

— ತುಕಾರಾಮ.

೫೨ ಚೋರಗೆ ಚಂದ್ರೋದಯ ಸೊಗಸುವದೇ ?

೫೩ ಅಳಿಯುವುದು ಕಾಯವು ಉಳಿವುದೊಂದೆ ಕೀರ್ತಿ.

೫೪ ಕೇಸರಿಗಂಜದ ಮೃಗ ಉಂಟೇ ?

೫೫ ಗಾಳಿಗೆ ಗಿರಿಯು ಅಲ್ಲಾಡಬಹುದೇ ?

೫೬ ಮಾನ ಹೀನನಿಗೆ ಅಭಿಮಾನವೇಕೆ ?

೫೭ ಕೆಚ್ಚೆದೆಯ ಬೀರನಿಗೆ ನೆಚ್ಚು ತೊತ್ತಾಗುವಳು.

೫೮ ಕಣ್ಣಿಲ್ಲದಿದ್ದರು ಕಲ್ಪನೆಯು ಕುರುಡಹುದೆ ?

೫೯ ರೋಗಿಗಳಿಗಾವಗಂ ಸಿಹಿಯೆ ಕಹಿಯಂತೆ.

೬೦ ಸುಲಭದಲೆ ದೊರೆತುದಕೆ ಬೆಲೆಯಿರದು ಎಂಬುವರು.

೬೧ ಬೆಂಕಿಗಲ್ಲದೆ ಲೋಹ ತಂಪಿಗದು ಮಣಿಯುವುದೆ ?

೬೨ ಇಂದ್ರಿಯಗಳನಿತುಮುಂ ಕಿವಿಯಾಗಲೆಳಸುವವು.

— ಪುಟ್ಟಪ್ಪ.

ಅನುಬಂಧ (೬)

ಸಹಾಯ-ವಾಙ್ಮಯ.

೧	ಈಗಿನ ಕವಿಕಾವ್ಯದೃಷ್ಟಿ	—	ಶ್ರೀ. ವಿ. ಸಿ.
೨	ಕನ್ನಡ ಕೈಪಿಡಿ ಸಂ ೧ (ತಿದ್ದಿದ ಪ್ರತಿ ೧೯೩೬)	—	ಮೈಸೂರು ವಿಶ್ವವಿದ್ಯಾನಿಲಯ
೩	ಕನ್ನಡ ಕಿಡಿಗಳು	—	,, ಸಿ. ಕೃಷ್ಣಶರ್ಮ
೪	ಕನ್ನಡದ ಸೇವೆ	—	,, ಶ್ರೀನಿವಾಸರು
೫	ಕನ್ನಡನುಡಿಯ ಗುಟ್ಟು	—	,, ಶಂ. ಬಾ. ಜೋಶಿ
೬	ಕರ್ನಾಟಕ ಗತವೈಭವ	—	,, ಆಲೂರ ವೆಂಕಟರಾಯರು
೭	ಕರ್ನಾಟಕ-ದರ್ಶನ	—	ವಿವಿಧ ಲೇಖಕರಿಂದ
೮	ಕವಿಕಾವ್ಯ ಮಹೋನ್ನತಿ	—	,, ಗೋಕಾಕ ವಿನಾಯಕರಾಯರು
೯	ಗದ್ಯ-ಮಾಲೆ	—	,, ಮಾಳವಾಡ
೧೦	,,	—	,, ಪೂಜಾರ
೧೧	ಗ್ನಾನ	—	,, ಕೋ. ಶಿ. ಕಾರಂತರು
೧೨	ಜನತೆಯ ಸಂಸ್ಕೃತಿ	—	,, ಶ್ರೀನಿವಾಸರು
೧೩	ಜೀವನ ಸೌಂದರ್ಯ ಮತ್ತು ಸಾಹಿತ್ಯ	—	,, ಡಿ. ವ್ಹಿ. ಗುಂಪ್ಪನವರು
೧೪	ತರಂಗ	—	ವಿವಿಧ ಲೇಖಕರಿಂದ
೧೫	ದೇವದೂತರು	—	,, ಕಾರಂತ
೧೬	ಧರ್ಮಸಂಭವ	—	,, ತಾರಾನಾಥರು
೧೭	ನಮ್ಮೂರಿನ ರಸಿಕರು	—	,, ಗೋರೂರ ರಾಮಸ್ವಾಮಿ ಅಯ್ಯಂಗಾರ
೧೮	ಪಂಚಾಮೃತ	—	,, ಕೃಷ್ಣಭಟ್ಟರು
೧೯	ಬಾಲಪ್ರಪಂಚ	—	,, ಕಾರಂತರು
೨೦	ಬೈಲಹಳ್ಳಿಯ ಸರ್ವೆ	—	,, ಗೋರೂರ ರಾಮಸ್ವಾಮಿ ಅಯ್ಯಂಗಾರ
೨೧	ಮಿಂಚಿನ ಮಹಿಳೆಯರು	—	,, ಪಿ. ಬಿ. ದೇಸಾಯಿ
೨೨	ರಾಮಾಚಾರಿಯ ನೆನಪು	—	,, ಪಿ. ಟಿ. ನರಸಿಂಹಾಚಾರು
೨೩	ವಿನೋದ ಚಿತ್ರಗಳು	—	ವಿವಿಧ ಲೇಖಕರಿಂದ

೨೪ ವಿಮರ್ಶೆ	—	ಶ್ರೀ. ಶ್ರೀನಿವಾಸರು
೨೫ ಸಾಹಿತ್ಯ	—	,, ,,
೨೬ ಸಾಹಿತ್ಯ-ವಿಮರ್ಶೆ	—	,, ಬೇಂದ್ರೆ
೨೭ ಸುಳಿವು ಹೊಳವು	—	ವಿವಿಧ ಲೇಖಕರಿಂದ
೨೮ ಹಗಲು ಗನಸುಗಳು	—	,, ಮೂರ್ತಿರಾವ್
೨೯ ಹರಟೆಗಳು	—	ವಿವಿಧ ಲೇಖಕರಿಂದ
೩೦ ಹಳ್ಳಿಯ ಚಿತ್ರಗಳು	—	,, ಗೋರೂರ ರಾಮಸ್ವಾಮಿ ಅಯ್ಯಂಗಾರ
೩೧ ಹುಚ್ಚು ಬೆಳದಿಂಗಳ ಹೂಬಾಣಗಳು	—	,, ಪ. ರಮಾನಂದರು
೩೨ ಹೊಸಹುಟ್ಟು	—	,, ಅ. ನ. ಕೃಷ್ಣರಾಯರು

ಮಾಸ ಪತ್ರಿಕೆಗಳು.

೧ ಜಯಕರ್ನಾಟಕ
೨ ಜಯಂತಿ
೩ ಜೀವನ
೪ ಪ್ರಬುದ್ಧ ಕರ್ನಾಟಕ
೫ ಪ್ರೇಮ—
೬ ಭಾವಾನುಭವ
೭ ಸಾಹಿತ್ಯ ಪರಿಷತ್ಪತ್ರಿಕೆ
೮ ಸ್ವಧರ್ಮ

ಇವುಗಳ ಹಿಂದಿನ ಹಾಗೂ ಇಂದಿನ ಸಂಚಿಕೆಗಳಲ್ಲಿಯ ನಿಬಂಧಗಳು

*

ಅನುಬಂಧ (೭)

ಪರಿಭಾಷೆ

೧ ಪ್ರಬಂಧ (*Composition*)

೧ ನಿಬಂಧ — Essay
೨ ಪರಿಚ್ಛೇದ — Paragraph
೩ ಅಂಶ — Point
೪ ಸಾರಸಂಗ್ರಹ — Precis
೫ ಸಾರವಿಸ್ತಾರ — Expansion
೬ ಸಂವಾದ — Dialogue
೭ ಗುಣಗ್ರಹಣ — Appreciation

೨ ವಾಕ್ಯಗಳು (*Sentences*)

೧ ಸಾಮಾನ್ಯ — (Simple)
೨ ಸಂಮಿಶ್ರ — (Complex)
೩ ಸಂಯುಕ್ತ — (Compound)
೪ ಅಂಗೀಕಾರಾರ್ಥಕ — (Affirmative)
೫ ನಿಷೇಧಾರ್ಥಕ — (Negative)
೬ ಪ್ರಶ್ನಾರ್ಥಕ — (Interrogative)
೭ ವಿಧ್ಯರ್ಥಕ — (Imperative)
೮ ಭಾವಬೋಧಕ — (Exclamatory)
೯ ನಿಶ್ಚಯಾರ್ಥಕ — (Assertive)
೧೦ ಪ್ರಧಾನವಾಕ್ಯ — (Principal sentence)
೧೧ ಅಧೀನವಾಕ್ಯ — (Subordinate sentence)
೧೨ ಉಪವಾಕ್ಯ — (Clause)
೧೩ ವಾಕ್ಯವಿಭಜನೆ — (Analysis)
೧೪ ವಾಕ್ಯಸಂಯೋಗ — (Synthesis)
೧೫ ವಾಕ್ಯಪಲ್ಲಟ — (Transformation)
೧೬ ಸ್ವರೂಪಾನುವಾದ — (Direct Report)

೧೭ ಪರೋಕ್ಷಾನುವಾದ — (Indirect Report)
೧೮ ಕೀಲವಾಕ್ಯ — (Key Sentence)
೧೯ ಸಮತೋಲ ವಾಕ್ಯ — (Balanced Sentence)

೩ ಶಬ್ದಗಳು (*Words*)

೧ ಶಬ್ದಸಮುಚ್ಚಯ — (Phrase)
೨ ಮೇಳನುಡಿ — (Synonym)
೩ ದೇಶಿನುಡಿ — (Racy words)
೪ ಪಡೆನುಡಿ — (Idiom)
೫ ನಾಣ್ಣುಡಿ — (Proverb)
೬ ಜಾಣ್ಣುಡಿ — (Gems-words of wisdom)

೪ ಗುಣಗಳು (*Quality*)

೧ ಶುದ್ಧತೆ — (Correctness)
೨ ಸುಲಭತೆ — (Simplicity)
೩ ಸೌಂದರ್ಯ — (Beauty—Charm)
೪ ಸಾಮರ್ಥ್ಯ — (Force—Vigour)
೫ ಕಿರಿಮೆ — (Brevity)
೬ ಐಕ್ಯ — (Unity)
೭ ಕ್ರಮ — (Order)
೮ ಕ್ರಮೋನ್ನತಿ — (Climax)

ಒಪ್ಪೋಲೆ.



ಪುಟ	ಸಾಲು	ತಪ್ಪು	ಒಪ್ಪು
೪	೨	ಶಬ	ಶಬ್ದ
	೨೧	ಬರೆಹ	ಬರಹ
೯	೧೯	ಆತಿಥ್ಯವನ್ನು	ಆತಿಥ್ಯವನ್ನು
೨೦	೧	ದರ್ಪಣವನು	ದರ್ಪಣವನ್ನು
೨೧	೩	ಶಬ	ಶಬ್ದ
೭೯	೨೭	ಒರೆಯುವ	ಬರೆಯುವ
೯೬	೧೪	ಅವುಗಳನ್ನೆಯ	ಅವುಗಳನ್ನೆಯೆ
೯೯	೨೦	ಉಸುರು	ಉಸುರು, ಎಂದು
೧೦೮	೨೦	ತರವಾಯು	ತರುವಾಯು
೧೩೮	೯	ವರಿವಾರ	ಪರಿವಾರ
೧೪೯	೧೬	ಒಲೆಗಳು	ಓಲೆಗಳು
೧೫೯	೧೪	ಮೋಹಬಾನ್	ಮೆಹೇರಬಾನ್
೧೬೧	೮	ದಾರಿಯುದ್ಧಕ್ಕೆ	ದಾರಿಯುದ್ದಕ್ಕೆ
೧೮೦	೧೨	ನಾವು	ನಾದ
೧೮೬	೨೪	ಕುಣಿಯುಣು	ಕುಣಿಯೋಣು
೧೮೭	೫	ನೆನದ	ನೆನೆದ
	೧೯	ಶಕ್ತಿಯೆನ್ನು	ಶಕ್ತಿಯನ್ನು
೧೮೮	೧	ಸವಿವರೆಗೆ	ಸವಿವರಿಗೆ
	೧೯	ಪವಪದಕ್ಕೂ	ಪದಪದಕ್ಕೂ
೧೯೦	೨	ಬಲ್ಲೆ ನೊ	ಬಲ್ಲ ನೌ
	೨೨	ಕುರಹುಗಳು	ಕುರುಹುಗಳು
೨೧೨	೧೨	ನುಣ್ಣೆಗೆ	ನುಣ್ಣಗೆ

ಸೂಚನೆ:—ಕೆಲವೆಡೆಯಲ್ಲಿ ಅ–ಆ ಕಾರಗಳು ಅದಲು ಬದಲಾಗಿವೆ, ಪೂರ್ಣ ವಿರಾಮ ಚಿಹ್ನವು ಹಾರಿದೆ. ಅವನ್ನು ಸರಿಪಡಿಸಿಕೊಳ್ಳಬೇಕಾಗಿ ಪ್ರಾರ್ಥನೆ.

ಅಭಿಪ್ರಾಯಗಳು.



i) ಮಹನೀಯರೇನೆನ್ನುವರು ?

(೧)

ಪ್ರಬಂಧ-ಪ್ರಕಾಶವು ತಲುಪಿತು. ಪುಸ್ತಕದಲ್ಲಿ ವಿಷಯನಿರೂಪಣದ ರೀತಿ ಚೆನ್ನಾಗಿದೆ. ಪ್ರಬಂಧರಚನೆಯ ಸ್ವರೂಪ, ಅದರ ಮರ್ಮಗಳು, ಶೈಲಿ ಮತ್ತು ಬರವಣಿಗೆಯ ವಿಚಕ್ಷಣೆ, ಅಲ್ಲಿ ವ್ಯಕ್ತಗುಣ ಹೇಗೆ ಸುಳಿಯುವುದೆಂಬ ವಿಚಾರ, ಬಗೆ ಬಗೆಯ ಪ್ರಬಂಧರೂಪಗಳ ಪರಿಚಯ, ನಾಡಗಾದೆಗಳ ಪಡಿನುಡಿಗಳ ಸಂಗ್ರಹ:––ಒಟ್ಟಿನಲ್ಲಿ ಒಂದು ಮೇಲ್ತರದ ಕ್ರಮವೂ, ವಿತರಣೆಯೂ, ಅಲ್ಲಿ ಕಾಣು ವುವು. ನಿಮ್ಮಂತಹ ನುರಿತ ಉಪಾಧ್ಯಾಯರಿಂದಲ್ಲದೆ, ಇಂಥ ಕೆಲಸ ಆಗದು. ನಿಮ್ಮ ಪ್ರಯತ್ನದಿಂದ ವಿದ್ಯಾರ್ಥಿಗಳ ಬರವಣಿಗೆ ಖಂಡಿತವಾಗಿ ಕುದುರುವುದು, ನಯವಾ ಗುವದು, ಗುಣಸಾಧಿಸುವುದು ಎಂದು ನಂಬಿದ್ದೇನೆ. ಎಲ್ಲ ವಿದ್ಯಾಶಾಲೆಗಳಲ್ಲಿಯೂ, ಪುಸ್ತಕ ಬಳಕೆಗೆ ಬಂದರೆ ಹೊಸ ಕನ್ನಡ ಗದ್ಯ ಸ್ವರೂಪ ಕೂಡ ಜನಕ್ಕೆ ತಿಳಿದು ಬಂದೀತೆಂದು ಹೇಳಬಲ್ಲೆ. ಏಕೆಂದರೆ ಲಕ್ಷ್ಯವಾಗಿ ತಾವು ಕೊಡುವ ಗದ್ಯ ಖಂಡಗಳು ನಿಜವಾದ ಮೇಲ್ತರದ ಗದ್ಯಸಂಚಯನವೊಂದನ್ನು ವಿದ್ಯಾರ್ಥಿವರ್ಗಕ್ಕೆ ದೊರಕಿಸಿ ಕೊಟ್ಟಂತಾಗಿದೆ...

ಪ್ರೊ. ವೀ. ಸೀತಾರಾಮಯ್ಯ M. A.
Intermediate College
Banglore.

(೨)

ನಿರೂಪಣೆಯ ಕ್ರಮವು ಶಾಸ್ತ್ರೀಯವೂ ಪ್ರೌಢವೂ ಆಗಿದ್ದರೂ ವಿದ್ಯಾರ್ಥಿ ಗಳಿಗೆ ಬೇಕಾಗುವ ಸುರಸ ರೀತಿಯು ಇಲ್ಲಿದೆಯೆಂದು ನನಗೆ ಅನಿಸುತ್ತದೆ. ಪರಿ ಪೂರ್ಣವೂ ಶಾಸ್ತ್ರೀಯವೂ ಆದ ಆಂಗ್ಲ ಭಾಷೆಯ ಪ್ರಬಂಧ ಗ್ರಂಥಗಳ ರೀತಿಯನ್ನು ಅನುಸರಿಸಿ ಗುಣಗ್ರಹಣ-ಸಾರವಿಸ್ತಾರ-ಸಾರಸಂಗ್ರಹ ಮುಂತಾದ ಅನೇಕ ವಿಷಯ ಗಳನ್ನು ಇಲ್ಲಿ ಅಳವಡಿಸಲಾಗಿದೆ... ಕನ್ನಡ ಅಭ್ಯಾಸಿಗಳೂ ಅನುಭವಿಕ ಶಿಕ್ಷಕರೂ

ಆದ ಶ್ರೀ. **ದೇಶಪಾಂಡೆಯವರ** ಈ ಪ್ರಯತ್ನವು ಸ್ತುತ್ಯವಾಗಿದೆ. ಪುಸ್ತಕವು ಹೆಸರಿಗೆ ತಕ್ಕಂತೆ **ಪ್ರಬಂಧ** (Composition) **ದ ಬಗೆಗೆ ಕನ್ನಡ ವಿದ್ಯಾರ್ಥಿಗಳಲ್ಲಿ ಪ್ರಕಾಶವನ್ನು ಬೀರಲು ಸಹಕಾರಿಯಾಗಿದೆ.** ಕನ್ನಡ ವಿಧ್ಯಾರ್ಥಿಗಳು ಶಿಕ್ಷಕರೂ ಇದರ ಪ್ರಯೋಜನವನ್ನು ಪಡೆಯುಬೇಕೆಂದು ಆಶಿಸುತ್ತೇನೆ.

ಪ್ರೊ. ಎಸ್. ಎಸ್. ಮಾಳವಾಡ.

M. A.

Professor of Kannad,

Karnatak College, Dharwar.

(೩)

ಶ್ರೀಮಾನ್ ದೇಶಪಾಂಡೆಯವರು... ಅನುಭವಿಕರಾದ ಶಿಕ್ಷಕರು. ಕನ್ನಡ ಭಾಷೆಯಲ್ಲಿ ಹೆಸರಾದ ಲೇಖಕರು. ಈ ಚಿಕ್ಕ ಗ್ರಂಥದಲ್ಲಿ ಅವರು ತಮ್ಮ ಇಂಗ್ಲೀಷ-ಕನ್ನಡ ಪ್ರಬಂಧಗಳ ವಾಚನ-ಚಿಂತನಗಳ ಸಾರವನ್ನು ಸಂಗ್ರಹವಾಗಿ ಬೀರಿರುವರು. **ಬರಹದ ರೀತಿ ಸರಳವಾಗಿದೆ; ವಿಷಯವಿವೇಚನೆ ಸುಗಮವಾಗಿದೆ; ಉದಾಹಣೆಗಳು ಉಚಿತವಾಗಿವೆ; ಅಭ್ಯಾಸ ಪಾಠಗಳು ಸಾಕಷ್ಟಿವೆ.** ಹೊಸ ಮಾದರಿಯ ಈ ಪ್ರಬಂಧ-ಗ್ರಂಥವು ವಿದ್ಯಾರ್ಥಿಗಳಿಗೂ-ಇತರ ಲೇಖಕರಿಗೂ ಅನೇಕ ಬಗೆಯಾಗಿ ಉಪಯೋಗವಾಗುವದೆಂದು ನನ್ನ ಭರವಸೆ.

ಪ್ರೊ. ರಾಮರಾವ ಕುಲಕರ್ಣಿ,

M. A. (Bom). M. Ed. (Leeds)

S. T. College, Belgaum.

(೪)

ಆಧುನಿಕ ಶಿಕ್ಷಣಪದ್ಧತಿಗಳ ಅಧ್ಯಯನ ಮತ್ತು ಎಷ್ಟೋ ವರ್ಷಗಳವರೆಗೆ ಕಲಿಸಿ ದೊರೆತ ಅನುಭವದ ಆಧಾರದ ಮೇಲೆಯೇ ಈ ಪುಸ್ತಕವು ನಿರ್ಮಿತವಾಗಿದೆಂಬುದು ಓದುಗರಿಗೆ ಒಡೆದು ಕಾಣುತ್ತದೆ. ಅಲ್ಲದೆ ಇದರಲ್ಲಿ **ಪ್ರಬಂಧದ ತಿರುಳನ್ನು ತಿಳಿಗನ್ನಡದಲ್ಲಿ ಮನೋಹರವಾಗಿ ಲಲಿತ ಶೈಲಿಯಲ್ಲಿ ಅರುಹಲಾಗಿದೆ.**

ಪ್ರೊ. ಬೀ. ಎಮ್. ಮೀಮಾಂಸಿ.

B. A. B. T.

Officiating Lecturer in Education,

S. T. College, Belgaum.

(೫)

ಈ ಗ್ರಂಥವು ಹೈಸ್ಕೂಲಿನ ಎಲ್ಲ ತರಗತಿಗಳಿಗೂ ಪಠ್ಯಪುಸ್ತಕವಾಗಲು ಅರ್ಹ **ವಾಗಿದೆ.** ಇದು ಬರಿಯ ಅಭಿಪ್ರಾಯವಲ್ಲ. **ಅನುಭವದ ಮಾತು.** ಕಾರಣ ಇದೇ ಪುಸ್ತಕವನ್ನು ನಾನು ಹೈಸ್ಕೂಲು ಒಂದು ಎರಡನೆಯ ತರಗತಿಗಳಿಗೆ ಉಪಯೋಗಿಸಿದ್ದೇನೆ. ವಿದ್ಯಾರ್ಥಿಗಳು ಇದರಿಂದ ವಿಶೇಷವಾಗಿ ಉಪಯೋಗ ಹೊಂದಿರುವರೆಂದು ಧೈರ್ಯಮಾಡಿ ಹೇಳಬಲ್ಲೆ. **ವಿಷಯವಿಭಜನೆ, ವಿಷಯನಿರೂಪಣಕ್ರಮ, ಉದಾಹರಣೆಗಳ ಆಯ್ಕೆ ಇವು ಸರ್ವ ಸಮರ್ಪಕವಾಗಿವೆ.**

H. M. Shankernarayan Rao, M. A.
Kannad Assistant,
D Banumaih's High School,
MYSORE.

(೬)

ಸರಸವಾದ ಭಾಷೆಯ ಬರೆದೋದಿ ಸೊಗಬೀರಿ ಮೆರೆಯಲು ಅನುಕೂಲ ಮಾಡಿಕೊಡುವ ಈ ಪುಸ್ತಕವು ಪ್ರತಿಯೊಬ್ಬ ವಿದ್ಯಾರ್ಥಿಯ ಕೈಯಲ್ಲಿ ಇರುವುದು ಅತ್ಯವಶ್ಯ. ಇಂಥ ಪುಸ್ತಕವು ನಮ್ಮ ನುಡಿಯಲ್ಲಿರಲಿಲ್ಲ. ಶ್ರೀ. **ಮನೋಹರರಾಯರು** ಈ ಕೊರತೆಯನ್ನು ಈಗ ಹೋಗಲಾಡಿಸಿರುವರು.....

ಶ್ರೀ. ಹಾರನಹಳ್ಳಿ ಅನಂತರಾಯರು
M. A.
Training School for Men,
Dharwar.

ii) ಪತ್ರಿಕೆಗಳೇನನ್ನುವವು ?

೧ ಸಂಯುಕ್ತ ಕರ್ನಾಟಕ–ಹುಬ್ಬಳ್ಳಿ:—

ಶ್ರೀ. ಮನೋಹರರಾವ ದೇಶಪಾಂಡೆಯವರು ಬರೆದ ಸಾಕಷ್ಟು ವಿಸ್ತಾರವಾದ ಈ ಹೊತ್ತಿಗೆಯು ವಿದ್ಯಾರ್ಥಿಗಳ ಉಪಯೋಗಕ್ಕೆ ಚೆನ್ನಾಗಿವೆ.... ಈ ಬಗೆಯ ಪುಸ್ತಕ ತೀರ ಹೊಸದಾಗಿ ಕನ್ನಡಿಗರ ಕೈಸೇರಿದೆ. ಅದಕ್ಕಾಗಿ ನಾವು ಶ್ರೀ. **ದೇಶಪಾಂಡೆ** ಯವರನ್ನು ಅಭಿನಂದಿಸಿ ಮುಂದೆಯೂ ಅವರು ಇಂಥ ಪುಸ್ತಕಗಳನ್ನು ಬರೆದು ಪ್ರಕಟಗೊಳಿಸಲೆಂದು ಹಾರೈಸುವೆವು.

೨ ಜಯಂತಿ—ಧಾರವಾಡ.

—(ನಮ್ಮ) ತರುಣ ವಿದ್ಯಾರ್ಥಿಗಳ ಬರೆಯಬೇಕೆನ್ನುವ ಉತ್ಸಾಹದ ಹುಚ್ಚು-ಹೊಳೆಯು ಯಾವ ಬಗೆಯ ಸಂಯಮ-ನಿಯಮನಗಳಿಲ್ಲದ ಮೂಲಕ ವ್ಯರ್ಥ ಶಕ್ತಿಪಾತವಾಗಿ ಪರಿಣಮಿಸುತ್ತಲಿದೆ. ಅವರ ಉತ್ಸಾಹವನ್ನು ತಿದ್ದಿ ದಾರಿ ತೋರಿಸುತ್ತ **ಪ್ರಗತಿಪಥದಲ್ಲಿ ಕರೆದೊಯ್ಯಲಿಕ್ಕೆ ಈ ಗ್ರಂಥವು ಖಂಡಿತ ಸಹಕಾರವನ್ನು ನೀಡಬಹುದು**....... ಬೇರೆ ಬೇರೆ ಪಾಠಶಾಲೆಯ ಅಧಿಕಾರಿಗಳು ತಮ್ಮ ವಿದ್ಯಾರ್ಥಿಗಳ ಕೈಗೆ '**ಪ್ರಬಂಧ-ಪ್ರಕಾಶ**' ದೊರೆಯುವಂತೆ ತಕ್ಕ ಏರ್ಪಾಡನ್ನು ಮಾಡುವದು ಅತ್ಯವಶ್ಯ ವಿಷಯ.

೩) The Karnatak Journal of Education—Dharwar.

This is **the first book of its type & ably fulfills the long standing need of Kannad pupils & teachers**. Strenuous efforts have been made by the writer to make the book **interesting, instructive, & useful...** ...It deserves the best encouragement.

೪) The Karnatak School World—Gokak.

This book covers the new syllabus in Kannada Composition. **The whole arrangment is based on new ideas of methods of teaching the Subject. The topics are chosen very carefully and presented in an easy & understandable style,** The models given are mostly from well-known Kannad writers & therefore the book places **chaste Kannad** before the learners. We have reason to hope that the book will be equally useful to the pupils of a Secondary School & the P. S. L Examination Candidates